ಸಂಪುಟ ೮
ಸಂಚಿಕೆ ೪

ಕರ್ನಾಟಕ ಭಾರತಿ

ಅಕ್ಷಯತೃತೀಯಾ ಸಂಚಿಕೆ

೧೯೭೬

ಧಾರವಾಡ.

ಕರ್ನಾಟಕ ವಿಶ್ವವಿದ್ಯಾಲಯ,

ಲೇಖಕರಿಗೆ ಸೂಚನೆಗಳು

'ಕರ್ನಾಟಕ ಭಾರತಿ'ಯು ಸೃಜನ, ವಿಮರ್ಶನ, ಸಂಶೋಧನ, ಸಾಹಿತ್ಯದ ಅಭಿವೃದ್ಧಿಗಾಗಿ ಮೀಸಲಾಗಿದ್ದು, ಅದರಲ್ಲಿ ಪ್ರಕಟನೆಗಾಗಿ ಈ ಬಗೆಯ ಎಲ್ಲ ಲೇಖನಗಳಿಗೂ ಸ್ವಾಗತವಿದೆ. ಅನುವಾದ ಲೇಖನಗಳಿದ್ದರೆ, ಮೂಲ ಲೇಖಕರ ಹಾಗೂ ಲೇಖನದ ಹೆಸರನ್ನು ಸೂಚಿಸುವುದಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಅನುಮತಿಯನ್ನು ಕಳುಹಿಸಬೇಕು.

ಲೇಖನಗಳನ್ನು ಕಾಗದದ ಒಂದೇ ಮಗ್ಗುಲಲ್ಲಿ ಸಾಕಷ್ಟು ಮಾರ್ಜಿನ್ ಬಿಟ್ಟು ಸ್ಪಷ್ಟವಾಗಿ ಬರೆದಿರಬೇಕು. ಇಲ್ಲವೆ ಟೈಪ್ ಮಾಡಿರಬೇಕು. ಹಸ್ತಪ್ರತಿಗಳು ಯಾವ ರೀತಿಯಿಂದಲೂ ಅಸ್ಪಷ್ಟವಾಗಿಯಾಗಲಿ, ಅಸಂಪೂರ್ಣವಾಗಿಯಾಗಲಿ ಇರಬಾರದು.

ಲೇಖನ ಸ್ವೀಕೃತವಾದ ಕೂಡಲೆ ಲೇಖಕರಿಗೆ ತಿಳಿಸಲಾಗುತ್ತದೆ. ಅಸ್ವೀಕೃತ ಲೇಖನಗಳನ್ನು ಮರಳಿ ಪಡೆಯಲಿಚ್ಛಿಸುವವರು ಸಾಕಷ್ಟು ಅಂಚೆಚೀಟಿಗಳನ್ನು ಕಳುಹಿಸಬೇಕು.

ಲೇಖಕರಿಗೆ ಅವರ ಲೇಖನಗಳ ೨೫ ಪ್ರತಿಗಳನ್ನು ಲೇಖನವು ಪ್ರಕಟವಾದ ಸಂಚಿಕೆಯ ಪ್ರತಿಯೊಂದಿಗೆ ಕಳುಹಿಸಲಾಗುತ್ತದೆ. ಹೆಚ್ಚಿಗೆ ಪ್ರತಿಗಳು ಬೇಕಾದವರು ಅದರ ಮುದ್ರಣಾದಿ ವೆಚ್ಚವನ್ನು ವಹಿಸಬೇಕಾಗುವುದು. ಲೇಖನ ಅಚ್ಚಾಗುವ ಪೂರ್ವದಲ್ಲಿ ಈ ವಿಷಯಕ್ಕೆ ತಿಳಿಸಬೇಕು.

ಲೇಖನಗಳನ್ನು, ವಿಮರ್ಶೆಗಾಗಿ ಪುಸ್ತಕಗಳನ್ನು **ಸಂಪಾದಕರು, 'ಕರ್ನಾಟಕ ಭಾರತಿ', ಕನ್ನಡ ಅಧ್ಯಯನಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ – ೫೮೦ ೦೦೩** ಇವರಿಗೆ ಕಳುಹಿಸಬೇಕು. ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡು ಪ್ರತಿಗಳನ್ನು ಕಳಿಸಬೇಕು.

ಇನ್ನಿತರ ಯಾವುದೇ ವಿಷಯಕ್ಕೆ **ನಿರ್ದೇಶಕರು, ಪ್ರಸಾರಾಂಗ ವಿಸ್ತರಣ ಹಾಗೂ ಪ್ರಕಟನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ – ೫೮೦ ೦೦೩** ಇವರಿಗೆ ಬರೆಯಬೇಕು.

ಕರ್ನಾಟಕ ಭಾರತಿ

೧. ಸ್ವಾತಂತ್ರ್ಯೋತ್ಸವ ಸಂಚಿಕೆ ೨. ರಾಜ್ಯೋತ್ಸವ ಸಂಚಿಕೆ
೩. ಸಂಕ್ರಮಣ ಸಂಚಿಕೆ ೪. ಅಕ್ಷಯತೃತೀಯಾ ಸಂಚಿಕೆ

ವಾರ್ಷಿಕ ಚಂದಾ : ರೂ. ೮–೦೦ (ಅಂಚೆ ವೆಚ್ಚ ಸಹಿತ)

ಬಿಡಿ ಸಂಚಿಕೆಯ ಬೆಲೆ : ರೂ. ೨–೫೦

(ಅಂಚೆ ವೆ: ಪ್ರತ್ಯೇಕ)

(ವಿದ್ಯಾರ್ಥಿಗಳಿಗೆ ರಿಯಾಯತಿ ಚಂದಾ ದರ ರೂ. ೪–೦೦ ಮಾತ್ರ)

ಹಣವನ್ನು ಡಿಮಾಂಡಡ್ರಾಫ್ಟ್ ಇಲ್ಲವೆ ಪೋಸ್ಟಲ್ ಆರ್ಡರ ಮೂಲಕ

ಫಾಯನಾನ್ಸ್ ಆಫೀಸರ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ – ೫೮೦ ೦೦೩

ಇವರಿಗೆ ಕಳುಹಿಸಬೇಕು.

ಕರ್ನಾಟಕ ಭಾರತಿ

ತ್ರೈಮಾಸಿಕ ಪತ್ರಿಕೆ

ಸಂಪುಟ : ೮ ಸಂಚಿಕೆ : ೪

ಪ್ರಧಾನ ಸಂಪಾದಕರು

ಡಾ. ಎಂ. ಎಸ್. ಸುಂಕಾಪುರ

ಸಹಾಯಕ ಸಂಪಾದಕರು

ಡಾ. ಎಂ. ಎಂ. ಕಲಬುರ್ಗಿ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಕ ರ್ನಾ ಟ ಕ ಭಾ ರ ತಿ

ಕರ್ನಾಟಕ ವಿಶ್ವವಿದ್ಯಾಲಯದ ತ್ರೈಮಾಸಿಕ ಪತ್ರಿಕೆ

ಸಂಪುಟ : ೮ ಸಂಚಿಕೆ : ೪

ಮೇ ೧೯೭೬

ಅಕ್ಷಯತೃತೀಯಾ ಸಂಚಿಕೆ

ಪ್ರಕಾಶಕರು

ಸಿ. ಎಸ್. ಕಣವಿ

ನಿರ್ದೇಶಕರು

ವ್ಯಾಸಂಗ ವಿಸ್ತರಣ–ಪ್ರಕಟನ ವಿಭಾಗ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಮುದ್ರಕರು :

ಸೋಮಶೇಖರ ಅಕಳವಾಡಿ

ಮನೋಹರ ಮುದ್ರಣಾಲಯ, ಧಾರವಾಡ

ಪರಿವಿಡಿ



ಅಖಿಲಭಾರತ ಆರನೆಯ ದ್ರಾವಿಡಭಾಷಾ ಸಮ್ಮೇಲನದ ಅಧ್ಯಕ್ಷತೆ ವಹಿಸಿದ

ಕುಲಪತಿ ಡಾ. ಆರ್. ಸಿ. ಹಿರೇಮಠ ಅವರು

ಪ್ರಶ್ನಾತೀತರು

ಸಿದ್ಧಲಿಂಗ ಪಟ್ಟಣಶೆಟ್ಟಿ

ನೀನಿರದಿದ್ದರೆ ನಾನು ಬದುಕುವುದಿಲ್ಲ
ಎಂದೆ. ನಾನು ಮದುವೆಯಾಗುವ ತನಕ
ಹೀಗೇ ಹೇಳುತ್ತಿ ಎಂದಳು. ಯಾಕೆ
ನನ್ನನ್ನು ಅಪಮಾನಿಸುತ್ತೀ ಎಂದೆ. ಸತ್ಯ
ಅಪಮಾನದ ಕುಂಚದಿಂದಲೇ ಚಿತ್ರಿತ
ವಾಗಿರುತ್ತದೆ ಅಂದಳು. ನನ್ನ ಭಾವನೆ
ಗಳ ಬಗ್ಗೆ ನಂಬಿಕೆ ಇಲ್ಲವೆ ?— ಪ್ರಶ್ನಿಸಿದೆ.
ನಂಬಿಕೆ ರೂಢವಾಗುವ ತನಕ ಕ್ಷಣಿಕ, ಭಂಗುರ
ಎನ್ನುತ್ತ ಏರಿದ ನನ್ನ ಹುಬ್ಬು ನೋಡಿ ಮತ್ತೆ
ಹೇಳಿದಳು : ಭಾವನೆ ನಂಬಿಕೆಯಾಗುತ್ತದೆ, ನಂಬಿಕೆ
ರೂಢಿಯಾಗುತ್ತದೆ, ರೂಢಿ ಸತ್ತು
ಹೋಗುತ್ತದೆ. ಹೀಗೆ ಸಾಯುವುದು ಭಾವದ
ನಂಬಿಗೆಯ ರೂಢಿಯ ಮೂಲ ಸ್ಪಂದನ
ವಾಗಿದ್ದರಿಂದ ನಮ್ಮ ಮಾತಿಗೆ— ಭವಿತವ್ಯದ
ಬಗೆಗಿನ ನಮ್ಮ ಮಾತಿಗೆ ಬೆಲೆ ಮರಣ. ಯಾಕೆ
ಹಾಗೆಲ್ಲ ಸತ್ತ ಮಾತಾಡುತೀ ? ನೀ
ನನ್ನ ಪ್ರೀತಿಸುತೀ, ಅಷ್ಟೆ. ಭಾವನೆ
ಇತ್ಯಾದಿ ಹೆಸರಿಟ್ಟು ಸಾವಿನ ಹಗ್ಗದಿಂದ
ಅದನ್ನು ಬಿಗಿಯಬೇಡ ಎಂದಳು. ಏನು
ಮಾತಾಡುತ್ತಾಳೆ ಈ ಹುಡುಗಿ
ಎಂದು ಮೇಲೆ ಮುಖ ಎತ್ತಿದೆ. ತುಟಿ
ಮೇಲೆ ತುಟಿ ಸೌಧ ಕಟ್ಟಿ ಮೌನದ ಮರಣದ
ಘನವಂತ ಸುಡುಸುಡುವ ರಾಳ ಮೆತ್ತಿ

ಸುತ್ತಿದ್ದಳು ನನ್ನ ತನ್ನ ಸಾಯುವ
ಸತ್ತು ಶ್ರೀಮಂತಗೊಳ್ಳುವ ಕ್ಷಣಿಕತೆಯ
ಸಂಪತ್ತಿಗೆಯ ಮೇಲೆ. ಯೋಜನೆ
ಗಳ ಬಳೆ ತೆಗೆದು, ಸುಳಿ ಬಿಚ್ಚಿ
ಬದಿಗಿಟ್ಟು. ಪ್ರಶ್ನಾತೀತ
ಸುಮ್ಮನೇ ಮಿಳಿ ಮಿಳಿ ಬಿದ್ದುಕೊಂಡೆ.

■ ■

ಕರ್ಣಾಟಕ ಭಾಷಾಭೂಷಣದ ಕರ್ತೃ?

ಪಿ. ಶ್ರೀಕೃಷ್ಣ ಭಟ್.

ಕನ್ನಡಭಾಷೆಯ ಉಪಲಬ್ಧ ಗ್ರಂಥಸಮುದಾಯದಲ್ಲಿ ನಾಗವರ್ಮಕೃತವೆಂದು ತಿಳಿದು ಬರುವ ಒಟ್ಟು ಗ್ರಂಥಗಳು ಏಳು: ಕರ್ನಾಟಕ ಕಾದಂಬರಿ, ಛಂದೋಂಬುಧಿ, ಕಾವ್ಯಾವಲೋಕನ, ಅಭಿಧಾನ ವಸ್ತುಕೋಶ, ಕರ್ಣಾಟಕ ಭಾಷಾಭೂಷಣ, ಅಭಿಧಾನ ರತ್ನಮಾಲಾ ಟೀಕೆ ಮತ್ತು ವರ್ಧಮಾನ ಪುರಾಣ. [ವರ್ಧಮಾನ ಪುರಾಣದ ಏಕೈಕ ಹಸ್ತಪ್ರತಿ ಕ್ರಿ. ಶ. ೧೯೭೩ರ ಏಪ್ರಿಲ್‌ನಲ್ಲಿ ದೊರೆತು ೧೯೭೪ರ ಮಾರ್ಚದಲ್ಲಿ ಪ್ರಕಟಿತ ವಾಗಿದೆ.[೧]] ಕೊನೆಯವೆರಡನ್ನು ಬಿಟ್ಟುಳಿದ ಗ್ರಂಥಗಳನ್ನು ಬರೆದ ನಾಗವರ್ಮರು ಎಷ್ಟುಮಂದಿ ? ಎಂಬ ಪ್ರಶ್ನೆ ಕ್ರಿ. ಶ. ೧೯ನೆಯ ಶತಮಾನದ ಕೊನೆಯಲ್ಲೇ ಹುಟ್ಟಿ ಕೊಂಡಿತು. ಬಿ. ಎಲ್. ರೈಸ್,[೨] ರೆ। ಕಿಟೆಲ್,[೩] ಬಿ. ಮಲ್ಲಪ್ಪ[೪] ಮೊದಲಾದ ವಿದ್ವಾಂಸರು ಒಬ್ಬ ನಾಗವರ್ಮನಿಂದಲೇ ಈ ಐದೂ ಗ್ರಂಥಗಳು ರಚಿತವಾದುವೆಂದು ಅಭಿಪ್ರಾಯ ಪಟ್ಟರು. ಕಾವ್ಯಾವಲೋಕನ ಮತ್ತು ಕರ್ಣಾಟಕ ಭಾಷಾಭೂಷಣ– ಇವೆರಡನ್ನೂ ಒಟ್ಟಿಗೆ ಸಂಪಾದಿಸಿದ [ಕ್ರಿ. ಶ. ೧೯೦೨] ಶ್ರೀಮಾನ್ ಆರ್. ನರಸಿಂಹಾ ಚಾರ್ಯರು ಅದರ ಉಪೋದ್ಘಾತದಲ್ಲಿ ನಾಗವರ್ಮರು ಎಷ್ಟುಮಂದಿ ಎಂಬ ವಿಷಯ ವನ್ನು ಚರ್ಚಿಸುತ್ತಾ ಕರ್ನಾಟಕ ಕಾದಂಬರಿ ಮತ್ತು ಛಂದೋಂಬುಧಿಯನ್ನು ರಚಿಸಿ ದವನು ಒಬ್ಬ ನಾಗವರ್ಮನೆಂದೂ ಉಳಿದ ಮೂರು ಗ್ರಂಥಗಳ ಕರ್ತ ಇನ್ನೊಬ್ಬ ನಾಗವರ್ಮನೆಂದೂ ಸಾಧಾರವಾಗಿ ನಿರೂಪಿಸಿ ಅವರಿಬ್ಬರನ್ನು ಅನುಕ್ರಮವಾಗಿ ಮೊದ ಲನೆಯ ನಾಗವರ್ಮ ಮತ್ತು ಎರಡನೆಯ ನಾಗವರ್ಮ ಎಂದೂ ಕರೆದರು[೫] ಮೊದಲನೆ ಯವನ ಕಾಲ ಕ್ರಿ. ಶ. ೧೦ನೆಯ ಶತಮಾನದ ಕೊನೆ [ಕ್ರಿ. ಶ. ೯೯೦]ಯೆಂದೂ ಮುಂದಿ ನವನು ಕ್ರಿ. ಶ. ಸುಮಾರು ೧೧೪೫ ರಲ್ಲಿದ್ದನೆಂದೂ ತೀರ್ಮಾನಿಸಿದರು. ಈ ಅಭಿ ಪ್ರಾಯವನ್ನು ಖಂಡಿಸಿದ ಡಾ। ಎ. ವೆಂಕಟಸುಬ್ಬಯ್ಯನವರು ಈ ಎಲ್ಲ ಗ್ರಂಥಗಳ ಕರ್ತೃ ಒಬ್ಬನೇ ಒಬ್ಬ ನಾಗವರ್ಮನೆಂಬ ಸಿದ್ಧಾಂತವನ್ನು ಸ್ಥಾಪಿಸಿ ಅವನ ಕಾಲ ಕ್ರಿ ಶ.

---

೧. ಸಂಪಾದಕ ಬಿ. ಎಸ್. ಸಣ್ಣಯ್ಯ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು–೬.

೨. ಕರ್ಣಾಟಕ ಭಾಷಾಭೂಷಣ ೧೮೮೪.

೩. ಛಂದೋಂಬುಧಿ ೧೮೯೫.

೪. ಕರ್ನಾಟಕ ಕಾದಂಬರಿ.

೫. ಕಾವ್ಯಾವಲೋಕನ,— ಮೈಸೂರು ವಿಶ್ವವಿದ್ಯಾನಿಲಯ— Introduction.P. XVI

ಹನ್ನೊಂದನೆಯ ಶತಮಾನದ ಪೂರ್ವಾರ್ಧವೆಂದೇ ಸಾರಿದರು.[೧] ಆದರೆ ಆರ್. ನರಸಿಂಹಾಚಾರ್ಯರು ಈ ವಾದವನ್ನು ಒಪ್ಪದೆ ಕವಿಚರಿತೆಯ ಮೂರನೆಯ ಸಂಪುಟದ ಅವತರಣಿಕೆಯಲ್ಲಿ ತಮ್ಮ ಹಿಂದಿನ ನಿಲುವನ್ನೇ ಎತ್ತಿಹಿಡಿದರಲ್ಲದೆ ಅದೇ ಗ್ರಂಥದ 'ಗ್ರಂಥ ಶುದ್ಧಿ'ಯಲ್ಲಿ 'ಕಾದಂಬರಿಯನ್ನು ಬರೆದ ನಾಗವರ್ಮನು ಛಂದೋಂಬುಧಿಯನ್ನು ಬರೆದ ನಾಗವರ್ಮನಿಗಿಂತ ಬೇರೊಬ್ಬನಾಗಿರಬಹುದೋ ಎಂಬ ಸಂದೇಹಕ್ಕೆ ಅವಕಾಶ ವಿರುವಂತೆ ತೋರುತ್ತದೆ' ಎಂದೂ ಹೇಳಿದರು. ಎಚ್. ಚೆನ್ನಕೇಶವಯ್ಯಂಗಾರ್ಯರು ಕರ್ನಾಟಕ ಕಾದಂಬರಿಯನ್ನು ಬರೆದ ನಾಗವರ್ಮ ಛಂದೋಂಬುಧಿಯ ನಾಗವರ್ಮ ನಿಗಿಂತ ಭಿನ್ನನೆಂದೇ ಅಭಿಪ್ರಾಯ ಪಟ್ಟರು.[೨] ಮಂಜೇಶ್ವರ ಗೋವಿಂದ ಪೈ,[೩] ಟಿ. ಎಸ್. ವೆಂಕಣ್ಣಯ್ಯ[೪] ಮೊದಲಾದ ಪಂಡಿತರಿಂದ ಆರ್. ನರಸಿಂಹಾಚಾರ್ಯರ ಮೊದಲ ಅಭಿಪ್ರಾಯವೇ ಅಲ್ಪ ತಿದ್ದುಪಡಿಯೊಂದಿಗೆ ಸ್ವೀಕರಿಸಲ್ಪಟ್ಟು ಕನ್ನಡ ಸಾರಸ್ವತ ಲೋಕದಲ್ಲಿ ಪ್ರಚುರವಾಯಿತು.

ಕಾವ್ಯಾವಲೋಕನ ಮತ್ತು ಅಭಿಧಾನ ವಸ್ತುಕೋಶ ಈ ಎರಡು ಗ್ರಂಥಗಳಲ್ಲೂ ಕವಿಯ ಕಾಲದ ಬಗ್ಗೆ ಯಾವ ಸುಳುವೂ ಹತ್ತುವುದಿಲ್ಲ. ಆದುದರಿಂದ ಆರ್. ನರ ಸಿಂಹಾಚಾರ್ಯರು ಕರ್ಣಾಟಕ ಭಾಷಾಭೂಷಣ [ಇನ್ನು ಮುಂದೆ ಇದನ್ನು ಭೂಷಣ ಎಂದೇ ಕರೆಯಲಾಗುವುದು.] ವನ್ನು ಮತ್ತು ಜನ್ನನ ಅನಂತನಾಥ ಪುರಾಣದಲ್ಲಿ ಬರುವ "ಜನನಾಥಂ ಜಗದೇಕನಲ್ಲಿ ಕಟಕೋಪಾಧ್ಯಾಯಂ........ [೧–೩೪] ಎಂಬ ಪದ್ಯವನ್ನು ಆಧಾರವಾಗಿಟ್ಟುಕೊಂಡು ಎರಡನೆಯ ನಾಗವರ್ಮನ ಕಾಲನಿರ್ಣಯ ಮಾಡಿದ್ದಾರೆ. ಅವರ ನಿರೂಪಣೆಯ ಸಾರಾಂಶವಿಷ್ಟು : ಭೂಷಣದಲ್ಲಿ ವಿಭಕ್ತಿ ಪಲ್ಲಟಕ್ಕೆ (ಆಸಾಂ ವ್ಯತ್ಯಯೋ ಬಹುಲಂ ಸೂತ್ರ ೮೮) ಕೊಟ್ಟ "ಬಹುತಾಪಕ್ಕೆ ಬಿಗುರ್ತು ವಿಷ್ಣು ಪಡೆದಂ ಮತ್ಸ್ಯಾವತಾರಕ್ಕೆ" ಎಂಬ ಪ್ರಯೋಗ ನಾಗಚಂದ್ರನ (ಕ್ರಿ. ಶ. ೧೧೦೦) ರಾಮಾಯಣದ ಪದ್ಯಭಾಗ. "ದೀರ್ಘೋರ್ಕಕ್ತಿರ್ನಯಸೇನಸ್ಯ" (ಭೂಷಣ ಸೂತ್ರ ೭೩) ಎಂಬ ಸೂತ್ರದಲ್ಲಿ ಉಲ್ಲೇಖಿಸಲಾದ ನಯಸೇನ ಧರ್ಮಾಮೃತ ಕರ್ತೃವಾದ ನಯಸೇನನೇ (ಕ್ರಿ. ಶ. ೧೧೧೨) ಜನ್ನನು ಮೇಲೆ ಹೇಳಿದ ಪದ್ಯದಿಂದ ತಿಳಿಯುವಂತೆ ಆ ನಾಗ ವರ್ಮನು ಜನ್ನನ (ಕ್ರಿ. ಶ. ೧೨೦೯) ಗುರುವೂ ಚಾಲುಕ್ಯದೊರೆ ಜಗದೇಕಮಲ್ಲ (ಕಿ. ಶ. ೧೧೩೮–೧೧೫೦) ನಲ್ಲಿ ಕಟಕೋಪಾಧ್ಯಾಯನೂ ಆಗಿದ್ದನು. ಆದ್ದರಿಂದ ನಾಗಚಂದ್ರ ನಯಸೇನರಿಗಿಂತ ಈಚೆಯವನೂ ಜನ್ನನ ಗುರುವೂ ಆದ ಆತನ ಕಾಲ ಕ್ರಿ. ಶ. ಸು. ೧೧೪೫.

---

೧ ಕೆಲವು ಕನ್ನಡ ಕವಿಗಳ ಜೀವನ ಕಾಲ ವಿಚಾರ ಪುಟ ೧೫೨–೧೮೧

೨ ಕರ್ನಾಟಕ ಸಾಹಿತ್ಯ ಪರಿಷತ್ಪತ್ರಿಕೆ ೧೪–೩: ಪುಟ ೧೭೭–೧೯೧

೩ ಕರ್ನಾಟಕ ಸಾಹಿತ್ಯ ಪರಿಷತ್ಪತ್ರಿಕೆ ೨೦–೨: ಪುಟ ೧೫೨–೧೬೭

೪ ಕರ್ನಾಟಕ ಕಾದಂಬರೀ ಸಂಗ್ರಹ— ಪೀಠಿಕೆ

'ಅಭಿಧಾನ ರತ್ನಮಾಲಾ ಟೀಕೆ'ಯ ಸಂಪಾದಕರಾದ ಎ. ವೆಂಕಟರಾವ್ ಮತ್ತು ಎಚ್. ಶೇಷಯ್ಯಂಗಾರರು (ಕ್ರಿ. ಶ. ೧೯೬೦) ಆ ಗ್ರಂಥದ ಕರ್ತೃವೂ ಎರಡನೆಯ ನಾಗವರ್ಮನೇ ಎಂದು ತೀರ್ಮಾನಿಸಿದರು. ಆಗ ಎರಡನೆಯ ನಾಗವರ್ಮ ಕೃತ ಗ್ರಂಥಗಳ ಸಂಖ್ಯೆ ಒಟ್ಟು ನಾಲ್ಕಕ್ಕೇರಿತು.

ಪ್ರತಿಯೊಂದು ಕ್ಷೇತ್ರದಲ್ಲೂ ಸಂಶೋಧನೆ ಮುಂದುವರಿದಂತೆ, ಆಳಕ್ಕಿಳಿದಂತೆ, ಹೊಸ ಹೊಸ ದಾಖಲೆಗಳು ದೊರೆತಂತೆ ಹಳೆಯ ಊಹೆಗಳು, ನಿಲುವು ಬದಲಾಗುವುದು ಸಹಜ. ಇದಕ್ಕೆ ಕನ್ನಡ ಸಾಹಿತ್ಯ ಅಪವಾದವಲ್ಲ. ನಾಗವರ್ಮಕೃತ ವರ್ಧಮಾನ ಪುರಾಣ ಉಪಲಬ್ಧವಾದೊಡನೆ ಹಳೆಯ ಸಮಸ್ಯೆಗೆ ಹೊಸ ಜೀವ ದೊರಕಿತು. ಆ ವರ್ಧಮಾನ ಪುರಾಣದ ಕರ್ತೃವಾದ ನಾಗವರ್ಮ ಎರಡನೆಯ ನಾಗವರ್ಮನಿಗಿಂತ ಅಭಿನ್ನನೆಂದೂ ಅವನ ಕಾಲ ಗ್ರಂಥಸ್ಥ ಆಧಾರದೊಡನೆ ಕ್ರಿ. ಶ. ೧೦೪೨ ಎಂದೂ ನಿರ್ಣಯಿಸಲಾಯಿತು. ಜೊತೆಯಲ್ಲೇ ಆತ ಜನ್ನನ ಗುರುವಲ್ಲವೆಂದೂ ಹೇಳಲಾಯಿತು.[೧] ಆತ ಹೇಮಚಂದ್ರನ (ಕ್ರಿ. ಶ. ೧೦೮೯–೧೧೭೩) ಸಮಕಾಲೀನ[೨]ನೆನ್ನುವ ವಾದವೂ ಬಿದ್ದುಹೋಯಿತು. ಅಷ್ಟು ಮಾತ್ರವಲ್ಲ ಕಾವ್ಯಾವಲೋಕನದ ಮೇಲೆ ಹೇಮಚಂದ್ರನ 'ಕಾವ್ಯಾನುಶಾಸನ'ದ ಪ್ರಭಾವವಿಲ್ಲದುದಕ್ಕೆ ಸರಿಯಾದ ಸಮಾಧಾನವೇ ದೊರಕಿತು. ಇವೆಲ್ಲವುಗಳಿಗಿಂತ ಮೇಲಾಗಿ ಆರ್. ನರಸಿಂಹಾಚಾರ್ಯರು ಎರಡನೆಯ ನಾಗವರ್ಮನ ಕಾಲನಿರ್ಣಯಕ್ಕೆ ಎತ್ತಿಕೊಂಡ ಆಧಾರಗಳು ಕುಸಿದು ಬಿದ್ದುವು. ಆದುದರಿಂದ ಆ ಆಧಾರಗಳಲ್ಲೂ ಮುಖ್ಯವಾದ ಭೂಷಣದ ಕರ್ತೃತ್ವದ ಬಗ್ಗೆ ಮತ್ತೊಮ್ಮೆ ವಿಚಾರಿಸುವಂತಾಯಿತು.

ಆರ್. ನರಸಿಂಹಾಚಾರ್ಯರು ಕಾವ್ಯಾವಲೋಕನದ ಕೊನೆಯಲ್ಲಿ ಬರುವ—

ಛಂದೋವಿಚಿತಿಯಲಂಕೃತಿ
ಸಂದಭಿಧಾನ (ವಸ್ತು)ಕೋಶಮೆಂಬಿವು ವಾಕ್ಶ್ರೀ
ಸುಂದರಿಗೆ ರತ್ನ ಮಂಡನ
ದಂದದೊಳಿರ್ದಪುವು ನಾಗವರ್ಮನ ಕೃತಿಗಳ್
ಪದ್ಯ ೯೭೫

ಈ ಪದ್ಯವನ್ನು ಅರ್ಥೈಸಿ ಕಾವ್ಯಾವಲೋಕನ (ಅಲಂಕೃತಿ) ಅಭಿಧಾನ ಕೋಶ (ವಸ್ತುಕೋಶ) ಛಂದೋವಿಚಿತಿ (ಛಂದಶ್ಶಾಸ್ತ್ರ – ಅನುಪಲಬ್ಧ) ಎರಡನೇ

---

೧ (ಅ) ವರ್ಧಮಾನ ಪುರಾಣದ ಪೀಠಿಕೆ
(ಆ) ನಾಗವರ್ಮ ಜನ್ನನ ಗುರುವಲ್ಲ— ಡಾ। ಎಂ. ಎಂ. ಕಲಬುರ್ಗಿ, ಕರ್ನಾಟಕ ಭಾರತಿ ೭–೧. ಪುಟ ೧೪೫–೧೪೯

೨ ಸಂಶೋಧನ ಪಂಚದಶಿ ಪುಟ ೧೩೪

ನಾಗವರ್ಮನ ಕೃತಿಗಳೆಂದು ಹೇಳಿದುದಲ್ಲದೆ 'To the above list have to be added the works which he wrote after the Kavyavalokana, viz the Karnataka Bhashabhushana and a Jaina purana'[೧] ಎಂದೂ ಅಭಿಪ್ರಾಯ ಪಟ್ಟರು. ಭೂಷಣದಲ್ಲಾದರೋ ಒಂದೆಡೆ ಮಾತ್ರ ಗ್ರಂಥಕಾರನ ನಾಮನಿರ್ದೇಶವಿದೆ—

' ಕರ್ಣಾಟ ಶಬ್ದಸೂಪ್ರಾಣಿ ಲೋಕವ್ಯುತ್ಪತ್ತಿಹೇತವೇ
ರಚಿತಾನಿ ಸ್ಫುಟಾರ್ಥಾನಿ ಕೃತಿನಾ ನಾಗವರ್ಮಣಾ '

ಈ ಶ್ಲೋಕದಲ್ಲಿ ಕಾಣುವ ನಾಗವರ್ಮ ಎಂಬ ನಾಮ ಸಾದೃಶ್ಯ ಮತ್ತು ಗ್ರಂಥಾರಂಭದ ಜಿನಸ್ತುತಿ ಎರಡನೆಯ ನಾಗವರ್ಮನೇ ಈ ಗ್ರಂಥವನ್ನೂ ಬರೆದನೆಂದು ಊಹಿಸಲು ಕಾರಣವಾಗಿರಬೇಕು.[೨] ಭೂಷಣದಲ್ಲಿ ಪ್ರತಿಪಾದಿತ ವ್ಯಾಕರಣ ವಿಷಯಗಳು ಹಾಗೂ ಅವುಗಳ ಆನುಪೂರ್ವಿಯಲ್ಲಿ ಕಾವ್ಯಾಲೋಕನದ ಮೊದಲ ಅಧಿಕರಣವಾದ 'ಶಬ್ದಸ್ಮೃತಿಯ' ಅನುಸರಣೆ ಕಾಣಬರುವುದೂ ಮೇಲಿನ ಊಹೆಗೆ ಪೋಷಕವಾಯಿತು.[೩] ಎರಡನೆಯ ನಾಗವರ್ಮನೇ ಭೂಷಣದ ಕರ್ತನೆನ್ನಲು ಇದಕ್ಕಿಂತ ಹೊರತಾದ ಯಾವ ಆಧಾರವೂ ಇದ್ದಂತೆ ತೋರುವುದಿಲ್ಲ.

ಕನ್ನಡ ಪಂಡಿತರಲ್ಲಿ ನಡೆದ ನಾಗವರ್ಮ ಸಮಸ್ಯೆಯ ಚರ್ಚೆಯಲ್ಲಿ ಒಂದು ಗಮನಾರ್ಹವಾದ ವಿಚಾರವಿದೆ. ವಿದ್ವಾಂಸರೆಲ್ಲರೂ ವಾದ ಪ್ರತಿವಾದಗಳನ್ನು ಹೂಡುವಾಗ ಕಾವ್ಯಾಲೋಕನ, ವಸ್ತುಕೋಶ ಮತ್ತು ಭೂಷಣ ಏಕ ಕರ್ತೃಕಗಳೆಂದೇ ಕಂಡರಲ್ಲದೆ ಇವುಗಳಲ್ಲೂ ಭಿನ್ನ ಕರ್ತೃಕಗಳೆಂದು ತೋರುವ ಅಂಶಗಳಿವೆಯೇ ? ಎಂದು ವಿಚಾರಿಸ ಹೋದಂತೆ ಕಾಣುವುದಿಲ್ಲ. ಆದರೆ ಆರ್. ನರಸಿಂಹಾಚಾರ್ಯರು ಹೇಳಿದ ಮೇಲಿನ ವಿಚಾರಗಳನ್ನೇ ಪರಾಂಬರಿಸಿದಲ್ಲಿ ಭೂಷಣದ ಕರ್ತೃ ಉಳಿದೆರಡು ಗ್ರಂಥಗಳ ಕರ್ತೃವಿಗಿಂತ ಅಭಿನ್ನನೆನ್ನಲು ಕಷ್ಟಸಾಧ್ಯ. ವರ್ಧಮಾನ ಪುರಾಣವೂ ಸೇರಿದಂತೆ ಕೆಳಗಿನ ವಿಚಾರಗಳಲ್ಲಿ ತುಲನೆಯ ಕಾರ್ಯ ನಡೆದಾಗ ಸರಿಯಾಗಿ ಮನವರಿಕೆಯಾಗಬಹುದು.

---

೧ ಕಾವ್ಯಾವಲೋಕನ Introduction. p. xxiv

೨ "The opening verse is in praise of Jina and the concluding one tells that Nagavarma composed the sutras" ಕಾವ್ಯಾವಲೋಕನ Introduction. p. viii

೩ "The order of the subjects dealt with is the same as that in the sabdasmriti, through the present work contains more detailed information about nouns and verbs and additional chapters on indeelinables and participles."
ಕಾವ್ಯಾವಲೋಕನ Introduction page. viii

೧ ಗ್ರಂಥಾರಂಭದ ದೇವತಾಸ್ತುತಿ.

೨ ಆಶ್ವಾಸಯಾ ಪ್ರಕರಣ ಅಥವಾ ಗ್ರಂಥಾಂತ್ಯದ ಹೇಳಿಕೆ.

೩ ವ್ಯಾಕರಣಾಂಗದಲ್ಲಿ – ವರ್ಣಮಾಲೆ, ಸಂಧಿ, ಲಿಂಗ, ಕಾರಕಗಳ ನಿರೂಪಣೆಯಲ್ಲಿರುವ ಅಂತರ.

೪ ಪಕಾರ ಹಕಾರವಾಗಿ ಪರಿವರ್ತನೆಗೊಂಡ ವಿಚಾರ.

೫ ವ್ಯಾಕರಣಾಂಶಗಳ ಆನುಪೂರ್ವಿಯಲ್ಲಿ ವ್ಯತ್ಯಾಸ.

ಕಾವ್ಯಾವಲೋಕನ, ಅಭಿದಾನ ವಸ್ತುಕೋಶ ಮತ್ತು ವರ್ಧಮಾನ ಪುರಾಣ ಈ ಮೂರೂ ಕೃತಿಗಳು ಒಬ್ಬನಿಂದಲೇ ರಚಿತವಾದುವೆನ್ನಲು ಸಾಕಷ್ಟು ಆಧಾರಗಳಿವೆ. ಮೂರು ಗ್ರಂಥಗಳ ಮೊದಲ ಪದ್ಯಗಳಲ್ಲಿ ಬರುವ ದೇವತಾಸ್ತುತಿ ವರ್ಧಮಾನ ತೀರ್ಥಂಕರನದು. ಕಾವ್ಯಾವಲೋಕನದ ಪ್ರತಿ ಅಧಿಕರಣ ಕೊನೆಯ ಗದ್ಯ.

" ಇದು ಸಕಳ ಸುಕವಿಜನ ಮನಸ್ಸರೋಜಿನೀ ರಾಜಹಂಸಾಯ ಮಾನಾನೂನ ಕವಿತಾಗುಣೋದಯಂ ಶ್ರೀಮನ್ನಾಗವರ್ಮ ಪ್ರಣೀತಮಪ್ಪ ಕಾವ್ಯಾವಲೋಕನದೊಳ್...... "

ಎಂದಿದ್ದರೆ ವರ್ಧಮಾನ ಪುರಾಣದ ಪ್ರತಿ ಆಶ್ವಾಸದ ಕೊನೆಯಲ್ಲಿ

" ಇದು ಸಕಳ ಸುಕವಿಜನ ಮನಸ್ಸರೋಜಿನೀ ರಾಜಹಂಸಾಯಮಾನ ಮಾನಾನೂನ ಕವಿತಾಗುಣೋದಯ ಶ್ರೀಮನ್ನಾಗವರ್ಮ ವಿರಚಿತಮಪ್ಪ ಶ್ರೀ ವೀರವರ್ಧಮಾನಪುರಾಣದೊಳ್...... "

ಎಂದೂ ವಸ್ತುಕೋಶದ ಪ್ರತಿಕಾಂಡದ ಕೊನೆಯ ಗದ್ಯ

" ಇದು ಸಮಸ್ತಭುವನಜನ ಸಂಸ್ತೂಯಮಾನ ಮಾನಾನೂನ ಕವಿತಾಗುಣೋದಯಂ ಶ್ರೀ ನಾಗವರ್ಮ ವಿರಚಿತಮಪ್ಪಭಿಧಾನ ವಸ್ತುಕೋಶದೊಳ್...... "

ಎಂದೂ ಇದೆ. ಗದ್ಯದಲ್ಲಿ ಅಲ್ಪಸ್ವಲ್ಪ ವ್ಯತ್ಯಾಸವಿದ್ದರೂ ಕವಿತಾಗುಣೋದಯಂ ಎಂಬ ಬಿರುದೂ ಶ್ರೀ ನಾಗವರ್ಮ ಎಂಬ ಹೆಸರೂ ಗಮನಾರ್ಹವಾದುದು. ಶ್ರೀ ನಾಗವರ್ಮ– ಶ್ರೀ ಮನ್ನಾಗವರ್ಮ, ಪ್ರಣೀತಮಪ್ಪ–ವಿರಚಿತಮಪ್ಪ ಈ ಎರಡು ವಿಧವಾದ ಪ್ರಯೋಗ ಕಾವ್ಯಾವಲೋಕನವೊಂದರಲ್ಲೇ ಇದೆ. (ಅಧಿಕರಣ ೧, ೩, ೪ ರಲ್ಲಿ ಶ್ರೀ ನಾಗವರ್ಮ ಎಂದೂ ಉಳಿದವುಗಳಲ್ಲಿ ಶ್ರೀ ಮನ್ನಾಗವರ್ಮ ಎಂದೂ ಇದೆ. ಹಾಗೆಯೆ ಅಧಿಕರಣ ೧, ೨ ಮತ್ತು ೫ ರಲ್ಲಿ ಪ್ರಣೀತಮಪ್ಪ ಎಂದಿದ್ದರೆ ೨ ಮತ್ತು ೫ ರಲ್ಲಿ ವಿರಚಿತಮಪ್ಪ ಎಂದಿದೆ.) ಆದುದರಿಂದ ಆ ಕುರಿತು ಸಂಶಯ ಬೇಕಾಗಿಲ್ಲ.

ಭೂಷಣದ ದೇವತಾಸ್ತುತಿಯಲ್ಲಿ,

"ಸರ್ವಜ್ಞಂ ತದಹಂ ವಂದೇ ಪರಂಜ್ಯೋತಿಸ್ತಮೋಪಹಂ
ಪ್ರವೃತ್ತಾಯನ್ಮುಖಾದ್ದೇವೀ ಸರ್ವಭಾಷಾ ಸರಸ್ವತೀ''

ಎಂದಿದೆಯಲ್ಲದೆ ಯಾವನೇ ವಿಶಿಷ್ಟ ತೀರ್ಥಂಕರರನ್ನು ಕುರಿತಲ್ಲ. ಪ್ರತಿ ಪರಿಚ್ಛೇದದ ಕೊನೆಯಲ್ಲಿ "ಇತಿ ಕರ್ನಾಟಕ ವ್ಯಾಕರಣ ವಿವರಣೇ...." ಎಂದು ಮಾತ್ರವಲ್ಲದೆ ಗ್ರಂಥ ಕರ್ತ ತನ್ನ ಬಗ್ಗೆ ಹೆಚ್ಚೇನೂ ಹೇಳುವುದಿಲ್ಲ. ಗ್ರಂಥದ ಕೊನೆಯಲ್ಲೂ ಆ ಕುರಿತು ಪ್ರಸ್ತಾಪವಿಲ್ಲ. ಕೊನೆಯಲ್ಲಿ ಬರುವ "ರಚಿತಾನಿ ಸ್ಫುಟಾರ್ಥಾನಿ ಕೃತಿನಾ ನಾಗ ವರ್ಮಣಾ'' ಎಂಬ ಮಾತಿನಿಂದ ಗ್ರಂಥಕರ್ತ ನಾಗವರ್ಮನೆಂದಾಯಿತಲ್ಲದೆ ಮತ್ತೇನೂ ಅರ್ಥೈಸಲೆಡೆಯಿಲ್ಲ. ಗ್ರಂಥಕಾರ ತನ್ನೆಲ್ಲ ಗ್ರಂಥಗಳಲ್ಲೂ ಒಂದೇ ವಿಧವಾಗಿ ಹೇಳ ಬೇಕೆಂದೇನೂ ಇಲ್ಲ. ಏಕಕರ್ತೃಕವೆನ್ನಲು ಉಳಿದ ಆಧಾರಗಳು ಸಾಕಷ್ಟಿದ್ದಲ್ಲಿ ಈ ಅಂಶವನ್ನು ಅವಗಣಿಸಬಹುದು. ಆದರೆ ಉಳಿದ ಯಾವ ಆಂತರಿಕ ಹಾಗೂ ಬಾಹ್ಯ ಆಧಾರಗಳಿಲ್ಲದೆ ಆ ಗ್ರಂಥಗಳ ಕರ್ತೃವಾದ ನಾಗವರ್ಮನೇ ಭೂಷಣವನ್ನು ರಚಿಸಿದವ ನೆನ್ನುವುದು ಹೇಗೆ ?

ಶಬ್ದಸ್ಮೃತಿ ಮತ್ತು ಭೂಷಣವನ್ನು ಮೇಲಿಂದ ಮೇಲೆ ನೋಡಿದಾಗ ಒಬ್ಬನೇ ಗ್ರಂಥಕರ್ತನಿಂದ ಇವೆರಡೂ ರಚಿತವಾದುವೆಂದು ತೋರುವುದು ಸಾಧ್ಯ. ವ್ಯಾಕರಣ ವಿಚಾರಗಳ ನಿರೂಪಣೆಯಲ್ಲಿ ಅಷ್ಟೊಂದು ಸಾಮ್ಯವಿರುವುದೇ ಇದಕ್ಕೆ ಕಾರಣ. ಆದರೆ ವ್ಯಾಕರಣವನ್ನು ಯಾರು ಬರೆದರೂ ಭಾಷಾಸ್ವರೂಪ (ಹಳಗನ್ನಡ)ವೊಂದೇ ಆದುದ ರಿಂದ ಒಬ್ಬ ಇನ್ನೊಬ್ಬನ ಗ್ರಂಥದಿಂದ ಸಾಕಷ್ಟು ಯಥಾವತ್ತಾಗಿ ಎತ್ತಿಕೊಳ್ಳುವುದರಿಂದ ಈ ಸಾಮ್ಯ ಭಿನ್ನಕರ್ತೃಕಗಳಾದ ಗ್ರಂಥಗಳಲ್ಲೂ ಕಾಣಬರುವುದು ಸಹಜವೆನ್ನುವುದನ್ನು ಮರೆಯುವಂತಿಲ್ಲ. ಹೆಚ್ಚೇಕೆ ? ಶಬ್ದಸ್ಮೃತಿಯ ಕರ್ತೃ ನಾಗವರ್ಮನೆಂದು ತಿಳಿಯದಿರುತ್ತಿದ್ದರೆ ಬಹುಶಃ ಅದರ ಕರ್ತೃ ಸ್ಥಾನವನ್ನು ಕೇಶೀರಾಜನೇ ಆಡರುತ್ತಿದ್ದ ನೇನೊ ! ಅಷ್ಟರ ಮಟ್ಟಿಗೆ ಕೇಶಿರಾಜ ಶಬ್ದಸ್ಮೃತಿಗೆ ಋಣಿಯಷ್ಟೆ. ಒಳಹೊಕ್ಕು ನೋಡಿದಲ್ಲಿ ಶಬ್ದಸ್ಮೃತಿ ಮತ್ತು ಭೂಷಣದಲ್ಲಿ ಭಿನ್ನವಾದ ಮನೋಧರ್ಮ ಮತ್ತು ವಿವೇಚನಾ ವಿಧಾನ ಕಂಡುಬರುತ್ತವೆ. ಉದಾಹರಣೆಗಾಗಿ ಮೊದಲು ಸಂಜ್ಞಾ ಪ್ರಕರಣವನ್ನೆತ್ತಿಕೊಳ್ಳಬಹುದು. ವರ್ಣಮಾಲೆಯ ನಿರೂಪಣೆಯಲ್ಲಿ ವೈಯಾಕರಣರಿಗೆ ಹೆಚ್ಚಿನ ಸ್ವಂತಿಕೆಯನ್ನು ಮರೆಯಲವಕಾಶವಿದೆಯೆನ್ನುವುದು ಕನ್ನಡ ವ್ಯಾಕರಣ ಗ್ರಂಥಗಳ ಮೇಲು ನೋಟದಿಂದಲೇ ಸ್ಪಷ್ಟವಾಗುವ ವಿಚಾರ. ಆದ್ದರಿಂದ ಈ ಭಾಗ ಹೋಲಿಕೆಗೆ ಸಮರ್ಪಕವಾದುದು.

ಶಬ್ದಸ್ಮೃತಿ ಮತ್ತು ಭೂಷಣ–ಇವೆರಡರಲ್ಲಿ ಸಂಜ್ಞಾಪ್ರಕರಣಕ್ಕೆ ಸಂಬಂಧಿಸಿದಂತೆ **ಸಮಾನವಾಗಿರುವ ವಿಚಾರಗಳು** ಕೆಳಗಿನಂತಿವೆ.

೧. ಸಂಸ್ಕೃತ ವರ್ಣಮಾಲೆಯನ್ನು ಯಥಾವತ್ತಾಗಿ ಎತ್ತಿಕೊಂಡು ವರ್ಣಮಾಲೆಯ ನಿರೂಪಣೆಯ ಆರಂಭ.
೨. ವರ್ಣಮಾಲೆಯ ಮೊದಲ ಹದಿನಾಲ್ಕು ವರ್ಣಗಳು ಸ್ವರಗಳು.

೩. ಒಂದು ಎರಡು ಮೂರು ಮಾತ್ರೆಯ ಸ್ವರಗಳು ಕ್ರಮವಾಗಿ ಹ್ರಸ್ವ ದೀರ್ಘ ಪ್ಲುತಗಳು.

೪. ಕ ಕಾರದಿಂದ ಮ ಕಾರದ ವರೆಗೆ ವರ್ಗಗಳು ಹಾಗೂ ವರ್ಗಗಳು ಒಟ್ಟು ಐದು.

೫. ಙ ಞ ಣ ನ ಮ ಗಳು ಅನುನಾಸಿಕಗಳು.

೬. ಯವಲ ಗಳು ವಿಕಲ್ಪವಾಗಿ ಅನುನಾಸಿಕಗಳಾಗುವುವು.

೭. ಲ ರ ಡ ಗಳು ಪೀಡನ ಪ್ರಯತ್ನಾಶ್ರಯದಿಂದ ಳ ಱ ೞ ಗಳಾಗುವುವು.

೮. ಮಹಾಪ್ರಾಣಗಳು ಸಂಖ್ಯೆಯಲ್ಲೂ ಅನುಕರಣದಲ್ಲೂ ಬರುವುವು

ಶಬ್ದಸ್ಮೃತಿಯಲ್ಲಿ ಮಾತ್ರ ಕಂಡುಬರುವ ವಿಚಾರಗಳು

೧. ವ್ಯಂಜನಗಳು ಅರೆ ಮಾತ್ರಿಕೆಗಳು.

೨. ಅವರ್ಣರಹಿತ ಸ್ವರಗಳು ನಾಮಿಗಳು.

೩. ಏಕಾರಾದಿಯಾದ ನಾಲ್ಕು ಸ್ವರಗಳು ಸಂಧ್ಯಕ್ಷರಗಳು.

೪. ಮಕಾರದ ಮುಂದಿನ ವರ್ಣಗಳು ಅವರ್ಗಗಳು.

ಭೂಷಣದಲ್ಲಿ ಮಾತ್ರ ಕಂಡುಬರುವ ವಿಚಾರಗಳು

೧. ಏ ಓ ಕಾರಗಳು ಸಂಧ್ಯಕ್ಷರಗಳೂ ದೀರ್ಘಗಳೂ ಹೌದು. ಕನ್ನಡದಲ್ಲಿ ಅವುಗಳಿಗೆ ಹ್ರಸ್ವರೂಪಗಳಿವೆ.

೨. ಋ, ೠ ವರ್ಣಗಳು ಶ ಷ ಕಾರಗಳು ಕನ್ನಡದಲ್ಲಿಲ್ಲ.

೩. ಅನುಸ್ವಾರ ಮತ್ತು ವಿಸರ್ಗದ ಸ್ವರೂಪ.

೪. ಕನ್ನಡದಲ್ಲಿ ಸಾಮಾನ್ಯವಾಗಿ ಮಹಾಪ್ರಾಣಗಳಿಲ್ಲ.

ಈ ಪರಿಶೀಲನೆಯಿಂದ ಎರಡೂ ಗ್ರಂಥಗಳ ನಿರೂಪಣೆಯಲ್ಲಿರುವ ಅಂತರ ಸ್ಪಷ್ಟವಾಗುತ್ತದೆ. ಹೀಗಿದ್ದೂ "ಶಬ್ದಸ್ಮೃತಿ, ಭಾಷಾಭೂಷಣಗಳ ಕರ್ತೃ ಒಬ್ಬನೇ ಆದುದರಿಂದ ಅವುಗಳ ವಿಷಯ ನಿರೂಪಣೆಯಲ್ಲಿ ಪರಸ್ಪರ ಸಾಪೇಕ್ಷತೆ ಕಂಡು ಬರುತ್ತದೆ. ಅಕ್ಷರ ಪ್ರಕರಣದಲ್ಲಿ ಹಗರಣವಿಲ್ಲ. ಒಂದರಲ್ಲಿ ಹೇಳಿದುದನ್ನು ಮತ್ತೊಂದರಲ್ಲಿ ವಿವರಿಸಿದ್ದಾನೆ."[೧] ಎಂಬ ವಿವರಣೆ ಆಶ್ಚರ್ಯವನ್ನುಂಟುಮಾಡುತ್ತದೆ. ಹಾಗಾದರೆ ಶಬ್ದಮಣಿ ದರ್ಪಣಕ್ಕೂ ಈ ಮಾತನ್ನೇ ಅನ್ವಯಿಸಬಹುದಲ್ಲ! ಇರಲಿ, ಮೇಲಿನ ವಿಶ್ಲೇಷಣೆಯಿಂದ ಕೆಳಗಿನಂತೆ ಅರ್ಥಮಾಡಬೇಕಾಗುತ್ತದೆ.

---

೧. ಕನ್ನಡ ವೈಯಾಕರಣರು – ಜಿ. ಬಿ. ಕೊಲ್ಲೂರಯ್ಯ. ಬಾಗಿನ ಪುಟ ೯೬.

ಶಬ್ದಸ್ಮೃತಿ ಕಾರನಿಗೆ ಸಂಸ್ಕೃತಕ್ಕಿಂತ ಭಿನ್ನವಾದ ಯಾವ ಅಂಶಗಳು ಕನ್ನಡದಲ್ಲಿವೆಯೆಂದು ವಿಚಾರಿಸುವ ದೃಷ್ಟಿ ತೀರಾ ಕಡಿಮೆ. ಶಬ್ದಸ್ಮೃತಿಗೇ ಸೀಮಿತವಾಗಿರುವ ವಿಚಾರಗಳಲ್ಲಿ ಸಂಸ್ಕೃತಕ್ಕೆ ಸಂಬಂಧಿಸಿದ ಅಥವಾ ಸಂಸ್ಕೃತ ವೈಯಾಕರಣರು ಹೇಳುವ ವಿಚಾರವಲ್ಲದೆ ಹೊಸತಿಲ್ಲ. ಅದಕ್ಕೆ ಬದಲಾಗಿ ಭೂಷಣದಲ್ಲಿ ಮಾತ್ರ ಕಂಡುಬರುವ ವಿಚಾರಗಳಲ್ಲಿ ಹೆಚ್ಚಿನವು ಸಂಸ್ಕೃತ ವೈಯಾಕರಣರು ಹೇಳದ ಹಾಗೂ ಕನ್ನಡಕ್ಕೆ ವಿಶಿಷ್ಟವಾದ ವಿಚಾರವಾಗಿದೆ. ಶಬ್ದಸ್ಮೃತಿಕಾರ ಕನ್ನಡಕ್ಕೆ ವಿಶಿಷ್ಟವಾದ ಳ, ಱ, ೞ ಗಳನ್ನು ಹೇಳಿದರೂ ಎ, ಒ ಗಳನ್ನು ನೇರವಾಗಿ ಪ್ರಸ್ತಾಪಿಸುವುದಿಲ್ಲ. ಸಮಾಸ ಪ್ರಕರಣದ ಕೊನೆಯಲ್ಲಿ " ಗುರುಲಘು ಗತಿನಿಯಮ ಮದೇದೋದ್ವಯಕ್ಕಮುಕ್ಕುಂ ಪ್ರಾಯಂ " (ಸೂತ್ರ. ೬೭) ಎಂದು ಅವಧಾರಣಾರ್ಥದಲ್ಲಿ ಬರುವ ಏತ್ ಓತ್ ಗಳಿಗೆ ಹ್ರಸ್ವ ದೀರ್ಘಗಳನ್ನೂ ಹೇಳುವ ಮೂಲಕ ಎ ಒ ಗಳನ್ನು ಸೂಚಿಸಿರುವನು. ಸ್ವಭಾವ ಸಹಜವಾಗಿರುವ ಎ ಒ ಗಳ ಅರ್ಥಾತ್ ಏ ಓ ಕಾರಗಳಿಗೆ ವಿಕಲ್ಪವಾಗದ ಎ ಒ ಗಳ ಬಗ್ಗೆ ಸೂತ್ರದಲ್ಲಿ ಏನೂ ಹೇಳದೆ ಉದಾಹರಣೆಯನ್ನು ಮಾತ್ರವೇ ಕೊಡುತ್ತಾನೆ. (ಪದ್ಯ ೩೨೦, ೩೨೧) ಕನ್ನಡದಲ್ಲಿಲ್ಲದ ಸಂಸ್ಕೃತ ವರ್ಣಗಳ ಬಗ್ಗೆ ಅಲ್ಲಿ ಪ್ರಸ್ತಾಪವಿಲ್ಲ. ಬಹುಶಃ ಸಂಸ್ಕೃತ ವರ್ಣಗಳೆಲ್ಲ ಕನ್ನಡದಲ್ಲಿವೆಯೆಂಬ ದೃಷ್ಟಿ ಆತನಿಗಿದ್ದಿರಬೇಕು. ಶಬ್ದಸ್ಮೃತಿಯಲ್ಲಿ ಗ್ರಂಥಕಾರನಿಗೆ ಸಂಕ್ಷಿಪ್ತತೆಯತ್ತ ದೃಷ್ಟಿ, ಭೂಷಣದಲ್ಲಿ ಎಲ್ಲವನ್ನೂ ವಿಸ್ತಾರವಾಗಿ ಹೇಳುತ್ತಾನೆ ಎಂದು ಈ ಆಕ್ಷೇಪಕ್ಕೆ ಸಮಾಧಾನವೀಯಬಹುದು. ಭೂಷಣದಲ್ಲಿ ಬೆಳೆದಿರುವ ಕಾರಕ ವಿಧಾನ, ಆಖ್ಯಾತ ವಿಧಾನ ಮತ್ತು ಹೊಸತಾಗಿ ಸೇರಿರುವ ಅವ್ಯಯ ವಿಧಾನ ನಿಪಾತ ವಿಧಾನಗಳ ಮಟ್ಟಿಗೆ ಈ ಸಮಾಧಾನ ಸರಿ. ಆದರೆ ಕನ್ನಡ ವ್ಯಾಕರಣದಲ್ಲಿ ಏನೇನೂ ಅಗತ್ಯವಿಲ್ಲದ ನಾಮಿ ವಿಚಾರ ಹೇಳಿದಾತನಿಗೆ ಭಾಷೆಗೆ ಸಹಜವಾದ ಎ ಒ ಗಳ ಅಗತ್ಯ ಕಂಡು ಬರಲಿಲ್ಲವೇಕೆ ? ಎಂದು ಆ ಸಮಾಧಾನವನ್ನೇ ಪ್ರಶ್ನಿಸಬೇಕಾಗುತ್ತದೆ.

ಭೂಷಣಕಾರನಿಗೆ ಕನ್ನಡದಲ್ಲಿಲ್ಲದ ಸಂಸ್ಕೃತ ವರ್ಣಗಳನ್ನು ಪ್ರತ್ಯೇಕಿಸಿ ಕಾಣುವ ದೃಷ್ಟಿಯಿದೆ. " ನಾತ್ರಪ್ರಾಯೇಣ ವರ್ಗಾಣಾಂ ದ್ವಿತೀಯ ಚತುರ್ಥಾಃ " (ಸೂ ೧೧) " ಶಷೌಚ " (ಸೂ ೧೨) " ಋಕಾರದಯಶ್ಚತ್ವಾರಃ " (ಸೂ ೧೩) ಎಂಬ ಸೂತ್ರಗಳು ಗಮನಾರ್ಹವಾದುವು. ಒಂದು ಭಾಷೆಯ ಸಹಜ ವರ್ಣಗಳನ್ನು ಕಾಣುವ ಪ್ರಾಮಾಣಿಕ ಪ್ರಯತ್ನವಿಲ್ಲಿದೆ. " ಪ್ರಾಯೇಣೇತಿ ವಚನೇನ ಕ್ವಚಿತ್ಸಂಖ್ಯಾನು ಕರಣಾದೌ ದೃಶ್ಯಂತೇ " ಎಂಬ ವಿವರಣೆ ಶಬ್ದಸ್ಮೃತಿಯ " ದೊರೆಕೊಂಡ ಸಂಖ್ಯೆಯೊಳಮನುಕರಣದೊಳಂ ವರ್ತಿಕುಂ ಮಹಾಪ್ರಾಣಂಗಳ್ " (ಸೂತ್ರ ೬) ಎಂಬುದರ ಪ್ರತಿಬಿಂಬದಂತೆ ಮೇಲು ನೋಟಕ್ಕೆ ತೋರಿದರೂ " ನಾತ್ರಪ್ರಾಯೇಣ ವರ್ಗಾಣಾಂ ದ್ವಿತೀಯ ಚತುರ್ಥಾಃ " ಎನ್ನುವ ಹೊಸದೃಷ್ಟಿ ಅಲ್ಲಿ ತೀರಾ ಇಲ್ಲ. ಹೀಗೆ ವರ್ಣಮಾಲೆಯ ನಿರೂಪಣೆಯ ಮಟ್ಟಿಗೆ ಈ ಎರಡು ಗ್ರಂಥಗಳ ಭಿನ್ನದೃಷ್ಟಿ ಸುಸ್ಪಷ್ಟ. [ಶಬ್ದಸ್ಮೃತಿ,

ಭೂಷಣ, ಶಬ್ದಮಣಿದರ್ಪಣಗಳಲ್ಲಿನ ಕನ್ನಡ ವರ್ಣಮಾಲೆಯ ನಿರೂಪಣೆಯನ್ನು ಹೋಲಿಸಿದಾಗ ಒಂದು ವಿಧದ ಬೆಳವಣಿಗೆಯನ್ನು ಗುರುತಿಸಬಹುದು. ದರ್ಪಣಕಾರ ಮೊದಲಿನೆರಡು ಗ್ರಂಥಗಳಿಗೆ ಋಣಿಯಷ್ಟೆ]

ವ್ಯಾಕರಣ ವಿಷಯಗಳ ನಿರೂಪಣೆಯಲ್ಲೂ ಶಬ್ದಸ್ಮೃತಿ ಭೂಷಣಗಳು ಭಿನ್ನ ಕರ್ತೃಕಗಳೆಂಬ ಅಂಶವನ್ನು ಸಾಧಾರಣವಾಗಿ ತೋರಿಸಬಹುದು. ಲೋಪ ಸಂಧಿಯನ್ನು ಹೇಳುವ ಶಬ್ದಸ್ಮೃತಿಯ ಸೂತ್ರ ಹೀಗಿದೆ. :—

ಸ್ವರಮಿರೆ ಪರದೊಳ್ ಪೂರ್ವ
ಸ್ವರಲೋಪಂ ಕೃತವಿಭಕ್ತಿಗಕ್ಕುಂ ಪ್ರಕೃತಿ
ಸ್ವರದೊಳು ದೇದಂತಕ್ಕಾ
ಚರಿಸುವರವಿನಷ್ಟ ನಾಮಭಾಗ ಸ್ಥಿತಿಯೊಳ್.

[ಸೂತ್ರ ೮.]

ಪರದೊಳ್ ಸ್ವರಮಿರೆ ಪೂರ್ವಸ್ವರ ಲೋಪಂ ಕೃತವಿಭಕ್ತಿಗೆ [=ವಿಭಕ್ತ್ಯಂತಕ್ಕೆ ಅರ್ಥಾತ್ ಪದಕ್ಕೆ] ಅಕ್ಕುಂ. ಪ್ರಕೃತಿ ಸ್ವರದೊಳ್ ಉದೇದಂತಕ್ಕೆ ಅವಿನಷ್ಟ ನಾಮಭಾಗ ಸ್ಥಿತಿಯೊಳ್ (ಲೋಪಮಂ) ಆಚರಿಸುವರ್" ಎಂದಿದರ ಅನ್ವಯ. ಸ್ವರಾಂತ ಪದಕ್ಕೆ ಸ್ವರಪರವಾಗಲು ಲೋಪ ನಿತ್ಯವೆಂದೂ ಪ್ರಕೃತಿ ಸ್ವರಗಳಾದ ಉಕಾರ ಎಕಾರಗಳಿಗೆ ಸ್ವರಪರವಾಗಲು ಅವಿನಷ್ಟನಾಮ ಭಾಗ ಸ್ಥಿತಿಯಲ್ಲಿ ಮಾತ್ರವೇ ಲೋಪವೆಂದೂ ಈ ಸೂತ್ರದ ಅರ್ಥ. [ಉಳಿದ ಪ್ರಕೃತಿ ಸ್ವರಗಳಿಗೆ ಸ್ವರಪರವಾಗಲು ನಡೆಯುವ ಸಂಧಿ ಕಾರ್ಯದ ಬಗ್ಗೆ ವಿವರಣೆಯಿಲ್ಲ.] ಸೂತ್ರದ ಪೂರ್ವಾರ್ಧಕ್ಕೆ ಉದಾಹರಿಸಿದ ಪ್ರಯೋಗಗಳಾದ (ಪದ್ಯ ೩೩) ಎನ್ನಯ್ಯ (ಎನ್ನ + ಅಯ್ಯ), ಅತಿರಥಂಗಕ್ಕುಂ (ಅತಿರಥಂಗೆ + ಅಕ್ಕುಂ) ಎನ್ನಯ್ಯಂಗಕ್ಕುಂ (ಎನ್ನ + ಅಯ್ಯಂಗೆ + ಅಕ್ಕುಂ) ಮೊದಲಾದವುಗಳಲ್ಲಿ ಪದಾಂತ ಸ್ವರಲೋಪವಿದೆ. ಉತ್ತರಾರ್ಧಕ್ಕೆ ಕೊಟ್ಟ ಉದಾಹರಣೆಗಳಾದ ಸೊವಡೊಂದೊಯ್ಯನೆ (ಸೊವಡು+ಒಂದು+ಒಯ್ಯನೆ), ಕೆಂಪುಣ್ಮೆ (ಕೆಂಪು+ಉಣ್ಮೆ), ನಾಲಗುಳ್ಳರ (ನಾಲಗೆ + ಉಳ್ಳರ) ಮೊದಲಾದವುಗಳಲ್ಲಿ (ಪದ್ಯ ೩೪–೩೫) ಪ್ರಕೃತಿ ಸ್ವರಗಳಾದ ಉಕಾರ ಎಕಾರಗಳು ಲೋಪ ಹೊಂದಿವೆ. ಹೀಗೆ ಲೋಪ ಸಂಧಿಯ ಬಗ್ಗೆ ಖಚಿತವಾದ ನಿರೂಪಣೆ ಶಬ್ದಸ್ಮೃತಿಯಲ್ಲಿದೆ.

ಭೂಷಣದಲ್ಲಿ ಲೋಪಸಂಧಿಯ ವಿವರಣೆ ಇನ್ನೊಂದು ತೆರನಾದುದು. "ಸ್ವರೇ ಸ್ವರಸ್ಯಲೋಪಃ" (ಸೂತ್ರ ೧೯) ಅಂದರೆ ಸ್ವರಕ್ಕೆ ಸ್ವರಪರವಾಗಲು ಪೂರ್ವಸ್ವರ ಲೋಪವೆಂಬುದು ಭೂಷಣಕಾರನ ಅಭಿಪ್ರಾಯ. ಆದರೆ ಅಲ್ಲಿಗೇ ನಿಲ್ಲದೆ "ಪ್ರಕೃತೇರುದೇತೋಃ (ಸೂತ್ರ ೨೦) ಎಂದೂ ಹೇಳಲಾಗಿದೆ. ಇದೇ ಗ್ರಂಥಕಾರನ ಭಿನ್ನದೃಷ್ಟಿಗೆ ಸಾಕ್ಷಿಯಾಗಿದೆ. ಸೂತ್ರ ೧೯ ರಲ್ಲಿ ಪ್ರಕೃತಿ ಸ್ವರವೆಂದಾಗಲೀ ವಿಭಕ್ತಿ

ಸ್ವರವೆಂದಾಗಲೀ ಪ್ರತ್ಯೇಕಿಸಿ ಹೇಳದಿರುವುದರಿಂದ ಈ ಸೂತ್ರದ ಅಗತ್ಯವೇನು ? ಶಬ್ದಸ್ಮೃತಿಯಲ್ಲಿ ಮೊದಲು "ಕೃತ ವಿಭಕ್ತಿಗೆ" ಎಂದುದರಿಂದ ಮುಂದಿನ "ಪ್ರಕೃತಿ ಸ್ವರದೊಳುದೇದಂತಕ್ಕೆ...." ಎಂಬ ಮಾತು ಸಾರ್ಥಕವಾದುದು. ಮೇಲೆ ಹೇಳಿದ ಸೂತ್ರ ೨೦ ರ ವೃತ್ತಿಯಲ್ಲಿ "ಸಿದ್ಧೇ ಸತ್ಯಾರಭ್ಯಮಾಣೋ ವಿಧಿರ್ನಿಯಮಾಯೇತಿ ನಿಯಮಾರ್ಥೋಽಯಂ ಯೋಗಃ । ಪ್ರಕೃತೇಃ ಸಂಬಂಧಿನಃ ಸ್ವರಸ್ಯ ಲೋಪೋಯದಿ ಸ್ಯಾತ್ ತದುಕಾರೈಕಾರಯೋರೇವ । ನಾನ್ಯಸ್ಯ । ಸ್ವರಾದಿಕಾರಾದತ್ರ ಸ್ವರ ಲೋಪೋ ನಿಯಮ್ಯತೇ ನಪುನಃ ಪ್ರಕೃತಿಃ" ಎಂದು ಸೂತ್ರವನ್ನು ಸಮರ್ಥಿಸಿಕೊಂಡಿದ್ದರೂ ಅದು ಅನಗತ್ಯ ತಾನೇ. ಒಂದು ಸೂತ್ರದಿಂದ ಸಿದ್ಧವಾಗುವ ರೂಪಕ್ಕೆ ಅಪವಾದವೊಂದು ಬಂದಾಗ ಮಾತ್ರ ನಿಯಮಾರ್ಥ ಸೂತ್ರವನ್ನು ಹೇಳುವ ಅಗತ್ಯವಿದೆ ಇಲ್ಲಾದರೋ "ಸ್ವರೇ ಸ್ವರಸ್ಯಲೋಪಃ" ಎಂಬ ಸೂತ್ರದ ವ್ಯಾಪ್ತಿಗೆ ಸೇರಿದ ವಿಚಾರವನ್ನೇ ಮತ್ತೊಮ್ಮೆ ಹೇಳಿದಂತಾಗಿದೆ. (ಇಲ್ಲವೆ ಮೊದಲ ಸೂತ್ರದಲ್ಲಿ ವಿಭಕ್ತಿ ಸ್ವರಕ್ಕೆ ಮಾತ್ರ ಸಂಬಂಧಿಸಿದಂತೆ ಹೇಳಬೇಕಿತ್ತು) 'ನ ನಾಮ ಭಾಗಪ್ರಧ್ವಂಸೇ' (ಸೂ. ೨೧) ಎಂಬ ಮುಂದಿನ ಸೂತ್ರ ಪ್ರಕೃತಿಗೇ ಸಂಬಂಧಿಸಿದುದಷ್ಟೆ.

ಉದಾಹರಣೆಗಳಿಂದ ಗ್ರಂಥಕಾರನ ದೃಷ್ಟಿ ಸ್ಪಷ್ಟವಾಗುತ್ತದೆ. ಸೂತ್ರ ೧೯ ಕ್ಕೆ ಕೊಟ್ಟ ಪ್ರಯೋಗಗಳೆಲ್ಲ– ಎನ್ನರಸಂ, ತನ್ನಾಳಿಂ.... ಇತ್ಯಾದಿ– ಪದಾಂತ ಸ್ವರ ಲೋಪಕ್ಕಾಗಿವೆ. ಹಾಗೂ ಸೂತ್ರ ೨೦ ಕ್ಕೆ ಕೊಟ್ಟ ಉದಾಹರಣೆಗಳು– ಮಾತೆಲ್ಲಂ, ನಾಲಗುಳ್ಳನೆ.... ಇತ್ಯಾದಿ– ಪ್ರಕೃತಿ ಸ್ವರ ಲೋಪಕ್ಕಾಗಿವೆ. ಮಾತ್ರವಲ್ಲ ಒಂದು ಹಸ್ತ ಪ್ರತಿಯಲ್ಲಿ ಮೇಲೆ ಹೇಳಿದ ವೃತ್ತಿಯ ಮೊದಲ ವಾಕ್ಯಕ್ಕೆ "ಸ್ವರೇ ಸ್ವರಸ್ಯಲೋಪಃ ಇತಿ ವಿಧಿರ್ನ ಪ್ರಕೃತೇ ರುದಿತಃ" ಎಂದು ಪಾಠಾಂತರವೂ ಇದೆ. ಹೀಗೆ ಈ ವಿಶ್ಲೇಷಣೆಯಿಂದ ಶಬ್ದಸ್ಮೃತಿ ಕಾರನನ್ನು ಸರಿಯಾಗಿ ಅರ್ಥೈಸದೆ ಭೂಷಣಕಾರ ಲೋಪ ಸಂಧಿಯನ್ನು ವಿವರಿಸಿರುವನೆಂದು ತೋರದಿರದು. ಇಲ್ಲವೆ ಲೋಪಸಂಧಿಯ ಬಗ್ಗೆ ಇಬ್ಬರ ದೃಷ್ಟಿಯಲ್ಲಿ ಅಂತರವಿದೆಯೆಂದೂ ತಿಳಿಯಬಹುದು.

ಕೇಶಿರಾಜನು ಹೇಳುವ ಲೋಪಸಂಧಿಯ ನಿಯಮದಿಂದ ಮೇಲಿನ ನಿರೂಪಣೆಗಳ ಸಾಧುತ್ವವನ್ನು ಪರೀಕ್ಷಿಸಬಹುದು. ಶಬ್ದಸ್ಮೃತಿಯ ಸೂತ್ರವನ್ನು ಸರಿಯಾಗಿ ಅರ್ಥೈಸಿಕೊಂಡು ತನ್ನ ವಿಚಕ್ಷಣತೆಯನ್ನು ಮೆರೆಯುತ್ತ ಕೇಶಿರಾಜನು ಲೋಪ ಸಂಧಿಯನ್ನು ವಿವರಿಸುತ್ತಾನೆ. (ಸೂತ್ರ. ೬೨) ಅದನ್ನು ಕೆಳಗಿನಂತೆ ಸಂಕ್ಷೇಪಿಸಬಹುದು.

ಸ್ವರಂ	ಇದಿರೊಳ್ ಇರೆ	ವರ	ಸಂಸ್ಕೃತ	ವಿಭಕ್ತಿ[1]	ಸ್ವರಕಂ	ಲೋಪಂ
"	"	"	"	ಕರ್ಣಾಟಕ	"	"	"
"	"	"	"	ಸಂಸ್ಕೃತ ಪ್ರಕೃತಿ	"	"	ನಾಮರೂಢಿಯಂಟಿದಪಕ್ಷಂ
"	"	"	"	ಕರ್ಣಾಟಕ ಪ್ರಕೃತಿ	"	"	"

ವೃತ್ತಿಯಲ್ಲಾಗಲೀ, ಟೀಕಿನಲ್ಲಾಗಲೀ ನಾಮರೂಢಿಯಳಿಯುವ ವಿಚಾರ ಪ್ರಕೃತಿ ಸ್ವರಕ್ಕೆ ಮಾತ್ರ ಸಂಬಂಧಿಸಿದುದೆಂದು ಹೇಳುವುದಿಲ್ಲ. ಆದರೆ ಪ್ರಯೋಗದ ಕೊನೆಯಲ್ಲಿರುವ "ನಾಮಂ ಕೆಡುವೊಡೆ ಸಂಸ್ಕೃತ ಕರ್ಣಾಟಕ ಪ್ರಕೃತಿ ಸ್ವರಕ್ಕೆ ಲೋಪಮಿಲ್ಲ" ಎಂಬ ಹೇಳಿಕೆ ಗಮನಾರ್ಹವಾಗಿದೆ.[2] ಶಬ್ದಸ್ಮೃತಿ ಮತ್ತು ಭೂಷಣಕ್ಕೆ ಸಂಬಂಧಿಸಿಸಿದಂತೆ ನಾಮರೂಢಿಯಳಿಯುವ ವಿಚಾರ ಉಕಾರಾಂತ ಏಕಾರಂತ ಪ್ರಕೃತಿಗಳಿಗಷ್ಟೇ ಸೀಮಿತವಾಗಿದೆ. ಲೋಪಸಂಧಿಯ ಬಗ್ಗೆ ಕೇಶಿರಾಜನ ದೃಷ್ಟಿ "ಸ್ವರೇ ಸ್ವರಸ್ಯ ಲೋಪಃ" ಎಂದೇ ಆಗಿದೆ. ಆದುದರಿಂದ 'ಪ್ರಕೃತಿ ಸ್ವರದೊಳಂದೇದಂತಕ್ಕೆ' ಎಂದಾಗಲಿ 'ಪ್ರಕೃತೇರುದೇತೋಃ' ಎಂದಾಗಲಿ ಹೇಳದೆ ತನ್ನ ನಿರೂಪಣೆಯಲ್ಲಿ ಹೆಚ್ಚು ಖಚಿತತೆಯನ್ನು ಸಾಧಿಸಿದ್ದಾನೆ. ಶಬ್ದ ಸ್ಮೃತಿಕಾರನ ದೃಷ್ಟಿ 'ಸ್ವರೇ ಸ್ವರಸ್ಯ ಲೋಪಃ' ಅಲ್ಲವೆಂದೂ ಭೂಷಣಕಾರ ಹಾಗೆ ಹೇಳಿ ಅಸಂಬದ್ಧತೆಯನ್ನು ತಂದಿರುವನೆಂದೂ ಹಿಂದೆಯೇ ನೋಡಿದ್ದೇವೆ.

ವೈದಿಕ ವೈಯಾಕರಣರು ಪ್ರಾತಿಪದಿಕವೆಂದುದನ್ನೇ ಜೈನರು ಲಿಂಗವೆಂದರು. ಪಾಣಿನಿಯ ಅಷ್ಟಾಧ್ಯಾಯಿಯಲ್ಲಿ "ಅರ್ಥವದಧಾತುರಪ್ರತ್ಯಯಃ ಪ್ರಾತಿಪದಿಕಂ" ೧।೨।೪೫॥ ಎಂದು ಪ್ರಾತಿಪದಿಕವನ್ನು ನಿರ್ವಚಿಸಲಾಗಿದೆ. 'ಕಾತಂತ್ರ' ವ್ಯಾಕರಣದಲ್ಲಿ (ಕ್ರಿ. ಶ. ಸುಮಾರು ೨ ಅಥವಾ ೩ ನೇ ಶತಮಾನ) "ಧಾತುವಿಭಕ್ತಿವರ್ಜಮರ್ಥವಲ್ಲಿಂಗಂ" ಎಂದು ಲಿಂಗ ಸ್ವರೂಪವನ್ನು ತಿಳಿಸಲಾಗಿದೆ. ಈ ಎರಡು ಹೇಳಿಕೆಗಳಲ್ಲೂ ಪ್ರಾತಿಪದಿಕ ಮತ್ತು ಲಿಂಗ ಎಂಬೆರಡು ಶಬ್ದಗಳನ್ನು ಬಿಟ್ಟರೆ ಉಳಿದೆಲ್ಲ ವಿಚಾರ ಸಮಾನವಾಗಿದೆ. ಶಬ್ದಸ್ಮೃತಿಯಲ್ಲಿ "ಧಾತುವಿವರ್ಜಿತಮರ್ಥೋಪೇತಂ ಲಿಂಗಂ"

---

೧. ಇದು ಅನಗತ್ಯವೆಂದೇ ತೋರುತ್ತದೆ. ಪ್ರಕೃತಿ ಸಂಸ್ಕೃತವಿರಲಿ ಕನ್ನಡವಿರಲಿ ಕೊನೆಯಲ್ಲಿರುವ ವಿಭಕ್ತಿ ಕನ್ನಡದ್ದೇ ಆದುದರಿಂದ ಕನ್ನಡ ವಿಭಕ್ತಿ ಸ್ವರದಲ್ಲೇ ಅದು ಅಂತರ್ಗತವಾಗುವುದಷ್ಟೆ.

೨. ಶಬ್ದಮಣಿ ದರ್ಪಣದಲ್ಲಿ ಷಷ್ಠೀ ವಿಭಕ್ತಿಯ ಮುಂದೆ ಅವಧಾರಣಾರ್ಥದ ಏಕಾರವಿರಲು ಆಗಮಸಂಧಿ ನಿತ್ಯವೆಂಬುದನ್ನು ಸ್ಪಷ್ಟೀಕರಿಸಲಾಗಿದೆ. ಈ ಪರಿಸರವನ್ನು ಬಿಟ್ಟರೆ ಮತ್ತೆಲ್ಲೂ ವಿಭಕ್ತಿ ಸ್ವರಕ್ಕೆ ಸ್ವರ ಪರವಾಗಲು ಆಗಮ ನಿತ್ಯವೆಂಬುದಿಲ್ಲ. ದರ್ಪಣದಲ್ಲಿ ಆಗಮ ಸಂಧಿಗೆ ಕೊಟ್ಟ ಉದಾಹರಣೆಗಳಲ್ಲೂ ವಿಭಕ್ತ್ಯಂತಕ್ಕೆ ಸ್ವರ ಪರವಾಗಲು ಆಗಮವಾದ ಸಂದರ್ಭವಿಲ್ಲ.

ಎಂದು ಹೇಳಲಾಗಿದ್ದು ಮೇಲಿನ ಎರಡು ಹೇಳಿಕೆಗಳಲ್ಲಿರುವ ಸಮಾನಾರ್ಥಕಗಳಾದ 'ಅಪ್ರತ್ಯಯಃ' ಮತ್ತು 'ವಿಭಕ್ತಿವರ್ಜಮ್' ಎಂಬವನ್ನು ಕೈಬಿಡಲಾಗಿದೆ.[೧] ಭೂಷಣದಲ್ಲಿ ಲಿಂಗವನ್ನು "ಅರ್ಥವದಕ್ರಿಯಾವಾಚಿ ಕೃದಂತಂಚ ಲಿಂಗಂ" ಎಂದು ವ್ಯಾಖ್ಯಾನಿಸಲಾಗಿದೆ. 'ಅರ್ಥವತ್' ಮತ್ತು 'ಅಕ್ರಿಯಾವಾಚಿ'ಗಳು ಶಬ್ದಸ್ಮೃತಿಯ 'ಅರ್ಥೋಪೇತಂ' ಮತ್ತು 'ಧಾತುವಿವರ್ಜಿತಮ್'ಗಳ ಅರ್ಥವನ್ನೇ ಕೊಡುತ್ತವೆ. ಆದರೆ 'ಕೃದಂತಂ' ಎಂದರೇನು ? ಅದಕ್ಕೆ ಕೃತ್ಪ್ರತ್ಯಯಾಂತ ಎಂದಲ್ಲದೆ 'ಅಪ್ರತ್ಯಯಃ' ಎಂದಾಗಲಿ 'ವಿಭಕ್ತಿವರ್ಜಮ್' ಎಂದಾಗಲಿ ಅರ್ಥವಿಲ್ಲವಷ್ಟೆ. ಅಷ್ಟಾಧ್ಯಾಯಿಯಲ್ಲಾಗಲಿ ಕಾತಂತ್ರದಲ್ಲಾಗಲಿ ಪ್ರಾತಿಪದಿಕ ಅಥವಾ ಲಿಂಗವೆನ್ನಿಸಿಕೊಳ್ಳಲು ಕೃದಂತವೂ ಆಗಿರಬೇಕೆಂದು ಹೇಳಿಲ್ಲ. ಹಾಗೆ ಹೇಳುವುದು ಸಮರ್ಪಕವೂ ಅಲ್ಲ. ಹಿಂದಿನ ವೈಯಾಕರಣರ ಹೇಳಿಕೆಯಂತೆ ನಾಮವಲ್ಲದೆ ಕೃದಂತ, ತದ್ಧಿತಾಂತ ಮತ್ತು ಸಮಾಸಗಳು ಲಿಂಗವಾಗುತ್ತವೆ. ಪಾಣಿನಿ "ಕೃತ್ತದ್ಧಿತ ಸಮಾಸಾಶ್ಚ" ೧। ೨। ೪೬॥ ಎಂದು ಹೇಳುತ್ತಾನೆ. ಕೇಶಿರಾಜನ "ನಿಯತ ಚತುರ್ಭೇದಮದಾರಯೆ ಕೃತ್ತದ್ಧಿತ ಸಮಾಸ ನಾಮಸ್ಥಿತಿಯಂ." (ಸೂತ್ರ ೮೨) ಎಂಬ ವಿವರಣೆ ಪಾಣಿನಿಯ ಹೇಳಿಕೆಯನ್ನೇ ಹೋಲುತ್ತದೆ. ನಾಲ್ಕು ವಿಧವಾದ ಲಿಂಗಗಳಲ್ಲಿ ಕೃದಂತವೂ ಒಂದಲ್ಲದೆ ಲಿಂಗಗಳೆಲ್ಲವೂ ಕೃದಂತಗಳಲ್ಲ. ಆದುದರಿಂದ ಲಿಂಗ "ಅರ್ಥವದಕ್ರಿಯಾವಾಚಿ" ಯಾಗಿರುವುದರ ಜೊತೆಗೆ 'ಕೃದಂತವೂ' ಆಗಿರಬೇಕೆಂಬುದು ತಪ್ಪುಗ್ರಹಿಕೆ.[೨] ಶಬ್ದಸ್ಮೃತಿ ಮತ್ತು ಭೂಷಣದ ಈ ಲಿಂಗದ ಕುರಿತಾದ ಭಿನ್ನದೃಷ್ಟಿ[೩] ಭಿನ್ನಕರ್ತೃಕವೆಂಬ ಊಹೆಗೆ ಆಧಾರವಾಗುತ್ತದೆ.

ಶಬ್ದಸ್ಮೃತಿಯಲ್ಲಿ ಕಾರಕಗಳ ಕುರಿತು ಬರುವ ಸೂತ್ರವಿದು :—

> ಪರಿವಿಡಿಯ ಕರ್ತೃಕರ್ಮಂ
> ಕರಣಾಖ್ಯಂ ಸಂಪ್ರದಾನಮುಪನಯನಾಖ್ಯಾ
> ನಿರತಮಪಾದಾನ ಮುಮಧಿ
> ಕರಣಮುಮೆನೆ ಕಾರಕಂಗಳಾಱುಂ ನೆಗಳ್ಗುಂ

[ಸೂತ್ರ ೧೫]

---

೧. ಕೇಶಿರಾಜನು ಕಾತಂತ್ರವನ್ನು ನೇರವಾಗಿ ಅನುಸರಿಸಿದ್ದಾನೆ. 'ಕ್ರಿಯೆಯಂ ನುಡಿಯದುದು ವಿಭಕ್ತಿಯನಿಲ್ಲದುದು (ಧಾತು ವಿಭಕ್ತಿವರ್ಜಮ್) ಅರ್ಥಮುಳ್ಳುದು (ಅರ್ಥವತ್) ಅಂತದು ಲಿಂಗಂ'— ಡಿ. ಎಲ್. ಎನ್. ಸೂತ್ರ ೮೨.

೨ ಭೂಷಣದ ಈ ಸೂತ್ರವನ್ನು ಡಾ। ಶಿವಾನಂದರು "ಕ್ರಿಯಾವಾಚಿಯಲ್ಲದ ಕೃತ್ಪ್ರತ್ಯಯಾಂತವಾದ ಅರ್ಥವುಳ್ಳ ಶಬ್ದವೇ ಲಿಂಗ" ಎಂದು ಅರ್ಥೈಸುತ್ತಾರೆ. ಶಬ್ದಮಣಿದರ್ಪಣ ವಿಳಾಸ. ಪು. ೯೩

೩ 'ಧಾತುವಿವರ್ಜಿತಮರ್ಥೋಪೇತಂ ಲಿಂಗಂ" ಮತ್ತು "ಅರ್ಥವದಕ್ರಿಯಾವಾಚಿ ಕೃದಂತಂಚ ಲಿಂಗಂ– ಇವೆರಡಕ್ಕೂ ಅರ್ಥದಲ್ಲಿ ಸಮಾನತೆಯನ್ನು ಹೇಳಿದ್ದುಂಟು. ನೋಡಿ. ಕರ್ನಾಟಕ ಶಬ್ದಾನುಶಾಸನ– ಡಿ, ಪದ್ಮನಾಭ ಶರ್ಮ, ಭುವನಹಳ್ಳಿ ಪುಟ. ೩೩

ಸಂಸ್ಕೃತ ವೈಯಾಕರಣರ ಅಭಿಮತದಂತೆ ಷಷ್ಠೀ ವಿಭಕ್ತಿಗೆ ಕಾರಕತ್ವವಿಲ್ಲ. ಮೇಲಿನ ಸೂತ್ರದಲ್ಲಿ ಅದೇ ಅಭಿಪ್ರಾಯವಿದೆ. ಕೇಶಿರಾಜನೂ ಶಬ್ದಸ್ಮೃತಿಯನ್ನೇ ಅನುಸರಿಸಿ ಕಾರಕಗಳ ಸಂಖ್ಯೆಯನ್ನು ಆರಕ್ಕೇ ನಿಲ್ಲಿಸಿರುವನು (ದರ್ಪಣ ಸೂತ್ರ ೧೦೩ ರ ವೃತ್ತಿ).

ಭೂಷಣದಲ್ಲಿ ಕಾರಕದ ನಿರೂಪಣೆ ಹೀಗಿದೆ :—

> 'ಸೂತ್ರ–ಅಥಕಾರಕಂ ನಿರೂಪ್ಯತೇ'
> ವೃತ್ತಿ–ಸಂಜ್ಞಾಸಂಧಿ ನಿಯಮಾನಂತರಂ ಕರ್ತೃಕರ್ಮ ಕರಣ

ಸಂಪ್ರದಾನಾಪಾದಾನ ಸ್ವಾಮ್ಯಧಿಕರಣಾಖ್ಯಂ ಕಾರಕಂ ಯಥಾಕ್ರಮಂ ನಿರೂಪ್ಯತೇ.[೧] "ಈ ಸೂತ್ರವೃತ್ತಿಗಳಿಂದ ಸ್ವಾಮಿ ಸಂಬಂಧದ ಷಷ್ಠಿಯೂ ಕಾರಕವೆಂದು ಸೂಚಿಸಿ ದಂತಾಗುತ್ತದೆ.[೨] ಮುಂದೆ 'ಸಂಬಂಧೇ ಷಷ್ಠೀ'[೩] (ಸೂತ್ರ ೮೫) ಎಂಬ ಸೂತ್ರ ಈ ಅಭಿಪ್ರಾಯವನ್ನು ಮತ್ತಷ್ಟು ದೃಢೀಕರಿಸುತ್ತದೆ. ಕವಿರಾಜ ಮಾರ್ಗದಲ್ಲಿ ಕಾರಕ ವಿಷಯವಾಗಿ ಬರುವ—

> "ಕಾರಕವಾಚಿ ಕರ್ಮ ಕರಣಾದಿಕದಿಂ ಪ್ರಥಮಾದಿ ಭೇದ ನಿ
> ರ್ಧಾರಣದಿಂದದಂ ಪಿಡಿದು ನಿಲ್ವ ವಿಭಕ್ತಿಗಳೇಳೆನಿಕ್ಕುಂ...

[೧–೧೧೪]

ಈ ನಿರೂಪಣೆಯಲ್ಲಿ ಷಷ್ಠಿಗೆ ಕಾರಕತ್ವವನ್ನು ಕೊಡಲಾಗಿದೆಯೆಂದೂ ಕವಿರಾಜ ಮಾರ್ಗ ಕಾರನ ದೃಷ್ಟಿಯಲ್ಲಿ ಪ್ರಥಮೆಗೆ ಕಾರಕತ್ವವಿಲ್ಲವೆಂದೂ ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ.[೪] ಭೂಷಣಕಾರ ಈ ದಿಸೆಯಲ್ಲಿ ಒಂದು ದಿಟ್ಟ ಹೆಜ್ಜೆಯನ್ನಿಟ್ಟಿರುವನು. ಪ್ರಥಮೆ ಷಷ್ಠಿಗಳೆರಡಕ್ಕೂ ಕಾರಕವನ್ನಿತ್ತಿರುವನು. ಆದುದರಿಂದ ಶಬ್ದಸ್ಮೃತಿ ಭೂಷಣ ಗಳಲ್ಲಿ ಕಾರಕಗಳ ಬಗ್ಗೆ ಇರುವ ಕಲ್ಪನೆಯಲ್ಲಿ ಸ್ಪಷ್ಟವಾದ ಅಂತರವಿದೆಯೆಂದೇ ಹೇಳ ಬೇಕಾಗುತ್ತದೆ. ಶಬ್ದಸ್ಮೃತಿಕಾರ ಹಿಂದಿನ ಜಾಡಿನಲ್ಲೇ ನಡೆದರೆ ಭೂಷಣಕಾರ ಹೊಸ ಹಾದಿಯನ್ನು ರೂಪಿಸಿರುವನು.

---

೧. ಈ ವೃತ್ತಿ ಬಿ. ಎಲ್. ರೈಸ್‌ರವರಿಂದ ಸಂಪಾದಿತ ಕರ್ಣಾಟಕ ಭಾಷಾಭೂಷಣ (೧೮೮೪) ರಲ್ಲಿದೆ. ಆರ್. ನರಸಿಂಹಾಚಾರ್ಯರಿಂದ ಸಂಪಾದಿತವಾದ್ದರಲ್ಲಿ (೧೯೦೩) ಲ್ಲ. ಆದರೆ ಸೂತ್ರವಿದೆ. ಅದು ಸೂತ್ರವಲ್ಲವೆಂದೇ ಅವರ ಅಭಿಪ್ರಾಯ.

೨. ಕವಿರಾಜ ಮಾರ್ಗ ವಿವೇಕ (೧೯೭೩) ಮುಳಿಯ ತಿಮ್ಮಪ್ಪಯ್ಯ ಪುಟ ೧೪೭.

೩. "ಸ್ವ ಸ್ವಾಮಿ ಸಂಬಂಧೇ ಷಷ್ಠಿ" ಸೂತ್ರ ೮೭ – ಕರ್ಣಾಟಕ ಭಾಷಾಭೂಷಣ – ಬಿ. ಎಲ್. ರೈಸ್. ೧೮೮೪.

೪. ಕವಿರಾಜಮಾರ್ಗ ವಿವೇಕ (೧೯೭೩) ಮುಳಿಯ ತಿಮ್ಮಪ್ಪಯ್ಯ ಪುಟ ೧೪೬–೧೪೭ ಮತ್ತು ಕವಿರಾಜಮಾರ್ಗ – ಎಂ. ವಿ. ಸೀತಾರಾಮಯ್ಯ. ಟಿಪ್ಪಣಿಗಳು ಪುಟ ೧೬೫–೧೬೯.

ಅಚ್ಚಗನ್ನಡ ಶಬ್ದಗಳಲ್ಲಿನ ಪಕಾರವು ಹ ಕಾರವಾಗಿ ಪರಿವರ್ತನಗೊಳ್ಳುವ ಪ್ರಕ್ರಿಯೆ ಕ್ರಿ. ಶ. ೯ನೆಯ ಶತಮಾನದ ಕೊನೆಗಾಗಲೇ ಆರಂಭಗೊಂಡುದು ಶಿಲಾಲೇಖಗಳಿಂದ ಸಿದ್ಧವಾಗಿರುವ ಮಾತು.[೧] ಆದರೂ ಹಳಗನ್ನಡ ಗ್ರಂಥಗಳಲ್ಲಿ ಕ್ರಿ. ಶ. ೧೨ನೆಯ ಶತಮಾನದ ವರೆಗೆ ಈ ಪರಿವರ್ತನೆ ದೃಗ್ಗೋಚರವಾಗುವದಿಲ್ಲ. ನಯಸೇನನ (ಕ್ರಿ. ಶ. ೧೧೧೨) ಧರ್ಮಾಮೃತದಲ್ಲಿ ಪಕಾರ ಹಕಾರವಾದ ಸಹಜ ಪ್ರಕ್ರಿಯೆಯನ್ನು ಕಾಣಬಹುದು. ದುರ್ಗಸಿಂಹನ (ಕ್ರಿ. ಶ. ೧೦೩೧) ಪಂಚತಂತ್ರದಲ್ಲಾಗಲಿ ಕಾವ್ಯಾವಲೋಕನದ ಪ್ರಯೋಗ ರಾಶಿಯಲ್ಲಾಗಲಿ [ಒಂದೆಡೆಯನ್ನುಳಿದು] ಈ ಪರಿವರ್ತನೆಯಿಲ್ಲ. ಹೆಚ್ಚೇಕೆ? ಎರಡನೆಯ ನಾಗವರ್ಮನ ವರ್ಧಮಾನ ಪುರಾಣದಲ್ಲಿ ಬರುವ ಪಡುಕೆ, ಪಣೆಗಟ್ಟು, ಪರಡೆ, ಪೊನ್ನೆ, ಪಡಿ, ಪಱಿವಿಗೆ, ಪುಱು ಮೊದಲಾದ ಅಚ್ಚಗನ್ನಡ ಪದಗಳಲ್ಲಿ ಪಕಾರ ಹಕಾರವಾಗಿಲ್ಲ. ಶಬ್ದಸ್ಮೃತಿಯಲ್ಲಿ ಈ ಕುರಿತು ಪ್ರಸ್ತಾಪವಿಲ್ಲ. ಆದರೆ ಭೂಷಣದಲ್ಲಿ 'ಪೇ ಹೋವಾ' (ಸೂ. ೧೧೫) ಎಂಬ ಸೂತ್ರವಿದ್ದು ಉದಾಹರಣೆಯೆಂದು ಪಲಗೆ–ಹಲಗೆ; ಕಾಪು–ಕಾಹು ಎಂಬ ಶಬ್ದಯುಗ್ಮಗಳನ್ನು ಕೊಡಲಾಗಿದೆ. ಪ್ರಯೋಗ ಶರಣರಾದ ವೈಯಾಕರಣರು ಒಂದು ಭಾಷೆಯಲ್ಲಿ ನಡೆದ ಪರಿವರ್ತನೆ ಗಣನೀಯ ಪ್ರಮಾಣಕ್ಕೇರಿದ ಮೇಲೆಯೇ ಅದಕ್ಕೆ ಮಾನ್ಯತೆಯನ್ನು ಕೊಡುವರೆಂಬ ವಸ್ತುಸ್ಥಿತಿಯ ಹಿನ್ನೆಲೆಯಲ್ಲಿ ಈ ವಿಷಯವನ್ನು ಆಲೋಚಿಸಿದಲ್ಲಿ ಮೇಲೆ ಹೇಳಿದ ಸೂತ್ರ ಕ್ರಿ. ಶ. ೧೦೪೨ರಲ್ಲಿ ಹುಟ್ಟಿಕೊಳ್ಳಲೆಡೆಯಿಲ್ಲ. ಆಗ ವರ್ಧಮಾನ ಪುರಾಣದ ಕರ್ತೃವಿನಿಂದ ಭೂಷಣ ರಚಿತವಾಗುವ ಸಾಧ್ಯತೆ ಇಲ್ಲವಾಗುತ್ತದೆ.

ಕಾವ್ಯಾವಲೋಕನದ ಶಬ್ದಾಲಂಕಾರ ನಿರ್ಣಯ ಪ್ರಕರಣದಲ್ಲಿ ಬರುವ ಸೂತ್ರವೊಂದು ನೋಡತಕ್ಕುದಿದೆ—

ಬವಕಾರಂಗಳ್ ಪಹವ
ರ್ಣವೆರಡುಮವಿಭೇದದಿಂದೆ ಸಲ್ಗುಂ ಸಂಯೋ
ಗವಿಶಿಷ್ಟಮುಂ ಸ್ವರೂಪಮು
ಮವಿಕಲ್ಪದೊಳೊಂದಿ ನೆಗಟ್ಗುಮವು ದುಷ್ಕರದೊಳ್.

[ಸೂತ್ರ ೧೩೦]

ಇಲ್ಲಿ ಮೇಲು ನೋಟಕ್ಕೆ ಪಕಾರ ಹಕಾರವಾಗಿ ಪರಿವರ್ತನೆ ಗೊಳ್ಳುವುದನ್ನೇ ಹೇಳುವಂತೆ ತೋರುತ್ತದೆ. ಆದರೆ ಸೂತ್ರ ಬಂದಿರುವ ಸಂದರ್ಭ ನೋಡಿದರೆ "ಯಮಕದಲ್ಲಿ ಬವಕಾರಗಳನ್ನೂ ಪಹಕಾರಗಳನ್ನೂ ಏಕರೂಪ ಮಾಡಿ ಪ್ರಯೋಗಿಸಬಹುದು. ಶಬ್ದಗಳಲ್ಲಿ ಸಹಜವಾದ ಸಂಯುಕ್ತಾಕ್ಷರಗಳೊಡನೆ ಎರಡು ಶಬ್ದಗಳ ಸಂಧಿಯಿಂದಾದ

೧. ಶಿಶುವಿನ ಹಳ್ಳಿಯ ಶಿಲಾಶಾಸನೆ, ಕ್ರಿ. ಶ. ೮೭೨.

ಸಂಯುಕ್ತಾಕ್ಷರಗಳನ್ನೂ ಪ್ರಯೋಗಿಸಬಹುದು.[೧] ಎಂದೇ ಇದಕ್ಕೆ ಅರ್ಥ. ಸೂತ್ರಕ್ಕೆ ಕೊಟ್ಟ ಪ್ರಯೋಗ ಪದ್ಯ (ಸಂ. ೫೫೩)ದಲ್ಲಿ 'ದನಂಗಾಹಿತನಂ' ಎಂಬಲ್ಲಿ ಒಂದೆಡೆ ಮಾತ್ರ ಪಕಾರ ಹಕಾರವಾದುದು ಕಂಡುಬರುತ್ತದೆಯಾದರೂ ಪಕಾರದ ಸ್ಥಾನದಲ್ಲಿ ಹಕಾರ ಬಂದಿದೆಯೆನ್ನುವ ಸ್ಪಷ್ಟ ದೃಷ್ಟಿ ಅಲ್ಲಿಲ್ಲ. ಆದುದರಿಂದ ಕಾವ್ಯಾವಲೋಕನ ಕಾರನ ದೃಷ್ಟಿಯಲ್ಲಿ ಪಕಾರ ಹಕಾರವಾಗುವ ವಿಚಾರವಿಲ್ಲವೆಂದೇ ಹೇಳಬೇಕಾಗುತ್ತದೆ.

ವ್ಯಾಕರಣ ವಿಚಾರಗಳ ಆನುಪೂರ್ವಿಯಲ್ಲೂ ಶಬ್ದಸ್ಮೃತಿ ಭೂಷಣಗಳಲ್ಲಿ ಸಾಕಷ್ಟು ಭಿನ್ನತೆಯಿದೆ. ಆರ್. ನರಸಿಂಹಾಚಾರ್ಯರಿಂದ ಸಂಪಾದಿತ ಕಾವ್ಯಾವಲೋಕನದ ಪರಿಶಿಷ್ಟ '೩' ಅಥವಾ ಭೂಷಣದ ಪರಿಶಿಷ್ಟ '೨'ರ ಮೇಲುನೋಟದಿಂದಲೇ ಇದನ್ನರಿಯಬಹುದು. ಉದಾಹರಣೆಗಾಗಿ ಒಂದೆರಡನ್ನು ನೋಡಬಹುದು. ಶಬ್ದಸ್ಮೃತಿಯ ಸಮಾಸ ಪ್ರಕರಣದಲ್ಲಿ ಬರುವ ವಿಚಾರ (ಸೂ. ೬೪) ಭೂಷಣದ ತದ್ಧಿತ ಪ್ರಕರಣ (ಸೂ. ೧೯೨)ದಲ್ಲಿ ಬಂದಿದೆ. ಶಬ್ದಸ್ಮೃತಿಯ ಅದೇ ಪ್ರಕರಣದ ವಿಚಾರಗಳನ್ನು (ಸೂ. ೬೫ ಮತ್ತು ೬೬) ಭೂಷಣದ ಯುಷ್ಮದಾದಿ ಪ್ರಕರಣದಲ್ಲಿ (ಸೂ. ೧೧೯, ೧೨೧, ೧೧೪ ಮತ್ತು ೧೨೩) ಕಾಣಬಹುದು. ಶಬ್ದಸ್ಮೃತಿಯಲ್ಲಿ ಬಂದಿರುವಂತೆ ಇವೆಲ್ಲ (ಸೂತ್ರ ೧೨೩ರ ಹೊರತು) ಸಮಾಸ ಪ್ರಕರಣದಲ್ಲೇ ಬರಬೇಕಾದವುಗಳು. ಭೂಷಣದ ಸಂಜ್ಞಾವಿಧಾನದಲ್ಲಿ ಬರುವ ಎ. ಒ ವಿಚಾರ ಪರೋಕ್ಷವಾಗಿ ಶಬ್ದಸ್ಮೃತಿಯ ಸಮಾಸ ಪ್ರಕರಣದಲ್ಲಿ ಬರುವುದನ್ನೂ ನೋಡಬಹುದು. ಆದುದರಿಂದ ಭೂಷಣದಲ್ಲಿ ವ್ಯಾಕರಣ ವಿಚಾರಗಳ ಆನುಪೂರ್ವಿ ಶಬ್ದಸ್ಮೃತಿಯಂತೆಯೇ ಇದೆ ಎನ್ನುವುದು ಸಮರ್ಪಕವಾಗಲಾರದು.

ಈ ರೀತಿಯಲ್ಲಿ ಶಬ್ದಸ್ಮೃತಿ, ಭೂಷಣಗಳನ್ನು ಪರಸ್ಪರ ಹೋಲಿಸಿದಾಗ ಇವೆರಡೂ (೧) ಏಕಕರ್ತೃಕಗಳೆಂದು ಹೇಳಲು ಸಾಧಕಗಳಾದ ಅಂಶಗಳು ಮತ್ತು ಅವುಗಳ ನಿರಾಕರಣೆ (೨) ಭಿನ್ನ ಕರ್ತೃಕಗಳೆಂದು ಊಹಿಸಲು ಆಧಾರವಾದ ವಿಚಾರಗಳು– ಇವುಗಳ ವಿವೇಚನೆಯಾಯಿತು. ಭೂಷಣದ ಕರ್ತ ನಾಗವರ್ಮ ಇಮ್ಮಡಿ ನಾಗವರ್ಮನಿಗಿಂತ ಭಿನ್ನನೆಂಬುದೂ ಇದರಿಂದ ಖಚಿತವಾಯಿತು. ಇದರೊಂದಿಗೆ ಅವನ ಕಾಲವನ್ನೂ ಅವನ ಕುರಿತ ಇತರ ವಿಚಾರಗಳನ್ನೂ ಆಲೋಚಿಸುವುದು ಅಗತ್ಯ.

ಕಾವ್ಯಾವಲೋಕನ, ಅಭಿಧಾನ ವಸ್ತುಕೋಶ, ವರ್ಧಮಾನ ಪುರಾಣಗಳ ಕರ್ತೃವಾದ ಎರಡನೆಯ ನಾಗವರ್ಮನ ಕಾಲ ಕ್ರಿ. ಶ. ೧೧೪೨ ಎಂಬುದನ್ನು ಹಿಂದೆಯೇ ನೋಡಲಾಗಿದೆ. ಭೂಷಣದ ಕರ್ತೃ ನಾಗವರ್ಮ ಅವನಿಗಿಂತ ಈಚೆಯವನೇ ಆಗಿರ

---

೧. ಶಿ. ಶಿ. ಬಸವನಾಳ. ಎಂ. ಎ ಮತ್ತು ಕೇಪು ಶಂಕರನಾರಾಯಣರಿಂದ ಸಂಪಾದಿತ ಕಾವ್ಯಾವಲೋಕನ, ಟಿಪ್ಪಣಿ ಪು. ೨೭೭.

ಬೇಕು. ಕನ್ನಡ ವರ್ಣಮಾಲೆಯ ನಿರೂಪಣೆಯಲ್ಲಿ ಸಾಧಿಸಿದ ಹೊಸತನ[೧] ಮತ್ತು ಪಕಾರ ಹಕಾರವಾಗಿ ಪರಿವರ್ತನೆಗೊಂಡುದರ ವಿವರಣೆ– ಇವುಗಳು ಈ ಊಹೆಗೆ ಪೋಷಕಗಳಾಗಿವೆ. ಕಾವ್ಯಾವಲೋಕನಕ್ಕೆ ಈತ ಋಣಿಯೂ ಹೌದು. ಆರ್. ನರಸಿಂಹಾಚಾರ್ಯರು ಎರಡನೆಯ ನಾಗವರ್ಮನ ಕಾಲನಿರ್ಣಯಕ್ಕೆ ಹಿಂದೆ ಎತ್ತಿಕೊಂಡಿದ್ದ ಆಧಾರಗಳನ್ನು ಇನ್ನೊಮ್ಮೆ ಪರೀಕ್ಷಿಸಿ ಇವನ ಕಾಲ ನಿರ್ಣಯವನ್ನು ಮಾಡಬಹುದು.

ಆರ್. ನರಸಿಂಹಾಚಾರ್ಯರು ಕೊಟ್ಟ ಆಧಾರಗಳಲ್ಲಿ ಒಂದು ನಾಗಚಂದ್ರನ ಪದ್ಯಭಾಗದ ಉದ್ಧರಣೆ, ನಾಗಚಂದ್ರನ ಕಾಲ ಅವರ ಅಭಿಮತಕ್ಕೆ ಭಿನ್ನವಾಗಿ ಮಂಜೇಶ್ವರ ಗೋವಿಂದ ಪೈ, ಡಿ. ಎಲ್. ನರಸಿಂಹಾಚಾರ್ ಮೊದಲಾದ ವಿದ್ವಾಂಸರು ಕ್ರಿ.ಶ ೧೧೪೦ ಎಂದಿರುವರು.[೨] ಮುಗಳಿಯವರ ಮತದಂತೆ ನಾಗಚಂದ್ರನ ಕಾಲ ಕ್ರಿ. ಶ. ೧೧ ನೆಯ ಶತಕದ ಕೊನೆ ಹಾಗೂ ೧೨ ನೆಯ ಶತಕದ ಆದಿ. ಆದುದರಿಂದ ನಾಗಚಂದ್ರನ ಪದ್ಯಭಾಗವನ್ನು ಎತ್ತಿಕೊಂಡ ಭೂಷಣಕಾರ ನಾಗವರ್ಮ ಅವನಿಗಿಂತ ಈಚೆಯವನು ಎಂಬುದು ಸ್ಪಷ್ಟ. ವರ್ಧಮಾನ ಪುರಾಣದ ಪೀಠಿಕೆಯಲ್ಲಿ ಸಂಪಾದಕರು "ಭಾಷಾಭೂಷಣದಲ್ಲಿ ಬರುವ ಬಹುತಾಪಕ್ಕೆ ಬಿಗುರ್ತು ಮತ್ಸ್ಯಾವತಾರಕ್ಕೆ" ಎಂಬ ಪದ್ಯಭಾಗ ಈಗ ದೊರೆಯದಿರುವ ಬೇರಾವುದಾದರೂ ಕಾವ್ಯದಿಂದ ತೆಗೆದುಕೊಂಡುದಾಗಿರಬಹುದೆ ? ಈ ಪದ್ಯಭಾಗಕ್ಕೆ 'ಭೂತಾಪಕ್ಕೆ ಬಿಗುರ್ತು ಭೂತ ಪಡೆದಂ ರಾಜ್ಯಾಧಿಕಾರತ್ವಮಂ' ಎಂಬ ಪಾಠಾಂತರವೂ ಇದೆ[೩] ಎಂದು ಹೇಳುತ್ತಾರೆ. ಎರಡನೆಯ ನಾಗವರ್ಮನ ಕಾಲ ಕ್ರಿ. ಶ. ೧೦೪೩ ಎಂದು ತಿಳಿದಾಗ ಸಂಪಾದಕರಿಗೆ ಪಾಠಾಂತರದ ಕಡೆಗೆ ನೋಡಲೇ ಬೇಕಾಗಿ ಬಂತು. ನಾಗವರ್ಮನಿಗಿಂತ ಪೂರ್ವದಲ್ಲೇ ಅವನನ್ನಿರಿಸಬೇಕಾಯಿತು. ಉಳಿದೆಲ್ಲ ಆಧಾರಗಳ ಹಿನ್ನೆಲೆಯಲ್ಲಿ ಸ್ವೀಕೃತ ಪಾಠವನ್ನೇ ಇಟ್ಟುಕೊಂಡು ನಾಗಚಂದ್ರನಿಗಿಂತ ಈಚೆಯವನೇ ಭೂಷಣಕಾರನೆನ್ನಬಹುದು. [ಆದರೂ ಪಾಠಾಂತರದ ಬಗ್ಗೆ ಯಾವುದೇ ಸಮಾಧಾನ ಹೇಳಲು ಸಾಧ್ಯವಿಲ್ಲ.]

---

೧ ಭೂಷಣಕಾರನು ಕೊಡುವ ಪ್ರಯೋಗಗಳು ಕೆಲವೊಮ್ಮೆ ಹೆಚ್ಚು ವೈಜ್ಞಾನಿಕವಾಗಿರುವಂತೆ ತೋರುತ್ತವೆ. [ಆತನು ಬಿಡಿ ಬಿಡಿಯಾಗಿ ಶಬ್ದಗಳನ್ನೋ ವಾಕ್ಯಗಳನ್ನೋ ಉದಾಹರಿಸುವುದು ಬಹುಶಃ ಇದಕ್ಕೆ ಕಾರಣವಾಗಿರಲೂ ಬಹುದು.] ಕನ್ನಡದಲ್ಲಿ ಎ,ಒ,ಳ,ಱ,ೞ ಗಳೆಂಬ ವರ್ಣಗಳು ಮೂಲಭೂತವಾಗಿವೆಯೆಂಬುದಕ್ಕೆ ಕೊಡುವ ಉದಾಹರಣೆಗಳು ಆಧುನಿಕ ಭಾಷಾವಿಜ್ಞಾನಿಗಳು ಹೇಳುವ 'ಕನಿಷ್ಠಯುಗ್ಮ' (Minimal pair) ಗಳೇ ಆಗಿವೆ. ಉದಾ :—

ಎಲೆ–ಏಲೆ	ಮೊಲೆ–ಮೊಳೆ	ಕಡಲ್–ಕೞಲ್
ಸೆಲೆ–ಸೇಲೆ	ಕಲೆ–ಕಳೆ	ಕೋಡಿ–ಕೋೞಿ
ಒಲೆ–ಓಲೆ	ಮೊರೆ–ಮೊಱೆ	
ಗೊಲೆ–ಗೋಲೆ	ಮರೆ–ಮಱೆ	

೨ ಪಂಪರಾಮಾಯಣ ಸಂಗ್ರಹ. ಡಿ. ಎಲ್. ನರಸಿಂಹಾಚಾರ್ಯ. ಪೀಠಿಕೆ ಪು. xvi.

೩ ವರ್ಧಮಾನ ಪುರಾಣ — ಪೀಠಿಕೆ ಪುಟ xxiv.

ಡಾ। ಎ. ವೆಂಕಟಸುಬ್ಬಯ್ಯನವರ ವಾದವನ್ನೇ ಪುರಸ್ಕರಿಸಿ ನಾಗಚಂದ್ರನ ಕಾಲವನ್ನು ಒಂದಕ್ಕೆಳಿದರೆ (ಕ್ರಿ. ಶ. ೧೧೪೦ ಕ್ಕಿಂತ ಹಿಂದೆ) ಆಗ ಮತ್ತೊಂದು ಪ್ರಶ್ನೆ–ಉದ್ಭವಿಸುತ್ತದೆ. ಭೂಷಣದಲ್ಲಿ ಒಂದು ಪದ್ಯಭಾಗವನ್ನೆತ್ತಿಕೊಂಡ ನಾಗವರ್ಮ ಕಾವ್ಯಾವಲೋಕನದಲ್ಲಿ ಒಂದೇ ಒಂದು ಪದ್ಯವನ್ನಾದರೂ ಎತ್ತಿಕೊಳ್ಳಲಿಲ್ಲವೇಕೆ ? ಜೈನಧರ್ಮಿಯನೂ, 'ಅಭಿನವ ಪಂಪ'ನೆಂದು ಖ್ಯಾತಿವೆತ್ತವನೂ, ಮುಂದಿನ ಉಳಿದೆಲ್ಲ ಲಾಕ್ಷಣಿಕರಿಗೆ ಗ್ರಾಹ್ಯವಾದ ಪ್ರಯೋಗಗಳನ್ನಿತ್ತವನೂ ಆದ ನಾಗಚಂದ್ರ ಕಾವ್ಯಾವ–ಲೋಕನ ರಚಿಸುವ ಕಾಲದಲ್ಲಿ ಏಕೆ ಬೇಡವಾದನು ? ಕಾವ್ಯಾವಲೋಕನಕಾರನು ನಾಗಚಂದ್ರನಿಗಿಂತ ಪ್ರಾಚೀನನೂ, ಭೂಷಣಕಾರನು ಅರ್ವಾಚೀನನೂ ಎಂದು ತಿಳಿದಾಗ ಮಾತ್ರ ಇದಕ್ಕೆ ಸರಿಯಾದ ಸಮಾಧಾನ ದೊರೆಯುತ್ತದೆ. ಆಗ ಡಾ। ಎ. ವೆಂಕಟ ಸುಬ್ಬಯ್ಯನವರ ವಾದ ಹುರುಳಿಲ್ಲದ್ದಾಗುತ್ತದೆ.

ಭೂಷಣದಲ್ಲಿ ಉಲ್ಲೇಖಿತನಾದ ನಯಸೇನು ಧರ್ಮಾಮೃತದ ಕರ್ತೃವಾದ ನಯಸೇನನೇ ಎಂಬ ಆರ್. ನರಸಿಂಹಾಚಾರ್ಯರ ವಾದವನ್ನು ಒಪ್ಪುವಂತಿಲ್ಲ. ಆ ನಯಸೇನ ಪಂಡಿತನು ವ್ಯಾಕರಣವೊಂದನ್ನು ರಚಿಸಿರುವನೆನ್ನಲು ಆಧಾರಗಳಿಲ್ಲ. "ಬಹುಶಃ ಭಾಷಾಭೂಷಣದಲ್ಲಿ ಉಲ್ಲೇಖಗೊಂಡಿರುವ ನಯಸೇನನೂ ಮುಳುಗುಂದ ಶಾಸನದ (ಕ್ರಿ. ಶ. ೧೦೫೩) ನಯಸೇನನೂ ಏಕವ್ಯಕ್ತಿಯಾಗಿರಬೇಕೆಂದು ತೋರುತ್ತದೆ."[೧] ಎಂಬ ಊಹೆ ಇದೆ. ಇದು ಸರಿಯಾದಲ್ಲಿ ನಯಸೇನನ ಕಾಲನಿರ್ಣಯ ಭೂಷಣ ಕಾರನ ಕಾಲವನ್ನು ಗೊತ್ತುಮಾಡುವಲ್ಲಿ ಸಹಾಯಕವಾಗಲಾರದು.

ಇನ್ನುಳಿದಿರುವುದು ಜನ್ನನ ಅನಂತನಾಥಪುರಾಣದ ಹೇಳಿಕೆ:

"ಜನನಾಥಂ ಜಗದೇಕನಲ್ಲಿ ಕಟಕೋಪಾಧ್ಯಾಯನಾ ನಾಗವ
ರ್ಮನಿದಾನೀಂತನ ಶರ್ವವರ್ಮನೆಗಡಂ ಜನ್ನಂಗುಪಾಧ್ಯಾಯ ನಿಂ
ದು ನೃಸಿಂಹಕ್ಷಿತಿನಾಥನಲ್ಲಿ ಕಟಕೋಪಾಧ್ಯಾಯನಾರೆಂಬ ಸೂ
ಕ್ತಿ ನವೀನೋಜ್ವಳ ಬಾಣನಪ್ಪ ಸುಮನೋಬಾಣಂ ಕವಿಶ್ರೇಷ್ಠರೊಳ್"

(೧—೩೪)

ಈ ಪದ್ಯವನ್ನು ಆರ್. ನರಸಿಂಹಾಚಾರ್ಯರು "ಕಲ್ಯಾಣ ಚಾಲುಕ್ಯ ಜಗದೇಕನಲ್ಲಿ ಕಟಕೋಪಾಧ್ಯಾಯನಾಗಿದ್ದ ಇಮ್ಮಡಿ ನಾಗವರ್ಮನು ಜನ್ನನಿಗೆ ಉಪಾಧ್ಯಾಯನು, ಹೊಯ್ಸಳ ನರಸಿಂಹನಲ್ಲಿ ಕಟಕೋಪಾಧ್ಯಾಯನಾಗಿರುವವನು ಕವಿಸುಮನೋಬಾಣನು" ಎಂದು ಅರ್ಥೈಸಿದರು. ಯಶೋಧರ ಚರಿತೆಯಲ್ಲಿ ಜನ್ನ ಹೇಳುವ "ಭಾಳಲೋಚನಂ ಕವಿ ಸುಮನೋಬಾಣನ ಮಗನ್ ಎಂದು ಅಖಿಳಕ್ಷೋಣಿಗೆ ಪೆಸರಾಯ್ತು"

೧. ಧರ್ಮಾಮೃತ ಸಂಗ್ರಹ—ದೇಜಗೌ— ಪೀಠಿಕೆ. ಪುಟ. XIII.

ಎಂಬ ಮಾತನ್ನು ಮತ್ತು ಅನಂತನಾಥ ಪುರಾಣದಲ್ಲಿನ "ಶಂಕರಪುತ್ರಂ" ಎಂಬ ಹೇಳಿಕೆಯನ್ನು ಆಧಾರವಾಗಿಟ್ಟುಕೊಂಡು ಕವಿಸುಮನೋಬಾಣನಾದ ಶಂಕರ ಜನ್ನನ ತಂದೆಯೆಂದೂ ನಿರ್ಣೈಸಿದರು. ಮೇಲಿನ ಪದ್ಯಕ್ಕೆ ಡಾ। ಎ. ವೆಂಕಟಸುಬ್ಬಯ್ಯನವರು "ಕಲ್ಯಾಣ ಚಾಲುಕ್ಯ ಚಕ್ರವರ್ತಿ ಜಗದೇಕಮಲ್ಲನಲ್ಲಿ ನಾಗವರ್ಮನು ಕಟಕೋಪಾಧ್ಯಾಯನಾಗಿರುವಂತೆ ಹೊಯ್ಸಳ ನೃಸಿಂಹನಲ್ಲಿ ಕಟಕೋಪಾಧ್ಯಾಯನಾಗಿರುವ ಕವಿಸುಮನೋಬಾಣನು ಜನ್ನನಿಗೆ ಉಪಾಧ್ಯಾಯನು" ಎಂದು ಅರ್ಥ ಹೇಳಿದರು. ಈ ಎರಡು ವಿವರಣೆಗನುಸರಿಸಿ ಜನ್ನನ ಗುರುಸ್ಥಾನವನ್ನು ಎರಡನೆಯ ನಾಗವರ್ಮ ಮತ್ತು ಕವಿಸುಮನೋಬಾಣ–ಹೀಗೆ ಇಬ್ಬರು ಏರುವಂತಾಯಿತು. ಸುಮನೋಬಾಣ ಜನ್ನನ ತಂದೆಯಾಗಿ, ಗುರುವಾಗಿ ಕಾಣಿಸಿಕೊಳ್ಳುವಂತಾಯಿತು.

ಈ ಪದ್ಯವನ್ನು ಅರ್ಥೈಸುವಲ್ಲಿ ಕ್ಲಿಷ್ಟತೆಯಿದೆಯೆನ್ನುವುದು ಮುಖ್ಯವಿಚಾರ. ಆದ್ದರಿಂದಲೇ ಈ ಭಿನ್ನಾಭಿಪ್ರಾಯ. ಪದ್ಯಬಂದಿರುವ ಸಂದರ್ಭವನ್ನು ವಿಚಾರಿಸಿ ಡಾ। ಎಂ. ಎಂ ಕಲಬುರ್ಗಿಯವರು ವೆಂಕಟಸುಬ್ಬಯ್ಯನವರ ವಾದದಲ್ಲಿ ಹೆಚ್ಚು ಹುರುಳನ್ನು ಕಂಡರು.[೧] ಆದರೆ ವೆಂಕಟಸುಬ್ಬಯ್ಯನವರ ವಾದಸರಣಿಯಲ್ಲಿ ಚಮತ್ಕಾರವಿದೆಯೇ ಹೊರತು ಹೆಚ್ಚಿನ ಸ್ಪಷ್ಟತೆಯಿಲ್ಲ. ಮತ್ತೆಲ್ಲೂ ನಾಗವರ್ಮನು ಏರಿದ್ದ ಉಚ್ಚಸ್ಥಾನವಾದ 'ಕಟಕೋಪಾಧ್ಯಾಯತನ'ವನ್ನು ಉಲ್ಲೇಖಿಸದೆ ಅದರೊಡನೆ ಕವಿಸುಮನೋಬಾಣನ 'ಕಟಕೋಪಾಧ್ಯಾಯತನ'ವನ್ನು ಹೋಲಿಸುವುದರಲ್ಲಿ ಅಥವಾ ದೃಷ್ಟಾಂತಿಸುವುದರಲ್ಲಿ ಏನು ಹುರುಳಿದೆ ? ಆ ಕಾಲಕ್ಕಾಗಲೇ ಎರಡನೆಯ ನಾಗವರ್ಮ ಗತಿಸಿಹೋಗಿ ಹೆಚ್ಚುಕಡಿಮೆ ೧೦೦ ವರ್ಷಗಳಾದರೂ ಸಂದಿರಬೇಕು. [ಅವನು ಕಟಕೋಪಾಧ್ಯಾಯನಾಗಿದ್ದಂತೆ ಯಾವ ಶಾಸನವೂ ಹೇಳುವದಿಲ್ಲವಲ್ಲ !] ಅದರ ಬದಲು ಜನ್ನನು [ಆರ್. ನರಸಿಂಹಾಚಾರ್ಯರ ವಿವರಣೆಯಂತೆ] ತನ್ನಗುರು ನಾಗವರ್ಮ ಮತ್ತು ತಂದೆ ಸುಮನೋಬಾಣ ಇಬ್ಬರೂ ಎಲ್ಲರಿಂದ ಮಾನ್ಯವಾದ 'ಕಟಕೋಪಾಧ್ಯಾಯ' ಹುದ್ದೆಯನ್ನಡರಿದವರು, ಸಮಾನ ಹಿರಿಮೆಯುಳ್ಳವರು ಎನ್ನುವಲ್ಲಿ ಹೆಚ್ಚಿನ ಅರ್ಥ ಮತ್ತು ಸಂಭಾವ್ಯತೆಯಿದೆಯಷ್ಟೆ. ಗುರು ಮತ್ತು ತಂದೆಯ ಹಿರಿಮೆಯನ್ನು ಹೇಳುವುದರ ಮೂಲಕ ತನ್ನ ಹಿರಿಮೆಯನ್ನೇ ಸಾರುವುದು ಅವನ ಗುರಿಯಾಗಿರಬೇಕು. ಯಶೋಧರ ಚರಿತೆಯನ್ನು ಬರೆಯುವ ಕಾಲಕ್ಕಾಗಲೇ 'ಕವಿಸುಮನೋಬಾಣ'ನೆಂದು ತಂದೆ ಪ್ರಸಿದ್ಧನಾಗಿದ್ದುದರಿಂದ ಅವನ ಬಿರುದಿನ ಮುಂದೆ ಅಂಕಿತನಾಮವನ್ನು ಹಾಕುವ ಅಗತ್ಯ ಇದ್ದಿರಲಾರದು ಎಂದಿಟ್ಟುಕೊಳ್ಳಬಹುದು. ಅನಂತನಾಥ ಪುರಾಣದಲ್ಲಿ ತಂದೆ–ತಾಯಿಯರ ಪರಿಚಯವನ್ನು ಕೊಡುವಲ್ಲಿ (೧–೫೭) ಅವರ ಅಂಕಿತನಾಮವನ್ನು ತಿಳಿಸಿರುವುದೂ ಗಮನಾರ್ಹ. ವೆಂಕಟಸುಬ್ಬಯ್ಯನವರ ವಾದದಂತೆ ಮಗ,

೧. ಕರ್ನಾಟಕ ಭಾರತಿ ೭. ೧. ಪುಟ ೧೪೫–೧೪೯.

ಶಿಷ್ಯ ಎಂಬ ಶಬ್ದಗಳು ಸಮಾನಾರ್ಥಕಗಳಾದುದರಿಂದ 'ಸುಮನೋಬಾಣನ ಮಗಂ' ಎಂಬಲ್ಲಿ ಸುಮನೋಬಾಣನ ಶಿಷ್ಯನು ಎಂದು ಅರ್ಥೈಸಲಡೆಯಿದೆ. ವೀರಶೈವ ಜೈನ ಕಾವ್ಯಗಳಲ್ಲಿ ಅಂತಹ ಪ್ರಯೋಗಗಳಿರುವುದೂ ನಿಜ. ಆದರೆ ತನ್ನ ಎರಡೂ ಕೃತಿಗಳಲ್ಲಿ ಧಾರ್ಮಿಕ ಗುರುವಿನ ಮಗನೆನ್ನದ ಕವಿ ಲೌಕಿಕ ಗುರುವಿನ ಮಗನೆನ್ನುವಲ್ಲಿ ಸಂಭಾವ್ಯತೆ ಯಿದೆಯೇ ? ಒಟ್ಟಿನಲ್ಲಿ ವೆಂಕಟಸುಬ್ಬಯ್ಯನವರ ವಿವರಣೆಗಿಂತ ನರಸಿಂಹಾಚಾರ್ಯರ ವಿವರಣೆ ಹೆಚ್ಚು ಮನವರಿಕೆಯಾಗುತ್ತದೆ. ಆದ್ದರಿಂದಲೇ ಕನ್ನಡ ವಿದ್ವನ್ಮಂಡಲಿ ನರಸಿಂಹಾಚಾರ್ಯರ ಹೇಳಿಕೆಯನ್ನೇ ಸ್ವೀಕರಿಸಿತು.

ಎರಡನೆಯ ನಾಗವರ್ಮನ ಕಾಲ ಕ್ರಿ. ಶ. ೧೦೪೨ ಎಂದು ತಿಳಿದೊಡನೆ ನರ ಸಿಂಹಾಚಾರ್ಯರ ವಿವರಣೆ ಅರ್ಥಹೀನವಾಗಿ ವೆಂಕಟಸುಬ್ಬಯ್ಯನವರ ವಾದಕ್ಕೆ ಹೊಸ ಚೈತನ್ಯವುಂಟಾಗುವುದು ಸಹಜ. ಆದರೂ ಅದಕ್ಕೆ ಸಮಾಧಾನವಿದೆ. [ಅದೂ ಊಹೆಯಮೇಲೆ ನಿಂತಿದೆ.]

ಇಮ್ಮಡಿ ನಾಗವರ್ಮ ಜಗದೇಕಮಲ್ಲನಲ್ಲಿ ಕಟಕೋಪಾಧ್ಯಾಯನಾಗಿದ್ದನೆನ್ನಲು ಅವನ ಗ್ರಂಥಗಳಲ್ಲಿ ಆಧಾರವಿಲ್ಲ. ನಾಗವರ್ಮನೆಂಬವನೊಬ್ಬ ಜಗದೇಕಮಲ್ಲನಲ್ಲಿ ಕಟಕೋಪಾಧ್ಯಾಯನಾಗಿದ್ದನೆಂಬುದು ಜನ್ನನ ಮಾತಿನಂತೆ ಅಷ್ಟೇ ಸತ್ಯ. ಆ ಜಗ ದೇಕಮಲ್ಲನಾರು ? ಅವನ ಕಾಲವಾವುದು ? ಎಂಬುದೂ ಚರ್ಚೆಗೆ ಹೊರತಾಗಿಲ್ಲ. ಜಗದೇಕಮಲ್ಲ ಸಮಸ್ಯೆಯೊಂದಿಗೆ ನಾಗವರ್ಮ ಸಮಸ್ಯೆ ಹೆಣೆದುಕೊಂಡಿದೆ. ಒಂದರ ಎಳೆ ಸಿಕ್ಕಿತೆಂದರೆ ಮತ್ತೊಂದನ್ನು ಬಿಡಿಸಿದಂತೆಯೆ. ಆರ್. ನರಸಿಂಹಾಚಾರ್ಯರು ಹೇಳುವಂತೆ ಆ ಚಾಳುಕ್ಯದೊರೆ ಜಗದೇಕಮಲ್ಲನ ಕಾಲ ಕ್ರಿ. ಶ. ೧೧೩೮–೧೧೫೦; ವೆಂಕಟಸುಬ್ಬಯ್ಯನವರ ಅಭಿಪ್ರಾಯದಂತೆ ಕ್ರಿ. ಶ. ೧೧೬೩–೧೧೮೪.[೧] ಗೋವಿಂದ ಪೈಗಳು, ಹಾಗೆಯೇ ಆರ್. ನರಸಿಂಹಾಚಾರ್ಯರು ಹೇಳುವ ಜಗದೇಕಮಲ್ಲನ ಆಸ್ಥಾನ ದಲ್ಲಿ ಕಾವ್ಯಾವಲೋಕನ, ವರ್ಧಮಾನ ಪುರಾಣ, ವಸ್ತುಕೋಶಗಳನ್ನು ಬರೆದ ಎರಡನೇ ನಾಗವರ್ಮನಿರಲು ಸಾಧ್ಯವಿಲ್ಲ. ಜಗದೇಕಮಲ್ಲನ ಕಾಲದಬಗ್ಗೆ ಡಾ। ವೆಂಕಟಸುಬ್ಬಯ್ಯ ನವರ ಅಭಿಪ್ರಾಯವನ್ನು ಸ್ವೀಕರಿಸಿದರೆ ಅವನ ಆ ಸ್ಥಾನದಲ್ಲಿದ್ದುದು ಎರಡನೇ ನಾಗ ವರ್ಮನೆಂದೇ ಹೇಳಬೇಕಾಗುತ್ತದೆ. ಆಗ ಜನ್ನನ ಪದ್ಯ ಆತಂಕವನ್ನೊಡ್ಡುತ್ತದೆ. ಜಗದೇಕಮಲ್ಲನ ಆಸ್ಥಾನದಲ್ಲಿ ತಾನಿದ್ದೆನೆಂದು ಎರಡನೇ ನಾಗವರ್ಮ ಹೇಳಿ ಕೊಂಡದ್ದೂ ಇಲ್ಲ. ಆದುದರಿಂದ ಆತ ಜಗದೇಕಮಲ್ಲನ ಆಸ್ಥಾನದಲ್ಲಿದ್ದನೆಂಬ ಅಂಶವನ್ನು ಕೈಬಿಡಬೇಕಾಗುತ್ತದೆ. ಆಗಷ್ಟೇ ಸಮಸ್ಯೆಯನ್ನು ಬಗೆಹರಿಸುವ ಒಂದು

೧ ಕರ್ನಾಟಕ ಸಾಹಿತ್ಯ ಪರಿಷತ್ಪತ್ರಿಕೆ. ೨೦–೨.

ಎಳೆ ಕೈಗೆ ಸಿಗುತ್ತದೆ. ಗೋವಿಂದ ಪೈಗಳು ಹೇಳುವ ಜಗದೇಕಮಲ್ಲನ[೧] ಆಸ್ಥಾನದಲ್ಲಿ ತನ್ನ ಬಗ್ಗೆ ಏನೂ ಹೇಳಿಕೊಳ್ಳದ ಭೂಷಣದ ಕರ್ತೃವೂ ಜನ್ನನ ಗುರುವೂ ಆದ ನಾಗವರ್ಮ ಕಟಕೋಪಾಧ್ಯಾಯನಾಗಿದ್ದನೆಂಬುದೇ ಆ ಎಳೆ. ಬಹುಶಃ ಶರ್ವವರ್ಮನ 'ಕಾತಂತ್ರ'ದ ಮಾದರಿಯಲ್ಲಿ ಸಂಸ್ಕೃತ ಭಾಷೆಯಲ್ಲಿ ವ್ಯಾಕರಣವನ್ನು ಬರೆದು ಆತ [ಮೊದಲೇ ಎರಡನೆಯ ನಾಗವರ್ಮನು ಅಭಿನವ ಶರ್ವವರ್ಮನಾಗಿದ್ದಂತೆ] 'ಇದಾನೀಂತನ ಶರ್ವವರ್ಮ' ನಾಗಿರಬೇಕು. [ಈ ಬಿರುದು ಎರಡನೆಯ ನಾಗವರ್ಮನಿಗೆ ಇಲ್ಲದುದನ್ನೂ ಲೆಕ್ಕಿಸಬೇಕು.] 'ಕವಿಗಳೊಳಗೆ ವೈಯಾಕರಣಂ' ಆದ ಜನ್ನನಿಗೊಬ್ಬ ವೈಯಾಕರಣನೇ ಗುರುವಾಗಿರುವುದು ಹೆಚ್ಚು ಸಂಭವನೀಯ.[೨] ಈ ದಾರಿಯಲ್ಲಿ ಮುಂದುವರಿದಾಗ ಜನ್ನನ ಪದ್ಯ ಹೆಚ್ಚು ಅರ್ಥವುಳ್ಳದ್ದಾಗುತ್ತದೆ. ಪೈಗಳು ಎರಡನೇ ನಾಗವರ್ಮನ ಕಾಲವನ್ನು ೧೧೫೦–೧೨೦೦ ಎಂದು ಹೇಳಿರುವುದು ಗಮನಾರ್ಹ. ಹೆಚ್ಚು ಕಡಿಮೆ ಅದೇ ಕಾಲ ಈ ನಾಗವರ್ಮನದಾಗುತ್ತದೆ. ಆ ಕಾಲದಲ್ಲಿ ಹುಟ್ಟಿದ ಕನ್ನಡ ವ್ಯಾಕರಣ ಗ್ರಂಥದಲ್ಲಿ ಪಕಾರ ಹಕಾರವಾಗಿ ಪರಿವರ್ತನೆಗೊಳ್ಳುವ ಸಾಧುತ್ವದ ವಿಚಾರ ಬರುವುದೂ ಸಕಾಲಿಕವಾಗಿದೆ.

ಭೂಷಣದ ಕರ್ತೃ ಜೈನನೆನ್ನುವುದು ನಿರ್ವಿವಾದ. ಗ್ರಂಥಾರಂಭದ ಜಿನಸ್ತುತಿ ಹಾಗೂ ಜೈನಪರವಾಗಿ ಪ್ರಾತಿಪದಿಕವನ್ನು ಲಿಂಗವೇದಿರುವುದು ಇದಕ್ಕೆ ಸಾಕ್ಷಿ. ಈತ ಯಾವ ತೀರ್ಥಂಕರನ ಭಕ್ತನೆಂದು ಖಚಿತವಾಗಿ ಹೇಳಲು ಬರುವುದಿಲ್ಲ. ಭೂಷಣದಲ್ಲಿ ಸೂತ್ರ ೧೭೬ ಕ್ಕೆ ಕೊಡುವ ಉದಾಹರಣೆ ಹೀಗಿದೆ—

> "ಪದಿನಾಱನೆಯ ತೀರ್ಥಂಕರಂ ಶಾಂತಿನಾಥಂ"
> "ಜಿನಮುದನರೊಳಗೆ ಪದಿನಾ
> ಱನೆಯಂ ತತ್ಸಕಳ ಚಕ್ರವರ್ತಿಗಳೊಳಗ
> ಯ್ದನೆಯನೆನೆ ಪುಣ್ಯಪುಂಜಾ
> ರ್ಜನಕ್ಕೆ ಶಾಂತೀಶನಂತು ನೋಂತವರೊಳರೇ."

ಮೇಲಿನ ಒಂದು ಮಾತು ಮತ್ತು ಈ ಕಂದಪದ್ಯವನ್ನು ಆಧಾರವಾಗಿಟ್ಟುಕೊಂಡು ಇವನು ಶಾಂತಿನಾಥನ ಭಕ್ತನಿರಬಹುದೇ ಎಂದು ಊಹಿಸಬಹುದು. ಇದೇ ಪದ್ಯ

---

೧ ಜಗದೇಕಮಲ್ಲನ ಕಾಲದ ಬಗ್ಗೆ ಆರ್. ನರಸಿಂಹಾಚಾರ್ಯರ ಮತವನ್ನು ಸ್ವೀಕರಿಸಬಹುದು. ಆದರೆ ಕ್ರಿ. ಶ. ೧೧೫೦ರಲ್ಲಿ ಕಟಕೋಪಾಧ್ಯಾಯನಾಗಿದ್ದ ನಾಗವರ್ಮ ಕ್ರಿ. ಶ. ೧೨೩೦ರಲ್ಲಿದ್ದ ಜನ್ನನಿಗೆ ಗುರುವಾಗುವುದು ಅಸಂಭವ ಎನ್ನುವ ಅಭಿಪ್ರಾಯವಿದೆ ಆದ್ದರಿಂದ ಗೋವಿಂದ ಪೈಗಳಿಂದ ಸೂಚಿತ ಕಾಲ ಸ್ವೀಕಾರಾರ್ಹವೆಂದು ತೋರುತ್ತದೆ.

೨ ಜನ್ನನ ಗುರು ಸುಮನೋಬಾಣನಾದರೂ ಈ ಊಹೆಗೆ ಅಡ್ಡಿಯಿಲ್ಲ. ಕಟಕಾಚಾರ್ಯ ಮತ್ತು ಲಕ್ಷಣ ಶಿಕ್ಷಾಚಾರ್ಯ ಎಂಬೆರಡು ಪದಗಳು ಸಮಾನಾರ್ಥಕವಾಗಿರಬಹುದೇ ? ಹಾಗಿದ್ದಲ್ಲಿ ಕವಿ ಸುಮನೋಬಾಣನೂ ಒಬ್ಬ ವೈಯಾಕರಣನಾಗಿದ್ದಿರಬೇಕು, ಎಂದು ವಿಚಾರಿಸಿದ್ದುಂಟು. ನೋಡಿ–ಶಬ್ದಮಣಿದರ್ಪಣ (ಮದ್ರಾಸು) ದ (೧೯೩೯) ಅವತರಣಿಕೆ ಪುಟ ೫ ರ ಅಡಿಟಿಪ್ಪಣಿ.

ಕಾವ್ಯಾವಲೋಕನದಲ್ಲೂ (ಪದ್ಯ ೩೬೯) ಇದೆ. ಆದರೆ ಬೇರೆ ಯಾವ ತೀರ್ಥಂಕರನ ಬಗ್ಗೆಯೂ ಈ ಗ್ರಂಥದಲ್ಲಿ ಪ್ರಸ್ತಾಪವಿಲ್ಲದುದರಿಂದ ಹೀಗೆ ಊಹಿಸಲೆಡೆಯಿದೆ ಎಂದು ಮಾತ್ರ ಅಭಿಪ್ರಾಯ.

ಈ ನಾಗವರ್ಮ ಭೂಷಣಕ್ಕಿಂತ ಹೊರತಾಗಿ ಯಾವ ಗ್ರಂಥಗಳನ್ನು ರಚಿಸಿರುವನೆಂದು ಹೇಳಬರುವುದಿಲ್ಲ.

ಹೀಗೆ ಕಾವ್ಯಾವಲೋಕನ, ವಸ್ತುಕೋಶ, ವರ್ಧಮಾನ ಪುರಾಣ ಮತ್ತು ಕರ್ನಾಟಕ ಭಾಷಾಭೂಷಣ– ಈ ಗ್ರಂಥಗಳನ್ನು ಪರಾಂಬರಿಸಿದಾಗ ಒಟ್ಟಿನಲ್ಲಿ ಕಂಡುಬರುವುದಿಷ್ಟು:– ಮೊದಲ ಮೂರು ಗ್ರಂಥಗಳ ಕರ್ತೃ ಎರಡನೆಯ ನಾಗವರ್ಮ. ಅವನ ಕಾಲ ಕ್ರಿ. ಶ. ೧೦೪೨ ಕರ್ನಾಟಕ ಭಾಷಾಭೂಷಣದ ಕರ್ತೃ ಇನ್ನೊಬ್ಬ ನಾಗವರ್ಮ. ಇವನನ್ನು ಮೂರನೆಯ ನಾಗವರ್ಮನೆಂದು ಕರೆಯಬಹುದು. ಇವನ ಕಾಲ ಕ್ರಿ. ಶ. ೧೨ ನೆಯ ಶತಮಾನ. ಇವನು 'ಇದಾನೀಂತನ ಶರ್ವವರ್ಮ'ನೆಂಬ, ಬಿರುದು ಧಾರಿಯೂ ಜಗದೇಕಮಲ್ಲನಲ್ಲಿ ಕಟಕೋಪಾಧ್ಯಾಯನೂ ಆಗಿದ್ದು ಜನ್ನನ ಗುರುವೂ ಆಗಿದ್ದಿರಬೇಕು. ಒಂದು ವೇಳೆ ಜನ್ನನ ಪದ್ಯವನ್ನು ಅರ್ಥೈಸುವಲ್ಲಿ ಎಡವಿದ್ದರೆ ಕೊನೆಯ ಮಾತು ಬಿದ್ದು ಹೋಗುತ್ತದೆ. ಆದರೂ ಭಾಷಾಭೂಷಣದ ಕರ್ತೃ ಎರಡನೆಯ ನಾಗವರ್ಮನಿಗಿಂತ ಭಿನ್ನನೂ ಅವನಿಗಿಂತ ಈಚೆಯವನೂ ಆದ ಮೂರನೆಯ ನಾಗವರ್ಮನೆಂಬುದು ಶಬ್ದಸ್ಮೃತಿ ಭಾಷಾಭೂಷಣಗಳ ತುಲನೆಯಿಂದ ಸಿದ್ಧವಾಗುವ ಗಟ್ಟಿಮಾತು.

ಬೀರನ ಹಾಡು

ಪ್ರಭುಸ್ವಾಮಿಮಠ

ನಮ್ಮವ್ವ ಮಾರೆಮ್ಮ, ನಿನ್ನಗುಡಿಗೋಪುರ, ಪೌಳಿಪಾದಗಟ್ಟಿ
ದೀಪಮಾಲಿ ಕಂಬಕ್ಕೆಲ್ಲ ಕಣ್ಣಕಣಿಗಿಲೆಯರಳಿ ಹಬ್ಬಲೆಲ್ಲೆಲ್ಲೂ
ಹರಕೆಬಳ್ಳಿ.
ಜೂರುನೆಲ ಸೂರು ಸಿಕ್ಕೀತೆಂಬಾತ್ಮವಿಶ್ವಾಸಕ್ಕೆ ಗರಿಮೂಡಿಸಿದಿ
ತಾಯಿ !
ಎಷ್ಟುಕಾಲದಿಂದಿವರ ಹೂ ಹಣ್ಣು ಮಿಡಿಬಿಟ್ಟ ಬೇರಿಗೆಲ್ಲ
ನನ್ನಪ್ಪಜ್ಜ ಕೊಳೆತು ಗೊಬ್ಬರವಾದ್ದು ?
ಕಾಲ ಕೆರವಾಗಿ ಮಿಣಿ ಕಣ್ಣಿ ಹಗ್ಗವಾಗಿ ಇವರೊಕ್ಕಲಿ
ಸಿಡಿಗಾಳುಡಿಯಲ್ಲಾಯ್ದು ಬದುಕಿದ್ದು ?
ನಾಯಜೋಪಡಿಯಲ್ಲಿ ಬಾಣಂತಿ ಜೋಗುಳಹಾಡಿ
ಕಂದಮ್ಮಗಳು ಕಣ್ಣಬಿಟ್ಟದ್ದು ?
ಬಡ್ಡಿಮಾಬಡ್ಡಿ ಚಕ್ರಬಡ್ಡಿ ತಿರುಗುಣಿಗೆ ಡೊಗ್ಗಿ ಬಗ್ಗಿ
ಕೋಲಬಾಸುಂಡೆಗೆನ್ನೊಡೆಯs ಎಂದೀತಾಯಿಗ್ಗಂಡರ
ಓಲೈಸಿದ್ದು ?
ಸುಟ್ಟುಸುಡಗಾಡಾಗಿ, ಬಿಟ್ಟಬೀಕಲಾಗಿ ಹುಳವಾಗಿ
ಹೆಣವಾಗಿ ಬಾಳಿದ್ದು ?
ಹೊಟ್ಟೆಬಗೆದು ತಲೆತುಂಬವ ನೋವಿಗೀಚಲಮ್ಮನ
ಮೊರೆಹೊಕ್ಕದ್ದು ?
ಮೂಡಲು ಹರಿದು ನಿಚ್ಚಳಾಗಿದೆ ಈಗ
ಕೇರಿ ಕುರಿದಡ್ಡಿ ಕುನ್ನಿಗೆಲ್ಲ.
ನಮ್ಮವ್ವನುತ್ಸವಕ್ಕೆ ಪರಸಿ ನೆರೆಯಬೇಕು;
ಓಕಳಿ ಹರಿಯಬೇಕು.

ರನ್ನನಿಘಂಟು

ಎಂ. ಎಂ. ಕಲಬುರ್ಗಿ

ಕನ್ನಡದ 'ನಿಘಂಟು ಸಾಹಿತ್ಯ'ದಲ್ಲಿ ಎತ್ತಿಹೇಳಬಹುದಾದ ಕೃತಿಗಳೆಂದರೆ ರನ್ನ ನಿಘಂಟು, ವಸ್ತುಕೋಶ, ಚತುರಾಸ್ಯ ನಿಘಂಟು, ಶಬ್ದಸಾರ, ಕರ್ನಾಟಕ ನಿಘಂಟು, ಕವಿಕಂಠಹಾರ, ಕಬ್ಬಿಗರ ಕೈಪಿಡಿ, ಕರ್ನಾಟಕ ಶಬ್ದಮಂಜರಿ ಇತ್ಯಾದಿಗಳು. ಇವುಗಳಲ್ಲಿ 'ರನ್ನನಿಘಂಟು'ವಿನ ಕರ್ತೃ ಕವಿರನ್ನನೆಂದು ಕವಿಚರಿತೆಕಾರರು ಮೊದಲಾದವರ ಅಭಿಪ್ರಾಯ. ಇವರಿಗಿರುವ ಒಂದೇ ಒಂದು ಆಧಾರವೆಂದರೆ ಪ್ರತಿಯೊಂದು ಪದ್ಯ 'ಕವಿರತ್ನಾ' ಅಥವಾ 'ಕವಿರನ್ನಾ' ಎಂದು ಮುಗಿಯುವುದು.

ಇದರ ಆದಿ ಮತ್ತು ಅಂತ್ಯಗಳಲ್ಲಿ ರನ್ನನ ಕರ್ತೃತ್ವವನ್ನು ಪೋಷಿಸುವ ವಿವರಗಳಿಲ್ಲ; ಸ್ವತಃ ರನ್ನನಾಗಲೀ ಅನ್ಯಕವಿಗಳಾಗಲೀ ಇದು 'ರನ್ನಕೃತಿ'ಯೆಂದು ಹೇಳಿಲ್ಲವಾದುದರಿಂದ ಕೆಲವರು ಇದರ ಕರ್ತೃತ್ವದ ಬಗ್ಗೆ ಸಂದೇಹತಳೆದಿದ್ದಾರೆ. ಆದರೆ ಈಗ ಉಪಲಬ್ಧವಿರುವ ಕನ್ನಡ ನಿಘಂಟುಗಳಲ್ಲಿ ಇದು ಕಾಲದೃಷ್ಟಿಯಿಂದ ಪ್ರಾಚೀನತಮವಾಗಿ ತೋರುವುದೂ 'ರನ್ನಂ ವೈಯಾಕರಣಂ' ಮೊದಲಾದ ಹೇಳಿಕೆಗಳಿಂದ ವ್ಯಕ್ತವಾಗುವ ಶಾಸ್ತ್ರಸಂಧಾನಮತಿಯೂ ಈ ಕೃತಿ, ರನ್ನನದಾಗಿರಬೇಕೆಂದು ನಂಬಿಸುತ್ತವೆ.

ಕವಿರನ್ನನ ಕೃತಿಗಳಲ್ಲಿ ಉಳಿದು ಬಂದುವು ಗದಾಯುದ್ಧ, ಅಜಿತ ಪುರಾಣ. ಕಳೆದು ಹೋದುವು ಚಕ್ರೇಶ್ವರಚರಿತೆ, ಪರಶುರಾಮಚರಿತೆ. ಇವುಗಳನ್ನು ಬಿಟ್ಟರೆ ಮೊದಲಿನ ಹನ್ನೆರಡು ಪದ್ಯಗಳಷ್ಟು ಸಿಕ್ಕ 'ರನ್ನನಿಘಂಟು' ಮಾತ್ರ ಅಳಿದುಳಿದ ಸ್ಥಿತಿಯಲ್ಲಿ ನಿಂತುಕೊಂಡಿದೆ. ಕವಿಚರಿತೆಕಾರರು ಈ ಕೃತಿಯ ಬಗ್ಗೆ "ನಮಗೆ ದೊರೆತ ಈ ನಿಘಂಟುವಿನ ಒಂದು ಅಸಮಗ್ರ ಪ್ರತಿಯಲ್ಲಿ ೧೨ ಕಂದಗಳಿವೆ. ಇವು ಪ್ರಾಯಿಕವಾಗಿ 'ಕವಿರತ್ನ' ಎಂದು ಮುಗಿಯುತ್ತವೆ. ಇವುಗಳಲ್ಲಿ ಎರಡನ್ನು ಉದಾಹರಿಸುತ್ತೇವೆ.

ಸಣ್ಣದೆನಲ್ ಕಿಱಿದಕ್ಕುಂ ।
ಪೆಣ್ಣನೆ ಮಾಡೆಂಬವಾಚಿ ಬಳಿಯೆನೆ ವಂಶಂ ॥
ಎಣ್ಣನೆ ಲೆಕ್ಕಿಪುದುಂ ಬಿಸು ।
ಗಣ್ಣನೆನಲ್ ಗೊರವನಪ್ಪುದೆಲೆ ಕವಿರತ್ನಾ ॥

ಕೋಸಿತೆನಲ್ ಪೋಣಿಸಿದುದು ।
ಸೂಸಿನುದೆನಲ್ಕೆ ತುಳ್ಕಿತೆಂಬುದುಂ ಪರಿಮಳಮಂ ॥

ವಾಸಿತಮೆನೆ ಕಂಪುಂ ಮಿಗೆ।
ಸೌಸವಮೆನೆ ಸಮ್ಮದಾರ್ಥಮೆಲೆ ಕವಿರತ್ನಾ॥

— ಎಂದು ೧೯೦೭ ರಲ್ಲಿ ಹೇಳಿದ್ದಾರೆ. ಅಲ್ಲಿಂದ ೩೯ ವರ್ಷಗಳ ತರುವಾಯ ಅಂದರೆ ೧೯೪೬ ರಲ್ಲಿ ಈ ಕೃತಿಯ ಬಗ್ಗೆ ಗಮನ ನೀಡಿದವರು ಶ್ರೀ ತ. ಸು. ಶಾಮರಾಯರು. ಮೈಸೂರು ಓರಿಯಂಟಲ್ ಲೈಬ್ರರಿಯಲ್ಲಿ ದೊರೆತ ತ್ರುಟಿತವೂ ಸ್ಖಾಲಿತ್ಯಯುಕ್ತವೂ ಆಗಿದ್ದ ಅಪೂರ್ಣರೂಪದ ಒಂದೇ ಒಂದು ತಾಳೆಗರಿ ಹಸ್ತಪ್ರತಿಯನ್ನಾಧರಿಸಿ ಈ ನಿಘಂಟನ್ನು 'ರನ್ನಕಂದ' ಹೆಸರಿನಿಂದ ಸಾಹಿತ್ಯ ಪರಿಷತ್ಪತ್ರಿಕೆ (೩೧-೩ ಮತ್ತು ೪) ಯ ಮೂಲಕ ಪ್ರಕಟಿಸಿದರು. ಈ ಅಪೂರ್ಣಪ್ರತಿಯಲ್ಲಿದ್ದುವು ಕೇವಲ ಹನ್ನೊಂದುವರೆ ಪದ್ಯಗಳು. ಬಹುಶಃ ಇದು ಕವಿಚರಿತೆಕಾರರು ನೋಡಿದ ಹಸ್ತಪ್ರತಿಯೇ ಆಗಿರಬಹುದು. ಅಂದಿನಿಂದ ಮತ್ತೆ ೩೦ ವರ್ಷಗಳು ಕಳೆದರೂ ರನ್ನಕಂದದ ಪೂರ್ಣಪ್ರತಿ ಈವರೆಗೆ ಲಭಿಸಿರಲಿಲ್ಲ ಇತ್ತೀಚೆ ಕೊಲ್ಲಾಪುರದಲ್ಲಿ ನನಗೆ ಸಿಕ್ಕ ೨ ಹಸ್ತಪ್ರತಿಗಳ ಮೂಲಕ ಈ ಕೃತಿ ಪ್ರಥಮಬಾರಿ ಇಡಿಯಾಗಿ (?) ಕನ್ನಡ ಪ್ರಪಂಚಕ್ಕೆ ಕಾಣಿಸಿಕೊಳ್ಳುತ್ತದೆ.

ಇಂದು ಮಹಾರಾಷ್ಟ್ರದ ಪ್ರಮುಖ ಪಟ್ಟಣವಾಗಿರುವ ಕೊಲ್ಲಾಪುರ, ಪ್ರಾಚೀನ ಕಾಲದಲ್ಲಿ ಕನ್ನಡ ಅರಸರ ರಾಜಧಾನಿಯಾಗಿ ಕನ್ನಡಭಾಷೆ, ಸಾಹಿತ್ಯ, ಸಂಸ್ಕೃತಿಗಳ ಆಡುಂಬೊಲವೆನಿಸಿದ್ದಿತು. ಈ ಮಾತನ್ನು ಇಂದಿಗೂ ಸ್ಪಷ್ಟಪಡಿಸುವ ಹಲವು ಪ್ರಮಾಣಗಳಲ್ಲಿ ಅಲ್ಲಿಯ ಶ್ರೀ ಲಕ್ಷ್ಮೀಸೇನ ಜೈನಮಠವೂ ಒಂದು. ಈಗ ಇಡೀ ಪಟ್ಟಣವೆಲ್ಲ ಮಹಾರಾಷ್ಟ್ರಮಯವಾಗಿದ್ದರೂ ಶ್ರೀಮಠದ ಒಳಗೆ ಕನ್ನಡದ ಕಂಪು ತುಂಬಿನಿಂತಿದೆ. ನೋಡಲಿಕ್ಕೆ ಭವ್ಯವಾಗಿರುವ ಈ ಮಠದ ಇತಿಹಾಸವೂ ಭವ್ಯವಾಗಿದ್ದು, ಈ ಇತಿಹಾಸದ ಅಂಗವಾಗಿ ಅಲ್ಲಿ ಒಂದು ಹಸ್ತಪ್ರತಿಭಾಂಡಾರವೂ ಬೆಳೆದು ಬಂದಿದೆ. ಸಂಸ್ಕೃತ, ಪ್ರಾಕೃತ ಮತ್ತು ಕನ್ನಡ ಭಾಷೆಗಳಿಗೆ ಸಂಬಂಧಪಟ್ಟ ಒಟ್ಟು ೬೪೬ ಕಟ್ಟುಗಳಲ್ಲಿ ೩೫೭ ತಾಳೆಗರಿ ಪ್ರತಿ, ೨೮೯ ಕಾಗದ ಪ್ರತಿಗಳಿವೆ. ಇವುಗಳಲ್ಲಿ ಕನ್ನಡ ಭಾಷೆಗೆ ಸಂಬಧಿಸಿದ ತಾಳೆಗರಿ ಪ್ರತಿಗಳು ೧೬೧, ಕಾಗದ ಪ್ರತಿಗಳು ೧೦೪. ಹೀಗೆ ಒಟ್ಟು ೨೬೫ ಕನ್ನಡ ಕಟ್ಟುಗಳಲ್ಲಿ ಸೇರಿಕೊಂಡಿರುವ ಕನ್ನಡ ಕೃತಿಗಳ ಸಂಖ್ಯೆ ಸುಮಾರು ಎರಡುಸಾವಿರ.

ಈ ಶ್ರೀಮಂತ ಭಾಂಡಾರದಲ್ಲಿ 'ರನ್ನಕಂದ'ಕ್ಕೆ ಸಂಬಂಧಿಸಿದ ಎರಡು ಅಪೂರ್ವ ತಾಳೆಗರಿ ಹಸ್ತಪ್ರತಿಗಳಿವೆ. ೬೭ ಮತ್ತು ೧೧೯–ಇವುಗಳ ಕ್ರಮಸಂಖ್ಯೆಯಾಗಿದೆ.

೬೭ನೆಯ ಪ್ರತಿಯಲ್ಲಿ ವೈದ್ಯವಿಷಯ, ವಿಭಕ್ತ್ಯರ್ಥ, ರನ್ನನಿಘಂಟು, ಕರ್ನಾಟಕ ಸಂಜೀವಿನಿ, ಕವಿಜಿಹ್ವಾಬಂಧನಗಳಿವೆ. ಇದು ತುಂಬ ಹಳೆಯ ಪ್ರತಿಯಾಗಿದ್ದು ಅನೇಕ ದೋಷಪಾಠಗಳಿಂದ ತುಂಬಿದೆ. ಪ್ರತಿ ಜೀರ್ಣವಾಗಿದ್ದರೂ ಮಧ್ಯದ ರನ್ನನಿಘಂಟು ಭಾಗ ಮಾತ್ರ ಮುಕ್ಕಾಗದೆ ಉಳಿದುಕೊಂಡಿದೆ.

೧೧೯ನೆಯ ಪ್ರತಿಯು ೬೭ನೆಯ ಪ್ರತಿಗಿಂತ ಈಚಿನದು. ಈ ಕಟ್ಟಿನಲ್ಲಿ ಶಬ್ದಮಣಿದರ್ಪಣ, ಕರ್ನಾಟಕ ನಿಘಂಟು, ಚತುರಾಸ್ಯ ನಿಘಂಟು, ಕರ್ನಾಟಕ ಶಬ್ದಸಾರ, ರನ್ನನಿಘಂಟು, ಕರ್ನಾಟಕ ಸಂಜೀವಿನಿ ಕೃತಿಗಳಿವೆ. ಈ ಉಭಯ ಪ್ರತಿಗಳ ಸಹಾಯದಿಂದ 'ರನ್ನನಿಘಂಟ'ನ್ನು ಪ್ರಕಟಿಸಬಹುದಾಗಿದೆ.

ಎರಡು ಪ್ರತಿಗಳು ಸಿಕ್ಕರೂ ಈ ಕೃತಿಯ ಶುದ್ಧಪಾಠವನ್ನು ಪ್ರಕಟಿಸುವುದು ಸಾಧ್ಯವಾಗುವುದಿಲ್ಲ. ಇದಕ್ಕೆ ಕಾರಣ ಇಲ್ಲಿ ಹತ್ತನೆಯ ಶತಮಾನದ ಹೊತ್ತಿಗೆ ಬಳಕೆ ತಪ್ಪಿರಬಹುದಾದ ಮತ್ತು ಕನ್ನಡ ಕಾವ್ಯಗಳಲ್ಲಿ ಅಪ್ಪಾಗಿ ಬಳಕೆಯಾಗದ ಅಪರೂಪ ಪದಗಳಿರುವುದು. ಹೀಗಾಗಿ ಈಗ ಎರಡೂ ಹಸ್ತಪ್ರತಿಗಳ ಸರ್ವಪಾಠಗಳನ್ನು ಕೊಡಲಾಗಿದೆಯೇ ಹೊರತು ಪರಿಷ್ಕರಣ ಸಾಹಸಕ್ಕೆ ಕೈಹಾಕಿಲ್ಲ. ತಮಿಳು ಮತ್ತು ಹಳಗನ್ನಡಗಳ ವಿಶೇಷ ಹಿನ್ನೆಲೆಯಿರುವ ವಿದ್ವಾಂಸರು ಈ ಭಿನ್ನ ಪಾಠಗಳ ಬಲದಿಂದ ಶುದ್ಧಪಾಠವನ್ನು ನಿರ್ಣಯಿಸುವಕಾರ್ಯವನ್ನು ಮಾಡುವರೆಂದು ನಂಬುತ್ತೇನೆ.

ಈ ಕೃತಿಯ ಛಂದಸ್ಸಿನಬಗ್ಗೆ ಒಂದು ಮಾತು ಅವಶ್ಯ ಹೇಳಬೇಕು. ರನ್ನನಿಘಂಟು ೪೫ ಪದ್ಯಗಳ ಚಿಕ್ಕಕೃತಿ. ಇಲ್ಲಿಯ ಎರಡು ಚಂಪಕಮಾಲೆಗಳು (ನಂ. ೧೬, ೨೯) ಒಂದು ಪಂಚಪಾದದ ಚಂಪಕಮಾಲೆ (ನಂ. ೪೨) ಒಂದು ಅರ್ಧ ಚಂಪಕಮಾಲೆ (ನಂ. ೪೫)ಗಳನ್ನು ಬಿಟ್ಟರೆ ಮಿಕ್ಕ ೪೧, ಕಂದ ಪದ್ಯಗಳಾಗಿವೆ. ಕನ್ನಡ ಕಾವ್ಯಶಾಸನಗಳಲ್ಲಿ ಆಗಾಗ ಕಂಡುಬರುತ್ತಿದ್ದರೂ ಇಲ್ಲಿರುವ ಪಂಚಪಾದವೃತ್ತವೇ ಈಗಿನ ಮಟ್ಟಿಗೆ ಪ್ರಾಚೀನತಮವಾದುದು.

ಎರಡೂ ಹಸ್ತಪ್ರತಿಗಳಲ್ಲಿ ಈ ಕೃತಿ ೧ನೆಯ ಪದ್ಯದಿಂದ ಪ್ರಾರಂಭವಾಗಿ ೪೫ನೆಯ ಪದ್ಯಕ್ಕೆ "ರನ್ನನಿಘಂಟು ಸಮಾಪ್ತ ಮಂಗಳಮಹಾಶ್ರೀ" ಎಂದು ಮುಗಿಯುತ್ತದೆ. ಈ ಮಾತು ಪ್ರಸ್ತುತ ಕೃತಿಯ ಪೂರ್ಣರೂಪವನ್ನು ಸೂಚಿಸುತ್ತದೆ. ಆದರೆ ಕೊನೆಯ ಅಪೂರ್ಣರೂಪದ ಚಂಪಕಮಾಲೆ, ಈ ಕೃತಿ ಇನ್ನೂ ಇದೆಯೆಂಬ ಭಾವನೆಯನ್ನು ಹುಟ್ಟಿಸುತ್ತದೆ. ಇದಕ್ಕೆ ಪರಿಹಾರ, ಭವಿಷ್ಯತ್ತಿನಲ್ಲಿ ಸಿಗುವ ಹಸ್ತಪ್ರತಿಗಳ ಸ್ವರೂಪವನ್ನು ಅವಲಂಬಿಸಿದೆ.

ಇಲ್ಲಿ ಹಸ್ತಪ್ರತಿ ೬೭ ಮತ್ತು ೧೧೯ ಗಳಿಗೆ ಕ್ರಮವಾಗಿ ಅ, ಆ ಎಂದು ಸಂಕೇತ ಕೊಟ್ಟು ಈ ನಿಘಂಟನ್ನು ಹೀಗೆ ಸಂಪಾದಿಸಲಾಗಿದೆ.

ರನ್ನನಿಘಂಟು

ಕುಳಿರೆನೆ [೧]ಶೈ[೧]ತ್ಯಂ ಮಿಂಳಿರೆನೆ ।
ಪೊಳೆದುದು ಬಿಲ್ಲಂ[೨]ದೆನ[೨]ಲ್ಕೆ ಮಾ[೩]ರ[೩]ಂಬರ್ಥಂ ।
ಬಳೆದುನೆನಲ್ಕೆಉಗಿದುದುಂ
ಕಿಳಿರೆನೆ ವಾಜಿ[೪]ಯಂ[೪] ನಿನಾದಮೆಂಲೆ ಕವಿರತ್ನಾ ॥ ೧ ॥

೧ ೧–೧ ಸೈ (ಅ. ಆ); ೨–೨ ದೆಸ (ಅ), ದಿನ (ಆ); ೩–೩ ಗ್ರೆ (ಆ); ೪–೪ × (ಆ).

ಬರೆಯೆನಲತ್ಯರ್ಥಂ[೧] [ಮುಂ
ಮು][೧] ರಿಯೆನೆ ಕಾಸಿದ ಮಳ[೨]ಲ್ಕಿಳಂ[೨]ಗೆನೆ ಗೆಳ[೩]ಸಂ[೩] ।
ಮಂ[೪]ರಿ[೪]ಪೆನೆ ಮರಳಿದಭಾವಂ ।
ಸಿರಿವಂತಿಕೆಯೆಂದೆನಲ್ಕೆ ಹುರಿಯೋಡಕ್ಕುಂ ॥ ೨ ॥

ಹಕ್ಕಿಯೆನ[೧]ಲ್ವಿಹಗಂ ನೆಱ[೩][೧] ।
ಪಕ್ಕಿಯೆನಲ್ಪಾಸಂ [೨]ವು[೨]ಂಡೆಯೆಂದೆನೆ ಮೋ[೬]ಕಾ ।
[೩]ಲ್ಕು[೩]ಕ್ಕನೆ ಬೆ[೪]ಳ್ಳ[೪]ಕ್ಕಿಯೆ [೫]ತಾ[೫]ನೆ ।
[೬]ಕೆ[೬]ಕ್ಕನೆ ದಿಂಡುವಿಡಿದಂ ಬಪ್ಪು[೭]ದು[೭]ದಕ್ಕುಂ ॥ ೩ ॥

ಬಲಗೆನೆ ಬಿಸುಡೆಂಬರ್ಥಂ ।
[೧]ಬಲ[೧]ಮರ್ದನೆ ಅಂಕದೌಷಧಂ ತಾನಕ್ಕುಂ ॥
ಪೊಲಿಗೆನೆ ಬಿ[೨]ರ್ಚು[೨]ಗೆಯು ತೆ[೩]ಱಂ[೩] ।
ಕೆಲಕ[೪]ನೆನ[೪]ಲ್ಕಿಕ್ಕುಮಲ್ಲ[೫]ನೆ[೫]ಲೆ ಕವಿರತ್ನಾ ॥ ೪ ॥

ಅಂ[೧]ಚ[೧]ಮೆನಲ್ಕಂಜಿ[೨]ಕೆ[೨]ಯಾತಿ ।
ಬಂಚನೆಯೆನೆ [೩]ಮರಸಿಡಕ್ಕು ಬೆಳಕೆನೆ ದೀಪಂ ॥
ಪೊಂಚೆನೆ ಪೊರ್ದಿದಬಗೆವಾ ।
ನೆಂಚಲೆನಲ್ಕೆಂಜಕಲಪ್ಪುದೆಲೆ ಕವಿರತ್ನಾ[೩] ॥ ೫ ॥

[ಸ]ಣ್ಣದೆನಲ್ಕಿಱಿದಕ್ಕುಂ ।
ಪಣ್ಣೆನೆ ಮಾಡೆಂಬ ವಾಚಿ ಬಳಿಯೆನೆ ವಂಶಂ ।
ಎಣ್ಣೆನೆ ಲೆಕ್ಕಿಪುದುಂ ಬಿಸು ।
ಗಣ್ಣೆನೆ ನಲ್ಗೊರವನಪ್ಪನೆಲೆ ಕವಿರತ್ನಾ ॥ ೬ ॥

---

೨ ೧–೧ ಪಂಮು (ಅ.ಆ); ೨–೨ ಲ್ಕಿಳಿಂ (ಅ), ಲ್ಕೆಳಂ (ಆ); ೩–೩ ಸುಂ (ಅ); ೪–೪ ೞ (ಅ).

೩ ೧–೧ ಲ್ವಿಹಂಗಂ ನೆಱ[೩] (ಅ), ಗಂಡಿಲೆಲ್ (ಆ); ೨–೨ ಕುಂಕು (ಆ); ೩–೩ ಕು (ಆ); ೪–೪ ಳ್ಬ (ಅ); ೫–೫ ತತಾ (ಆ); ೬–೬ ಕ್ಕೆ (ಆ); ೭–೭ ದ (ಆ).

೪ ೧–೧ ಬಲಮುದ (ಆ); ೨–೨ ಚ್ಚು (ಅ): ೩–೩ ಠಂ (ಆ); ೪–೪ ನಕ್ಕೆ (ಆ): ೫–೫ ಮೆ (ಅ).

೫ ೧–೧ ಕ (ಅ); ೨–೨ ಗೆ (ಅ); ೩–೩ ವಂಶಂ ಎಣ್ಣಲೆಲೆಕ್ಕಿಪುದುಂ ಬಿಸುಗಣ್ಣೆನಲ್ಗೊರವ ನಪ್ಪನೆಲೆ ಕವಿರತ್ನಾ (ಆ). (ಮುಂದಿನ ಪದ್ಯದ ಪಾಠವಿದು).

೬ ಸೊ (ಅ,ಆ).

ಕೊೞ[೧]ಸಿ[೧]ತೆನಲ್ಪೊೞೆಸಿದುದಂ ।
ಸೂಸಿದುದೆನೆ [೨]ತುೞ[೨]ಳ್ಕಿತೆಂಬುದುಂ ಪರಿಮಳವುಂ ।
ಬಾಸತ[೩]ಮೆ[೩]ನೆ ಕಂಪುಂ ಮಿಗೆ ।
ಸಾಸವಮೆನೆ ಸಮ್ಮದರ್ಥಮೆಂಲೆ ಕವಿರತ್ನಾ ॥ ೭ ॥

ಸುಗಿಪವುಮೆನೆ ಸುಲಿಪಂ ತಾಂ ।
ತೆಗಳೆನೆ ಪೆಗಳಂ[೧]ಳ್ಮೃ[೧]ತೆಂದೆನಲ್ಪುದುಂ[೨]ವಂ ತಾಂ[೨] ॥
[೩]ಬಗ[೩]ಸೆನೆ ಮನ[೪]ವಿ[೪]ಟ್ಟುದುವುಂ ।
ನೆಗ[೫]ಮು[೫]ದೆನಲ್ ದೊಡ್ಡಿತಪ್ಪು[೬]ದೆ[೬]ಲೆ ಕವಿರತ್ನಾ ॥ ೮ ॥

ಅೞಿಲೆನೆ ತಾರಗೆ [೧]ತಿಟ್ಟೆಂ[೧] ।
ದು[೨][ೞಿ ಬಲ್ಬೈಗುಳಿನಿಸು ನನಸೆಂ][೨]ದೆನೆ ದಿಟವುಂ ॥
ಗೞವೂ[೩]ವೆ[೩]ನೆ [೪]ಕೇ[೪]ದಗೆ [೫]ಪಡಿ[೫] ।
ಯುೞಿವಕ್ಕಿಯೆ[೬]ನೆಯೆ[೬]ನಲ್ಕೆ ಕೋಕಿಲನಕ್ಕುಂ ॥ ೯ ॥

ಕೈವಟ್ಟ[೧]ಲ್ ಸ[೧]ಟ್ಟುಗೆ ಮುಂಡಿ ।
ಪೊಯಿವೆಕ್ಕಲ್ ಪೊಯಿಗಿಲಂ ಮಡಂತ[೨]ಳೆ[೨]ಜೋಳಂ ॥
ಕೈವಲೆ ಕಣ್ಬಲೆ [೩]ಜ[೩]ೞಸುಳಿ ।
ಕೈಪಿಡಿಯೆಂಬುದನೆ ತಿಳಿಯೆ ಕಬ್ಬಿಗರರಸಾ ॥ ೧೦ ॥

ಬಲಯು[೧]ರಮೆ[೧]ನೆ ತ[೨]ಲೆವಾಗಿ[೨]ಲು ।
ಕ[೩]ಲ[೩]ಗಲಮೆನೆ ಕೂ[೪]ಡಿ[೪]ಬೆರಸಿದಕ್ಕುಂ ನೈಲಂ ।
ಗಲಮೆನೆ ಚೆಲ್ವಿಕೆ ಸ[೫]ಲೆ[೫] ಸೈ ।
ಗೆಲಮೆನೆ ತಾಂ ಪುಣ್ಯಶಕ್ತಿಯುಲೆ ಕವಿರತ್ನಾ ॥ ೧೧ ॥

---

೭ ೧–೧ ಓಸಿ (ಅ); ೨–೨ತ (ಅ); ೩–೩ ಯೆ (ಅ).

೮ ೧–೧ ಣಸಿ(ಅ); ೨–೨ದುಂತಾ(ಅ); ೩–೩ಗೆ(ಅ); ೪–೪ಮಿ(ಅ); ೫–೫ದು(ಅ); ೬–೬ವೆ(ಅ).

೯ ೧–೧ ವಿಟ್ಟಂ(ಅ); ೨–೨ ೧ರ ಬಿಲ್ಗಳ್ನಿನಸುವಿಯುಮೆಂ(ಅ); ಕ್ ಬೆಲ್ಗಳಿನಸುಧೆಯುಮೆಂ(ಅ);
೩–೩ ವೆಂದೆ (ಅ); ಯೆಂದೆ (ಅ); ೪–೪ ಗೇ (ಅ,ಅ); ೫–೫ ಗೆಪ್ಪಪಡಿ (ಅ);
೬–೬ ನೆಯು (ಅ), ಯೆ (ಅ).

೧೦ ೧–೧ ಲೆ (ಅ). ೨–೨ ಲೆ (ಅ); ೩–೩ ಬ (ಅ).

೧೧ ೧–೧ ಂಮೆ (ಅ); ೨–೨ ಲವಾಗ (ಅ); ೩–೩ ಲೆ (ಅ); ೪–೪ ಡೆ (ಅ); ೫–೫ ಲ (ಅ).

ತೋರ್ಪೆ[೧]ನೆ[೧] ಕಾಣ್ಕೆ ಮುಸುರ್ಪೆನೆ ।
ವಾರ್ಪೆನೆ ಕೈವಿಡಿದುದಕ್ಕುಮಿಳಿಪೆ[೨]ನೆಸೋಲಂ[೨] ॥
ಕೂರ್ಪೆನೆ ನಿಲುವೆರಗೆನೆ ಮೋ ।
ಲಾರ್ಪೆನೆ ಸು[೩]ಸ್ನಪ[೩]ವಂಪ್ಪುದೆಲೇ ಕವಿರತ್ನಾ ॥ ೧೨ ॥

ಊರ್ಪೆನೆ ಕೀಲಿಸಿದು[೧]ದು[೧] ಕ ।
[೨]ಣ್ಣಾರ್ಪೆ[೨]ನೆ ನೋೞ್ಪುಜ್ಜುಗಂ ಮಿಳಿರ್ಪೆನೆ ಮುರಿಪಂ ॥
ಕಾ[೩]ಪೊರ್ಱೆ[೩]ಯೆನೆ ಮುಳಿಗಾಲಂ ।
[೪]ನೇಪೊರ್[೪]ಱೆಯೆನೆ ಅಱಿಮೆ[೫]ಯೊಳೆ[೫]ಯೊಲೇ ಕವಿರತ್ನಾ ॥ ೧೩ ॥

ಭಂಡಣಮೊ[೧]ನೆ[೧] ಪುಯ್ಯಲ್ಪಲ।
ಬಂಡೆನೆ ಜೇನ್ ಪೆರಬಳಿಯನೆಂದೆನೆ ಪಾಣ್ಬಂ[೨] ॥
ಗುಂಡೆನೆ ನೆರವಿ ತುಳಿಲ್ಪ[೩]ಱಿ[೩] ।
ಗೊಂಡೆನೆ ನ[೪]ಲ್ವೀ[೪]ರರಸನೆಲೇ ಕವಿರತ್ನಾ ॥ ೧೪ ॥

ಎಱೆಯ[೧]ಱೆ[೧]ಯಂ ತೊಳ ।
[೨]ರ್ಪಱಿವಱಿವಂ[೨] ಸಗ್ಗಿಗರ ಪಿರಿಯನುರು ಬಳಿಗಂ ಪಾ ।
ಲೆಱಕಿ[೩]ಲುಣಿ[೩]ವಕ್ಕಿದೆ[೪]ಱಂ[೪] ।
ನಿಱುಬಱೆಗಂ ಪೊನ್ನಬಸಂಱನೆಲೆ ಬಿದಿ ರತ್ನಾ ॥ ೧೫ ॥

[೧]ವೃ॥[೧]ಮುಂಗಿಲಲ[೨]ರೇ[೨]ಱಿದಂ ಸಿರಿಮುಗಂ ನೆಲೆವೆಣ್ಣರ[೩]ಸಂ[೩] ನೆಲಕ್ಕರಂ।
ಬಗೆದಿಳಿಗಂ ಮುದರ್ಂ[೪]ಬಲಿಗ[೪]ನ[೫]ಚ್ಚರಮೊವೊರ್ದಲೋ[೬]ದಿ[೬]ಗಂ
ಸುಳಂ ।
ಬೆಗಡಱಿಗಂ ಸೊಗಂಬೊಱೆಗನೆಚ್ಚರವಾಳಿಗ ವಾಳವಾಳಿಗಂ ।
ತೆಗ[೭]ಲು[೭]ಡೆಗಂ ಪೊಗ[೮]ಳ್ಪ[೮]ಡಿಗನೆಂದೆನೆ ನೀಂ ತಿಳಿ ಬೊಮ್ಮನೆಂಬುದಂ
॥ ೧೬ ॥

---

೧೨ ೧–೧ x (ಅ); ೨–೨ ಸೋಲ (ಆ); ೩–೩ ಸ್ನಿಹ (ಅ).
೧೩ ೧–೧ ದ (ಅ); ೨–೨ ಣ್ಣೊಪ್ಪೆ (ಅ); ೩–೩ ಪ್ಪೊಱೆ (ಅ), ಪೊರ್ತೆ (ಆ); ೪–೪ ಪ್ರೊ (ಅ); ೫–೫ x (ಅ).
೧೪ ೧–೧ ಸಲ್ (ಅ); ೨ ಈ ಚರಣದಲ್ಲಿ ಛಂದೋದೋಷವಿದೆ. ೩–೩ ಱೆ (ಅ); ೪–೪ ಲ್ಬೀ (ಅ).
೧೫ ೧–೧ ಱೆಱೆ (ಅ); ೨–೨ ಪಿರಿವರಿವಂ (ಅ); ೩–೩ ಣ (ಅ); ೪–೪ ರಂ (ಅ).
೧೬ ೧–೧ x (ಅ); ೨–೨ ಱೇ (ಅ); ೩–೩ ಸು (ಅ); ೪–೪ ಬಲಿಗ (ಅ); ೪–೫ ನಮ (ಅ); ೬–೬ ಡಿ (ಅ); ೭–೭ ಳು (ಅ); ೮–೮ ಳ್ಪ (ಅ).

ಸೊಂಪುವೆ[೧]ಱಿ[೧]ಯಿಂಪುಗ[೨]ಳೆ[೨]ವ[೩]ಲಿ[೩] ।
ಗಂಪುಳಿಲಿಗೆ[೪] ಯುಣಿಸು[೫] ಸಾಸದಡ[೬]ಕಿಂ[೬] ।
ಲ್ಗಂ ಪಿಡಿಕೆ ಬೆವೆತುಳಿರ್ವಡಿ ।
ಗುಂಪೆ[೭]ನೆ[೭] ತಿಳಿ ಕೈಪೆವರನೆನಿಪ್ಪುದುಂ ರತ್ನಾ ॥ ೧೭ ॥

ಅಱಿಯುಂವೆಂಯು[೧]ದೆ[೧]ಯು ಸೊಂಪುಸೆ[೨]ದೆ[೨]ಯು ।
ಪೊಱಗೆಳೆಯುಳ ಬೇಟ[೩]ದಾಣದೊಱಿ ಕಣ್ಣೆ[೪]ತು[೪] ಪ ।
ಲ್ಗು[೫]ಱಿ[೫]ಪಸಡಿಕೊ[೬]ಲ್ಗೆ[೬] ಬನವೆ ।
ಣ್ಗುಱಿಪೆನಾಂ ನೆಲ್ಲಿ[೭]ವು[೭]ರನೆನಿಪ್ಪುದುಂ ರತ್ನಾ ॥ ೧೮ ॥

ತಳಿರ್ಗಣೆಯುನ ಬಲ್ಬಸದಿಯು ।
ಬ[೧]ಳಿ[೧]ಗವ[೨]ಱಿ[೨]ಗೆ ಬಳಸಿ ನಱಿಕೆ ಇಂಗೊಲಿ[೩]ಪಿರ್ಣಂ[೩] ।
[೪]ಗೆಳೆ[೪]ಮುಗಿ[೫]ಲೆ[೫]ಳ್ದೊಱಿಯೊಂದೆನೆ ।
ತಿಳಿಕಬ್ಬೆಂದೆಯ್ದ ಬೆಳ್ಳಿವೆಸರಾಂತ[೬]ವ[೬]ನೇ ॥ ೧೯ ॥

ಸಾಸವದೊಟ್ಟಿಲ್ಮೆ ಲ್ಲಡಿ ।
ಬಾನರ್ಪೆ[೧]ಣೆ[೧]ವಕ್ಕಿವಾಡಮಗಲಿದರೆಡೆ ಕಂ ।
ಣ್ಬಾಸ[೨]ಣಿ[೨]ಕೆ[೩]ನೆ[೩]ಲನ[೪]ಬೆ[೪]ಟ್ಟೊ ।
ಳ್ಬಾಸ[೫]ಟಿ[೫] ತಣ್ಬುಳಿಲೆನಿಪುದೆಲೇ ಕವಿರತ್ನಾ ॥ ೨೦ ॥

ಮು[೧]ಱುನೆಲೆ[೧] ಸಾಸವದಾಣಂ ।
ನಿಱುಬೆಳಗೆನೆ ಬಾಯಕೆಂಪು ಮೊಗಸಿರಿ ಪೊರ್ದಿರ್ಪಂ ।
ಗರಕೆಯು[೨]ರಲಂ[೨]ಬ ನೆರವಿಗೆ ।
ತುಱುಗಿಪ್ಪೆನೆ ತಿಳಿಗೆ ವೀ[೩]ಳೆ[೩]ಯುಂ ಕವಿರತ್ನಾ ॥ ೨೧ ॥

---

೧೭ ೧–೧ ರೆ (ಅ); ೨–೨ ರೆ (ಅ); ೩–೩ ರಿ (ಅ); ೪+ ಕಾಗೆ (ಅ); ೫+ ಸಾಸು (ಅ); ೬–೬ ಠಿ (ಅ); ೭–೭ × (ಅ).

೧೮ ೧–೧ ಮೊ (ಅ); ೨–೨ ದಿ (ಅ); ೩ + ವಾ (ಅ); ೪–೪ ರು (ಅ); ೫–೫ ರಿ (ಅ); ೬–೬ ಲ್ಕೆ (ಅ); ೭–೭ ವ (ಅ).

೧೯ ೧–೧ ಳೆ(ಅ); ೨–೨ ತಿ(ಅ); ೩–೩ ಪರ್ಣಂ(ಅ); ೪–೪ ಗಳಿ (ಅ); ೫–೫ ×(ಅ); ೬–೬×(ಅ).

೨೦ ೧–೧ ಣ (ಅ); ೨–೨ ಲಿ (ಅ); ೩–೩ ನೆನೆ (ಅ); ೪–೪ ಬ (ಅ); ೫–೫ × (ಅ).

೨೧ ೧–೧ ರುಲೆನೆ (ಅ); ೨–೨ ಲರಂ (ಅ); ೩–೩ ಳಿ (ಅ).

ತೊಳ್ಗಿದನೆನೆ ಪೊಡವಟ್ಟಂ ।
ಗಿಳ್ಗಿದನೆನೆ ಗಿಡ್ಡನವಿಳನೆಂದೆನೆ ಕುಱುಬಂ ।
[೧]ಪುಳ್ಗಿದನೆನೆ[೧] ಕುಱುಬಂತಳ ।
ವ[೨]ಳ್ಗಿ[೨]ದನೆನೆ ಬೆಗಡುಗೊಂಡವಂ ಕವಿರತ್ನಾ ॥ ೨೨ ॥

ದೋಷವಿನಿತೆಳಸದಿರು ನೀಂ ।
ಲೇಸಾಗಿರೆ ಪೇಳ್ದ ಕನ್ನಡಂಗಳ ತಿಳಿಯ[೧]ಲ್[೧] ।
ಕಾಮರಮ [೨]ಪಿಡಿ[೨]ದೊಡಾವಂ ।
ವಾಸಱಸುಳಿನಿಟ್ಟಿಸದೊಡೆನೇಸರ್ಗಿಳಿದೆ ॥ ೨೩ ॥

ಬೆ[೧]ಳಾಯ[೧]ಲ್ಕುಡಂ ಬೆಳ[೨]ಗೆ[೨] ।
ಲ್ತೆಳಾ[೩]ಱವು[೩] ಬೆಳಸು ವೊದಲನೋಟಪೆನಲ್ಕಿಂ ।
ಚುಳಾಬಲ್[೪]ಬ[೪]ಸದಿಯ ಬಗೆ ।
ಗುಳ್ಳಾಗಲ್ ನೈ[೫]ದ[೫]ಲಱಿಗೆ ನೀಂ ಕವಿರತ್ನಾ ॥ ೨೪ ॥

ಮುಗಿಲರಲೊಗೆಗೈಗೂಟಂ ।
ಬಗೆದೊಱಿ ಪಾಲೊ[೧]ಱಿ[೧]ಗೆ ತಕ್ಕ[೨]ಗೆ[೨]ನೆಯೊಳ್ದಾವರೆ ॥
ಮುಗು[೩]ಳೆ[೩]ಂದಱಿ ನೆಗಳ್ದವೆನೆ ।
ಮಿಗೆ ಜಾಜಿಯ ಬೆಳ್ಳಿ[೪]ಗೂ[೪]ರ್ತಪೆಸರಾಂತ[೫]ವ[೫]ನೇ ॥ ೨೫ ॥

ಗೊ[೧]ರ್ಬೆ[೧]ನೆ ಗಂಭೀರಂ ಪ[೨]ಱಿ[೨] ।
ಪರ್ಬಿದುಂದೆನೆ ಬಳ್ಳಿವರಿದುದಕ್ಕುಂ ದೈ[೩]ತ್ಯಂ[೩] ॥
ಮರ್ಬುಸುಳಿಕಾ[೪]ರ[೪]ರೆನೆ ಪೊ[೫]ಳೆ[೫] ।
ದುರ್ಬೆನೆ ಸಿಡಿಲಪ್ಪುದಮಲ ನಿಜಕವಿರತ್ನಾ ॥ ೨೬ ॥

ಝುಳಮೆಂದೆನ[೧]ಲು[೧]ಷ್ಣಂ ಬಾ ।
ಗುಳಮೆಂದೆನೆ [೨]ದುಃಖ[೨]ಮಲ್ಲಣಿಕೆಯೆನೆ ಮೇಳಂ ।
ಪ[೩]ಳ[೩]ಗೆಂದೆನೆ ಒಣಗಿದಯೆಲೆ ।
ಮಳಗೆನೆ [೪]ಬಿಟ್ಟಿಯ[೪] ಬಟ್ಟ[೫]ಗಸಿಲೆನೆ[೫] ಶಂಖಂ ॥ ೨೭ ॥

---

೨೨ ೧–೧ ಪುಳ್ಗಿದನೆಂದೆನೆ (ಅ), ಪುಪುಳ್ಗಿನೆನೆ (ಆ); ೨–೨ ಳಿ (ಆ).
೨೩ ೧–೧ ಲು (ಆ); ೨–೨ ಪಳಿ (ಆ).
೨೪ ೧–೧ ಳ್ಕಾ (ಆ); ೨–೨ × (ಅ); ೩–೩ ಱ್ಗಲ್ (ಆ); ೪–೪ ಪ (ಆ); ೫–೫ ದಿ (ಆ).
೨೫ ೧–೧ ಱ (ಆ); ೨–೨ ದೆ (ಆ); ೩–೩ ಳಿ (ಆ); ೪–೪ ಸೂ (ಆ); ೫–೫ × (ಆ).
೨೬ ೧–೧ ರ್ಪೆ (ಆ); ೨–೨ ರೆ (ಆ); ೩–೩ ತ್ರ (ಆ); ೪–೪ ಱ (ಆ); ೫–೫ ಗೆ (ಆ).
೨೭ ೧–೧ ಲೂ (ಆ); ೨–೨ ದುಃಖಂ (ಆ); ೩–೩ ಣ (ಅ); ೪–೪ ವಿಗಿಯ (ಅ); ೫–೫ ಗಲ್ತನೆ (ಆ).

ಒದ್ದರನೆನೆ ಬ[೧]ದು[೧]ಕಿದ[೨]ಪಂ[೨] ।
ಕದ್ದರನೆನೆ [೩]ಕಳ್ಳನೆದ್ದ[೩]ರೆನಲೋಡಿದ[೪]ಪಂ[೪] ।
ಬಿದ್ದಿಗನೆನೆ ನಂಟಂ ಕೈ ।
ಗುದ್ದಿಗರೆನೆ ಮಲ್ಲರೆಂಬುದೆಲೆ ಕವಿರತ್ನಾ ॥ ೨೮ ॥

ಬೆಳವರವಿಂಪು ಜಾಗಿಲ ಗಿಳಿಪೊರ್ಡೆ [೧]ಇಂ[೧]ಗಲೆಯಂಮಾ[೨]ನ್ಮ[೨]ದಾವ[೩]ಳಿ ।
ಗ[೩]ಯಂಗ[೪]ಲ್ದಿ[೪]ರಾಳ್ದವನೆ ಪೂ[೫]ಚ[೫]ರ ಬಲ್ಲಿ ಇಸಾಜೆನ್ನೈಲವೆಚ್ಚ್ರ್ ।
ಗಳೊಗೆದಾ[೬]ರೊ[೬] ಮಾಂಪನನೆ ಗೊಲಗ್ಲೊನೆ ವೇಟದ ನೀಱಿಪೊಂದೆನ ।
[೭]ಲ್ಕ[೭]ಳಿಯಂದ ಕಾಣ್ಕೆ ಮಲ್ಲಿಗೆಯೆನಿಪ್ಪುದ ಬೆಳ್ಳಿವೆಸರ್ಗೆ [೮]ತ[ಕ್ಕ[೮]]ನೇ
॥ ೨೯ ॥

ಚಲ್ಲದ ನೆಲೆ ಇಲ್ಲದ ಮುಳಿ ।
ಸೊಲ್ಲದ ಬಗೆಯಂಜಿಕೆ ಬೆಲ್ಲ ಬಳಿ ಬಲ್ಲರ ಸೋಂ ।
ಕೆಲ್ಲರ ಗೆ[೧]ಲ[೧]ವಲ್ಲದ ನುಡಿ।
[೨]ಸೊ[೨]ಲ್ಲದಂ ಪೂವಿ[೩]ಲ್ಲಡಿ[೩]ರೆನಿಪ್ಪುದುಂ ರನ್ನಾ ॥ ೩೦ ॥

ಸಿರಿಯೊಗೆದಾಣಂ ನೈಲಂ ।
ಬರೆ ಬಣ್ಗೊಡಿ ಪುಟ್ಟು ಬಾನ್ವರುಣಿ [೧]ಸಿಂಗಡಲೆ[೧] ।
ಚ್ಚಟಿ ಬಗೆಯುರವೊಗಸಚ್ಚರ ।
ದಿರಿಯೆನೆ [೨]ಪಯು[೨]ಸಾಬ್ಧಿ ಬೆಳ್ಳಿವೆಸರಾಂತವನೇ ॥ ೩೧ ॥

ಕಾಯಿ [೧]ಪ[೧]ಣ್ಣುದಾಣಮಿಂಳಿಪಿನ ।
ತಾಯಿ ಪೊಳೆನಿರೊಟ್ಟೆನಿಲ್ಗೆ ಬಿಸುಡಿ ಬೆಕ್ಕಂ ।
ಜಾಯಿಪು ಸೊಡಮ್ಯೆರ್ಂ[೨]ಗಾಣ್ಕೆ[೨] ।
ಲಾಯಿಪು[೩]ದೆ[೩] ಝುರ್ವಾಳ್ಕೆ ಪೆರಳುರ್ವಿದಿ ರನ್ನಾ ॥ ೩೨ ॥

---

೨೮ ೧–೧ ದಿ (ಅ); ೨–೨ ಓಂ (ಅ); ೩–೩ ಕಳನೆಂದರನೆದ (ಅ); ೪–೪ ವಂ (ಅ).

೨೯ ೧–೧ ಯು (ಅ); ೨–೨ ನ್ನ (ಅ); ೩–೩ ಳ್ಗೆ (ಅ); ೪–೪ ಲ್ದ (ಅ); ೫–೫ ಬ (ಅ);
೬–೬ × (ಅ); ೭–೭ ಲ್ಬ (ಅ); ೮–೮ ತತಕ (ಅ), ತಕ (ಅ).

೩೦ ೧–೧ ಲ್ದ (ಅ); ೨–೨ ಸ (ಅ); ೩–೩ ಡಿ (ಅ).

೩೧ ೧–೧ ಸಿಗಂಡರೆ (ಅ); ೨–೨ ಪಸಾಯು (ಅ).

೩೨ ೧–೧ ಪು (ಅ); ೨–೨ ಗಾಣ್ಕೆಗಾಣ್ಕೆ (ಅ); ೩–೩ ಡೆ (ಅ).

ನವಿಲರಗಾರ್ತಿಯ [೧]ನಡೆ[೧]ದೊ[೨]ಳೆ[೨] ।
ಸವಿಯುಳಿ[೩]ವ್ಯೆಗೊ[೩]ಡುಪಕ್ಕಿ ಪೊಲ್ಲ[೪]ದಿ[೪] ಬೆ[೫]ಳ್ಗ[೫]೦ಜ ।
ವಲು[೬]ವೆ[೬]ಸು ಸ[೭]ರೆ[೭]ನ [೮]ಇಲ್ಪಳಸುವ ।
[೮]ಗಿಳಿ[೯] ಎನ್[೯]ಲಂಚೆ್ ಬೆಳ್ಳಿವೆಸರಾಂತವನೇ ॥ ೩೩ ॥

ಸಬಬಾಸನೆಯಿರ್ಪೊಡೆ ಸೆ ।
ಸಬೆಯಂ[೧]ದ[೧] ಪೂನೈಲಬಗ್ಗು [೨]ಬಿಳಿಗ್ಗಿನ[೨] ಬೇಗಿಂ ।
ಪುಬಸನೆ ಬಾ[೩]ನ್ಬ[೩]ಳಿಯರಕಂ ।
ಣ್ಣಗಬ[೪]ಲೆ ತಿಳಿ[೪]ಎನೆ ದೇವಭೂರುಹಂ ಕವಿರತ್ನಾ ॥ ೩೪ ॥

ಸೊಗಬಳಿಗಿ[೧]ಸುಂಪು[೧]ವ[೨]ರರ್ಗೆ[೨] ।
ಬಗಸೊಲಪಿಗೆ ನೈಲಸಿರಿಗೆ ಮೆಲ್ಲಡಿ ಬೊರೆ ।
[೩]ಇ[೩]ಗೆ ತಗದಳ ಸೆಱವಿಗೆ ಕಣ್ಬೆರ ।
ಲೊಗೆ ಬಸ[೪]ನಿ[೪]ಯೆನಲ್ಕೆ ಲಲನೆಯರ್ ಕವಿರತ್ನಾ ॥ ೩೫ ॥

ಬಳಿಗೆಲಯಂ ಬದಗಂ ನಾ ।
ಳ್ಗಿಳಿವಾಡಂ ನನ್ನಿಡಿಗಳನುಳಿಗಂತಳೆಗಂ ।
ಸಳಿಬೊಳೆಗಳಿಯಂ ಸಾಜುಂಳಿ ।
ಗೆಳೆಯನೆನಲ್ಸಗ್ಗನುಂಳಿದನೆಲೆ ಕವಿರತ್ನಾ ॥ ೩೬ ॥

ನೆಲಬಲಲಂ ನಿಱ[೧] ಬೆಳಲಂ ।
ಬಲಸೊಲಹಂ ಬಚ್ಚಬಣಿಸೆ ಬಲ್ಪಣಿವಾ[೨]ದಂ[೨] ।
ಪೊಲಗೆ ಸಂಸಿಲ್ಪೆಳಗಿಲಿ ಬಾ
ಳ್ತೊ[೨]ಲೆ[೨]ಗೆಲೆಯುಣಿಸಾರ್ಕೆ[೩]ಯ[೩] ಸೊಕೆಯೊಲೆ ಕವಿರತ್ನಾ ॥ ೩೭ ॥

ಕೊನರ್ವಿಡಿ ಸುಳಿದಾಳ್ಕೈಲಂ ।
ಗೊನೆ ಸಂಣ್ಬೆ[೧]ಸು[೧]ಗಾಣ್ಕೆ ಬಗಸುನಿಲೆ ಬಂಬಲ್ವಾ ।
ಲ್ಪನೆ ನೈಲಸರಿಗೆ ಪಾರ್ದಂ ।
ದೆನೆ ತಿಳಿ[೨]ನಿಂ[೨] ಪ[೩]ಜ್ಜ[೩]ದೆಸೆಯೆನಿಪ್ಪುದು ರತ್ನಾ ॥ ೩೮ ॥

೩೩ ೧–೧ ಸಂನನಡೆ (ಅ); ೨–೨ ರೆ (ಅ); ೩–೩ ಮೆಯಿಕೊ (ಅ); ೪–೪ ಡಿ (ಅ); ೫–೫ ಳ್ಗಂ (ಅ); ೬–೬ ರೆ (ಅ); ೭–೭ ರಿ (ಅ); ೮–೮ ಯ (ಅ); ೯–೯ ಲ್ಗಂ (ಅ).
೩೪ ೧–೧ × (ಅ); ೨–೨ ಬಗ್ಗಿನ ಬೆಳಗಿನ (ಅ); ೩–೩ ನ್ಬ (ಅ); ೪–೪ ತ್ತಿಗೆ (ಅ).
೩೫ ೧–೧ ಸೂಸು (ಅ); ೨–೨ ರಂಗೆ (ಅ); ೩–೩ ಯ (ಅ); ೪–೪ ವಿ (ಅ).
೩೭ ಡಂ (ಅ); ೨–೨ ಲ (ಅ); ೩–೩ × (ಅ).
೩೮ ೧–೧ ಸ (ಅ); ೨–೨ ಗಿಂ (ಅ); ೩–೩ ಚಿ (ಅ).

ಮೀನಾ[೧]ಣ್ಮ[೧]ನದಳೆ[೨]ಯಿಂ[೨]ಗೈ ।
ಬಾನಂ ಬೊಪವರ್ಗಲುಣಿಸು ಕಂ[೩]ಡೆರ್ದೆ[೩] ಬಾಳ್ ನೀ ।
[೪]ವುಂ[೪] ನಾಣ್ಕೆಯಂ [೫]ಕೊಲ್ಲಾ[೫]ಲ್ಪೆಳೆ ।
ತಾನೆನೆ ಬೆಳ್ದಿಂಗಳೆಂಬುದೆಲೆ ಕವಿರತ್ನಾ ॥ ೩೯ ॥

ಆ[೧]ಲೆನ[೧] ಬಲ್ಸರವಲಗ[೨]ಲ[೨] ।
ವಾ[೩]ಲಿಂಗ[೩]ಳ[೪]ಲೆಂ[೪]ದು ಪಕ್ಕವನೆ ಬಿಲ್ನೆರಂ ॥
ಕೋಲಾಂಕೆ ತಾನೆನಲ್ ಮಂಜು ।
ಗೋಲೆನೆ ಬಿಲ್ಲಾರಿಯೆಂಬು[೫]ದಂ[೫] ತಿಳಿ ರತ್ನಾ ॥ ೪೦ ॥

ಸೂಡ[೧]ಗುರೆ[೧] ಸೆ[೨]ಕ್ಕೆ[೨] ಬೆಂಗೊನೆ ।
ಗೂಡಳ[೩]ಜು[೩]ಲ್ ಸುಳಿಬೆದರ್ಚೆ ಪೆ[೪]ಜು[೪] [೫]ಬೆಂಗಿ[೫] ।
[೬]ಳ್ಕೊಡೆ[೬] ಮುಟ್ಟಜು[೭]ವೊ[೭] ಕಳಲಡಿ ।
ವಾಡೆನೆ [೮]ಬಿಂ[೮]ಗೆಯೆಂಬುದಂ [೯]ತಿಳಿ[೯] ರತ್ನಾ ॥ ೪೧ ॥

ವೃ॥ ಮಿಳಿರೆಲೆ ಪೋಪ[೧]ರಾ[೧]ಣ್ಮನ[೨]ಟ[೨]ವಟ್ಟಿಗರಿಚ್ಚೆಗನೆ[೩]ಣ್ಪು[೩]ವಾಡಿಗಂ ।
ಪೊಳಜಿಕೆಯಿಲ್ಲದಂ ಸವಲನೆಚ್ಚ[೪]ಜು[೪]ಮಯಂ[೫]ಜು[೫]ನ್ನೈಲಪ[೬]ಳ್ಕೆ[೬]ಗಂ ।
ಝು[೭]ಳ[೭]ವಿಲಿಗಂ ಮಿಳಿರ್ವಲಲನೆಂದೆ[೮]ಸ[೮]ಲಿಂದ್ರನ ರಂಜು ತಂ[೯]ಳ್ತ್ರ[೯]ಗಂ ।
[೧೦]ಪಿಳಿ[೧೦]ವಳಿಗೋಲನೆಂದೆನೆ ಖಲಂ ಬಗೆ ಸಾಸವ ಜನ್ನವಾಳವಾಳ್ ।
ಕುಳಿರಲೆ[೧೧]ವಟ್ಟಿ[೧೧]ದೋರ್ಕೆ ಮಂಗಳೆಂದೆನೆ ಮುನ್ನಜು
ಗೌರಿಯೆಂಬುದಂ ॥ ೪೨ ॥

[೧]ಪೆಜು[೧]ಗೆ ಬಳ[೨]ಕ್ಕ[೨]ಯೆಸುರ್ಪಡೆ ।
[೩]ಯಂ[೩]ಜದ[೪]ಳೆ[೪] ಮು[೫]ಗು[೫]ಳಳತೆ ಕಾಣ್ಬೆ[೬]ಇಂ[೬]ನಡೆ ।
ನೆಜು[೭]ದಾ[೭]ಳಳರಳಿಕೆ[೭] ಪೊಳ್ತುಳದಿಕೆಯೆಂ ।
ದಜು[೮]ಗೊ[೮]ಳ್ಮಲ್ತೆಂ[೮]ದಂ ಬೆಳ್ಳವೆಸರಾಂತವನೇ ॥ ೪೩ ॥

---

೩೯ ೧–೧ ಣ (ಅ); ೨–೨ ಇ (ಅ); ೩–೩ ದೆಲ್‌ದೆರ್ (ಅ); ೪–೪ ಉ(ಅ); ೫–೫ ಕಾಲ್ಪು (ಅ).

೪೦ ೧–೧ ರನೆ (ಅ); ೨–೨ × (ಅ); ೩–೩ ರಿಗ (ಅ); ೪–೪ ವೆಂ (ಅ); ೫–೫ ದಲ್ (ಅ).

೪೧ ೧–೧ ಳುಜು (ಅ); ೨–೨ ರ್ಕೆ (ಅ); ೩–೩ ಜು (ಅ); ೪–೪ ಜಲ್ (ಅ); ೫–೫ ನ್ನಿ (ಅ); ೬–೬ ರಾಳ್ಕೊಡು (ಅ); ೭–೭ ಲ್ (ಅ); ೮–೮ ಬೆ (ಅ); ೯–೯ ಕವಿ (ಅ).

೪೨ ೧–೧ ಲಾ (ಅ); ೨–೨ ಲೆಲ್ (ಅ); ೩–೩ ಣ್ಬ (ಅ); ೪–೪ ಜು್ (ಅ); ೫–೫ ರ್ (ಅ); ೬–೬ ಳ್ಕಿ (ಅ); ೭–೭ ಳಂ (ಅ); ೮–೮ × (ಅ); ೯–೯ ಳ್ತ (ಅ); ೧೦–೧೦ ಬಳ (ಅ); ೧೧–೧೧ ವೆಟ್ಟ (ಅ).

೪೩ ೧–೧ ಪೆಜುಪೆಜು (ಅ); ೨–೨ ರ್ಕೆ (ಅ); ೩–೩ ಯೆ (ಅ); ೪–೪ × (ಅ); ೫–೫ ಗು (ಅ); ೬–೬ ಯಿಂ (ಅ); ೭–೭ ಗಿಳಿಳರಳಿಕೆ (ಅ); ೮–೮ ಳತೆ (ಅ).

ಪೊತ್ತಿ[೧]ಕ್ಕೆ[೧]ನೆ ಪೊರೆದಾಳ್ದಿಹ ।
ರಂತ್ರಿಕ್ಕೆನೆ ಕೊಡೆಬಾಳ್ದಪ[೨]ರ್[೨] ಪೊಱ[೩]ಪಾ[೩]ಳೆಂ ।
ಪತ್ತಿ[೪]ಕ್ಕೆ[೪]ನೆ ಸಾರ್ದಪರೆಂ ।
ಬಂ[೫]ತ್ತಿ[೫]ಯಂ ನೀಂ ತಿಳಿ[೬]ಯೊ[೬] ಬೆಳ್ಳಿವೆಸರಾಂತವನೇ ॥ ೪೪ ॥

ಸುಳಿವಳಿಸಾರೆ ಗಾಲ್ಸರ[೧]ನ[೧] ನಾ[೨]ಳ್ಕೆ[೨]ಯ ಕಣ್ಬ ಸೆನ್ನೈ[೩]ಲಿ[೩]ದೋ[೪]ಱು[೪]ಪೆ ।
[೫]ಬ್ಚ[೫]ಳ[೬]ಗೆ[೬]ಱಿಯೆಂದೆನಲ್ದ್ಯ ನ[೭]ದಿ[೭] ಕೇಳ್ಕೆನಿರ್ದುಂಬ[೮]ಳ[೮]ಲ
ಸೊ[೯]ಲ್ದೆ[೯]ಬಂಣಣಂ ।
ಕು[೧೦]ಳಿರೆ[೧೦]ದೆ ಕೈಲನ[೧೧]ಣ್ಬ[೧೧]ಗರೆ ತಿಂಗಳವಟ್ಟ[೧೨]ರೆ[೧೨] ॥ ೪೫ ॥

ರನ್ನನಿಘಂಟು ಸಮಾಪ್ತ ಮಂಗಳ ಮಹಾಶ್ರೀ.

■ ■

೪೪ ೧–೧ ಕೆ (ಅ); ೨–೨ ಂ (ಅ); ೩–೩ ವಾ (ಅ); ೪–೪ ಕೆ (ಅ); ೫–೫ ತಿ (ಅ); ೬–೬ ಯ (ಅ).

೪೫ ೧–೧ ಲ (ಅ); ೨–೨ ಣ್ಕೆ (ಅ); ೩–೩ ಲ (ಅ); ೪–೪ ಱ್ (ಅ); ೫–೫ ಚ್ಚ (ಅ); ೬–೬ ಗ್ಗ (ಅ); ೭–೭ ಡಿ (ಅ); ೮–೮ ಲ (ಅ); ೯–೯ ಲ್ಗೆ (ಅ); ೧೦–೧೦ ಳ್ಳರ (ಅ); ೧೧–೧೧ ಣ್ಬ (ಅ); ೧೨–೧೨ ಲೆ (ಅ).

ಬೇಂದ್ರೆಯವರ ಎರಡು ಕವನಗಳು

ವೇಣುಗೋಪಾಲ
ಕಾಸರಗೋಡು

ಜ್ಞಾನಪೀಠಪ್ರಶಸ್ತಿ ಬಂತು ಎನ್ನುವ ಹೆಗ್ಗಳಿಕೆಗಿಂತ ಹತ್ತು ಹಲವು ಸಾರ್ಥಕ ಕವನಗಳನ್ನು ಬರೆದು ಹಾಡಿದ್ದಾರೆ ಅನ್ನುವುದಕ್ಕಾಗಿ ಬೇಂದ್ರೆ ಕನ್ನಡಿಗರಿಗೆ ಮುಖ್ಯವಾಗಿದ್ದಾರೆ. ಜಾನಪದ ಸತ್ವ, ಸೌಂದರ್ಯ ದೃಷ್ಟಿ, ಅನುಭಾವದ ಅಭಿವ್ಯಕ್ತಿ — ಇವು ಅವರ ವೈಶಿಷ್ಟ್ಯ. ಅಳವಡಿಸಿಕೊಂಡ ಭಾಷೆಯಲ್ಲಿ ಆರಿಸಿಕೊಂಡ ವಸ್ತುಗಳಲ್ಲಿ ಅವರು ಮೆಟ್ಟಿದ ಮಣ್ಣನ್ನು ಬಿಟ್ಟಿಲ್ಲದಿರುವುದೇ ಅವರ ಹೆಚ್ಚಳ. ರಮ್ಯಪ್ರಜ್ಞೆಯ ಎಲ್ಲ ಮುಖ್ಯ ಕವಿಗಳಂತೆ ಬೇಂದ್ರೆಯವರೂ ಪ್ರಕೃತಿಯ, ಜನಜೀವನದ, ಭಾವಾತಿರೇಕದ ಎಲ್ಲ ಸೌಂದರ್ಯ ಸಾಧ್ಯತೆಗಳನ್ನು ಎರಡೂ ಕೈಗಳಲ್ಲಿ ಮೊಗೆದು ಆಸ್ವಾದಿಸಿದ್ದಾರೆ; ಸಹೃದಯರಿಗೂ ಉಣಬಡಿಸಿದ್ದಾರೆ. ಆದರೆ ಕವಿ ತನ್ನ ಸಮಕಾಲೀನ ಕವಿಗಳಿಗಿಂತ ಭಿನ್ನರಾಗಿರುವುದು ಅನುಭವವನ್ನು ತನ್ನ ಜೀವನದೃಷ್ಟಿಗನುಸಾರವಾಗಿ ದುಡಿಸಿಕೊಂಡದ್ದರಲ್ಲಿ, ಮತ್ತದರ ರೀತಿಯಲ್ಲಿ, ನಿಸರ್ಗದ ರಮಣೀಯತೆಯಲ್ಲಿ ತನ್ಮಯನಾಗುವುದು ಮತ್ತು ಆಧ್ಯಾತ್ಮಿಕ ಸಂವೇದನೆಯನ್ನು ಒಪ್ಪಿಕೊಳ್ಳುವುದು ಪಾಪವೋ ಪುಣ್ಯವೋ ಎಂಬ ವಿಚಾರ ನಮಗೆ ಬೇಕಾಗಿಲ್ಲ. ಅವು ಜೀವನದ ಅನಿವಾರ್ಯ ಅಂಗ ಅಂತ ಸಾಧಿಸುವ ಅಗತ್ಯವೂ ಇಲ್ಲ. ಆದರೆ ಕವಿ ಇವುಗಳನ್ನು ಕಾವ್ಯಧೋರಣೆಯಾಗಿ ಸ್ವೀಕರಿಸಿಕೊಳ್ಳುವಾಗ, ಜೀವನದ ದುರ್ದಮ್ಯದುರಂತಗಳನ್ನು ನಿರ್ಲಕ್ಷಿಸಿದ್ದಾನೆಯೋ ಮತ್ತು ಅದನ್ನು ಬರೇ ಗುಂಗಾಗಿ ತೆಗೆದುಕೊಂಡು ಸ್ವಗತ ಭಾಷಣಗಳನ್ನು ಮಾಡುತ್ತಾನೆಯೋ ಎಂದು ವಿಚಾರಿಸುವುದು ಪ್ರಸ್ತುತವಾಗುತ್ತದೆ.

ಇದು 'ಗರಿ'—ಸಂಕಲನದ 'ಬೆಳಗು' ಹಾಗೂ 'ಗಂಗಾವತರಣ'—ಸಂಕಲನದ 'ಜೋಗಿ' ಕವನಗಳ ಒಂದು ಅಭ್ಯಾಸ ಅಷ್ಟೆ. ಇದನ್ನು ಮೆಚ್ಚುಗೆ ಅಥವಾ ಮೌಲ್ಯ ಮಾಪನವೆಂದು ಕರೆದುಬಿಡುವ ಸಾಧ್ಯತೆ ದೂರವಾಗಲೆಂದು ಮೇಲಿನ ಅರಿಕೆ. 'ಬೆಳಗು' ಕವನದ ಭಾವ ಸಂದರ್ಭ ಸೂಚನೆಯನ್ನು ಕೊಡುತ್ತ ಬೇಂದ್ರೆಯವರು ಇದು "ಧಾರವಾಡದ ಅತ್ತಿಕೊಳ್ಳದ ಚೆಲುವಿನ ನೋಟದಿಂದ ಪ್ರೇರಿತವಾದದ್ದು. ಸದಾನಂದಿಯಾದ ಜಂಗಮನೊಬ್ಬನು ಹಾಡಿದಂತೆ ಬರೆದದ್ದು" ಎಂದು ಹೇಳಿದರೆ, 'ಜೋಗಿ' ಕವನವನ್ನು ಪರಿಚಯಿಸುತ್ತ "ಧಾರವಾಡದ ಸುತ್ತಲಿನ ನಿಸರ್ಗದ ಮಾಯೆಯಿಂದಲೂ ಒಳಜೀವನದ ಕಾಳರಾತ್ರಿಯ ಭಯಾನಕ ಸಂಶಯಾಕುಲಿತ ಭಾವನೆ

ಯಿಂದಲೂ ಉದಿತವಾಗಿದೆ" ಎನ್ನುತ್ತಾರೆ. ಈ ಚರ್ಚೆಗೆ ಇವೆರಡು ಕವನಗಳನ್ನು ಒಟ್ಟಾಗಿ ತೆಗೆದುಕೊಳ್ಳುವುದಕ್ಕೆ ಬಹುಶಃ ಎರಡು ಕಾರಣಗಳನ್ನು ಕೊಡಬಹುದು. ಒಂದು: 'ಬೆಳಗು' ಜೋಗಿಗಿಂತ ಮೊದಲು ಬರೆದ ಕವನವಾದ್ದರಿಂದಲೋ ಏನೋ ಅದು ಜೋಗಿಯಲ್ಲಿ ನಿರೂಪಿತವಾದ ಐಹಿಕ ಪಾರಮಾರ್ಥಿಕ ದ್ವಂದ್ವದ ಪ್ರಾಥಮಿಕ ಹಂತವಾಗಿ ಕಾಣಿಸಿಕೊಳ್ಳುವುದು ಪ್ರಾಯಂಶಃ ಕವನದ ವಸ್ತುಗಳೂ ಇದನ್ನು ಸಮರ್ಥಿಸುತ್ತವೆ. ಯಾಕಂದರೆ ಒಂದು ಬೆಳಗಿನ ಕುರಿತಾದರೆ ಇನ್ನೊಂದು ನಿಸರ್ಗದ ಮಾಯೆ ಮತ್ತು ಒಳಜೀವನದ ಕಾಳರಾತ್ರಿಯ ಕುರಿತು. ಎರಡು: 'ಬೆಳಗು' ಕವನ 'ಇದು ಬರಿ ಬೆಳಗಲ್ಲೊ ಅಣ್ಣಾ, ಎಂಬ ಅನಿರ್ಧಾರಿತ ಅಚ್ಚರಿ ಹಾಗೂ ಕುತೂಹಲವನ್ನು ತೋರಿಸುತ್ತ ಕೊನೆಗೊಂಡರೆ, ಜೋಗಿ "ಬಿಸಿಲು ಕುಣಿದು ಬೆವತದ ಈಗ ಬಂದದ ಮಳಿಯು ಹದಕ" ಎಂಬ ಸಮತೋಲನಸ್ಥಿತಿಯ ನಿರ್ಧಾರಾತ್ಮಕ ನಿಲುವಿನಿಂದ ಅಂತ್ಯಗೊಳ್ಳುತ್ತದೆ. ಇದರೊಂದಿಗೆ ಎರಡು ಕವನಗಳಿಗೂ ಸಮಾನವಾದ ಕೆಲವು ಕಾಳಜಿಗಳನ್ನು ಹೇಳಬಹುದು. ಅನುಭವ ಮತ್ತು ಅನುಭಾವ ಹದಕ್ಕೆಬರುವ ರೀತಿ, ಪ್ರಕೃತಿ ಮತ್ತು ಜೀವನದ ನಿಕಟಬಾಂಧವ್ಯ, ನಾಯಕನಿಗಾಗುವ ವೈಯಕ್ತಿಕ ಅನುಭವವನ್ನು ಭಾವಾಭಿನಯಗೊಳಿಸುವ ಕ್ರಮ, ಅನ್ವೇಷಣೆಯ ನಿಲುವು, ಅಮೂರ್ತತೆಯಿಂದ ಅರ್ಥಗಳನ್ನು ಸಂವೇದಿಸಲೆತ್ನಿಸುವ ಪ್ರಯತ್ನ— ಇವುಗಳೆಲ್ಲಾ 'ಬೆಳಗು' ಮತ್ತು 'ಜೋಗಿ'ಗಳನ್ನು ಅಕ್ಕಪಕ್ಕದಲ್ಲಿಟ್ಟು ಅಭ್ಯಾಸಮಾಡುವಂತೆ ಪ್ರೇರೇಪಿಸುವ ಅಂಶಗಳು.

'ಬೆಳಗು' ಕವನದ ಶೀರ್ಷಿಕೆಯೇ ಸೂಚಿಸುವಂತೆ ಕತ್ತಲಿನಿಂದ ಬೆಳಕಿನೆಡೆಗೆ ಸಾಗುವ ಆತ್ಮದ ಹಾಗೂ ಬುದ್ಧಿಯ ತುಡಿತವನ್ನು ಚಿತ್ರಿಸುತ್ತದೆ. ಬೆಳಗು ಶಬ್ದ ನಾಮಪದವೂ ಕ್ರಿಯಾಪದವೂ ಆಗಿ ಒಟ್ಟಿಗೇ ಪ್ರವರ್ತಿಸುವುದರಿಂದ ಬೆಳಗುವ ಕ್ರಿಯೆಗೆ ಅನಿವಾರ್ಯವಾದ ಮಾನವ ಪ್ರಯತ್ನದ ಆವಶ್ಯಕತೆಯನ್ನೂ ವ್ಯಂಜಿಸುತ್ತದೆ. ನಿಸರ್ಗದ ಸಹಜವ್ಯಾಪಾರವಾದ ಸೂರ್ಯೋದಯದೊಂದಿಗೆ ಕವನ ಆರಂಭವಾಗುತ್ತದೆ. ಅರುಣೋದಯದ ಮಂಗಳಮುಹೂರ್ತದಲ್ಲಿ ಮೂಡಲ ಮನೆಯ ಬಾಗಿಲನ್ನು ತೆರೆದು ಉಷಾದೇವಿಯು ಇಬ್ಬನಿಯ ಬಿಂದುಗಳಿಂದ ರಂಗೋಲಿಯಿಡುವ ದೃಶ್ಯವೇ ಸನ್ನಿವೇಶದ ಅಲೌಕಿಕ ಸೌಂದರ್ಯವನ್ನು ಅಭಿವ್ಯಕ್ತಿಸುತ್ತದೆ. ಮೂಡಲ ಮನೆ ಸೂರ್ಯಲೋಕವನ್ನು ಸೂಚಿಸುವುದರೊಂದಿಗೇ ಬುದ್ಧಿಯ ಮನೆಯಾದ ಹೃದಯವನ್ನು ಅನುಭಾವದ ಉಗಮಸ್ಥಾನವಾದ ಆತ್ಮವನ್ನು ಪ್ರತಿನಿಧಿಸುತ್ತದೆ. ಮೂಡು ಅನ್ನುವ ಶಬ್ದವನ್ನು ಬೇಂದ್ರೆಯವರು ಪ್ರತಿಭೆಯ ಎಲ್ಲ ಸಾಧ್ಯತೆಗಳನ್ನು ಕೇಂದ್ರೀಕರಿಸಿ ಉಪಯೋಗಿಸುವುದರಿಂದ ಇಡೀ ಕವನಕ್ಕೆ ಅದು ಹೊಸ ಆಯಾಮವನ್ನು ಕಲ್ಪಿಸುತ್ತದೆ. ಜ್ಞಾನಗಂಗೆಯಾಗಿ ಹರಿಯುವ 'ಮುತ್ತಿನ ನೀರಿ'ನ ರಂಗೋಲಿ ಜಗತ್ತನ್ನು ಬೆಳಕಾಗಿ ತೋಯ್ಸಿ ತೊಡಗುವ ಪ್ರಶಾಂತ ಸುಂದರ ಸನ್ನಿವೇಶ ಕವನದ ಆರಂಭದಲ್ಲಿ ಓದುಗರನ್ನು ಸೆರೆಹಿಡಿಯುತ್ತದೆ. ಮುಂಜಾವಿನ ಸೌಂದರ್ಯ 'ರತ್ನದ

ರಸದಾ ಕಾರಂಜಿ'ಯಾಗಿ ಚಿಮ್ಮುವುದರೊಂದಿಗೆ ಪ್ರಕೃತಿ ಸಹಜವಾಗಿ ಕಾಣುವ 'ಮುಗಿಲ ಮೊಗ್ಗಿ' ಅರಳತೊಡಗುತ್ತದೆ. ಸುಪ್ತಮನಸ್ಸು ಸೌಂದರ್ಯವನ್ನಾಸ್ವಾದಿಸುವುದಕ್ಕೆ ತನ್ನನ್ನು ತಾನು ತೆರೆದುಕೊಳ್ಳುತ್ತದೆ ಎನ್ನುವುದನ್ನು 'ಪುಟಪುಟನೆ' 'ಪಟಪಟನೆ' ಎನ್ನುವ ಅನುಕರಣಾತ್ಮಕ ಶಬ್ದಗಳಲ್ಲಿ ಹೃದಯದಿಂದ ಊಟೆಯಾಗಿ ನೆಗೆಯುವ ಮಧುರಭಾವನೆಗಳನ್ನು ಎಸಳುಗಳು ಬಿರಿಯುವ ಕ್ರಿಯೆಯೊಂದಿಗೆ ಕವಿ ಸಮರ್ಥವಾಗಿ ಭಾವಾಭಿನಯಗೊಳಿಸುತ್ತಾರೆ. ಈ ಎರಡು ಪದ್ಯಗಳಲ್ಲಿ ಮಂಜು ಬೀಳುವುದು, ಬೆಳಕು ಹರಿಯುವುದು, ಮೊಗ್ಗೆ ಅರಳುವುದು, ಸುಗಂಧ ಹರಡುವುದು— ಹೀಗೆ ಸೂರ್ಯೋದಯ ಕಾಲದ ಪ್ರಕೃತಿಸಹಜ ವ್ಯಾಪಾರಗಳನ್ನು ಪಟ್ಟಿಮಾಡುವ ಬದಲು ಅವನ್ನು ನವುರಾಗಿ ವ್ಯಕ್ತಗೊಳಿಸಿ ಅವುಗಳ ಮೂಲಕ ಹೊಸ ಅರ್ಥವನ್ನು ಸ್ಫುರಿಸಲೆತ್ನಿಸುವ ಧಾಟಿಯಲ್ಲಿ ಕವಿತೆ ಸಹೃದಯ ಮನಸ್ಸನ್ನು ಆವರಿಸಿ ಬಿಡುತ್ತದೆ. ಕಾರಂಜಿಯಂತೆ ತನ್ನಲ್ಲಿ ತಾನು ಸಹಜವಾಗಿ ಉದಿಸುವ ಆತ್ಮಜ್ಞಾನದ ಬಗೆಯನ್ನೂ ಅದು ಕುಸುಮದಂತೆ ಅರಳಿ ತನ್ನ ಪರಿಧಿಯನ್ನು ಸುಗಂಧದಂತೆ ಅವ್ಯಕ್ತವಾಗಿ ವಿಸ್ತರಿಸುವುದನ್ನು ಕವಿ ಮನೋಹರವಾಗಿ ಚಿತ್ರಿಸುತ್ತಾರೆ.

ಸ್ವರ್ಗಕ್ಕೆ ಸೀಮಿತವಾದ ಅಮೃತವನ್ನು ಮಕರಂದವಾಗಿಸಿ ಹೂವಿನ ಗರ್ಭದಲ್ಲಿ ಹುದುಗಿಸಿದ ಅವ್ಯಕ್ತವ್ಯಕ್ತಿಯ ಬಗ್ಗೆ ವಿಚಾರಿಸುವಾಗ ಕವಿ "ಬೆಟ್ಟದಾ ತುದಿಯಲ್ಲಿ ಪುಟ್ಟಿರುವ ವೃಕ್ಷಕ್ಕೆ ಕಟ್ಟೆಯನು ಕಟ್ಟಿ ನೀರೆರೆದವರು ಯಾರು"? ಎನ್ನುವ ದಾಸರ ಕುತೂಹಲವನ್ನು ತೋರಿಸಿದರೂ ಅದನ್ನು ಇನ್ನೊಂದು ರೀತಿಯಲ್ಲಿ ಉಪಯೋಗಿಸಿಕೊಂಡದ್ದನ್ನು ನೋಡುತ್ತೇವೆ. ಇಲ್ಲಿ ಅಮೃತ ಸದೃಶವಾದ ಆತ್ಮಾನುಭೂತಿಯನ್ನು ಮಾನವ ಹೃದಯಕ್ಕೆ ಸೀಮಿತಗೊಳಿಸಿದ ಪವಾಡಕಾರ್ಯ ಎದ್ದು ಕಾಣುತ್ತದೆ. ಪರಮಾತ್ಮನ ಸೃಷ್ಟಿಕಾರ್ಯದ ವಿಸ್ಮಯಜನಕ ಕಾರ್ಯಕ್ಕಿಂತಲೂ ಹೆಚ್ಚಾಗಿ ಈ ಸಾಲುಗಳಲ್ಲಿ ಅನುಭಾವದ ಸುಪ್ತ ಅಸ್ತಿತ್ವ. ಮನುಷ್ಯನನ್ನು ಹೇಗೆ ಅಲೌಕಿಕ ಜೀವಿಯನ್ನಾಗಿಸುತ್ತದೆ ಎಂಬುದರ ವರ್ಣನೆಯಿದೆ.

ಮುಂದಿನ ಪದ್ಯದಲ್ಲಿ ಮುಂಜಾವದ ಉಲ್ಲಾಸಮಯ ವಾತಾವರಣ, ಮಂದಾನಿಲ ಬೀಸುವಿಕೆ, ತುಂಬಿಗಳ ಝೇಂಕಾರ ಮುಂತಾದ ವಿವರಣೆಯನ್ನು ನೋಡುತ್ತೇವೆ. ಸ್ವಂತದ ತಿಳುವಳಿಕೆಯು 'ತಂಗಾಳಿ'ಯಲ್ಲಿ ಜ್ಞಾನದ ಒಂದೊಂದೇ ದಳಗಳು ಬಿರಿದುಕೊಂಡು ಆತ್ಮದ ಶಕ್ತಿ, ಚೈತನ್ಯಗಳು ಎಳೆಎಳೆಯಾಗಿ 'ಚೌರಿ'ಯಾಗುತ್ತವೆ. 'ತುಂಬಿಯು ದಂಡು' ಮಕರಂದವನ್ನು ತನ್ನ ಮೈಗೆಲ್ಲ ಬಳಿದುಕೊಂಡು ಹಾರುವ ಕ್ರಿಯೆ, ಅಲೌಕಿಕ ಸುಖವನ್ನನುಭವಿಸುತ್ತ ವಿಹರಿಸುವ ಆತ್ಮದ ಹಾರಾಟವಾಗಿದೆ. ಆದರೆ 'ಹಾರಿಸಿಬಿಟ್ಟ' ಈ ದುಂಬಿಗಳು ಸ್ವಪ್ರಯತ್ನದಿಂದಲೇ ಔನ್ನತ್ಯಕ್ಕೇರುತ್ತವೆ ಎನ್ನುವ ಅಂಶ ಗಮನಿಸಬೇಕಾದದ್ದು.

ಬೆಳಗಿನ ಈ ವಾತಾವರಣದಲ್ಲಿ ಪ್ರಕೃತಿಗೂ ಅಸಾಧಾರಣ ಚೈತನ್ಯ ಲಭಿಸುತ್ತದೆ. ಗಿಡಮರಗಳ ಸಂದುಗೊಂದುಗಳಿಂದ ಹೊರಟ ಹಕ್ಕಿಗಳ ಹಾಡು 'ಗಿಡಗಂಟೆಯಾ ಕೊರಳೊಳಗಿಂದ' ಪ್ರತಿಧ್ವನಿಸಿ ಚರಾಚರ ಚೈತನ್ಯ ಒಂದೇ ಆಗಿ ನಿಸರ್ಗದ ಚಿರಂತನತೆಯನ್ನು ಎತ್ತಿಹಿಡಿಯುವುದು ಮಾತ್ರವಲ್ಲ, ತುಂಬಿಯು ಝೇಂಕಾರವಾಗಿ ನುಡಿಯತೊಡಗಿದ ಆತ್ಮದ ಧ್ವನಿ, ಹಕ್ಕಿಗಳ ಹಾಡಾಗಿ ಇನ್ನಷ್ಟು ಸ್ಪಷ್ಟಗೊಳ್ಳುತ್ತದೆ. 'ಕಾಡಿನಾ ನಾಡು' 'ಗಂಧರ್ವರಾ ಸೀಮೆ' ಯಾಗುವುದು ಆತ್ಮದ ಈ ಕೂಗಿನಿಂದ ಮಾತ್ರ. ಅಸ್ಪಷ್ಟತೆ ಅಂಧಕಾರಗಳ ಕಾಡಿನಿಂದ ತುಂಬಿಕೊಂಡ ನಾಡು ಕ್ಷಣಮಾತ್ರದಲ್ಲಿ ಸುಖದ ಸ್ವರ್ಗಕ್ಕೆ ಸರಿಮಿಗಿಲೆನಿಸುತ್ತದೆ. ಕತ್ತಲು ತೊಲಗಿ ಬೆಳಕಾದರೂ ಸ್ಥಿತ್ಯಂತರವನ್ನು ಕಾಣುತ್ತದೆ. ನಾಲಗೆ ಸವಿಯುತ್ತದೆ, ದೇಹ ಸ್ಪರ್ಶಾನುಭವವನ್ನೂ ಒಳಗೊಳ್ಳುತ್ತದೆ. ಮೂಗು, ಕಿವಿ ಎಂಬಿತ್ಯಾದಿಯಾದ ಈ ಪಂಚೇದ್ರಿಯಗಳಿಗೆ ನಿರಾಕುಲ ವಾತಾವರಣದಲ್ಲಿ ಆತ್ಮವಿಕಾಸದಿಂದ ಉಂಟಾಗುವ ಸುಖ ಮತ್ತು ಆನಂದ ಲಭಿಸುತ್ತದೆ. ಮಾನವ ದೇಹ ಸೃಷ್ಟಿಕರ್ತನ ಮನಸ್ಸಿನ ಮನೆಯಾದುದರಿಂದ ಇವುಗಳಲ್ಲಿ ತಲ್ಲೀನವಾಗುವುದೂ ಕಷ್ಟವಲ್ಲ. ತನ್ಮಯತೆಯು ಈ ಸಮಾಧಿಸುಖಕ್ಕಿಂತಲೂ ದೈಹಿಕ ಅನುಭವಕ್ಕಿಂತಲೂ ಮಿಗಿಲಾದ ಇಂದ್ರಿಯಾತೀತ ಸುಖ ಮತ್ತು ಅದರಿಂದ ಸಿದ್ಧಿಸುವ ಆನಂದ ಇವಕ್ಕೇನು ಕಾರಣ? ಶಾಂತಿರಸ ಮೈದೋರುವುದು ನಿಜ. ಅದು ರಾಗ, ಸೌಂದರ್ಯಗಳ ಹೊಂದಿಕೆಯಿಂದ ಆಗಿರಬಹುದು. ಬುದ್ಧಿಜನ್ಯವಾದ ಜ್ಞಾನ ಹಾಗೂ ಹೃದಯದಿಂದ ಹುಟ್ಟುವ ಅನುಭಾವ ಇವೆರಡೂ ದಾರಿಮಾಡಿಕೊಡುವ ಆತ್ಮಾನಂದದಿಂದ ಆಗಿರಬಹುದು. ತಾನು ಅನುಭಸಿದ ಶಾಂತಿ, ಪ್ರಕೃತಿಯ ವಿಶ್ಲೇಷಣೆಯಿಂದ ಕಂಡುಕೊಂಡ ಸತ್ಯ ಇವುಗಳಿಗೆ ನಿಶ್ಚಿತ ಮೇರೆಯಿದೆ. ಆದರೆ ಇಷ್ಟೇ ಬೆಳಕಲ್ಲ. ಇದರಾಚೆಗೂ ಸತ್ಯದರ್ಶನ ಹಾಗೂ ಆತ್ಮಸಾಕ್ಷಾತ್ಕಾರ ಇರುವುದಕ್ಕೆ ಸಾಧ್ಯ. 'ಇದು ಬರೀ ಬೆಳಗಲ್ಲೋ ಅಣ್ಣ' ಎಂಬಲ್ಲಿ ಬೆಳಗಿನ ಸುಖ ಅನುಭವವೇದ್ಯ. ಆದರೆ ವರ್ಣನಾತೀತ ಅನ್ನುವ ಮೆಚ್ಚುಗೆ ಮತ್ತು ಅಸಹಾಯಕತೆಯೊಂದಿಗೆ ಇದು ಕೇವಲ ಪ್ರಾಥಮಿಕ ತಿಳುವಳಿಕೆಯಲ್ಲವೇ ಎನ್ನುವ ಕೊರಗೂ ಇರುವಂತೆ ಕಾಣುತ್ತದೆ. ಒಟ್ಟು ಕವಿತೆಯನ್ನು ನೋಡಿದಾಗ ಭಾವಪೂರಿತವಾದ ಸಾರ್ಥಕ ಪ್ರಕೃತಿಗೀತವಾಗಿ ಕಾಣುವ 'ಬೆಳಕು' ತನ್ನ ಮೇಲ್ಪದರದ ಅರ್ಥವನ್ನು ಉಳಿಸಿಕೊಂಡೇ ಕತ್ತಲೆಯಿಂದ ಬೆಳಕಿನೆಡೆಗೆ, ಸುಪ್ತತೆಯಿಂದ ಚೈತನ್ಯಕ್ಕೆ ನಡೆಯುವ ಆತ್ಮದ ವಿಕಾಸ ಕ್ರಮವನ್ನು ವ್ಯಂಜಿಸುತ್ತದೆ. ಆದರೆ ಪ್ರಕೃತಿಗೀತವಾಗಿ ಅಚ್ಚರಿಯಲ್ಲಿ ನಿರ್ಧಾರಾತ್ಮಕವಾಗಿ ಕೊನೆಗೊಳ್ಳುವ ಅರ್ಥಸಾಧ್ಯತೆ ಅನುಭಾವಗೀತವಾಗಿ ಸಂದೇಹದಲ್ಲೂ ಕೊರಗಿನಲ್ಲೂ ಅಂತ್ಯವಾಗುತ್ತದೆ.

ಜೋಗಿ ಕವನದ ಆದಿಯಲ್ಲಿ "ಊರ ತುದಿಯ ಆ ಮೂರು ಬಟ್ಟೆ ಮುಗಿದಲ್ಲಿ ಕೊಳ್ಳವೆಲ್ಲಿ" ? —ಎಂದು ತನಗೆ ತಾನೇ ಪ್ರಶ್ನೆಹಾಕಿಕೊಳ್ಳುವುದನ್ನು ನೋಡುತ್ತೇವೆ. ಆದುದರಿಂದ ಅವಕ್ಕೆ ಯೋಗ್ಯ ಉತ್ತರವನ್ನು ಕಂಡು ಹುಡುಕುವ ಕವಿಯ ಪ್ರಯತ್ನವೇ

ಕವನದ ವಸ್ತುವಾಗುತ್ತದೆ. ಬಾಲ್ಯ, ಯೌವನ, ವೃದ್ಧಾಪ್ಯಗಳು ಲೌಕಿಕ ಜೀವನದ ಮೂರು ಅವಸ್ಥೆಗಳು. ವಯೋಮಾನಕ್ಕೆ ತಕ್ಕಂತೆ ಪುರುಷಾರ್ಥಗಳನ್ನು ಸಾಧಿಸುವುದು ಮನುಷ್ಯನ ಕರ್ತವ್ಯ. ಕೊನೆಯ ಪುರುಷಾರ್ಥವಾದ ಮೋಕ್ಷವು ಐಹಿಕ ಜೀವನವನ್ನು ಪ್ರತಿನಿಧಿಸುವ ಊರಿನ ಮೂರು ದಾರಿಗಳು ಮುಗಿದಲ್ಲಿ ಎಲ್ಲಿದೆ ಎಂದು ಕವಿ ಕೇಳು ತ್ತಾನೆ. ಸಮಾಧಾನಕರವಾದ ನಿಶ್ಚಿಂತ ಉತ್ತರವನ್ನು ತಾನೇ ನೀಡುವ ಬದಲು ಆತ ಐಹಿಕ ಜೀವನದ ಎರಡು ವಿರುದ್ಧ ಪ್ರಕೃತಿಗಳ ಕುರಿತು ವಿವರಣೆ ನೀಡುತ್ತಾನೆ. ಆತ ಪರೀಕ್ಷಿಸುವ ಕ್ಷೇತ್ರಗಳಲ್ಲಿ ಒಂದನೆಯದು 'ತುಡುಗುದನ ತೊಂಡು ಮೇಯುವ' 'ಹಳ್ಳ ಅಡಗಿ ಹರಿದ' ಯೌವನ ಸಹಜವಾದದ್ದು. ಜೀವನದ ಹತ್ತು ಹಲವು ಭೋಗಗಳನ್ನು ಎರಡೂ ಕೈಗಳಿಂದ ಬೊಗೆದು ಅನುಭವಿಸುವ ಇಂದ್ರಿಯಲೋಲ ಮನೋಧರ್ಮ ವನ್ನು 'ತುಡುಗುದನ ತೊಂಡು ಮೇಯುವಲ್ಲಿ' ನಾವು ಗುರುತಿಸಬಹುದು. ಇಲ್ಲಿ ಜೀವನದಿಯೂ ತನ್ನ ಕೊನೆಯ ಗುರಿಯನ್ನು ತಲುಪದೆ ಇಂಗಿ ಹೋಗುತ್ತದೆ; ಮಾತ್ರ ವಲ್ಲ ಆ ಪರಿಸರದಲ್ಲಿ ಜೀವ ದಾರಿತಪ್ಪಿ ಕಕ್ಕಾವಿಕ್ಕಿಯಾಗುತ್ತದೆ. ಜೋಡು ಗೂಗೆಗಳ ಕೂಗು ಅಸ್ಪಷ್ಟ, ಭಯಾನಕ ವಾತಾವರಣವನ್ನು ಸೃಷ್ಟಿಸಿ ಭೋಗಾಸಕ್ತನಾದ ನಾಯಕ ನನ್ನು ಮತ್ತಷ್ಟು ಗೊಂದಲದಲ್ಲಿ ನೂಕುತ್ತದೆ. ಜೀವನದ ಕಾಳರಾತ್ರಿಯಲ್ಲಿ ಕುರುಡ ನಾಗುವ, ವ್ಯರ್ಥಸಾವಿನ ಭೀಕರತೆಯಿಂದ ಬಳಲುವ ಈತ ಆ ಅಪಾಯ ಸ್ಥಿತಿಯಿಂದ ಫಕ್ಕನೆ ಪಾರಾಗಲು ಬಯಸುತ್ತಾನೆ. ತೀವ್ರ ಗಲಿಬಿಲಿಯ ಭ್ರಾಂತಸ್ಥಿತಿಯಲ್ಲಿ, ಅದಕ್ಕೆ ತೀರಾ ವಿರುದ್ಧವಾದ ಇನ್ನೊಂದಕ್ಕೆ ಆದಷ್ಟು ಬೇಗನೆ ನೆಗೆದುಬಿಡುವ ಆತುರ, ಭೀತಿ ಎರಡೂ ಮನುಷ್ಯ ಸಹಜವಾದದ್ದೆ. ಇಲ್ಲಿ ನಾಯಕ ಬದುಕಿನಿಂದ ಹೊರಗೆ ನಿಂತು ಅದರ ಎರಡೂ ಸಾಧ್ಯತೆಗಳನ್ನು ಪರೀಕ್ಷಿಸ ಹೊರಡುತ್ತಾನೆ. ಪ್ರವೃತ್ತಿ ಹಾಗೂ ನಿವೃತ್ತಿ ಜೀವನದ ಎಡಬಲಗಳು. ಮೊದಲು ನಾಯಕ ತನ್ನ ಪೂರ್ವಾನುಭವವಾದ ಲೌಕಿಕದ ಹುರುಳನ್ನೇ ಬೆಲೆಗಟ್ಟುತ್ತಾನೆ.

ಸಂಸಾರ ಸರೋವರದ ಮೇಲ್ಪದರದಲ್ಲಿ 'ಕಾಮ ತನ್ನ ಹಚ್ಚಂಗಿ'ಯನ್ನು ಹಾಸಿರು ತ್ತಾನೆ. ಅದರಲ್ಲಿನ ಮೋಹಕತೆ, ಕಂಡ ಕಣ್ಣುಗಳನ್ನು ಆಕರ್ಷಿಸುತ್ತದೆ. ಬಯಕೆಯ ಪಾಚಿ ನೀರನ್ನು ಆವರಿಸಿರುವುದರಿಂದ ನೀರಿನ ನಿಜಸ್ವರೂಪ ಮೇಲುನೋಟಕ್ಕೆ ಕಾಣುವು ದಿಲ್ಲ. ನಾಯಕ ಪಾಚಿಯನ್ನು ಸರಿಸಿ ನೋಡುತ್ತಾನೆ. ನೀರು ಕಪ್ಪಾಗಿರುತ್ತದೆ. ಅದರ ಅಗಾಧತೆ, ಅಸ್ಪಷ್ಟತೆಗಳು ಭೀತಿ ಹುಟ್ಟಿಸುವಂತಿರುತ್ತವೆ. ಜೀವನದ ಹಸಿರು ಕಲ್ಪನೆಗಳ ವಾಸ್ತವತೆ ತಾನು ನೆನಸಿದ್ದಕ್ಕಿಂತ ತೀರ ಭಿನ್ನವೆಂದು ನಾಯಕ ಮೊದಲ ನೋಟಕ್ಕೆ ತೀರ್ಮಾನಿಸಿ ಬಿಡುತ್ತಾನೆ.

ಅನಂತರ ನಾಯಕನಿಗೆ ಕಾಣುವುದು ಎರಡನೆಯ ಸಾಧ್ಯತೆ ಮಾತ್ರ. ಮೊದಲಿನ ಪ್ರವೃತ್ತಿಗಿಂತ ಸಂಪೂರ್ಣ ನಿಡಿದುನಿಂತ ವಿರಕ್ತನ ಜೀವನ. 'ಗವಿಗುಂಡ್ಡ' ಅಂತಹ ಮಹತ್ವಪೂರ್ಣ ಸಾಧನೆಗೆ ಮತ್ತು 'ಕಾಳಮ್ಮನ ಹೊಲ' ಧಾರ್ಮಿಕ ಕ್ರಿಯಾ ವಿಧಿಗಳಿಗೆ

ಸಂಕೇತವಾಗಿ ಬರುತ್ತದೆ. ಸಾಧನೆಯು ಔನ್ನತ್ಯ ಹಾಗೂ ಧಾರ್ಮಿಕ ಆಚರಣೆಗಳ ನಿಬಿಡತೆಗಳು ಪರಂಪರಾಗತ ಮೌಲ್ಯಗಳಾಗಿದ್ದರೂ ಜೀವನದ ಎಲ್ಲ ವಿಷಮತೆಗಳಿಗೆ ಸಂಜೀವಿನಿಯೆಂದು ಕೇಳಿದ್ದರೂ ಪೂರ್ವಜೀವನದ ಭ್ರಮನಿರಸನವನ್ನು ಅನುಭವಿಸಿ ಸುಸ್ವಾದ ಈತ ಯಾವುದನ್ನೇ ಆದರೂ ಇದ್ದಕ್ಕಿದ್ದಂತೇ ಅವಚಿಕೊಳ್ಳುವುದು ತಪ್ಪೆಂಬ ಪಾಠವನ್ನು ಕಲಿತಿರುತ್ತಾನೆ. ನಿರ್ಲಿಪ್ತ ಹಾಗೂ ನಿರಾಕುಲ ಸ್ಥಿತಿಯಲ್ಲಿ ಆತ ತನ್ನ ಮುಂದಿರುವ ಇನ್ನೊಂದು ಆಯ್ಕೆಯನ್ನು ಎಚ್ಚರದಿಂದ ಪರೀಕ್ಷಿಸುತ್ತಾನೆ. 'ಹುಣಸಿ ಮರ'ವನ್ನೇರಿ ನೋಡುವುದು ಬಹುಶಃ ಇದೇ ಆಶಯವನ್ನು ವ್ಯಕ್ತಗೊಳಿಸುತ್ತದೆ. ಅಲ್ಲಿ ಅವನಿಗೆ ಜೀವನದ ಸರಳೀಕೃತ ತತ್ವಗಳು ಗೋಚರವಾಗುತ್ತವೆ. ಐಹಿಕ ಮತ್ತು ಪಾರಮಾರ್ಥಿಕ ವಿಚಾರಗಳ ನಡುವೆ ಒಂದು ರೀತಿಯ ಸಾಮೂಹಿಕ ಒಪ್ಪಂದವನ್ನು ಮಾಡಿಕೊಂಡವರು ಜೀವನದ ಲಯದಲ್ಲಿ ತನ್ನಯ ರಾಗ ಹಾಗೆ ಅನಿಸುತ್ತದೆ. ಆ ಪರಿಸರದಲ್ಲಿರುವ ಪರಸ್ಪರ ವಿಷಮ ಭಾವನೆಗಳನ್ನುದ್ದೀಪಿಸುವ 'ತೊಗಲ ಬಾವಲಿ-ಪಾರಿವಾಳ'; ಬೇವು-ಅಮೃತಬಳ್ಳಿ; ಆಲ-ಅಶ್ವತ್ಥ ಮುಂತಾದವುಗಳಿಂದ ನಾಯಕನ ಮನಸ್ಸಿನಲ್ಲಿ ಮತ್ತೂ ಅನೇಕ ಸಮಸ್ಯೆಗಳು ಹುಟ್ಟಿಕೊಳ್ಳುತ್ತವೆ. ಸಂಘರ್ಷ ಹುಟ್ಟಿಕೊಳ್ಳಲೇಬೇಕಾದ, ಪರಸ್ಪರ ವಿರುದ್ಧವಾದ ಶಕ್ತಿಗಳಿದ್ದರೂ ಅವು ಆಶ್ಚರ್ಯಕರವಾಗಿ ಹೊಂದಿಕೊಂಡಿರುವುದನ್ನು ನಾಯಕನಿಗೆ ಅರ್ಥೈಸುವುದು ಕಷ್ಟವಾಗುತ್ತದೆ. ಚರ್ಮಕ್ಕೆ ಅಂಟದ ಕ್ಷುಲ್ಲಕ ಭಾವನೆಗಳು, ಊರ್ಧ್ವಮುಖಿಯಾದ ಶಾಂತಿಯನ್ನರಸುವ ಚೇತನಗಳು, ಸಾವುಸಂಜೀವಿನಿಗಳು, ಶ್ರದ್ಧೆ-ಮೂಢನಂಬಿಕೆಗಳು ಇವು ಒಪ್ಪಂದದಲ್ಲಿ ಸೇರಿಕೊಳ್ಳುವ ಸಾಂಗತ್ಯ— ಇದೆಲ್ಲವನ್ನು ನೋಡಿದಾಗ ಬಹುಶಃ ಇದೇ ಜೀವನದ ಸರಿಯಾದ ಮಾರ್ಗ ಎನ್ನುವ ಭ್ರಮೆ ನಾಯಕನಿಗೆ ಹುಟ್ಟುತ್ತದೆ. ಅದಕ್ಕೆ ಪೂರಕವಾಗಿರುವ 'ಕೆಂಪು ಹಣ್ಣು' 'ತುಂಬಿ ತೊಟಗುಟ್ಟುವ ಜೇನು' ಮುಂತಾದವುಗಳು ನಾಯಕನಲ್ಲಿ ಬಯಕೆ ಹುಟ್ಟಿಸುತ್ತವೆ. ಎಂಥ ತಿಕ್ಕಾಟ, ಪ್ರತಿಭಟನೆ, ವಿರೋಧಾಭಾಸಗಳಿದ್ದರೂ ಅವೆಲ್ಲವನ್ನೂ ಕಬಳಿಸಿಕೊಂಡು ಮೇಲ್ಪದರಕ್ಕೆ ಶಾಂತವಾಗಿ ಕಾಣುವ ಈ ಜೀವನ ಪ್ರವಾಹ ಹಿಂದೂಜೀವನದರ್ಶನಕ್ಕಿಂತ ಭಿನ್ನವಾದುದಲ್ಲ. ಎಷ್ಟೇ ಆಕರ್ಷಕವಾಗಿ ಮತ್ತು ಹಿತಕರವಾಗಿ ಆ ಜೀವನಸಿದ್ಧಾಂತವು ನಾಯಕನ ಮುಂದಿದ್ದರೂ ಅದನ್ನಾತ ಕೂಡಲೇ ಒಪ್ಪಿಕೊಳ್ಳುವುದಿಲ್ಲ. ಯಾಕೆಂದರೆ ಮೇಲುನೋಟಕ್ಕೆ ತುಂಬಾ ಸೊಂಪಾಗಿರುವ, ಶಾಂತಿಯು ನೆಲೆಯಾಗಿರುವ ಆ ತೋಟದ ಮೂಲೆಯೊಂದರಲ್ಲಿ ಮಾವಿನ ಮರವೊಂದು ಹುಟ್ಟಿಕೊಂಡಿರುವುದು ನಾಯಕನ ಹದ್ದಿನ ಕಣ್ಣಿನಿಂದ ತಪ್ಪಿಸಿಕೊಳ್ಳುವುದಿಲ್ಲ.

ಅಲೌಕಿಕ ಆಸಕ್ತಿಯನ್ನು ಹೆಚ್ಚಾಗಿ ಬೆಳೆಸಿಕೊಂಡಿರುವ, ಧಾರ್ಮಿಕ ಆಚರಣೆಗಳ ಗೊಂದಲದಲ್ಲಿ ಸಾರ್ಥಕತೆಯನ್ನು ಕಾಣುವ ಬದುಕೂ ಪೂರ್ತಿಯಾಗಿ ಅಲಿಪ್ತವಾದುದಲ್ಲವೆಂದೂ ನಾಯಕ ಗ್ರಹಿಸುತ್ತಾನೆ. ಹತ್ತಿಕ್ಕಿದ ಆಕರ್ಷಣೆಗಳು ಸದಾ ಜೀವಂತವಾಗಿ ಜೀವನದ ಮೂಲೆಯೊಂದರಲ್ಲಿ ಸುಪ್ತವಾಗಿರುವುದು ಆತನ ಅರಿವಿಗೆ ಬರುತ್ತದೆ.

ಮಾವಿನಮರದ ಬುಡದಲ್ಲಿರುವಪುತ್ತ, ಪಾರಮಾರ್ಥಿಕ ಜೀವನವನ್ನೂ ಏಳು ಹೆಡೆಯ ಹಾವು, ಮೂಲಭೂತ ಪ್ರವೃತ್ತಿಗಳನ್ನೂ ಸಂಕೇತಿಸುತ್ತ ಇವೆರಡೂ ಒಂದೇ ಪರಿಸರದಲ್ಲಿ ಎಳೆದಾಡುವುದಕ್ಕೆ ಇರುವ ಸಾಧ್ಯತೆಯನ್ನು ಎತ್ತಿತೋರಿಸುತ್ತವೆ. 'ತುಡುಂಗುದನ'ದ ಮೊದಲ ಜೀವನಕ್ಕೂ 'ಆಲದ ಹಾಲು ಸುರಿಸುವ ಸಂಕೀರ್ಣರಹಿತ' ಜೀವನಕ್ಕೂ ಇರುವ ವ್ಯತ್ಯಾಸ ಇಷ್ಟೆ : ಒಂದರ ಬೆಂಬಲಕ್ಕೆ ಸಾಂಸ್ಕೃತಿಕ ಹಿನ್ನೆಲೆಯಿಲ್ಲ. ಇನ್ನೊಂದ ರಲ್ಲಿ ಇದೆ.

ನಾಯಕ, ಈ ಸಂಕೀರ್ಣರಹಿತ ಜೀವನದೆಡೆಗೆ ತನ್ನ ಒಲವನ್ನು ತೋರಿಸುತ್ತ ಹೋಗುವುದನ್ನು ಕವನದ ಮುಂದಿನ ಭಾಗದಲ್ಲಿ ನಾವು ಗುರುತಿಸಬಹುದು. ತೋಪಿನ ಮೂಲೆಯಲ್ಲಿ ಬೆಳೆದ ಮಾವಿನಮರ ಹೆಮ್ಮರವಾಗುತ್ತದೆ. ಭೋಗಾಸಕ್ತವಾದ ಮನಸ್ಸು ಅದರ ರೆಂಬೆರೆಂಬೆಗಳಲ್ಲಿ ಕುಳಿತು ' ಕುಹೂ ' ನಾದವನ್ನು ಹೊರಡಿಸುತ್ತದೆ. ಬಿಡು ವಿಲ್ಲದೆ 'ಗಿರಣಿ ಕರೆಯೋ ಹಾಂಗ' ನಾಯಕನನ್ನು ಅಲ್ಲಿಗೆ ಆಹ್ವಾನಿಸುತ್ತದೆ. ಅದು ಸುಖೀ ಜೀವನದ ಸುಗ್ಗಿಯ ಕಾಲ. ತುಂಬಿಯಂತೆ ಝೇಂಕರಿಸುವ ನಾಯಕನ ಮನ ಸ್ಸನ್ನು ಯಾವುದೋ ಆಕರ್ಷಣೆಯೊಂದು ಆ ಕಡೆಗೆ ಜಗ್ಗಿ ಎಳೆಯುತ್ತದೆ. ನಿರಂತರ ವಾಗಿರುವ ಈ ಸೆಳೆತಕ್ಕೆ ಸಿಕ್ಕಿ ತನ್ನ ಕಾಮನೆಗಳನ್ನು ಪೂರೈಸಿಕೊಳ್ಳುತ್ತ ಅದಕ್ಕೆ ಧಾರ್ಮಿಕ ಹಿನ್ನೆಲೆಯನ್ನು ಒದಗಿಸಿ ತನ್ನನ್ನು ತಾನು ಸಮರ್ಥಿಸಿಕೊಳ್ಳಬಹುದು ಎಂದಾಲೋಚಿ ಸುತ್ತಾನೆ ನಾಯಕ. ಇನ್ನೇನು ಆತ ಕೋಗಿಲೆಯ ಕೂಗಿಗೆ ಓಗೊಟ್ಟು ಸುಗ್ಗಿಗೆ ಶರಣಾಗು ತ್ತಾನೆ– ಎನ್ನುವ ಹಂತದಲ್ಲಿ ಜೋಗಿಯ ಆಗಮನ, ಕವನಕ್ಕೆ ಹಾಗೂ ನಾಯಕನ ಮಾನಸಿಕಸ್ಥಿತಿಗೆ ನಾಟಕೀಯ ತಿರುವೊಂದನ್ನು ಒದಗಿಸುತ್ತದೆ. ಇಲ್ಲಿ 'ಜೋಗಿ'ಯ ಪ್ರವೇಶ ಆಕಸ್ಮಿಕವೆಂಬಂತೆ ಕಂಡುಬಂದರೂ ಮುಂದೆ ನಾಯಕ ಆತನನ್ನು 'ಗುರು ವಾಗಿ ಒಪ್ಪಿಕೊಳ್ಳುವುದು, ಮಾರ್ಗದರ್ಶನಕ್ಕಾಗಿ ಬೇಡಿಕೊಳ್ಳುವದು ಇವೆಲ್ಲವನ್ನುಗಮನಿಸಿ ದಾಗ ಜೋಗಿ ಮೊದಲೇ ನಾಯಕನ ಮನಸ್ಸಿನ ಆಳದಲ್ಲಿದ್ದವನಂತೆ ಆದರೆ ಆತನ ತೀವ್ರ ಹಾಗೂ ವಿರುದ್ಧ ಆಸಕ್ತಿ ಹಂಬಲಗಳ ನಡುವೆ ಮೌನಿಯಾಗಿದ್ದವನಂತೆ ಕಾಣುತ್ತಾನೆ. ಹಾಗಿದ್ದರೆ ಜೋಗಿಯ ಸಲಹೆಯನ್ನು ಪಡೆಯುವುದಕ್ಕೆ ನಾಯಕನನ್ನು ಪ್ರೇರೇಪಿಸು ವುದು ಯಾವುದು ? ಅವಸರದ ತೀರ್ಮಾನ ಒಳ್ಳೆಯದನ್ನು ತರುವುದಿಲ್ಲ ಅಂತ ನಾಯಕನಿಗೆ ಈಗಾಗಲೇ ತಿಳಿದುಹೋಗಿದೆ. ಜೀವನದ ಎರಡು ಸೆಳೆತಗಳಲ್ಲೂ ಆತ ಕಂಡದ್ದು ಸೋಲು ಮತ್ತು ಅಸಾಂಗತ್ಯ ಮಾತ್ರ. ಜೀವನಾನುಭವಕ್ಕಿಂತ ಯೋಗ್ಯ ಪಾಠ ಬೇರೆಯಿಲ್ಲ. ಅಂತಹ ಪ್ರಬುದ್ಧಾವಸ್ಥೆಯಲ್ಲಿ ನಾಯಕನ ಸಾಕ್ಷಿ ಕೆಲಸ ಮಾಡು ತ್ತದೆ. ಆದ್ದರಿಂದ ಇಲ್ಲಿ ಕಾಣಿಸಿಕೊಳ್ಳುವ ಜೋಗಿ, ನಾಯಕನ ಅರಿವಿನ ಮಟ್ಟ ಹಾಗೂ ತಾರತಮ್ಯ ಜ್ಞಾನವಿರುವ ಆತನ ಮನಸ್ಸಾಕ್ಷಿ ಎನ್ನುವುದರಲ್ಲಿ ಸಂಶಯವಿಲ್ಲ.

ಅಲೌಕಿಕವೇ ಆವರಿಸಿಕೊಂಡಿರುವ ಕ್ಷೇತ್ರದಲ್ಲೂ ಲೌಕಿಕ ಅಭೀಪ್ಸೆಗಳು ಕೂಗಿ ಕರೆಯುತ್ತಿವೆ. ಒಮ್ಮೆ ಆರಂಭವಾದ ಕೋಗಿಲೆಯ ಕೂಗಿಗೆ ಬದುಕಿನ ಎಲ್ಲ ವಲಯ

ಗಳಲ್ಲೂ ಪ್ರತಿಧ್ವನಿ ಉಂಟಾಗುತ್ತದೆ ಎಂದಾಗ ಅಲ್ಲೇನೋ ಅರ್ಥವಂತಿಕೆಯಿದೆ ಎಂದು ನಾಯಕ ಭಾವಿಸುತ್ತಾನೆ. ಅಷ್ಟು ಶಾಂತವಾಗಿರುವ ಧಾರ್ಮಿಕ ಪರಿಸರದ ಜೀವನದಲ್ಲಿ ಕೋಗಿಲೆಯ ಕೂಗು ದೊಡ್ಡದಾಗುತ್ತ ಹೋದಾಗ ಅದರ ಅಸ್ತಿತ್ವವನ್ನು ಅಲ್ಲಗಳೆಯು ವುದಕ್ಕೆ ಆಗುವುದಿಲ್ಲ. ಅಲ್ಲದೆ ಆ ಕೂಗು ಬದುಕಿನ ಮುಂಜಾವದಿಂದಲೇ ಆರಂಭ ವಾದದ್ದು. ಅದನ್ನು ದಮನಿಸುವ, ನಿರ್ಲಕ್ಷಿಸುವ ಹೋರಾಟದಲ್ಲಿ ಸಂಪೂರ್ಣ ಶಕ್ತಿ ತ್ರಾಸವಾಗಿ ಬಿಡುತ್ತದೆ; ಮಾತ್ರವಲ್ಲ ಆ ಕೂಗಿಗೆ ಓಗೊಡಬೇಕೇ ಬೇಡವೇ ಎಂಬ ದ್ವಂದ್ವದಲ್ಲಿ ಜೀವನದ ಮಹತ್ವದ ಗಳಿಗೆಗಳು ನಷ್ಟವಾಗುತ್ತದೆ. ಆದುದರಿಂದ ಕೋಗಿ ಲೆಯ ಸ್ವರೂಪವನ್ನು ಪೂರ್ತಿಯಾಗಿ ನಿರಾಕರಿಸುವುದಕ್ಕಿಂತ ಪರೀಕ್ಷೆಗೆ ತೀರ್ಮಾನಿಸು ವುದೇ ಒಳ್ಳೆಯದೆಂದು "ಯಾವ ಬಣ್ಣ ಅದಕಾವ ಕಣ್ಣು ನಾನೋಡಲೇನು ಹೋಗಿ" ಎಂದು ನಾಯಕ ಜೋಗಿಯನ್ನು ಪ್ರಶ್ನಿಸುತ್ತಾನೆ. ಜೋಗಿಯೇ ಒಮ್ಮೆ ಸೂಚನೆ ಕೊಟ್ಟ ಪಾರಲೌಕಿಕವನ್ನು ನಾಯಕ ಚಿಂತಿಸುತ್ತಿದ್ದಾಗ ಮತ್ತು ಇನ್ನೇನು ಅದನ್ನು ಒಪ್ಪಿಕೊಳ್ಳು ವುದರಲ್ಲಿದ್ದಾಗ ಕೋಗಿಲೆಯ ಕೂಗು ದೊಡ್ಡದಾಗುತ್ತ ಬಂದಿತ್ತು. ನಾಯಕ ಮತ್ತಷ್ಟು ದಿಗ್ಭ್ರಾಂತನಾಗಿದ್ದ ಮತ್ತೆ ಅದೇ ತೋಪಿನ ಮೂಲೆಯಿಂದ ಹುಟ್ಟಿದ ಸುಗ್ಗಿಯ ಭ್ರಮೆಯಲ್ಲಿ ಕಣ್ಣು ಕೋರೈಸಿದಾಗ ಆಗಮಿಸಿದ ಜೋಗಿಯನ್ನು ನಾಯಕ ಸಂಭ್ರಮ ದಿಂದ ಸ್ವಾಗತಿಸುತ್ತಾನೆ. ತಾನು "ಗುಡಿಗೆ ಹೊರಟಾಗ" "ಕುಹುಕ್ಕುಹೂ" ಕರೆಯುವ ಕೋಗಿಲೆಯ ಬಗ್ಗೆ ದೂರುತ್ತಾನೆ. ಅಧ್ಯಾತ್ಮದ ಗುಂಗಿನಲ್ಲಿರುವಾಗ ತನ್ನ ಮನಸ್ಸಿನಲ್ಲಿ ನಡೆಯುವ "ಓಂ ಕುಹೂ" ದ್ವಂದ್ವದ ಕುರಿತು ನಿವೇದಿಸುತ್ತಾನೆ. ಇಲ್ಲಿ ಆತ ಜೋಗಿ ಯನ್ನು ಸ್ವಾಗತಿಸುವುದು 'ಸುಗ್ಗಿ'ಯನ್ನು ತನ್ನ ಮನಸ್ಸಿನಿಂದ ಹೊರತಳ್ಳುವುದಕ್ಕಲ್ಲ; ಬದಲಾಗಿ ಅದರ ಉತ್ಕಟ ಪ್ರಭಾವವನ್ನು ಹಿಡಿತದಲ್ಲಿಟ್ಟುಕೊಳ್ಳುವುದಕ್ಕೆ. ಯಾಕೆಂದರೆ ತಾನೆಷ್ಟು ಜಾಗ್ರತನಾಗಿದ್ದರೂ "ಕನಸಿನೊಳಗಣ ಸ್ವರ ಕೇಳಿ ಮಾಮರಾ ಆಗತೇನೋ" ಎನ್ನುವ ಅವ್ಯಕ್ತ ಭಯ ಆತನನ್ನು ಆವರಿಸಿತ್ತು.

ಕೊನೆಯ ಪದ್ಯದಲ್ಲಿ ಮರ, ಕೋಗಿಲೆ ಮತ್ತದರ ಕೂಗು ಇವುಗಳಲ್ಲಿ ನಾಯಕ ನಿಗೆ ಅಷ್ಟೇನೂ ಆಸಕ್ತಿ ಉಳಿದಿಲ್ಲ ಎನ್ನುವುದು ವೇದ್ಯವಾಗುತ್ತದೆ. "ಯಾಕ ಹೀಂಗ ಅಸರಂತ ಕೂಗತದ ಏನು ಇದಕೆ ಬ್ಯಾನ್ಯೋ" ಎಂದು ನಾಯಕ ಅದರಿಂದ ತನಗಾದ ಕಿರುಕುಳವನ್ನು ನೆನೆಯುತ್ತಾನೆ. ಆದರೆ ಆ ಕೂಗಿಗೆ ಕಿವಿಕೊಡದೆ ಇರುವುದು ಸಾಧ್ಯ ವಿಲ್ಲ. ಆದ್ದರಿಂದ ಒಂದು ಪ್ರಯೋಜನವಾಗಿರುವುದಂತೂ ಸತ್ಯ. ಅದರ ನಿರಂತರ ಕೂಗುವಿಕೆಯಿಂದ ನಾಯಕನನ್ನಾವರಿಸಿದ "ಸುತ್ತ ಗುಡ್ಡ ನುಗ್ಗಾಗಿ ಹೋದವು" ಪರಿ ಸ್ಥಿತಿ ಈಗ ಹದವಾಗಿದೆ. "ಬಿಸಿಲು ಕುಣಿದು ಬೆವತದ ಈಗ ಬಂದದ ಮಳಿಯು ಹದಕ" ಎಂದು ನಾಯಕ ಸಮಾಧಾನದ ನಿಟ್ಟುಸಿರನ್ನು ಚೆಲ್ಲುತ್ತಾನೆ. ಆದರೆ ಈ ಸಮತೋಲನವುಂಟಾದದ್ದು ನಿವೃತ್ತಿಯಿಂದಲ್ಲ. ಪ್ರವೃತ್ತಿಯಿಂದ ಎನ್ನುವುದು ಗಮ ನಾರ್ಹ ಅಂಶ. ಐಹಿಕದ ಕಡುಬಿಸಿಲು ಕುಣಿದು ಬೆವೆತಾಗ ಮಾತ್ರ ಪಾರಮಾರ್ಥಿಕ

'ಮಳೆ' ಸುರಿಯಬೇಕು, ಅಲೌಕಿಕ 'ಮಳೆ' ಸ್ವಾಗತಾರ್ಹವಲ್ಲ. ಕಾರಣ ಅದು ಒಳಿತಿಗಿಂತ ಕೆಡುಕನ್ನೇ ಮಾಡುವುದು ಹೆಚ್ಚು ಎಂದು ನಾಯಕನು ನಿರ್ಧರಿಸುತ್ತಾನೆ.

ಜೀವನದ ಗುರಿ ಮೋಕ್ಷವೆನ್ನುವುದು ಸನಾತನ ಸಂಸ್ಕೃತಿಯ ನಿಲುವು. ಐಹಿಕ ಜೀವನ ನಶ್ವರ, ಪಾರಮಾರ್ಥಿಕವೇ ಸತ್ಯ ಎನ್ನುವುದು ಅದರ ತೀರ್ಮಾನ. ಕವಿ ಅದೇ ಸಂಪ್ರದಾಯದಲ್ಲಿ ಬೆಳೆದವನಾದರೂ ಅದನ್ನು ಇದ್ದಕ್ಕಿದ್ದಂತೇ ಸ್ವೀಕರಿಸುವುದಕ್ಕೆ ತಯಾರಿಲ್ಲ. ಜೀವನದ ಹೊರಗೇನಿದೆ ಎಂದು ಅನ್ವೇಷಿಸುವುದು ವ್ಯರ್ಥ. ಅದರ ಚೌಕಟ್ಟಿನೊಳಗೆ ಮನುಷ್ಯ ತನ್ನ ಬದುಕಿನ ಸಾರ್ಥಕತೆಯನ್ನು ಕಂಡುಕೊಳ್ಳಬೇಕು. ಜೀವನದ 'ಮೂರು ಬಟ್ಟೆ' ಮುಗಿದಾಗ ಉಳಿಯುವುದು ಅಸ್ಪಷ್ಟ, ರಹಸ್ಯ, ಭಯಾನಕತೆ. ಮೋಕ್ಷಕ್ಕಾಗಿಯೇ ಒಂದು ವಿಶೇಷಸ್ತರದ ಕಲ್ಪನೆ ಅಸಂಗತವಾದದ್ದು. ಏನಿದ್ದರೂ 'ಮೂರು ಬಟ್ಟೆ' ಮುಗಿಯುವ ಮೊದಲು ಆ ಕುರಿತ ಚಿಂತನೆ ಅವಶ್ಯ. ಅಲ್ಲದೆ ಅಕಾಲಿಕವಾಗಿ ಕೃತಕ ಪರಿಸರವೊಂದನ್ನು ಸೃಷ್ಟಿಸಿಕೊಂಡು ಹಠಾತ್ತನೆ ಜಿಗಿದು ಬಿಡುವುದು ಅನರ್ಥಕಾರಿ. ಕಾರಣ ವಾಸ್ತವಪರಿಸರದಿಂದ ಅಪರಿಚಿತವಾದುದಕ್ಕೆ ಪೂರ್ವಾನುಭವವಿಲ್ಲದೆ ಹೋದಾಗ ಕಕ್ಕಾಬಿಕ್ಕಿಯಾಗುವುದು ಅನಿವಾರ್ಯ. ಯಾವುದೇ ಪಕ್ವಸ್ಥಿತಿ ತಲುಪುವುದಕ್ಕೆ ಸಹಜ ವಿಕಾಸ ಅಗತ್ಯ, ನಿಜ; ಆದರೆ ಐಹಿಕಜೀವನಕ್ಕೆ ಸಂಬಂಧಿಸಿದಂತೆ ಆ ಪಕ್ವಾವಸ್ಥೆ ಒಂದು ನಿಶ್ಚಿತಸ್ತರದಲ್ಲಿಲ್ಲ. ಅಥವಾ ಜೀವನದ ಆಚೆಗಿಲ್ಲ. ಅದು ಜೀವನದುದ್ದಕ್ಕೂ ಸಾಧಿಸಿಕೊಳ್ಳಬೇಕಾದದ್ದು. ಅದಕ್ಕೆ ಅತ್ಯಾಸಕ್ತಿಯೋ, ಸಂಪೂರ್ಣ ನಿರಾಸಕ್ತಿಯೋ ಅವಶ್ಯವಿಲ್ಲ. ಇವೆರಡರ ಸಮನ್ವಯಸಿದ್ಧಾಂತ ಬೇಕು.

ಬೇಂದ್ರೆಯವರು ಯಾವುದೇ 'ಅತಿ'ಯನ್ನು ಒಪ್ಪಿಕೊಳ್ಳುವುದಿಲ್ಲ. ಮಧ್ಯಮ ಮಾರ್ಗ ಅವರ ಹೆಚ್ಚಿನ ಕವಿತೆಗಳ ಕಾಳಜಿ. ಇದು ಯಾವುದೇ ಸಿದ್ಧಾಂತದ ಅಪಾಯಗಳಿಂದ ತಪ್ಪಿಸಿಕೊಳ್ಳುವುದಕ್ಕಲ್ಲ. ಬದಲಾಗಿ ಸಾರ್ಥಕ ಜೀವನವೆಂಬುದು ಪರಸ್ಪರ ವಿರುದ್ಧ ಸೆಳೆತಗಳಿಂದ, ಆಶಯಗಳಿಂದ ಕೂಡಿಕೊಂಡ ಒಂದು ಸಾಂಗತ್ಯ ಎಂಬುದರಿಂದ. ಉದಾಹರಣೆಗೆ 'ನನ್ನ ಹಾಡು' ಎಂಬ ಕವನದಲ್ಲಿ ಬರುವ "ರಸವೇ ಜನನ, ವಿರಸವೇ ಮರಣ, ಸಮರಸವೇ ಜೀವನ" ಎಂಬ ಭಾಗವನ್ನು ನೋಡಬಹುದು. ಕವಿಯ ಒಲವು ಹೆಚ್ಚಾಗಿ ವಾಲಿರುವುದು ಜೀವನದ ಕಡೆಗೇ ಹೊರತು ಅದರ ನಿವೃತ್ತಿಗಲ್ಲ. "ಹಗಲಿರುಳು ತಾಳಕ್ಕೆ ಮುಗಿಯದ ಕಾಲಕ್ಕೆ ಜನುಮಗಳ ಮ್ಯಾಳಕ್ಕೆ ಕುಣಿಯೋಣು ಬಾರ" ಎನ್ನುತ್ತಾರೆ ಕವಿ.

'ಬೆಳಗು' ಮತ್ತು 'ಜೋಗಿ' ಕವನದ ನಾಯಕರನ್ನು ಮತ್ತು ಅದರ ನಿಲುಮೆಗಳನ್ನು ಹೋಲಿಸಿದಾಗ ಅವೆರಡರ ಅಂತರ ಗೊತ್ತಾಗುತ್ತದೆ. 'ಬೆಳಗು' ಕವನದ ನಾಯಕ ಸದಾನಂದಿಯಾದ ಜಂಗಮ. "ಅಮೃತವ ಯಾರಿರಿಸಿರುವರು ಮುಗಿಲ ಮೇಲಿಂದಿಲ್ಲಿಗೆ ತಂದು" ಎಂದು ಪ್ರಶ್ನಿಸುವ ಭಗವದ್ಭಕ್ತನ ಮುಗ್ಧತೆ ಅವನಲ್ಲಿದೆ.

ಪಂಚೇಂದ್ರಿಯಾತೀತ ಅನುಭವ ಅವನದು. 'ಜೋಗಿ'ಯ ನಾಯಕ ತುಡುಗು ದನ ತೊಂಡು ಮೇಯುವ "ಪರಿಸರದಲ್ಲಿ" ಗುಡಿಗೆ ಹೊರಡಲೆಳಸುವ, ಆದರೆ ಆ ಸಂದರ್ಭ ದಲ್ಲೂ "ಮುಂಜಾವದಿಂದ ಇರುಹಂಗು ಬಿಟ್ಟು" "ತಾರ ಪಂಚಮದಾಗ ಕೊಳಲ ನುಡಿಸಿದ್ಹಾಂಗ" "ಗಿರಣಿ ಕರೆಯೊ ಹಾಂಗ" ಕೂಗುವ ಕೋಗಿಲೆಯ ಸ್ವರ ಕೇಳಿ ತಾನೇ "ಮಾಮರ ಆಗತೇನೋ!" ಎಂದು ಭ್ರಮಿಸುವ, ಆದರೆ ಕೊನೆಗೆ ಆ ಅಪಾಯದಿಂದ ತನ್ನನ್ನು ತಾನು ದೂರವಿರಿಸಿಕೊಳ್ಳುವ ಯುವಕ, ನಿಸರ್ಗದ ಆಕರ್ಷಣೆ ಇದ್ದರೂ ಅದನ್ನು ಆಧ್ಯಾತ್ಮಿಕ ಸೆಳೆತದ ಬಲದಿಂದ ಸಮತೋಲನಗೊಳಿಸುವ ವ್ಯಕ್ತಿ.

'ಬೆಳಗು' ಕವನದ ನಾಯಕನಿಗೆ ಪ್ರಕೃತಿಯ ಲೌಕಿಕ ಸೌಂದರ್ಯದೊಂದಿಗೆ ಬೆಸೆದು ಕೊಂಡಿರುವ ಆಧ್ಯಾತ್ಮದ ಸೊಗಸಿಗೆ ಬೆರಗಾಗುವ ಅಚ್ಚರಿಯ ಮನಸ್ಥಿತಿ ಹಾಗೂ ಮೆಚ್ಚುಗೆಯ ನಿಲುವುಗಳಿವೆ. ಇವಕ್ಕೆ ಸ್ವೀಕೃತ ಸಿದ್ಧಾಂತಗಳ, ಪ್ರಕೃತಿಯ ನಿಗೂಢ ಚೈತನ್ಯದ ಆಸರೆಯಿದೆ. ವೈರಾಗ್ಯದ ಈ ದೃಷ್ಟಿಕೋನ ಯಾವುದೇ ತಿಕ್ಕಾಟ ಗಳಿಂದ ಜನಿಸಿದ ತತ್ವದರ್ಶನವಲ್ಲ. ಆದುದರಿಂದ ಈ ಪಾರಮಾರ್ಥಿಕ ಒಲವು ಏಮ್ಮುಖವಾದದ್ದು. 'ಜೋಗಿ'ಯ ನಾಯಕ ಈತನಿಗಿಂತ ತೀರ ಭಿನ್ನ. ಅವನಿಗೆ ಜೀವನದ ಎರಡು ಪಾರ್ಶ್ವಗಳಲ್ಲಿ ಕಂಡುಬರುವ ಲೋಲುಪತೆಯನ್ನು ಕಂಡು ಬೇಸತ್ತು, ತನ್ನ ತಾರತಮ್ಯ ಜ್ಞಾನವನ್ನು ಸಾಕ್ಷಿಯ ಸಹಾಯದಿಂದ ಅವೆರಡರ ಒಳಿತು–ಕೆಡಕು ಗಳನ್ನು ತೂಗಿನೋಡಿ, ಕೊನೆಗೆ ಅವುಗಳ ನಿಶ್ಚಿತ ಕೂಡುವಿಕೆಯ ನಿಷ್ಪತ್ತಿಯಲ್ಲೇ ಜೀವನದ ಸಾರ್ಥಕತೆಯಿದೆ ಎಂದೊಪ್ಪಿಕೊಳ್ಳುವ ವಿಮರ್ಶಕ ಪ್ರಜ್ಞೆ ಹಾಗೂ ಅನ್ವೇ ಷಕನ ನಿಲುಮೆಗಳಿವೆ. ಹೀಗೆ ಕವನಗಳ ನಾಯಕ ಹಾಗೂ ಅವರ ಕ್ರಿಯೆಗಳು ವಿಭಿನ್ನ ವಾದರೂ ಮೊದಲು ಹೇಳಿದ ಕೆಲವು ಸಮಾನವಾದ, ಪರಸ್ಪರ ಪೂರಕವಾದ ಅಂಶಗಳು ಇಲ್ಲದಿಲ್ಲ.

■ ■

ಬುದ್ಧಿವಂತರು ಹಳ್ಳಕ್ಕೆ ಬಿದ್ದರೆಂದರೆ

ವಿ. ಮಾ. ಜಗದೀಶ್

ಬುದ್ಧಿವಂತರು
ಹಳ್ಳಕ್ಕೆ ಬಿದ್ದರೆಂದರೆ........
ನೋಡಿದವರು–
ನಗುವುದಕ್ಕೆ ಮೊದಲು ತಾವೇ
ನಕ್ಕು ಬಿಡುತ್ತಾರೆ.

ನಂತರ–
ತಮ್ಮ ಮೂಗ ಮೇಲೆ ಮಾಡಿಕೊಂಡು
ಕೇಳಿದವರು ಕೋಲೇ ಬಸವರಾಗುವಂತೆ
ವ್ಯಾಖ್ಯಾನಿಸುತ್ತಾರೆ.

ಮಾರನೆಯದಿನ–
ಅದು ಪೇಪರಿನಲ್ಲಿ ಬರುತ್ತದೆ.

ಆ ವರ್ಷ–
ಉತ್ತಮಕೃತಿ ಎಂದು ಅದಕ್ಕೆ ಪ್ರಶಸ್ತಿ ಬಂದಿರುತ್ತದೆ.

ಅಜಿತಸೇನ ಪರಿಚಯ

ಬಿ. ಆರ್. ಹಿರೇಮಠ

ಕರ್ನಾಟಕ, ಜೈನಮುನಿಗಳ ವೈಭವಯುತವಾದ ಪರಂಪರೆಯನ್ನು ಹೊಂದಿದೆ. ಅನೇಕ ಕಾವ್ಯ-ಶಾಸನಗಳು ಅವರ ತಪಃಶಕ್ತಿ ಹಾಗೂ ವಿದ್ವತ್‌ಶಕ್ತಿಗಳಿಗೆ ಸಾಕ್ಷಿಯಾಗಿ ನಿಂತಿವೆ. ಆತ್ಮಶ್ರೀಯ ಜೊತೆಯಲ್ಲಿ ಸಾಹಿತ್ಯಶ್ರೀಯನ್ನು ಮೇಳವಿಸಿಕೊಂಡು ಬಂದ ಈ ಮುನಿ ಶ್ರೇಷ್ಠರಲ್ಲಿ ಜಿನಸೇನ, ಗುಣಭದ್ರ, ಪೂಜ್ಯಪಾದ, ತುಂಬಲೂರಾಚಾರ್ಯ, ಕುಂದಕುಂದಾಚಾರ್ಯ, ಅಜಿತಸೇನ ಮೊದಲಾದವರು ಪ್ರಮುಖರು.

ಅಜಿತಸೇನ ಹೆಸರಿನ ಜೈನಮುನಿಗಳ ಉಲ್ಲೇಖ ಅನೇಕಸಲ ಬರುತ್ತದೆ ಅವರಲ್ಲಿ ರನ್ನ, ಚಾವುಂಡರಾಯರ ಗುರು ಅಜಿತಸೇನ ಒಬ್ಬ. ಅಂದಿನ ಸಮಾಜ ಹಾಗೂ ರಾಜಕೀಯದಲ್ಲಿ ಪರಮಪೂಜ್ಯನಾದ ಮುನಿಪುಂಗವನೀತ. ಆದರೆ ವಿಜಯನಗರ ಸಾಮ್ರಾಜ್ಯದ ರಾಮರಾಯನ (ಕ್ರಿ. ಶ. ೧೫೪೨-೬೫) ಆಳಿಕೆಯಲ್ಲಿದ್ದ, ಮುನಿಭದ್ರ-ಯೋಗೀಶ್ವರನ ಶಿಷ್ಯನಾದ ಅಜಿತಸೇನನ ಪರಿಚಯ ಈ ಲೇಖನದ ಉದ್ದೇಶ.

ರಾಮರಾಯನ ಆಸ್ಥಾನದಲ್ಲಿ ಪರವಾದಿಗಳನ್ನು ಜಯಿಸಿ, ಜೈನಧರ್ಮದ ಶ್ರೇಷ್ಠತೆಯನ್ನು ಘೋಷಿಸಿದ ಶ್ರೇಯಸ್ಸು ಈತನದು. ಇವನು 'ಪರೀಕ್ಷಾಮುಖದ ಪಂಚಿಕೆ'ಗೆ ಬರೆದ 'ನ್ಯಾಯಮಣಿದೀಪಿಕೆ ಟೀಕೆ' ಕೃತಿ, ವಿಜಯನಗರಿಯಲ್ಲಿ ವಿಜಯ ದುಂದುಭಿಯೊಂದಿಗೆ ಆನೆಯ ಮೇಲೆ ಮೆರೆಯಿಸಲ್ಪಟ್ಟಿತು ಎಂಬ ಘಟನೆ ಅಜಿತಸೇನನಿಗೆ ಅರಮನೆಯಲ್ಲಿ ಸಂದ ಗೌರವವನ್ನು ನೆನಪಿಗೆ ತರುತ್ತದೆ. ಜೊತೆಯಲ್ಲಿ 'ಚಿಂತಾಮಣಿ ಕೃತಿಗೆ' ಟೀಕೆ ರಚಿಸಿದ ವಿಷಯ ಗೊತ್ತಾಗುತ್ತದೆ.

ಭಾವಿಸಲು ಶಕವರ್ಷ ಸಾವಿರದ ನಾನೂರ
ತೀವಿದೆಂಬತ್ತನಾಲ್ಕನೆಯ ದುಂದುಭಿ ವರ್ಷ
ದೋವಿದಾಷಾಢಮಾಸದ ಶುದ್ಧ ಸಪ್ತಮಿಯು ಭಾವಿ ಮಂಗಳವಾರದಾ
ಆ ಉತ್ತರೆಯ ವರ್ಯಯೋಗ ಭದ್ರಾಕರಣ
ದಾವಿದದ ರಾತ್ರೆಯಲಿ ಧರೆ ವಂಚಿಸಿ ತತ್ವ
ಭಾವದೇಹಗೂಡಿ ಸುರಲೋಕಕ್ಕೆ [.........] ಅರಸಾದೆಯಾ

---

* ಈ ಲೇಖನದ ಮೂರ್ತಸ್ವರೂಪಕ್ಕೆ ಪ್ರೇರಕಶಕ್ತಿಯನ್ನು ನೀಡಿದ ಡಾ. ಎಂ.ಎಂ. ಕಲಬುರ್ಗಿ ಅವರಿಗೆ ಕೃತಜ್ಞತೆಗಳು

ಎಂದು ಹೇಳಿದ ಮರಣಮಿತಿ ಕ್ರಿ. ಶ. ೧೫೬೨, ಜೂನ ೯, ಮಂಗಳವಾರಕ್ಕೆ ಸಮಾನವಾಗುತ್ತದೆ. ಅಜಿತಸೇನನ ಮರಣದ ಅಲ್ಪಕಾಲದಲ್ಲಿಯೇ ರಚಿತವಾಗಿರಬಹುದಾದ ಈ ಹಾಡು, ಅಂದಿನ ಜೈನಸಮಾಜ ಅವನಲ್ಲಿಟ್ಟಿರುವ ಭಕ್ತಿ-ಗೌರವಗಳನ್ನು ತಿಳಿಸುವಂತಿದೆ. ಹೀಗೆ ಇಲ್ಲಿಯವರೆಗೆ ಅನಾಮಧೇಯವಾಗಿ ಉಳಿದಿದ್ದ, ರಾಜಪೂಜಿತ-ಲೋಕಪೂಜಿತನಾದ ಅಜಿತಸೇನ ಹಾಗೂ ಅವನು ರಚಿಸಿದ ಕೃತಿಗಳ ವಿಷಯ ಇಂದು ಗುರುತಿಸಲ್ಪಟ್ಟಿತು. ಆದರೆ ಆ ಕೃತಿಗಳನ್ನು ಕಾಲಗರ್ಭದಿಂದ ಹೊರತೆಗೆಯುವ ಕಾರ್ಯ ನಡೆಯಬೇಕಾಗಿದೆ.

ಒಟ್ಟಿನಲ್ಲಿ ಅಜಿತಸೇನನ ಗುರು ಮುನಿಭದ್ರಯೋಗೀಶ್ವರ. ಆಶ್ರಿತ ಅರಸು ವಿಜಯನಗರ ಸಾಮ್ರಾಜ್ಯದ ರಾಮರಾಯ. ರಚಿಸಿದ ಕೃತಿಗಳು ಪರೀಕ್ಷಾಮುಖದ ಪಂಚಿಕೆಗೆ ಬರೆದ 'ನ್ಯಾಯಮಣಿದೀಪಿಕೆ ಟೀಕೆ,' ಚಿಂತಾಮಣಿ ಕೃತಿಗೆಬರೆದ ಟೀಕೆ; ಮರಣಮಿತಿ ಕ್ರಿ.ಶ. ೧೫೬೨, ಜೂನ ೯, ಮಂಗಳವಾರ ಎಂಬ ವಿಷಯಗಳು ಸ್ಪಷ್ಟವಾಗುತ್ತವೆ.

ಇಲ್ಲಿಯವರೆಗೆ ಕನ್ನಡದಲ್ಲಿ ಜೈನವ್ಯಾಖ್ಯಾನಸಾಹಿತ್ಯ ಕುರಿತು ಅಧ್ಯಯನ ನಡೆಯದಿರುವುದು ಆ ಕ್ಷೇತ್ರದ ಬಹುದೊಡ್ಡ ಕೊರತೆಯನ್ನು ಸೂಚಿಸುತ್ತದೆ. ಕರ್ನಾಟಕದ ಒಳ-ಹೊರಗಿನ ಜೈನಗ್ರಂಥಭಾಂಡಾರಗಳಲ್ಲಿ ಈ ವ್ಯಾಖ್ಯಾನಸಾಹಿತ್ಯಸಂಪತ್ತು ಕಣ್ಣಿಕುಕ್ಕಿಸುವಷ್ಟಿದೆ. ಈ ದಿಶೆಯಲ್ಲಿ ನೂರಾರು ಕೈಗಳು ಕಾರ್ಯಮಾಡಿದರೂ ಕಡಿಮೆಯೆಂದೇ ಹೇಳಬೇಕಾಗುತ್ತದೆ. ಜೈನವ್ಯಾಖ್ಯಾನಸಾಹಿತ್ಯದ ಅಧ್ಯಯನ ಪ್ರಾರಂಭಗೊಂಡರೆ ಅನೇಕ ಹೊಸಹೊಸ ವ್ಯಾಖ್ಯಾನಕಾರರು-ವ್ಯಾಖ್ಯಾನಕೃತಿಗಳು ಪ್ರಕಾಶಕ್ಕೆ ಬಂದು, ಕನ್ನಡ ಸಾಹಿತ್ಯಸಂಪತ್ತನ್ನು ಹೆಚ್ಚಿಸಲು ಜೈನವ್ಯಾಖ್ಯಾನಕಾರರು ನೀಡಿದ ಕೊಡುಗೆ ಏನೆಂಬುದರ ಮನವರಿಕೆಯಾಗುತ್ತದೆ.

ಕನ್ನಡದಲ್ಲಿ ಜೈನಕವಿಗಳು ಗೀತಸಾಹಿತ್ಯವನ್ನೂ ತಕ್ಕಪ್ರಮಾಣದಲ್ಲಿ ಬೆಳೆಸಿಕೊಂಡು ಬಂದಿದ್ದಾರೆ. ಅಣ್ಣನಹಾಡುಗಳೆಂದು ಪ್ರಸಿದ್ಧವಾಗಿರುವ ರತ್ನಾಕರನ ಹಾಡು ಮೊದಲಾದುವು ಇದಕ್ಕೆ ನಿದರ್ಶನ. ಈ ಸಾಲಿನಲ್ಲಿ ಮುನಿಭದ್ರಯೋಗೀಶ್ವರನ ಶಿಷ್ಯ ಅಜಿತಸೇನನ ಜೀವನ- ವ್ಯಕ್ತಿತ್ವಗಳ ಸ್ವರೂಪವನ್ನು ತಿಳಿಸುವ ೧ ಸಾಂಗತ್ಯ ಹಾಗೂ ೯ ವಾರ್ಧಕ ಷಟ್ಪದಿಗಳುಳ್ಳ ಈ ಹಾಡು ನಿಲ್ಲುತ್ತದೆ.

ಹಿರಿದಾದ ಪರಂಪರೆಯುಳ್ಳ ಕೊಲ್ಲಾಪುರದ ಶ್ರೀ ಲಕ್ಷ್ಮೀಸೇನ ಭಟ್ಟಾರಕ ಜೈನಮಠದ ಹಸ್ತಪ್ರತಿಭಾಂಡಾರದಲ್ಲಿರುವ ೩೩ನೆಯ ಕ್ರಮಾಂಕದ ತಾಳೆಗರಿ ಕಟ್ಟಿನಲ್ಲಿಯ ಕೊನೆಯ ೧ ಬಿಡಿಗರಿಯಲ್ಲಿ ಅಜಿತಸೇನನಿಗೆ ಸಂಬಂಧಿಸಿದ ಹಾಡು ಹೀಗಿದೆ :

ಗುರುವೆ ಸುಜ್ಞಾನ ಸಾಗರವೆ ಪರಮ ಕರುಣದಾ
ಗರವೆ ಗುಣಮಂದಿರವೆ
ಧರೆಯ ನೋಯಿಸಿ ಅಜಿತಸೇನಮುನಿರಾಜನೀ
ಸುರಲೋಕದರಸನಾದೆಯಾ ॥ ಪಲ್ಲ ॥

ಜಿನಶಾಸ್ತ್ರಕಮಲಗಳು ಮುಗಿವುತಿವೆ ಕೂಡೆ ಸ
ಜ್ಜನ ಚಕ್ರವಾಕಗಳ ಭಾಗ್ಯ ಬಯಲಾಯ್ತು ಮೆ
ಲ್ಲನೆ ದುಷ್ಪವಾದಿ ಘೂಕಗಳು ಮಿಗೆ ಪೆರ್ಚಿದವು ಜನಿಸುತಿದೆ ದಿಙ್ಮೂಢತೆ
ಘನತರದ ಕರ್ಮಾಂಧಕಾರವಾವರಿಸಿ ಭೋಂ
ಕನೆ ಮೋಹನಿದ್ರೆ ಮೇಲ್ಕುಸುಕುತಿದೆ ಜಿನಬೋಧ
ದಿನಲಕ್ಷ್ಮಿ ಜಾರಿದಳು ಸ್ಯಾದ್ವಾದಶೈಲದೊಳು ಮುನಿಸೂರ್ಯ ನೀನಡಗಲು ॥ ೧ ॥

ಹಿರಿದು ಧರ್ಮಾಂಬುಧಿಯು ರಾಗವರತದ ಮೇಲೆ
ವರಬಂಧುಚಕೋರಗಳ ಬದುಕು ಬಱಿದಾಯ್ತು ನೋ
ಡರರೆ ದುರ್ವಾದಿ ಚೋರರು ಕೂಡೆ ಪೆರ್ಚಿದರು ದುರಿತಮುದು ಆವರಿಸಿತು
ಅಱಿತು ದಯೆ ಕುಲವಲಯುದ ಸೋಂಪುಳಿ ನಲವು ಮಿ [ು]
ದುರುಳಿದು ನಿರ್ವೃತಿ [ಚೋರ]ಗೆಡೆಯಾಟವಾಯ್ತು ಸ
ದ್ಗುರುವೆ ಜಿನಮತ ಶಿಖರಿಯಲ್ಲಿ ನೀನೆಂಬಮೃತಕರನಸ್ತಮಯವಾಗೆ ॥ ೨ ॥

ಆಲಿಸೆಲೆ ಗುರುವೆ ಹರಿಗೋಪಾಲ ಮಾರ ತೊವ
ಗಾಳಿ ಗೂಳರಸನ ನವಚಕ್ರ ಚರಿತಂ ಬ್ರಹ್ಮ
ಮೇಲೆ ಮುಡುವಂ ಮದನ ಹುಸಿಯೊಡಲ ರಾತ್ರಿ ದಿನಪಾಲ ನಾರ್ಗರು
ಆಲಿಸಲು ಲೋಕದಂತೇವಾಸಿಗಳು ದಿಶಾ
ಪಾಲಕರು ಗುರು ಸುರಾಚಾರ್ಯನೆಂದವರುಲಿದು
ಬಾಲೆ ಭಾರತಿ ನಿನ್ನನು ಮೆಚ್ಚಿಸಿದಳವಳ ನೀನೊಲ್ಲೆಗಳಯಿಸಿದೆಯಲ್ಲಾ ॥ ೩ ॥

ರಾಜಾಧಿರಾಜ ಪರಮೇಶ್ವರನ ಶ್ರೀರಾಮ
ರಾಜನಾಸ್ಥಾನದೊಳು ಪರವಾದಿಗಳ ಹಿಂಡ
ಗಾಜಗೂಜನು ಮಾಡಿ ಸವಜ ತುಳಿದೊತ್ತರಿಸಿ ರಾಜರಿಗೆ ಬುಧವರ್ಗಕೆ
ಸೋಜಿಗವಮಾಡಿ ಸರಿಯಿಲ್ಲವೆನೆ ಜಗದೊಳಗೆ
ಶ್ರೀ ಜೈನಮಾರ್ಗವನು ಬಿತ್ತರಿಸಿ ಮೇಲೆ ಸುರ
ರಾಜನಾಸ್ಥಾನದೊಳು ವಾದಿಸುವೆನೆಂದು ನೀನೋಜೆಯಿಂದೆಯ್ದಿದೆಯಲಾ ॥ ೪ ॥

ಮಿಡುಕದಿರು ಭಾಟ್ಟ ಮಾತಾಡದಿರು ಕಾಣಾದ
ಗಡಬಡಿಯ ಬಿಡು ಬೌದ್ಧ ಸಾಂಖ್ಯ ನೀ ಸುಮ್ಮನಿರು
ಕಡೆಸಾರು ಚಾರ್ವಾಕ ಉಡುಗು ಮಾಯಾವಾದಿ ನುಡಿಯದಿರು ನೈಯಾಯಿಕಾ
ಪೊಡವಿಯೊಳಗುಳ್ಳ ಪರವಾದಿ ಹುಸೆಯು ಪಡಿಗೆ
ಸಿಡಿಲು ಮಾರ್ನುಡಿಗೊಡುವ ವಾದಿವನದಾವಾಗ್ನಿ
ನುಡಿವೆಣ್ಣನರಸಜಿತಸೇನಮುನಿ ಬಂದನೆಂದೊಡರಿಸುವ ನುಡಿಯುಡಗಿತೊ ॥ ೫ ॥

ಏನ್ವೇಳ್ವೆ ಗುಣಭದ್ರನಕ್ಕರಿಂದೋದಿಸಲಂ
ಶ್ರೀ ಪರೀಕ್ಷಾಮುಖದ ಪಂಚಿಕೆಗೆ ಟೀಕ ವಿ
ದ್ಯಾಪಾರ ಮುಕ್ತಿಯಿಂ ರಚಿಸಿದ **ನ್ಯಾಯಮಣಿದೀಪಿಕಾ** ನಾಮವಿಟ್ಟು
ಶ್ರೀಪದವಿ ವಿಜಯನಗರಿಯಲಿ ವಿಸ್ಮಯಂ ಮಿಗಲಂ
ಭೂಪಾಲ ಮಕುಟ ಕಂಪಿಸಲು ಪರಮತ ಸಂಪ್ರ
ತಾಪವನು ಮಾಡಿಸಾನೆಯ ಮೇಲೆ ಮೆರೆಯಿಸಿದೆ ಬಾಪ್ಪೆಂದು ಧರೆ ಪೊಗಳಲಂ ॥ ೬ ॥

ಮತ್ತೊಂದು ಮಹಿಮೆಯುಂಟೆಣೆಯಿಲ್ಲದ ಅಮೋಘ
ವೃತ್ತಿಯ ಮಹಾನ್ಯಾಸಪಾದಯುತ ಲಕ್ಷವದು
ಬಿತ್ತರಿಪಲಲ್ಲದೆ ಬಹುಕಾಲವು ನಷ್ಟವಾಗಿತ್ತು ಮುನಿರಾಜ ನೀನು
ಬಿತ್ತರಿಸಲಳವೆ ವಜ್ರದ ಪಡಿಯನೊಡದಂತೆ
ಚಿತ್ತಶುದ್ಧಿಯಲಿ ಬೇಧಿಸಿ ನೋಡಿ ತಿಳಿದು ಮಿಗೆ
ಯುತ್ತಮದ **ಟೀಕ ಚಿಂತಾಮಣಿಗೆ** ಒರೆದೆ ವಿಬುಧೋತ್ತಮರು
ಮೆಚ್ಚುವಂತೆ ॥ ೭ ॥

ಭಾವಿಸಲು ಶಕವರ್ಷ ಸಾವಿರದ ನಾನೂರ
ತೀವಿದೆಂಬತ್ತನಾಲ್ಕನೆಯ ದುಂದುಭಿ ವರ್ಷ
ದೋವಿದಾಷಾಢಮಾಸದ ಶುದ್ಧ ಸಪ್ತಮಿಯ ಭಾವಿ ಮಂಗಳವಾರದ
ಆ ಉತ್ತರೆಯ ವರ್ಯಯೋಗ ಭದ್ರಾಕರಣ
ದಾವಿದದ ರಾತ್ರೆಯಲಿ ಧರೆ ಮಂಚಿಸಿ ತತ್ವ
ಭಾವದೊಡಗೂಡಿ ಸುರಲೋಕಕ್ಕೆ [೧][..........][೧] ಅರಸಾದೆಯಾ ॥ ೮ ॥

ಶ್ರೀಮನ್ಮಹಾಮಂಡಲೇಶ್ವರಾನತಪಾದ
ತಾಮರಸ ಮುನಿಜನಲಲಾಮ ವಿಬುಧರಾಮ
ನೀ ಮಹಿಯ ಸುರಭೂಜ ಸೇನಗಣ ಗಗನರವಿ ಕಾಮಾರಿ ಹಾರಿಯಾದ
ಆ ಮಹಾಮಹಿಮ **ಮುನಿಭದ್ರಯೋಗೀಶ್ವರನ**
ಪ್ರೇಮದ ಕುಮಾರ-ಸಜ್ಜನವೃಂದಲಂಕಾರ
ಈ ಮಹಿಯ ಬಿಟ್ಟಜಿತಸೇನಮುನಿರಾಜನೀ ಸುನಾಮಂದರಸಾದೆಯಲ್ಲಾ ॥ ೯ ॥

■ ■

೧–೧. ಮೂಲ ತಾಳೆಗರಿ(ನಂ. ೩೩)ಯಲ್ಲಿ ಈ ಭಾಗ ಬಿಟ್ಟುಹೋಗಿದೆ.

ಅಲಂಕಾರಶಾಸ್ತ್ರದ ಹೆಸರುಗಳು

■

ಅನು : ಎಚ್.ಜಿ. ಲೋಕೂರ

ಒಂದು ಜ್ಞಾನಕ್ಷೇತ್ರದ ಶತಶತಮಾನಗಳ ಸುದೀರ್ಘ ಚರಿತ್ರೆಯನ್ನು ಪರಿಕಿಸಿದರೆ, ಹೆಸರಿನ ಬೆಳವಿಗೆಯಲ್ಲಿ ಉತ್ತಮವಾದುದೇ ಉಳಿಯುವುದೆಂಬ ನಿಯಮ ಸದಾ ಸಲ್ಲುವುದಿಲ್ಲ. ಔಚಿತ್ಯದ ಕಾರಣವಿಲ್ಲದೆಯೂ ಅಲಂಕಾರ ಶಾಸ್ತ್ರವೆಂದು ಕರೆಯುವ ಸಂಸ್ಕೃತ ಕಾವ್ಯಮೀಮಾಂಸೆಯ ಹೆಸರುಗಳ ಪರಿಶೀಲನೆಯಿಂದ ಇದು ವಿಶದವಾಗುತ್ತದೆ. ಅಲಂಕಾರದ ಕಲ್ಪನೆ ಕೆಲಕಾಲದ ಬಳಿಕ ಪದಚ್ಯುತವಾದರೂ ಅವರ ಹೆಸರು ಕಾವ್ಯ ಮೀಮಾಂಸೆಯ ವಿಷಯಕ್ಕೆಲ್ಲ ಅಂಟಿಕೊಂಡಿತು.

ಇಂಗ್ಲೀಷಿನಲ್ಲಿ ಸಾಹಿತ್ಯವಿಮರ್ಶೆಗೆ 'ಕಾವ್ಯಮೀಮಾಂಸೆ' ಎಂಬ ಹಳೆಯ ಹೆಸರಿದ್ದು, ಆ ವಿಷಯದ ಅರಿಸ್ಟಾಟಲನ ಕೃತಿಗೂ ಅದೇ (poetics) ಹೆಸರಿದೆ. ಸಂಸ್ಕೃತದಲ್ಲಿ ಈ ವಿಷಯದ ಅತಿ ಸಾಮಾನ್ಯ ಹಾಗೂ ಕೊನೆಯವರೆಗುಳಿದ ಹೆಸರು ಅಲಂಕಾರಶಾಸ್ತ್ರ. ಕೆಲವೊಮ್ಮೆ ಅದರ ಬದಲು 'ಸಾಹಿತ್ಯವಿದ್ಯಾ' (ಪಂಚಮೀ ಸಾಹಿತ್ಯ ವಿದ್ಯಾ ಇತಿ ಯಾಯಾವರೀಯಃ —ರಾಜಶೇಖರ) ಎಂದೂ ಕರೆಯಲಾಗಿದೆ. ಸಾಹಿತ್ಯ ವೆಂಬ ಹೆಸರು ಅಲಂಕಾರವೆಂಬುದಕ್ಕಿಂತ ಬಹು ಅರ್ವಾಚೀನ. ಅದು ನಿಜಕ್ಕೂ ವ್ಯಾಕರಣ ದಿಂದಹುಟ್ಟಿ, ಭಾಮಹನ ಕಾವ್ಯಲಕ್ಷಣ(ಶಬ್ದಾರ್ಥೌ ಸಹಿತೌ ಕಾವ್ಯ)ದ ಆಧಾರದಿಂದ ಕಾವ್ಯವನ್ನೇ ಸೂಚಿಸತೊಡಗಿತು.

ಆನಂದವರ್ಧನನ ಕಾಲದಿಂದ ಸಾಹಿತ್ಯವೆಂಬುದು ತುಸು ಮಹತ್ವಪಡೆಯುತ್ತಿತ್ತು. ಅಭಿನವಗುಪ್ತನ ಬಳಿಕಬಂದ ಭೋಜ ಹಾಗೂ ಕುಂತಕರು ಅದನ್ನೇ ಬಳಸಿದರು. ತರುವಾಯ ರುಯ್ಯಕನ ಕೃತಿಗೆ 'ಸಾಹಿತ್ಯ ಮೀಮಾಂಸೆ' ಎಂಬ ಹೆಸರಾಯಿತು; ನಂತರ ಆ ಶಬ್ದವು ಹೆಚ್ಚು ಬಳಕೆಯಲ್ಲಿದ್ದು, ಅರ್ವಾಚೀನ ಅಲಂಕಾರ ಶಾಸ್ತ್ರದ ಒಂದು ಮಹತ್ವದ ಕೃತಿಗೂ ಹೆಸರೆನಿಸಿತು —ಅದೇ ವಿಶ್ವನಾಥನ 'ಸಾಹಿತ್ಯ ದರ್ಪಣ'. ಅಭಿರುಚಿಯುಳ್ಳವರ ಪಾಂಡಿತ್ಯವನ್ನು ಕುರಿತಾಡುವಾಗ ಸಂಗೀತದೊಡನೆ ಸಾಹಿತ್ಯ ಶಬ್ದವನ್ನು ಸಹ ಸೇರಿಸಲಾಗುತ್ತಿತ್ತು. ಸಾಹಿತ್ಯವೆಂಬುದು ಅಲಂಕಾರದಷ್ಟು ಹಳೆಯದಲ್ಲದಿದ್ದರೂ ಅದರಷ್ಟೇ ಪ್ರಸಿದ್ಧವಾದ ಒಂದೇ ಒಂದು ಹೆಸರು ಸಂಸ್ಕೃತ ಕಾವ್ಯಮೀಮಾಂಸೆಗೆ.

ಸಾಹಿತ್ಯವೆಂದರೆ ಕಾವ್ಯೌಚಿತ್ಯ, ಶಬ್ದಾರ್ಥಗಳ ಸೊಗಸಾದ ಪರಸ್ಪರ ಅನುರೂಪ್ಯ ಹಾಗೂ ತಿಳುವಳಿಕೆ. ಈ ಕಲ್ಪನೆ ವೈಶಿಷ್ಟ್ಯಪೂರ್ಣವಾಗಿದೆ. ಸಾಹಿತ್ಯದೊಡನೆ ಹೋಲಿಸಿದರೆ, ಅಲಂಕಾರವೆಂಬ ಹೆಸರು ಕಡಿಮೆ ಕಾವ್ಯ ಮೌಲ್ಯದ್ದು. ಅದು ಸಂಸ್ಕೃತ ಕಾವ್ಯಮೀಮಾಂಸೆಯ ಚರಿತ್ರೆಯಲ್ಲಿ ಅಲಂಕಾರವು ಕಾವ್ಯಾಭಿವ್ಯಕ್ತಿಯ ಸಿಂಹಾಸನದ ಮೇಲೆ ಎತ್ತರಕ್ಕೆ ಕುಳಿತಾಗಿನ ಅವಸ್ಥೆಯನ್ನು ನೆನಪಿಸುತ್ತದೆ. ಸಂಸ್ಕೃತ ಕಾವ್ಯಮೀಮಾಂಸೆಯ ಅಲಂಕಾರಯುಗ ಭಾಮಹನಿಗೂ ಹಳೆಯದಾಗಿದ್ದು ಉದ್ಭಟ–ವಾಮನ–ರುದ್ರಟರ ಕಾಲದವರೆಗೆ ಇತ್ತು. ಅದರ ಕೊನೆಯ ದೊಡ್ಡ ಮತದಾರರೆಂದರೆ ಭೋಜ ಮತ್ತು ಕುಂತಕ. ಭಾಮಹನ ಕೃತಿ ಕಾವ್ಯಾಲಂಕಾರ; ಅವನ ವ್ಯಾಖ್ಯಾತೃ ಉದ್ಭಟನು ತನ್ನ ಸ್ವತಂತ್ರ ಕೃತಿಯನ್ನು ಕಾವ್ಯಾಲಂಕಾರಸಾರಸಂಗ್ರಹವೆಂದು ಹೆಸರಿಸಿದ; ವಾಮನ–ರುದ್ರಟರೂ ಅದರಂತೆಯೇ ತಮ್ಮ ಕೃತಿಗಳನ್ನು ಕಾವ್ಯಾಲಂಕಾರವೆಂದು ಹೆಸರಿಸುವರು. ದಂಡಿ ಅಪವಾದವೆಂಬಂತೆನಿಸಿದರೂ, ನಿಯಮವನ್ನೇ ಧೃಢಪಡಿಸುವ; ಏಕೆಂದರೆ ತನ್ನ ಕೃತಿಗೆ ಕಾವ್ಯಾದರ್ಶವೆಂದರೂ, ಆತ ಅಲಂಕಾರವನ್ನು ಬಹುವಾಗಿ ಕೊಂಡಾಡುವ ಲೇಖಕ. ಈ ಪ್ರಾಚೀನ ಅಲಂಕಾರವಾದಿಗಳು ಅಲಂಕಾರವನ್ನು ಸುಂದರ ಅಭಿವ್ಯಕ್ತಿ ಎಂದೂ ಕಾವ್ಯದ ವಿಶಿಷ್ಟ ಕುರುಹೆಂದೂ ಬಗೆದು, ರಸವೂ ಸಹ ಈ ಅಭಿವ್ಯಕ್ತಿ ಸೌಂದರ್ಯಕ್ಕೆ ಪೋಷಕವೆಂದು ಭಾವಿಸಿದರು. ಭೋಜನು ತವಕದಿಂದ ದಂಡಿಯ ಹಿಂದೆ ನಡೆದು ತನ್ನ ಹೆಬ್ಬೊತ್ತಿಗೆ ಶೃಂಗಾರ ಪ್ರಕಾಶದಲ್ಲಿ ಅಲಂಕಾರಕ್ಕೆ ಹೊಸತಾಗಿ ಭಾರಿಯ ಸಿಂಹಾಸನ ರಚಿಸುತ್ತಾನೆ. ಗುಣ – ಅಲಂಕಾರ – ರೀತಿ – ವೃತ್ತಿ – ಸಂಧಿ – ಲಕ್ಷಣ – ರಸ–ಭಾಷೆ–ಛಂದ–ಕಾವ್ಯನಾಟಕಾದಿಪ್ರಕಾರ– ಎಲ್ಲವೂ ಅವನಿಗೆ ಅಲಂಕಾರವೇ. ರುದ್ರಟನೊಡನೆ ಕೊನೆಗಾಣುವ ಅಲಂಕಾರಯುಗವು ಸಂಸ್ಕೃತ ಕಾವ್ಯಮೀಮಾಂಸೆಯ ಚರಿತ್ರೆಯಲ್ಲಿ ತುಂಬ ವೈಶಿಷ್ಟ್ಯಪೂರ್ಣವೂ ಅಹುದು. ಏಕೆಂದರೆ, ಅಲಂಕಾರಗಳ ವಿಶ್ಲೇಷಣೆಯೇ ವಕ್ರೋಕ್ತಿಯ ಉದಯಕ್ಕೆ ಕಾರಣ, ಹಾಗೂ ಇನ್ನೊಂದು ದಿಕ್ಕಿನಲ್ಲಿ ದೀಪಕ–ಸಮಾಸೋಕ್ತಿ–ಪರ್ಯಾಯೋಕ್ತದಂಥ ಧ್ವನ್ಯಂಶವುಳ್ಳ ಅಲಂಕಾರಗಳ ಮೂಲಕ ಧ್ವನಿ ಕಲ್ಪನೆಗೂ ಮೂಲ. ವಕ್ರೋಕ್ತಿಯು ಅಲಂಕಾರದ ಮುಂದುವರಿಕೆ; ಅದರ ಶ್ರೇಷ್ಠಪ್ರತಿಪಾದಕನಾದ ಕುಂತಕನು ತನ್ನ 'ವಕ್ರೋಕ್ತಿಜೀವಿತ'ವನ್ನು ಕಾವ್ಯಾಲಂಕಾರವೆಂದು ವರ್ಣಿಸುವ : ಕಾವ್ಯಸ್ಯಾಯ ಮಲಂಕಾರಃ ಕೋಪ್ಯಪೂರ್ವೋ ವಿಧೀಯತೇ। (೧, ೨;) ಗ್ರಂಥಸ್ಯಾಸ್ಯ ಅಲಂಕಾರ ಇತ್ಯಭಿ ಧಾನಂ । (ವೃತ್ತಿ).

ಸಂಸ್ಕೃತ ಕಾವ್ಯಮೀಮಾಂಸೆಯ ಈ ಅಲಂಕಾರಾವಸ್ಥೆಯ ಮಹತ್ವದ ಫಲ ವಾಗಿಯೇ ಇಡಿಯ ವ್ಯವಸ್ಥೆಗೆ ಕಾವ್ಯದ ಅನೇಕ ತತ್ವಗಳಲ್ಲಿ ಒಂದಾದ ಅಲಂಕಾರದ ಹೆಸರಾಯಿತು: ಯದ್ಯಪಿ ರಸಾಲಂಕಾರಾದ್ಯನೇಕ ವಿಷಯಮಿದಂ ಶಾಸ್ತ್ರಂ ತಥಾಪಿ ಛತ್ರಿನ್ಯಾಯೇನ 'ಅಲಂಕಾರಶಾಸ್ತ್ರಮು'ಚ್ಯತೇ। (ಪ್ರತಾಪರುದ್ರೀಯದ ಮೇಲೆ ಕುಮಾರಸ್ವಾಮಿನ್).

ವಾಮನನ ಕೈಯಲ್ಲಿ ಅಲಂಕಾರವು ಹೆಚ್ಚಿನ ಪರಿಮಾಣ ಪಡೆದು – ಹರವಾಗಿ, ಹೆಚ್ಚಿನ ವೈಶಿಷ್ಟ್ಯ–ಸೊಬಗುಗುಗಳನ್ನು ಹೊಂದಿತು. ದಂಡಿಯಿಂದ ಬಂದ ಅಲಂಕಾರದ ಹರಳನ್ನು ಹೊರಳಿಸಿ ನೋಡಿದಾಗ ಅದು ಅನೇಕ ಕಿರಣ ಬೀರುವುದನ್ನು ಆತ ಕಂಡ, ಅದು ಸೌಂದರ್ಯವೆಂಬುದನ್ನು ಮನಗಂಡ. ಆದರ ಅರ್ಥ ಬರಿ ಶಬ್ದಾಲಂಕಾರ–ಅರ್ಥಾಲಂಕಾರ ಲಾವಣ್ಯಮಾತ್ರವಲ್ಲ, ಎಲ್ಲ ದೋಷಗಳ ಅಭಾವ ಹಾಗೂ ಗುಣಗಳ ಸದ್ಭಾವ ಕೂಡ. ಅಷ್ಟೇ ಅಲ್ಲ ಇತರೋಕ್ತಿಗಳಿಂದ ಭಿನ್ನವಾದ ಕಾವ್ಯೋಕ್ತಿಸೌಂದರ್ಯದ ಮೊತ್ತವೆಲ್ಲ ಅದರಿಂದ ಸೂಚಿತ. ವಾಮನನಿಗೆ ಅಲಂಕಾರವೆಂದರೆ ಸೌಂದರ್ಯ.

ತತ್ಕಾಲಕ್ಕೆ ಕಾವ್ಯಮೀಮಾಂಸೆ ಹೊಸತಾಗಿ ಅಡಕವಾದ 'ಸೌಂದರ್ಯಶಾಸ್ತ್ರ'ವೆಂಬ ಹೆಸರಾಂತ ಹಾಗೆ ತೋರುತ್ತದೆ. 'ಸೌಂದರ್ಯ' ಶಬ್ದವು ವಿಶ್ಲೇಷಣಾತೀತ. ಭಟ್ಟನಾಯಕ ಹಾಗೂ ಕುಂತಕರು ಕವಿವ್ಯಾಪಾರವೆನ್ನುವ ಕವಿಪ್ರತಿಭೆಯ ಮಾಯೆಗೇ ನಾವು ಕೊನೆಗೂ ಶರಣು ಹೋಗಬೇಕು. ಧ್ವನ್ಯಾಲೋಕನದಲ್ಲಿ ಕಾವ್ಯವನ್ನು ವರ್ಣಿಸುವಾಗ ಅಭಿನವ ಗುಪ್ತನು ಸುಂದರ ಮತ್ತು ಸೌಂದರ್ಯ ಶಬ್ದಗಳನ್ನು ಪುನಃ ಪುನಃ ಬಳಸುತ್ತಾನೆ: ಕಾವ್ಯಸ್ಯ ಹಿ ಲಲಿತೋಚಿತಸನ್ನಿವೇಶ **ಚಾರುಣಃ** (ಆನಂದವರ್ಧನ). ಪ್ರತಿಭಾ ಅಪೂರ್ವವಸ್ತು ನಿರ್ಮಾಣಕ್ಷಯಾ ಪ್ರಜ್ಞಾತಸ್ಯಾ ವಿಶೇಷೋ ರಸಾವೇಶವೈಶದ್ಯ ಸೌಂದರ್ಯ ಕಾವ್ಯನಿರ್ಮಾಣಕ್ಷಮಾತ್ವಂ । (ಅಭಿನವಗುಪ್ತ).

ಸೌಂದರ್ಯವು ಮೂಲಭೂತ ಅಂಶವಾಗಿದ್ದು, ಅದಿಲ್ಲದಲ್ಲಿ ಅಲಂಕಾರವಾಗಲಿ ಧ್ವನಿಯಾಗಲಿ ಹಾಗೆ ಕರಸಿಕೊಳ್ಳಲಾರವು, ಕಾವ್ಯಕ್ಕೆ ಒದಗಲಾರವು : ತಥಾಜಾತೀ ಯಾನಾಮಿಂತಿ । **ಚಾ ರು ತ್ವಾ ತಿ ಶ ಯು ವ ತಾ ಂ** ಇತ್ಯರ್ಥಃ । ಸುಲಕ್ಷಿತಾ ಇತಿ **ಯುಕ್ತಿಲೈಷಾಂ ತದ್ವಿ ನಿರ್ಮುಕ್ತಂ ರೂಪಂ, ನ ತತ್ ಕಾವ್ಯೈಭ್ಯರ್ಥನೀಯಂ** । ಉಪಮಾ ಹಿ 'ಯಥಾಗೌಃ ತಥಾ ಗವಯಃ' ಇತಿ । ರೂಪಕಂ 'ಗೌಃ ವಾಹೀಕಃ' ಇತಿ । ಶ್ಲೇಷಃ 'ದ್ವಿರ್ವಚನೇಚಿ' ಇತಿ ತಂತ್ರಾತ್ಮಕಃ । ಏವಮನ್ಯತ್ । **ಚೈನಮಾದಿ ಕಾವ್ಯೋಪಯೋಗೀತೆ** । ಅಭಿನವಗುಪ್ತನು ಅಲಂಕಾರದ ಬಗ್ಗೆ ಹೇಳಿದ ಈ ಅಂಶ ವನ್ನು ಶೃಂಗಾರಪ್ರಕಾಶಕಾರನೂ ಅವಧಾರಿಸಿ, 'ಧೂಮೋಯಮಗ್ನೇಃ' ಎಂಬುದು ಯಾವ ಅಲಂಕಾರವೂ ಆಗದು, ಏಕೆಂದರೆ ಅಲಂಕಾರ ಸಾಮಾನ್ಯ ಲಕ್ಷಣವಾದ ಶೋಭೆ ಅಲ್ಲಿ ವಿಶಿಷ್ಟವಾಗಿ ಇಲ್ಲ. ಕಾವ್ಯಶೋಭಾಕಾರವಾದ ಧರ್ಮಗಳನ್ನೇ ಅಲಂಕಾರವೆನ್ನುವ ರೆಂಬ ದಂಡಿಯ ವರ್ಣನೆಗೆ ಭೋಜನು ಎಷ್ಟೊಂದು ಉಚಿತಾರ್ಥವಿತ್ತಿದ್ದಾನೆ ! ಈ ಅಂಶವನ್ನು ಅಪ್ಪಯ್ಯ ದೀಕ್ಷಿತನೂ ಮುಂದೆ ತನ್ನ 'ಚಿತ್ರಮೀಮಾಂಸೆ'ಯ ಪ್ರಸಿದ್ಧ ಅವತರಣಿಕೆಯಲ್ಲಿ ಅವಧಾರಿಸಿದ್ದಾನೆ: ಸರ್ವೋಽಪಿ ಹ್ಯಲಂಕಾರಃ ಕವಿಸಮಯ ಪ್ರಸಿಧ್ಯನುರೋಧೇನ **ಹೃದ್ಯತಯಾ ಕಾವ್ಯಶೋಭಾಕರ ಏವ ಅಲಂಕಾರತಾಂ ಭಜತೇ** । ಅತಃ 'ಗೋಸದೃಶಃ ಗವಯಃ' ಇತಿ ನೋಪಮಾ ।

ಸೌಂದರ್ಯದ ಆವಶ್ಯಕತೆಯ ಸ್ಥಿತಿ ಧ್ವನಿಗೂ ಅನ್ವಯಿಸುತ್ತದೆ. ಒಂದು ವಿಷಯದಲ್ಲಿ ಯಾವುದೋ ತಾಂತ್ರಿಕ ಧ್ವನಿ ಇರುವುದನ್ನು ತೋರಲೆತ್ನಿಸಿದರಾಗಲಿಲ್ಲ. ಧ್ವನಿಯೂ ಸುಂದರವಾಗಿರಬೇಕು: ಗುಣಾಲಂಕಾರೌಚಿತ್ಯ**ಸುಂದರ**- ಶಬ್ದಾರ್ಥಶರೀರಸ್ಯ ಸತಿ ಧ್ವನನಾತ್ಮನಿ ಆತ್ಮನಿ ಕಾವ್ಯರೂಪತಾ ವ್ಯವಹಾರಃ । (ಲೋಚನ). ಆನಂದ ವರ್ಧನನ 'ವಿವಿಧ ವಿಶಿಷ್ಟವಾಚ್ಯವಾಚಕರಚನಾ ಪ್ರಪಂಚ ಚಾರುಣಃ ಕಾವ್ಯಸ್ಯ' ಎಂಬು ದನ್ನು ವ್ಯಾಖ್ಯಾನಿಸುತ್ತ ಅಭಿನವಗುಪ್ತನೆನ್ನುವ: ತೇನ ಸರ್ವತ್ರಾಪಿ ನ ಧ್ವನನಸದ್ಭಾವೇಪಿ ತಥಾ ವ್ಯವಹಾರಃ ।

ಆದುದರಿಂದ ಕಾವ್ಯಸೌಂದರ್ಯವೇ ಕಾವ್ಯಾಭಿವ್ಯಕ್ತಿಯ ನಿಜವಾದ ಆತ್ಮ. ಸೌಂದರ್ಯವೇ ಕಲೆಯ ತಿರುಳು, ಆತ್ಮ— ಎನ್ನುವುದನ್ನು ಅಭಿನವಗುಪ್ತ ಅಂಗೀಕರಿಸು ತ್ತಾನೆ: ಯಚ್ಚೋಕ್ತ— 'ಚಾರುತ್ವಪ್ರತೀತಿಸ್ತರ್ಹಿ ಕಾವ್ಯಸ್ಯ ಆತ್ಮಾಸ್ಯಾತ್' ಇತಿ, ತದಂಗೀಕುರ್ಮ ಏವ । ನಾಸ್ತಿ ಖಲ್ವಯಂ ವಿವಾದ ಇತಿ ।

ಈ ಸೌಂದರ್ಯವನ್ನೇ ಚಮತ್ಕಾರವೆಂದು ಕರೆದು 'ಚಮತ್ಕಾರ ಚಂದ್ರಿಕೆ'ಯ ವಿಶ್ವೇಶ್ವರ ತನ್ನ ನಿಲುವು ತಳೆಯುತ್ತಾನೆ. ವಿಚ್ಛಿತ್ತಿ, ವೈಚಿತ್ರ್ಯ, ಹಾಗೂ ವಕ್ರತೆ ಎಂಬ ಶಬ್ದಗಳೂ ಅಂತಿಮವಾಗಿ ಸೌಂದರ್ಯವೆನಿಸುತ್ತವೆ. ಜಗನ್ನಾಥನ ಕಾವ್ಯಲಕ್ಷಣ ದಲ್ಲಿ ರಮಣೀಯವೆಂಬುದಕ್ಕೂ ಕಾವ್ಯಸೌಂದರ್ಯವೆಂದೇ ಅರ್ಥ. ಈ ದೃಷ್ಟಿಯಿಂದ ಕಾವ್ಯಮೀಮಾಂಸೆಯ ಹೊಸ ಹೆಸರು ಸೌಂದರ್ಯ ಶಾಸ್ತ್ರಕ್ಕೆ ಒಳ್ಳೆಯ ಅವಕಾಶವಿದ್ದಂತೆ ನಿಸಿದರೂ ಅದು ಮುಂದಕ್ಕೆ ಬರಲಿಲ್ಲ. ಸೌಂದರ್ಯಶಾಸ್ತ್ರವೆಂಬ ಹೆಸರು ಪಾಶ್ಚಾತ್ಯ ಹೆಸರಾದ ಸೌಂದರ್ಯ ಸಂಹಿತೆ(Aesthetics)ಗೆ ಸರಿಹೋಗುವುದು. ಪಾಶ್ಚಾತ್ಯ ಸಾಹಿತ್ಯದಲ್ಲಿ ಈ ವಿಷಯಕ್ಕೆ ಸುಂದರ ಹಾಗೂ ಭೂಮ (beautiful & sublime) ಎಂಬ ಪದ ಕಾಣಿಸುತ್ತವೆ. (ಅಂದ = Pretty, ಲಾವಣ್ಯ = grace, ಸೌಂದರ್ಯ = beauty, ಅದ್ಭುತ = wonder, ಭೂಮ = Sublime ಇವೈದು ಚೆಲುವಿನ ಸ್ತರ– A. C. Bradlay p. 40). ಭೂಮದ ಮೇಲೆ ಲಾಂಜಿನಸ್‌ನಂತಹರ ಕೃತಿಗಳಿವೆ. 'ಕೃತಿ ಎಂದರೇನು' ಎಂಬ ಕೃತಿಯಲ್ಲಿ ಟಾಲಸ್ಟಾಯ್ ಸೌಂದರ್ಯ ವಿಷಯಕ ಕೃತಿಗಳ ಪರಿಶೀಲನೆಗೆ ಒಂದು ಇಡಿಯ ಪ್ರಕರಣವನ್ನೇ ಮೀಸಲಿಟ್ಟಿದ್ದಾನೆ. ಆದರೆ ಸೌಂದರ್ಯ ಹಾಗೂ ಭೂಮತೆ (ಸೌಂದರ್ಯ ಸಂಹಿತೆ ಅಥವಾ ಸೌಂದರ್ಯಶಾಸ್ತ್ರ)ಗಳ ಅಭ್ಯಾಸವು ಕಾವ್ಯಮೀಮಾಂಸೆಯ ಅರ್ಥವನ್ನಷ್ಟೇ ಕೊಡದೆ, ಶಿಲ್ಪ ಚಿತ್ರ ಸಂಗೀತಗಳನ್ನೊಳಗೊಂಡ ಎಲ್ಲ ಲಲಿತ ಕಲೆಗಳ ವಿಮರ್ಶಾತ್ಮಕ ಆಸ್ವಾದನೆಯನ್ನು ಸೂಚಿಸುತ್ತದೆ.

ಮೊದಲ ಉದ್ಯೋತ ಹಾಗೂ ಉಳಿದೆಡೆಗಳಲ್ಲಿ ಆನಂದವರ್ಧನನು ಕಾವ್ಯ ಮೀಮಾಂಸಕರನ್ನು 'ಕಾವ್ಯಲಕ್ಷಣಕಾರ' ಎನ್ನುತ್ತಾನೆ. ಏಕೆಂದರೆ ಕಾವ್ಯದ ಮೇಲೆ ಬರೆ ದವರೆಲ್ಲ ಕಾವ್ಯವನ್ನು ಲಕ್ಷಣಿಸುವ ವಿಚಾರದಿಂದ ಹೊರಟವರು. ಅಲಂಕಾರದ ಅಧಿ

ಕಾರ ಹಾಗೂ ಅದಕ್ಕೂ ಮುಂಚಿನ ದಿನಗಳಲ್ಲಿ 'ಕಾವ್ಯಲಕ್ಷಣ'ವೆಂಬುದನ್ನು ಕಾವ್ಯ ಮೀಮಾಂಸೆಗೆ ಸಾಮಾನ್ಯ ಹೆಸರಾಗಿಯೂ ಗ್ರಹಿಸಬಹುದು. '**ಕಾವ್ಯಾಲಂಕಾರ** ಇತ್ಯೇಷ ಯಥಾ ಬುದ್ಧಿ ವಿಧೀಯತೇ।' ಎಂದು ತನ್ನ ಕೃತಿಯನ್ನಾರಂಭಿಸುವ ಭಾಮಹ ಕಾವ್ಯಲಕ್ಷಣವೆಂಬ ಹೆಸರಿನೊಡನೆ ಅದನ್ನಿಂತು ಮುಗಿಸುವ: ಅವಗಮ್ಯ ಸ್ವಧಿಯಾ ಚ **ಕಾವ್ಯಲಕ್ಷಣ।** ದಂಡಿಯೂ (೧, ೨ರಲ್ಲಿ) ಕಾವ್ಯಲಕ್ಷಣವನ್ನೊರೆಯಲುದ್ದೇಶಿಸುವ : ಯಥಾ ಸಾಮರ್ಥ್ಯಮಸ್ಮಾಭಿಃ ಕ್ರಿಯತೆ ಕಾವ್ಯಲಕ್ಷಣಂ ।

ಆದರೂ ಕಾವ್ಯಲಕ್ಷಣ– ಅಲಂಕಾರ–ಸಾಹಿತ್ಯ ಎಂಬಿವೆಲ್ಲ ಹೆಸರು ಈಚಿನವು. ಭಾಮಹನಿಗೆ ಮೊದಲು, ಅಲಂಕಾರ ಹಾಗೂ ಕಾವ್ಯಲಕ್ಷಣ ಎಂಬಿವು ಪ್ರಚುರಗೊಳ್ಳುವ ಮುನ್ನ, ಸಂಸ್ಕೃತ ಕಾವ್ಯಮೀಮಾಂಸಾ ವಿಷಯದ ಹೆಸರು ಏನಿದ್ದಿತು ?

ವಾತ್ಸಾಯನನು "ಕಾಮಸೂತ್ರ"ದಲ್ಲಿತ್ತ ಚತುಷ್ಷಷ್ಟಿ ಕಲೆಗಳ ಪಟ್ಟಿಯು ಈ ಸಂಬಂಧದಲ್ಲಿ ಮೊದಲ ಕಿರಣ ಬರುತ್ತದೆ. ವಾತ್ಸಾಯನನು ಕಾವ್ಯಕ್ರಿಯೆ ಹಾಗೂ ತತ್ಸಹಾಯಕವಾದ ಅಭಿಧಾನ ಕೋಶ– ಛಂದೋಜ್ಞಾನಗಳೆಂಬ ಎರಡು ವಿಷಯಗಳ ನ್ನೊರೆದ ಬಳಿಕ 'ಕ್ರಿಯಾಕಲ್ಪ' ಎಂಬ ವಿಷಯವನ್ನಿತ್ತಿದ್ದಾನೆ. (೧, ೩, ೧೬). ಈ ಕ್ರಿಯಾಕಲ್ಪವೆಂದರೇನು ? ಕಾವ್ಯಕ್ರಿಯೆ – ಕೋಶ – ಛಂದಸ್ಸುಗಳ ಬೆನ್ನಲ್ಲೇ ಬರುವ ಕ್ರಿಯಾಕಲ್ಪವು ಸಾಹಿತ್ಯ–ಕಾವ್ಯಗಳಿಗೆ ಸಂಬಂಧಿಸಿದ ವಿಷಯವಾಗಿರಬೇಕು. ಕ್ರಿಯಾ-ಕಲ್ಪವೆಂದರೆ ಕಾವ್ಯಮೀಮಾಂಸೆ ಅಥವಾ ಅಲಂಕಾರಶಾಸ್ತ್ರವೆಂದು ಅದರ "ಜಯಮಂಗಳಾ" ವ್ಯಾಖ್ಯಾನ ಸ್ಪಷ್ಟಪಡಿಸಿದೆ : ಕ್ರಿಯಾಕಲ್ಪ ಇತಿ ಕಾವ್ಯಕರಣ ವಿಧಿಃ, ಕಾವ್ಯಾಲಂಕಾರ ಇತ್ಯರ್ಥಃ । ತ್ರಿತಯಮಪಿ (ಅಭಿಧಾನ, ಛಂದಸ್, ಅಲಂಕಾರ) ಕಾವ್ಯ ಕ್ರಿಯಾಂಗ, ಪರ ಕಾವ್ಯಾವಬೋಧಾರ್ಥಂ ಚ । ಇದನ್ನು ವಿವರಿಸಬೇಕೆಂದರೆ ಕ್ರಿಯಾ ಕಲ್ಪವೆಂಬುದನ್ನು ಕಾವ್ಯಕ್ರಿಯಾಕಲ್ಪವೆಂದು ಹಿಗ್ಗಿಸಬೇಕು. ಕಾವ್ಯರಚನೆಗೆ ಅದು ವ್ಯಾವಹಾರಿಕ ಮಾರ್ಗದರ್ಶಿಕೆ.

ಕ್ರಿಯಾಕಲ್ಪವೆಂಬ ಹೆಸರಿನಲ್ಲಿ ಕ್ರಿಯಾ (ಎಂದರೆ ಕಾವ್ಯಕ್ರಿಯೆ), ಕಲ್ಪ (ಎಂದರೆ ವಿಧಿ) ಎಂಬ ಎರಡು ಶಬ್ದಗಳಿವೆ. ಕ್ರಿಯಾಕಲ್ಪ ಸರಿಯಾದ ಪದವಾಗಿದೆ. ಶ್ರೀಧರನ ಭಾಗವತ ವ್ಯಾಖ್ಯಾನವು ಅದನ್ನು ಕ್ರಿಯಾವಿಕಲ್ಪ ಎಂದು ತಪ್ಪಾಗಿ ಬಳಸಿದ್ದು, ಅದನ್ನನುಸರಿಸಿದ 'ಶಬ್ದ ಕಲ್ಪದ್ರುಮ' ಹಾಗೂ 'ವಾಚಸ್ಪತ್ಯ'ಗಳೆರಡೂ ಅರವತ್ನಾಲ್ಕು ಕಲೆಗಳ ಪಟ್ಟಿಯಲ್ಲಿ ತಪ್ಪು ರೂಪವಿತ್ತಿವೆ. ಇದನ್ನಾಧರಿಸಿ ಪಿ.ಕೆ. ಆಚಾರ್ಯರು (Fine Arts– Indian Historical Quarterly V) 'ಕ್ರಿಯಾಕಲ್ಪವು ಧಾತುಗಳ ಬೇರೆ ಬೇರೆ ಬಗೆಯ ನಿಷ್ಪತ್ತಿ–ಸಂಯೋಗಗಳ ಕಲೆಯಾಗಿದ್ದು, ಯಶೋಧರನೆಂದಂತೆ ವ್ಯಾಕರಣ ಹಾಗೂ ಕಾವ್ಯಮೀಮಾಂಸೆಗಳನ್ನು ಸೂಚಿಸುವುದು' ಎನ್ನುತ್ತಾರೆ. ಕ್ರಿಯಾವಿಕಲ್ಪವನ್ನೇ ಸರಿಯಾದ ಪಾಠವೆಂದುಕೊಂಡು ಧಾತುಗಳ ನಿಷ್ಪತ್ತಿ ಸಂಯೋಗವೆಂದು ಅರ್ಥೈಸಿದರೆ,

ಅದರಲ್ಲಿ ಕಾವ್ಯಮೀಮಾಂಸೆ ಎಲ್ಲಿಂದ ಬಂದೀತು ? ಅಲ್ಲದೆ ಅದು ವ್ಯಾಕರಣವನ್ನು ಸೂಚಿಸುವುದೆಂದು ಯಾರೂ ಹೇಳಿಲ್ಲ.

೧ನೆಯ ಶತಕದ 'ಲಲಿತ ವಿಸ್ತರ'ದ ಕಲೆಗಳ ಪಟ್ಟಿ ಈ ಕ್ರಿಯಾಕಲ್ಪವನ್ನು ನಿರೂಪಿಸುತ್ತದೆ. ದಂಡಿಯು 'ವಾಚಾಂ ವಿಚಿತ್ರಮಾರ್ಗಾಣಾಂ ನಿಬಬಂಧುಃ **ಕ್ರಿಯಾವಿಧಿಂ**' (೧, ೯) ಎನ್ನುವಲ್ಲಿ ತನಗಿಂತ ಹಿಂದೆ ಕ್ರಿಯಾವಿಧಿ ಬರೆದವರನ್ನು ಸೂಚಿಸಿದ್ದಾನೆ. ಇಲ್ಲಿ ವಿಧಿ ಎಂದರೆ ಕಲ್ಪ ಎಂಬರ್ಥ ಮಾತ್ರವಿದ್ದು, ವಾತ್ಸಾಯನನು ನಮಗೆ ಪರಿಚಯಿಸಿದ ಕ್ರಿಯಾಕಲ್ಪವೆಂಬ ಹೆಸರಿನ ಸೂಚನೆ ಪರ್ಯಾಯವಾಗಿ ಬಂದಿದೆ. ದಂಡಿಯ ಕ್ರಿಯಾ-ವಿಧಿಯನ್ನು ತರುಣ ವಾಚಸ್ಪತಿಯು ರಚನಾ ಪ್ರಕಾರವೆಂದೂ 'ಹೃದಯಂಗಮಾ' ಕ್ರಿಯಾವಿಧಾನವೆಂದೂ ವಿವರಿಸಿದ್ದು, 'ಜಯಮಂಗಳಾ'ದ ಕಾವ್ಯಕರಣ ವಿಧಿ ಎಂಬುದೇ ಅದರ ಅರ್ಥ. (ಸಿಂಹಳದ ಬೌದ್ಧ ಲೇಖಕ ರತ್ನಶ್ರೀಜ್ಞಾನನು ೯೩೧ ರಲ್ಲಿ ಕಾವ್ಯದರ್ಶಕ್ಕೆ ಬರೆದ 'ರತ್ನಶ್ರೀ' ವ್ಯಾಖ್ಯಾನವೀಗ ಸಿಕ್ಕಿದ್ದು, ಕ್ರಿಯಾವಿಧಿಗೆ ಕ್ರಿಯಾಕಲ್ಪ-ಕಾವ್ಯಾಲಂಕಾರ ಎಂದಿದೆ– ಕನ್ನಡ ಕಾವ್ಯದರ್ಶ ಪೀಠಿಕೆ ೧೦– ಡಾ. ಕೆ. ಕೃಷ್ಣಮೂರ್ತಿ).

ವಾಮನನ ವ್ಯಾಖ್ಯಾತೃ ತಿಪ್ಪಭೂಪಾಲನು 'ಕಾಮಧೇನು'ವಿನಲ್ಲಿ ಭಾಮಹನದೆಂದು ಕೊಡುವ ವಾತ್ಸಾಯನನಂತಹ ಅರವತ್ನಾಲ್ಕು ಕಲೆಗಳ ಪಟ್ಟಿಯಲ್ಲಿ ಕ್ರಿಯಾಕಲ್ಪದ ಬದಲು ಕಾವ್ಯಲಕ್ಷಣವೆಂಬ ಪದವಿದೆ. ಇದು ಪುನಃ ಕ್ರಿಯಾಕಲ್ಪವೆಂಬುದೇ ಸರಿಯಾದ ಪದವೆಂದೂ ಅಲಂಕಾರಶಾಸ್ತ್ರಕ್ಕೆ ಅದು ಹಳೆಯ ಹೆಸರೆಂದು ಸಿದ್ಧಗೊಳಿಸುತ್ತದೆ.

ಕಡೆಯದಾಗಿ ರಾಮಾಯಣದ ಉತ್ತರಕಾಂಡದಲ್ಲಿ ಉಳಿದ ಹಲವು ಕಲೆ ಹಾಗೂ ಜ್ಞಾನಕ್ಷೇತ್ರಗಳೊಡನೆ ಕ್ರಿಯಾಕಲ್ಪವು ಉಕ್ತವಾಗಿರುವುದನ್ನು ನೋಡುತ್ತೇವೆ. ಇಂದಿನ ಉತ್ತರಕಾಂಡದ ಬಹುಭಾಗವು ಅನಂತರದ ಬೆಳವಣಿಗೆಯಾದರೂ ಸೀತಾ ಪರಿತ್ಯಾಗ ಹಾಗೂ ಅವಳ ಮಕ್ಕಳು ರಾಮಾಯಣವನ್ನು ಹಾಡುವ ಪ್ರಕರಣಗಳು ಮೂಲ ಅಥವಾ ಪ್ರಾಚೀನ ಭಾಗಗಳಾಗಿರಬೇಕು. ಅವುಗಳ ಸಾಹಿತ್ಯಿಕ ಮೇಲ್ಮಟ್ಟವು ಅವುಗಳನ್ನು ಸುಲಭವಾಗಿ ಬೇರ್ಪಡಿಸುವುದು. ತೊಂಬತ್ನಾಲ್ಕನೆಯ ಪ್ರಕರಣ (೪–೧೦) ದಲ್ಲಿ ಅವಳಿಮಕ್ಕಳು ರಾಮಾಯಣ ಹಾಡುವುದನ್ನು ಕೇಳಲು ರಾಮನ ಸಭೆಯಲ್ಲಿ ರಾಮನೂ ಇತರ ವಿದ್ವಾಂಸರೂ ಸೇರುವುದನ್ನು ಬಣ್ಣಿಸಿದೆ. ಆ ವಿದ್ವಾಂಸರಲ್ಲಿ ಪಂಡಿತರು, ನೈಗಮರು, ಪೌರಾಣಿಕರು, ಶಬ್ದವಿದರು, ಸ್ವರಲಕ್ಷಣಜ್ಞರು, ಗಾಂಧರ್ವರು, ಕಲಾಮಾತ್ರ ವಿಭಾಗಜ್ಞರು (ಮೂವರೂ ಸಂಗೀತವಿದರು), ಪಾದಾಕ್ಷರ ಸಮಾಸಜ್ಞರು, ಛಂಧಃಪರಿನಿಷ್ಠಿತರು (ವ್ಯಾಕರಣ–ಛಂದೋನಿಷ್ಣಾತರು) ಎಂಬವರನ್ನು ಹೇಳಿ 'ಕ್ರಿಯಾಕಲ್ಪವಿದಶ್ಚೈವ ತಥಾ ಕಾವ್ಯವಿದೋ ಜನಾನ್' (೩) ಎಂಬ ಸಾಲು ಕೊಟ್ಟಿದೆ. ವ್ಯಾಕರಣ–ಛಂದಸ್ಸುಗಳನ್ನೊರೆದ ಬಳಿಕ ಕಾವ್ಯಮೀಮಾಂಸೆ ಮಾತ್ರ ಉಳಿದಿದ್ದು, ಕಾವ್ಯಶ್ರವಣದ ಸಭೆಯಲ್ಲಿ ಕಾವ್ಯಮೀಮಾಂಸಾ ಪರಿಣತಸಿಗೀತ

ಬೇರಾರಿಗೆ ಸ್ಥಾನ ಸಲ್ಲುವುದು? (ರನ್ನನೂ 'ಅಲಂಕ್ರಿಯಾರಚನೆ' ಎಂಬಲ್ಲಿ–ಗ. ಯು. ೧. ೭, ಅ. ಪು ೧.೧೩–ಕ. ರಾ. ಮಾರ್ಗದ ೩೬ ಅಲಕಾಂರಗಳನ್ನೇ ಲಕ್ಷಿಸಿದ್ದಾನೆ, ತೀನಂಶ್ರೀಎಂದಂತೆ ಭರತನ ಭೂಷಣಗಳನ್ನಲ್ಲ).

ಹೀಗೆ ದಂಡಿಯಿಂದ ಒಂದು ಬಗೆಯಲ್ಲಿ ವಾತ್ಸಾಯನ ಹಾಗೂ ರಾಮಾಯಣಗಳಿಂದ ನಿಖರವಾಗಿ ಅಲಂಕಾರಶಾಸ್ತ್ರವು ಮುಂಚಿನ ಅವಸ್ಥೆಯಲ್ಲಿ ಕ್ರಿಯಾಕಲ್ಪವೆನಿಸಿತ್ತೆಂದು ತಿಳಿಯುತ್ತೇವೆ. (ಕ್ರಿಯೆ ಎಂಬುದಕ್ಕೆ ಸಾಹಿತ್ಯಿಕ ರಚನೆ ಎಂಬರ್ಥವನ್ನೂ ಹೇಳಿ, ಆಪ್ಟೆಕೋಶವು ಕಾಳಿದಾಸನಿಂದಲೇ ಉಚಿತ ಅವತರಣಿಕೆಗಳನ್ನಿತ್ತಿದೆ: ಶೃಣ್ವಂತ ಮನೋಭಿರವಹಿತೈಃ **ಕ್ರಿಯಾಮಿಮಾಂ** ಕಾಲಿದಾಸಸ್ಯ— ವಿಕ್ರಮೋರ್ವಶೀಯ ೧. ೨; ಕಾಲಿದಾಸಸ್ಯ **ಕ್ರಿಯಾಯಾಂ** ಬಹುಮಾನಃ –ಮಾಲವಿಕಾಗ್ನಿಮಿತ್ರ. ಕ್ರಿಯೆ ಎಂದರಿಂತು ಕಾವ್ಯ, ಕ್ರಿಯಾಕಲ್ಪವೆಂದರೆ ಕಾವ್ಯಕಲ್ಪ. ಇಂಗ್ಲೀಷಿನಲ್ಲಿಯೂ ಕ್ರಿಯಾ ಎಂಬುದರ ಸಮಾನಾರ್ಥಕ ಶಬ್ದ work ಎನ್ನುವುದನ್ನು ಸಾಹಿತ್ಯಿಕ ರಚನೆ ಎಂಬರ್ಥದಲ್ಲಿ ಬಳಸುತ್ತಾರೆ. ದಕ್ಷಿಣಾದಿ ಸಂಗೀತದಲ್ಲೂ ಕೃತಿ ಎಂದರೆ ಸಂಗೀತಕ್ಕೆ ಹಾಕುವ ಸಾಹಿತ್ಯವೆಂದರ್ಥ).

ಚಮತ್ಕಾರ

ಮೊದಲು ಕಾವ್ಯಮೀಮಾಂಸಾ ಕೃತಿಗಳು ಅಲಂಕಾರದ ದೃಷ್ಟಿಯಿಂದ ಹೊರಡುತ್ತಿದ್ದು, ಬಹುತೇಕವಾಗಿ ಕಾವ್ಯಾಲಂಕಾರವೆಂಬ ಹೆಸರೂ ಹೊಂದುತ್ತಿದ್ದುವು. ನಂತರ ರಸಧ್ವನಿಗಳ ಉದಯವಾದೊಡನೆ ಕೃತಿಗಳು ಕಾವ್ಯಾತ್ಮದ (ರಸ–ಧ್ವನಿ) ದೃಷ್ಟಿಯಿಂದ ವಿಷಯವನ್ನು ಕುರಿತವಾದವುಗಳಾದವು. ತರುವಾಯ ಬಂದ ಭೋಜನ ಶೃಂಗಾರಪ್ರಕಾಶವು ಎತ್ತಿಹಿಡಿದ ಅನೇಕಾಂಶಗಳಲ್ಲಿ ಸಾಹಿತ್ಯದ ಕಲ್ಪನೆಯೂ ಒಂದಾಗಿದ್ದು, ಕುಂತಕನ ವಕ್ರೋಕ್ತಿಜೀವಿತದಲ್ಲಿನ ಅದರ ಚತುರ ಪ್ರತಿಪಾದನೆಯೊಂದಿಗೆ, ಸಾಹಿತ್ಯಮೀಮಾಂಸೆ ಎಂಬ ಕೃತಿಗಳಲ್ಲಿ ಕಾವ್ಯಮೀಮಾಂಸೆಯನ್ನು ಹೊಸಬಗೆಯ ದೃಷ್ಟಿಕೋನದಿಂದ ನಿರೂಪಿಸುವುದಾರಂಭವಾಯಿತು. (ರುಯ್ಯಕನ 'ಅಲಂಕಾರ ಸರ್ವಸ್ವ'ದಲ್ಲಿ ಉಕ್ತವಾದ ಅವನ 'ಸಾಹಿತ್ಯಮೀಮಾಂಸೆ' ಇನ್ನೂ ಬೆಳಕಿಗೆ ಬಂದಿಲ್ಲ; ಬೇರೊಂದು ಕೃತಿ ಅಶುದ್ಧ ರೂಪದಿಂದ ಪ್ರಕಟವಾಗಿದೆ). ಇನ್ನೊಂದು ದೃಷ್ಟಿಕೋನವೇ ಗುಣ–ಶಬ್ದಾಲಂಕಾರಗಳಿಂದಾರಂಭಿಸಿ ರಸಧ್ವನಿಗಳವರೆಗಿನ ಎಲ್ಲ ಕಾವ್ಯಾಂಶವನ್ನೊಳಗೊಳ್ಳುವ ಸಾಹಿತ್ಯಾನಂದ ಅಥವಾ ಚಮತ್ಕಾರದ್ದು. ನಾವು ಕಾವ್ಯವನ್ನೋದಿದಾಗ ಒಂದು ವಿಧವಾದ ಆನಂದ ಹೊಂದುವುದು ಸ್ಪಷ್ಟ; ಇದು ಒಂದೆಡೆ ಧ್ವನಿ ಪರಿಣಾಮದಿಂದ, ಇನ್ನೊಂದೆಡೆ ಅದ್ಭುತ

ಮೂಲ: Names of Sanskrit Poetics

—ಡಾ. ವಿ.ರಾಘವನ್.

ವಿಚಾರದಿಂದ, ಮತ್ತೊಂದೆಡೆ ಭಾವಸ್ಪಂದನದಿಂದ ಉಂಟಾಗಬಹುದು; ಆದರೆ ಅದು ಒಂದೇ ಆಸ್ವಾದ.

ರಸದ ಕಲ್ಪನೆಯಂತೆ ಚಮತ್ಕಾರದ ಕಲ್ಪನೆಯೂ ಅಲಂಕಾರಶಾಸ್ತ್ರದಲ್ಲಿ ಪಾಕಶಾಸ್ತ್ರದಿಂದ ಬಂದಿರುವುದು ವಿಚಿತ್ರ ಕಾಕತಾಳೀಯವಾಗಿದೆ. ಅದರ ಮೊದಲಿನ ಅರ್ಥದ ಚರಿತ್ರೆ ಅಸ್ಪಷ್ಟವಾಗಿದ್ದು, ಕೋಶಗಳು ಅನಂತರದ ಅರ್ಥಗಳನ್ನಷ್ಟೇ ತಿಳಿಸಿವೆ; ಅವುಗಳಲ್ಲಿ ಆಶ್ಚರ್ಯ–ಕಾವ್ಯಾಸ್ವಾದ ಎಂಬುವು ಮುಖ್ಯವಾಗಿವೆ. ಮೂಲತಃ ಚಮತ್ಕಾರ ಶಬ್ದವು ನಾವು ರುಚಿಕರವಾದದ್ದನ್ನು ಮೆಲ್ಲುವಾಗ ನಾಲಗೆಯಿಂದ ಹಾಕುವ ಲೊಟ್ಟೆಯಂತಹ ಅನುಕರಣವಾಚಕ ಶಬ್ದವಾಗಿದ್ದು, ಅದರ ಅರ್ಥವಿಸ್ತಾರದ ದಾರಿಯಲ್ಲಿ ಸಂತೋಷದಾಯಕವಾದ ಭಾವನೆಯ ಬಗ್ಗೆ ಎಂಬ ಅರ್ಥವನ್ನು ಕೊಡುವಂತಾಯಿತೆಂದು ತೋರುತ್ತದೆ. ಸಾಹಿತ್ಯದರ್ಪಣಕಾರನ ಪೂರ್ವಿಕ, ನಾರಾಯಣನೆಂಬುವನು ಚಮತ್ಕಾರವೆಂದರೆ ಚಿತ್ತವಿಸ್ತಾರವೆಂದೊರೆದು, ಎಲ್ಲ ರಸಾನುಭವವೂ ಚಿತ್ತವಿಸ್ತಾರದಂಥದೆಂದೂ ಅದ್ಭುತರಸವು ಅದಕ್ಕೆ ಉತ್ತಮ ಉದಾಹರಣೆ ಎಂದೂ ಹೇಳಿದನು. ಆದರೆ ಸಾಹಿತ್ಯಸ್ವಾದನೆಯ ಸಾಮಾನ್ಯ ಹಾಗೂ ಸರ್ವಸಂಗ್ರಾಹಕ ಹೆಸರಾಗಿ ಚಮತ್ಕಾರ ಶಬ್ದವು ಧ್ವನ್ಯಾಲೋಕದಲ್ಲಿ ಬರುತ್ತದೆ; ಅದೇ ಅರ್ಥದಲ್ಲಿ ಅಭಿನವಗುಪ್ತನ ಲೋಚನವೂ ಅದನ್ನು ೧೪ ಸಲ ಪ್ರಯೋಗಿಸಿದೆ. (೨ ನೆಯ ಸಲ ಪ್ರಯೋಗಿಸುವ ಸಂದರ್ಭದಿಂದ ಭಟ್ಟನಾಯಕನೂ ಅದೇ ಅರ್ಥದಲ್ಲಿ ಅದನ್ನು ಬಳಸುವನೆಂದು ತಿಳಿಯುವುದು. ಮುಂದೆ ಅಭಿನವಗುಪ್ತನು ರಸವು ಚಮತ್ಕಾರದ ಸ್ವರೂಪದ್ದೆಂದು ಬಣ್ಣಿಸುವ), ಕುಂತಕನೂ ಆ ಶಬ್ದವನ್ನು ಅದೇ ಅರ್ಥದಲ್ಲಿ ಬಳಸುವ; ಅಗ್ನಿಪುರಾಣವು ಆತ್ಮನ ಚೈತನ್ಯ, ಚಮತ್ಕಾರ, ಹಾಗೂ ರಸಗಳನ್ನು ಸಮೀಕರಿಸಿದೆ (೩೩೯, ೨).

ಎಷ್ಟೋ ವಿಷಯಗಳಲ್ಲಿ ಹೊಸತನ, ಸ್ವಂತಿಕೆಗಳಿಂದ ತಲೆಯೋಡಿಸಿದ ಅಭಿನವಗುಪ್ತನ ಶಿಷ್ಯ, ಕ್ಷೇಮೇಂದ್ರನು ಕಿರಿದಾದರೂ ಕುತೂಹಲಪೂರ್ಣವಾದ ತನ್ನ 'ಕವಿಕಂಠಾಭರಣ'ದಲ್ಲಿ ಈ ಚಮತ್ಕಾರದ ದೃಷ್ಟಿಯಿಂದ ಕಾವ್ಯಪರಿಶೀಲನೆಗೈದಿದ್ದಾನೆ. ಇದರ ೩ನೆಯ ಸಂಧಿ, ಚಮತ್ಕಾರ ಕಥನದಲ್ಲಿ ಕಾವ್ಯಚಮತ್ಕಾರದ ಅಂಶಗಳನ್ನು (ಅವಿಚಾರಿತ ರಮಣೀಯ, ವಿಚಾರಿತ ರಮಣೀಯ, ಸಮಸ್ತಸೂಕ್ತವ್ಯಾಪೀ, ಸೂಕ್ತೈಕದೇಶದೃಶ್ಯ, ಶಬ್ದಗತ, ಅರ್ಥಗತ, ಶಬ್ದಾರ್ಥಗತ, ಅಲಂಕಾರಗತ, ರಸಗತ, ಪ್ರಖ್ಯಾತವೃತ್ತಿಗತ ಎಂದು ಹತ್ತು ಭಾಗಗಳನ್ನಾಗಿ ವಿಂಗಡಿಸಿದ್ದಾನೆ.

ಆದರೆ ಚಮತ್ಕಾರ ದೃಷ್ಟಿಯ ಮೊದಲ ನಿಯತ ಕಾವ್ಯಮೀಮಾಂಸಾಕೃತಿ, ಸಿಂಹಭೂಪಾಲ (೧೩೩೦) ನ ಆಶ್ರಯದಲ್ಲಿದ್ದ ವಿಶ್ವೇಶ್ವರನ 'ಚಮತ್ಕಾರಚಂದ್ರಿಕೆ', (ಇದು ಇನ್ನೂ ಅಪ್ರಕಟಿತ. ಈ ವಿಶ್ವೇಶ್ವರನು ೧೮ನೆಯ ಶತಮಾನದ 'ಅಲಂಕಾರ ಕೌಸ್ತುಭ'ದ ವಿಶ್ವೇಶ್ವರನಿಂದ ಭಿನ್ನ) ಇದು ಆರಂಭದಲ್ಲಿಯೇ ಚಮತ್ಕಾರವು

ಸಹೃದಯನ ಕಾವ್ಯವಾಚನದ ಆನಂದವೆಂದೂ, ಕಾವ್ಯದಲ್ಲಿಯ ಚಮತ್ಕಾರಕ್ಕೆ ಗುಣ–ರೀತಿ, ವೃತ್ತಿ–ಪಾಕ, ಶಯ್ಯೆ–ಅಲಂಕಾರ, ರಸ ಈ ಏಳು ಆಲಂಬನಗಳೆಂದೂ ತಿಳಿಸುತ್ತದೆ: ಚಮತ್ಕಾರಸ್ತು ವಿದುಷಾಂ ಆನಂದ ಪರಿವಾಹಕೃತ್ । ಗುಣಂ ರೀತಿಂ ರಸಂ ವೃತ್ತಿಂ ಪಾಕಂ ಶಯ್ಯಾಮಲಂಕೃತಿಂ । ಸಪ್ತೈತಾನಿ ಚಮತ್ಕಾರ ಕಾರಣಂ ಬ್ರುವತೇ ಬುಧಾಃ ॥ ಚಮತ್ಕಾರ ಸ್ವರೂಪವನ್ನಾಧರಿಸಿ ವಿಶ್ವೇಶ್ವರನು ಕಾವ್ಯವನ್ನು ಚಮತ್ಕಾರಿ (ಶಬ್ದಚಿತ್ರ), ಚಮತ್ಕಾರಿತರ (ಅರ್ಥಚಿತ್ರ, ಗುಣೀಭೂತವ್ಯಂಗ್ಯ), ಚಮತ್ಕಾರಿತಮ (ವ್ಯಂಗ್ಯಪ್ರಧಾನ) ಎಂದು ಮೂರು ವಿಧವಾಗಿ ವಿಂಗಡಿಸಿದ್ದಾನೆ.

೧೭೨೯ ರಲ್ಲಿ ಮಾಥುರ ಮಿಶ್ರಗಂಗೇಶನ ಮಗ ಹರಿಪ್ರಸಾದನು ೭ ಪ್ರಕರಣಗಳ 'ಕಾವ್ಯಾಲೋಕ'ವನ್ನು ರಚಿಸಿ, ಚಮತ್ಕಾರವನ್ನೇ ಕಾವ್ಯದ ಆತ್ಮವೆಂದು ಚಮತ್ಕಾರದ ನಿಲುವಿನಿಂದ ಕಾವ್ಯದ ಸಮಸ್ಯೆಯನ್ನು ನೇರವಾಗಿಯೂ ಸರಳವಾಗಿಯೂ ಬಗೆಹರಿಸಿದ: ವಿಶಿಷ್ಟ ಶಬ್ದರೂಪಸ್ಯ ಕಾವ್ಯಸ್ಯಾತ್ಮಾ ಚಮತ್ಕೃತಿಃ । ಉತ್ಪತ್ತಿ ಭೂಮಿಃ ಪ್ರತಿಭಾ ಮನಾಗತ್ರೋಪಪಾದಿತಂ ॥

ಈ ಚಮತ್ಕಾರವನ್ನಾಧರಿಸಿಯೇ ಜಗನ್ನಾಥನು ರಸಗಂಗಾಧರದಲ್ಲಿ ಸರ್ವ ಸಂಗ್ರಾಹಕವಾದ ಕಾವ್ಯಲಕ್ಷಣವಿತ್ತುದು. ರಮಣೀಯತೆಯ ಧ್ಯಾನದಿಂದ ಒದಗುವ ಲೋಕೋತ್ತರ ಕಲಾನಂದವೇ ಚಮತ್ಕಾರ, ಅಂಥ ರಮಣೀಯವಾದ ಅರ್ಥವನ್ನು ಪ್ರತಿಪಾದಿಸುವ ಶಬ್ದರೂಪವೇ ಕಾವ್ಯ: ರಮಣೀಯಾರ್ಥ ಪ್ರತಿಪಾದಕ ಶಬ್ದಃ ಕಾವ್ಯಂ । ರಮಣೀಯತಾ ಚ ಲೋಕೋತ್ತರಾಹ್ಲಾದಜನಕಜ್ಞಾನಗೋಚರತಾ । ಲೋಕೋತ್ತರತ್ವಂ ಚ ಆಹ್ಲಾದಗತಃ ಚಮತ್ಕಾರ ಪರ್ಯಾಯಃ ಅನುಭವ ಸಾಕ್ಷಿಕೋ ಜಾತಿ ವಿಶೇಷಃ ॥

■ ■

ಮೂಲ: Names of Alankara Shastra : some concepts of Alankara Shastra
—ಡಾ. ವಿ. ರಾಘವನ್.

ಪಾರ್ಶ್ವನಾಥಾಷ್ಟಕ

ಎಸ್. ವ್ಹಿ. ಅಯ್ಯನಗೌಡರ

ಕೊಲ್ಲಾಪುರದ ಶ್ರೀ ಲಕ್ಷ್ಮೀಸೇನ ಭಟ್ಟಾರಕ ಜೈನ ಮಠದ ಹಸ್ತಪ್ರತಿಭಾಂಡಾರದ ೨೫೬ ನೆಯ ಕ್ರಮಾಂಕದ ಕಟ್ಟಿನ ಮೊದಲಿನ ಕೆಲವು ಗರಿಗಳಲ್ಲಿ ವೈದ್ಯಶಾಸ್ತ್ರಕ್ಕೆ ಸಂಬಂಧಿಸಿದ ವಿಷಯವೂ ಮುಂದಿನ ಕೆಲವು ಗರಿಗಳಲ್ಲಿ ನೇಮಿನಾಥನ ಕೋಲುಪದ (೧೩ ನುಡಿಗಳು), ಪಾರ್ಶ್ವನಾಥನ ಹಾಡು (೭ ನುಡಿಗಳು) ಗಳೂ ಇದ್ದು, ಕೊನೆಗೆ ಒಂದು ಗರಿಯಲ್ಲಿ ಈ ಪಾರ್ಶ್ವನಾಥಾಷ್ಟಕವಿದೆ. ಕರ್ನಾಟಕ ಕವಿಚರಿತೆ (ದ್ವಿತೀಯ ಸಂಪುಟ) ಯಲ್ಲಿ "ಪಾರ್ಶ್ವನಾಥಾಷ್ಟಕ" ಹೆಸರಿನ ಕೃತಿಗೆ ಸಂಬಂಧಪಟ್ಟ ಒಂದು ಪದ್ಯ ಹೀಗೆ ಉಕ್ತವಾಗಿದೆ:

> ಮುನ್ನ ಮಾಡಿದ ದುಶ್ಚರಿತ್ರದೆ ಹಿಂದೆ ಕೆಟ್ಟುದೆ ಸಾಲದೆ
> ನಿನ್ನ ಭಕ್ತಿಯು ಪರುಷ ಮುಟ್ಟಿದ ಲೋಚವಂದದೆ ಶುದ್ಧನಾಂ
> ನಿನ್ನ ಪಾದ ಸರೋಜಯುಗ್ಮದ ಸೇವೆಯಂ ಬಿಡುದಿರ್ಪೆನಾಂ
> ನಿನ್ನ ರೂಪನೆ ಮಾಡು ಬೇಗದ ಪಾರ್ಶ್ವನಾಥ ಜಿನೇಶ್ವರಾ

ಈ ಪದ್ಯ, ಪ್ರಸ್ತುತ ಪಾರ್ಶ್ವನಾಥಾಷ್ಟಕದಲ್ಲಿ ಇಲ್ಲದ ಕಾರಣ ಎರಡೂ ಭಿನ್ನ ವೆಂದು ವೇದ್ಯವಾಗುತ್ತದೆ. ಈ ಪಾರ್ಶ್ವನಾಥಾಷ್ಟಕದ ಕರ್ತೃ ಗೊತ್ತಿಲ್ಲ. ಇದಕ್ಕೆ ಬಳಸಿದ ಉತ್ಸವವೆಂಬ ಅಕ್ಷರವೃತ್ತಕ್ಕೆ ಅಲ್ಲಲ್ಲಿ ಚ್ಯುತಿಬಂದಿದೆ. ವೃತ್ತದ ಅನುಕೂಲ ಕ್ಕಾಗಿ ಭಾಷೆಯನ್ನು ಆಗಾಗ ಹಿಗ್ಗಿಸಿ-ಕುಗ್ಗಿಸಿ ಬರೆಯಲಾಗಿದ್ದು, ನಿರರ್ಗಳ ಭಕ್ತಿಯ ಮೊರೆಯ ಮುಂದೆ ಈ ದೋಷಗಳು ಕಾಣದಂತಾಗುತ್ತವೆ. ಈ ವರೆಗೆ ಅಲಭ್ಯವಾಗಿದ್ದ ಈ ಪಾರ್ಶ್ವನಾಥಾಷ್ಟಕ ಪ್ರಥಮಸಲ ಬೆಳಕಿಗೆ ಬರುತ್ತಿದ್ದು, ಅದರ ಪಾಠ ಹೀಗಿದೆ :

ಪಾರ್ಶ್ವನಾಥಾಷ್ಟಕ

> [೧]ಶ್ರೀ ಧೇವೇಂದ್ರ[೧] ಮುನೀಂದ್ರವಂದಿತ ಪಾದಪದ್ಮವಿರಾಜಿತಂ
> ಕ್ರೋಧ ಮಾನ [೨]ಮಾಯಾ[೨]ದಿ ಲೋಭಮದಂಗಳಂ ನೆಱೆ ಗೆಲ್ದೆ ನೀಂ
> ಬೋಧದಿಂ ಮೂಲೋಕಮೆಲ್ಲಮನೊರ್ಮೆಯೇ ನೆಱೆ ಕಾಣ್ಬೆ ನೀಂ
> ಭೇದಭೇದ ತ್ರಿರತ್ನಮಂ ಕೊಡು ಪಾರ್ಶ್ವನಾಥ ಜೀನೇಶ್ವರಾ ॥ ೧ ॥

೧–೧ ಛಂದಸ್ಸಿಗಾಗಿ 'ಶ್ರೀ ದೆವೆಂದ್ರ' ಎಂದು ಓದಿರಿ.

೨–೨ ಛಂದಸ್ಸಿಗಾಗಿ 'ಮಯ' ಎಂದು ಓದಿರಿ.

ಜೀವನಾದಿ [೩]ಚಂರಾಶಿ[೩] ಲಕ್ಷದ ಯೋಗಿಯಿಂ ಪೊರಳುತ್ತಮೇ
ಕಾವರಿಲ್ಲದೆ ನಾಲ್ಕುಗತ್ಯದಿ ಹಿಜ್ಜಿನೇ ತಿರಿತಂದು ನಾಂ
ಭಾವಶುದ್ಧಿ ನಿಸಿಲ್ಲದನ್ನಕ ಮಾಯಮೋಹದೊಳಿರ್ದೆನಾಂ
ದೇವ ನಿಮ್ಮಡಿಗಂಡೆ ರಕ್ಷಿಸು ಪಾರ್ಶ್ವನಾಥ ಜಿನೇಶ್ವರಾ ॥ ೨ ॥

ಹಿಂದೆ ನಿಮ್ಮ ಪದಾಬ್ಜಮಂ ಮನವೊಲ್ದು ಪೂಜಿಸಲೊಲ್ಲದೆ
ಬಂದೆ ಸಂತಸ ಸಾರವಾರಿಧಿ ದುಃಖಮೆಲ್ಲಮನುಂಡೆ ನಾಂ
ಬೆಂದ ಸಂಶ್ರುತಿಗಳಿಗೆ ನಿಮ್ಮಯ ಕಂದನಾಗಿಯೆ ಬಾಳ್ವೆನಾಂ
ಕುಂದನೋಡದೆ ರಕ್ಷಿಸೆನ್ನನು ಪಾರ್ಶ್ವನಾಥ ಜಿನೇಶ್ವರಾ ॥ ೩ ॥

ಪುಟ್ಟಿ ನಾಲ್ಕುಗತ್ಯಂತರಾಳದೊಳುಂಡು ಕರ್ಮವಿಪಾಕಮಂ
ಕೆಟ್ಟಧಾನ್ಯಗಳೆಂಬ [ಸರ್ವ]ಪರಿಗ್ರಹಂಗಳ ಮೋಹದಿಂ
ಬಟ್ಟೆದಪ್ಪಿ ಭವಾಂಧಕಾನನ ಮಧ್ಯೆ ವರ್ತಿಸುತಿರ್ದೆನಾಂ ಸ
ದೃಷ್ಟಿಕೊಟ್ಟೂ ರಕ್ಷಿಸೆನ್ನನು ಪಾರ್ಶ್ವನಾಥ ಜಿನೇಶ್ವರಾ ॥ ೪ ॥

ಗೋವಕಾದನ ಪಾವತೊಟ್ಟನ ಮೋಹದಿಂ ಮೊಱೆಗೆಟ್ಟೆನಾಂ
ದೇವರೆಂದತಿ ಮೂರು ಮೂಢದಿನೊಂದು ಬೆಂದಿರುತಿರ್ದೆನಾ
ಸಾವಪುಟ್ಟುವ ದಂದುಗಕ್ಕೊಳಗಾಗದಿರ್ದ ಮಹಾತ್ಮ ನೀಂ
ದೇವ ನಿಮ್ಮಡಿಗಂಡೆ ರಕ್ಷಿಸು ಪಾರ್ಶ್ವನಾಥ ಜಿನೇಶ್ವರಾ ॥ ೫ ॥

ಚಕ್ರವರ್ತಿಯುಮಾಗಿ ಸಂಪದವುಂಡು ಬಾಳ್ವಲಿವೊರ್ವನೆ
ಮಿಕ್ಕನಾರಕ ದುಃಖದೆಳೆಯೊಳ್ಪೊದಳುವಾಗಲದೋರ್ವನೆ
ಅಕ್ಕಟಾಯಿದೆ ಕೆಟ್ಟೆನೆಂದರೆ ಕಾಪರಾರೂ ಕೇಳಲೆ
ಶಕ್ರವಂದಿತ ರಕ್ಷಿಸೆನ್ನನು ಪಾರ್ಶ್ವನಾಥ ಜಿನೇಶ್ವರಾ ॥ ೬ ॥

ಸಾರಮಲ್ಲದ ದೇಹಮಂ ಶೀಲಾದರಂ [೪]ಮಾ[೪]ಡಲೊಲ್ಲದೆ
ಘೋರದುಃಖ [೫]ಪಂಚಾ[೫]ಗ್ನಿಯಿಂ ಸುಡೆ ಬೆಂದು ನೊಂದಿರುತಿರ್ದೆನಾ
ಮಾರದೂರಕೃಪಾಳು ಶಾಶ್ವತವಾದ ಸೌಖ್ಯದ ಬಟ್ಟೆಯಿಂ
ತೋರಿ [೬]ಪೋಪಂತೆ[೬] ರಕ್ಷಿಸೆನ್ನನು ಪಾರ್ಶ್ವನಾಥ ಜಿನೇಶ್ವರಾ ॥ ೭ ॥

೩–೩ ಎಂಬತ್ತುನಾಲ್ಕು ಅರ್ಥದ ಈ ಪದದಲ್ಲಿ ಒಂದು ಮಾತ್ರೆ ಅಧಿಕವಾಗಿದೆ.
೪–೪ ಛಂದಸ್ಸಿಗಾಗಿ 'ಮ' ಎಂದು ಓದಿರಿ.
೫–೫ ಇಲ್ಲಿ ಒಂದು ಮಾತ್ರೆ ಅಧಿಕವಾಗಿದೆ.
೬–೬ ಇಲ್ಲಿ ಒಂದು ಮಾತ್ರೆ ಅಧಿಕವಾಗಿದೆ.

ನಿತ್ಯನಿರ್ಮಲ ಬೋಧರೂಪ ನಿರಂಜನಂ ನಿರವದ್ಯನೀಂ
ಸತ್ಯಶೌಚ ಸುಭಾವ ಸದ್ಗುಣ ಶಾಶ್ವತ ಶ್ರೀಯಾಳ್ದನೀಂ
ಭೃತ್ಯನಾಗಿಯೆ ನಿಮ್ಮಸಾರಿದೆ ಮೋಕ್ಷ ಮಾರ್ಗವ ತೋಱಿಯೋ
ಮುಕ್ತಿವಲ್ಲಭ ರಕ್ಷಿಸೆನ್ನ [೭]ಶ್ರೀ[೭] ಪಾರ್ಶ್ವನಾಥ ಜಿನೇಶ್ವರಾ ॥ ೮ ॥

೭–೭ ಇಲ್ಲಿ ಒಂದು ಮಾತ್ರೆ ಅಧಿಕವಾಗಿದೆ.

ಜನಪದ ಕವಿಚರಿತೆ

ಎಂ. ಎಸ್. ಲಕ್ಷ್ಮೀ

೧. ಕಾದರೊಳ್ಳಿಯ ನೀಲಕಂಠ ಕವಿ

ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲೂಕಿನ ಕಾದರೊಳ್ಳಿ, ಮಲಪ್ರಭಾ ನದಿಯ ದಂಡೆಯ ಮೇಲಿನ ಒಂದು ಗ್ರಾಮ. ಕಲ್ಯಾಣದಿಂದ ಉಳಿವಿಗೆ ಹೊರಟ ಶರಣರಿಗೂ ಬಿಜ್ಜಳನ ಸೈನ್ಯಕ್ಕೂ ಈ ಗ್ರಾಮದಲ್ಲಿಯೇ ಕಾಳಗ ನಡೆಯಿತೆಂದು ತಿಳಿದುಬರುತ್ತದೆ. ಇದು ಅದೃಶಯ್ಯ ಶಿವಯೋಗಿಗಳ ಪುಣ್ಯಸ್ಥಳ. ಇಲ್ಲಿ ಅಧ್ಯಾತ್ಮವಿದ್ಯೆಯ ಜ್ಞಾನದಾಸೋಹ ನಿತ್ಯ ನಡೆಯುತ್ತಿದೆ. ಸಾಹಿತ್ಯ, ಸಂಗೀತ, ಕಲಾತಜ್ಞರ ಜನ್ಮ ಭೂಮಿಯೂ ಇದಾಗಿದೆ. ಇಂಥ ಹಿರಿಮೆಯ ಗ್ರಾಮದವರು ಜನಪದ ಕವಿ ಶ್ರೀ ನೀಲಕಂಠಪ್ಪನವರು.

೧೮೯೫ ರಲ್ಲಿ ಕಾದರೊಳ್ಳಿಯಲ್ಲಿ ಜನಿಸಿದ ಕವಿಯ ತಂದೆ ರುದ್ರಪ್ಪ, ತಾಯಿ ತುಳಸಮ್ಮಾ. ಸಾಮಾನ್ಯಮನೆತನದಲ್ಲಿ ಹುಟ್ಟಿದ ಕವಿ, ತಂದೆಯಿಂದ ಬಂದ ಪತ್ತಾರಿಕೆಯನ್ನೇ ಉದ್ಯೋಗವನ್ನಾಗಿ ಮುಂದುವರಿಸಿಕೊಂಡು ಹೋಗಬೇಕಾಯಿತು. ದೊರೆತ ಶಿಕ್ಷಣ ಕೇವಲ ನಾಲ್ಕನೆಯ ಇಯತ್ತೆ. ಆದರೂ ಕೈಕುಸುರಿನ ಮೂರ್ತಿಕೆತ್ತನೆಯಲ್ಲಿ ನೀಲಕಂಠಪ್ಪನವರದು ಎತ್ತಿದಕೈ.[೧] ಹಾಗೆಯೆ ಸಾಹಿತ್ಯ, ಸಂಗೀತ, ಅಧ್ಯಾತ್ಮ ವಿದ್ಯೆಯಲ್ಲೂ ಬಲ್ಲಿದರು. ಅದೃಶಯ್ಯ ಯೋಗಿಗಳ ಒಡನಾಟದಿಂದ ಅನುಭಾವ, ಶಾಸ್ತ್ರಗಳನ್ನು ಅಳವಡಿಸಿಕೊಂಡವರು. ತಳೇವಾಡಿ ನಬಿಯ ದಾಸರಾಟ ನೋಡಿ ಪ್ರಭಾವಿತರಾದ ನೀಲಕಂಠಪ್ಪನವರಿಗೆ, ಬೈಲವಾಡದ ರಾಯಪ್ಪ ಮಾಸ್ತರರು ಬರೆದು, ತಾವೇ ಹಣಸಿಕಟ್ಟಿ ಜಾತ್ರೆಯಲ್ಲಿ ಆಡಿ ತೋರಿಸಿದ ಪುಂಡಲೀಕ ಆಟ ಹೆಚ್ಚಿನ ಪ್ರೇರಣೆಯನ್ನು ನೀಡಿತು. ಇಟಗಿಯ ಗಣೇಶಭಟ್ಟರಿಂದ ಆಶೀರ್ವಾದ ಹೊತ್ತುಕೊಂಡು ಸಂಗೀತದ ಗತ್ತು, ತಾಳ, ಲಯಗಳನ್ನು ಕರಗತಮಾಡಿಕೊಂಡರು. ಹೀಗೆ ಕೆಲವು ಬಲ್ಲವರಿಂದ ಸಾಹಿತ್ಯ, ಸಂಗೀತ, ಅಧ್ಯಾತ್ಮವಿದ್ಯೆಗಳನ್ನರಿತುಕೊಂಡು ತಮ್ಮ ಪ್ರತಿಭಾ

---

೧ ಧಾರವಾಡದ ಉಳವಿ ಬಸವೇಶ್ವರ ಗುಡಿಯ ಮಹಾದ್ವಾರ, ಕಾದರೊಳ್ಳಿ ವೀರಭದ್ರದೇವರ ಮೂರ್ತಿ, ಹಂಪೆಯ ಗಾಯತ್ರಿ, ಯಡಹಳ್ಳಿಯ (ಬಾಗಲಕೋಟ ತಾಲೂಕ) ನಾಗಲಿಂಗ ದೇವರ ದ್ವಾರ, ತಾಂಹಾಳ ಬಸವೇಶ್ವರ ಮೂರ್ತಿ, ಕಿತ್ತೂರಲ್ಲಿ ಚನ್ನಮ್ಮನ ಮೂರ್ತಿ ಮೊದಲಾದ ಕೆತ್ತನೆಯ ಕೆಲಸ ಮಾಡಿ ಪ್ರಸಿದ್ಧ ಶಿಲ್ಪಿ ಎನಿಸಿದ್ದಾರೆ.

ಬಲದಿಂದ ಹಲವಾರು ಕೃತಿಗಳನ್ನು ಸೃಷ್ಟಿಸಿ ಜಾನಪದ ಲೋಕಕ್ಕೆ ನೀಡಿದರು. ಕಿವಿಯಿಂದ ಕಿವಿಗೆ, ಬಾಯಿಂದ ಬಾಯಿಗೆ,— ಹರಿದುಬಂದ ಜನಪದ ರಂಗಭೂಮಿಯತ್ತ ನೀಲಕಂಠಪ್ಪನವರಿಗೆ ಹೆಚ್ಚಿನ ಒಲವು; ಪ್ರೀತಿ.

ಇವರು ಆಯ್ದುಕೊಂಡ ಕಥೆಗಳು ಹೆಚ್ಚಾಗಿ ಪೌರಾಣಿಕ ಮತ್ತು ಐತಿಹಾಸಿಕ. ಶಿವನ ಇಲ್ಲವೆ ಕೃಷ್ಣನಲೀಲೆ ಇಲ್ಲವೆ ಶಿವಭಕ್ತರ ಪವಾಡಗಳನ್ನೊಳಗಂಡ ಘಟನೆಗಳೇ ಇವರ ಕೃತಿಗಳಲ್ಲಿ-ಅಡಕವಾಗಿವೆ. ಇದರಿಂದಾಗಿ ಅವುಗಳಲ್ಲಿ ನೀತಿ, ಉಪದೇಶ ಸೂರೆಯಾಗಿದೆ. ಅಧ್ಯಾತ್ಮದ ಕೆಚ್ಚು, ಹಾಡಿನ ಗತ್ತು, ಸರಳವೂ ಪ್ರಾಸಬದ್ಧವೂ ಆದ ಸಂಭಾಷಣೆಯ ವೈಖರಿಗಳಿಂದ ಇವರ ಆಟಗಳಿಗೆ ಶ್ರೀ ಸಾಮಾನ್ಯರ ಹೆಚ್ಚಿನ ಮನ್ನಣೆ ದೊರೆತಿದೆ. ದಾಸರಾಟ, ರಾಜಾನಾಟ, ನಬಿಯಾಟಗಳ ಹಿನ್ನೆಲೆಯಲ್ಲಿ ಇವರ ಆಟಗಳು ಮೂಡಿಬಂದಿವೆ. ಪೌರಾಣಿಕ ಸಣ್ಣಾಟಗಳಲ್ಲಿ ಕುಲಗೋಡ ತಮ್ಮಣ್ಣನ 'ಶ್ರೀಕೃಷ್ಣ ಪಾರಿಜಾತ' ಸಣ್ಣಾಟಗಳ ರಾಜ ಎನಿಸಿದಂತೆ, ಸಾಮಾಜಿಕ ಸಣ್ಣಾಟಗಳಲ್ಲಿ ರಾಮಪ್ಪಮಾಸ್ತರರ 'ಸಂಗ್ಯಾಬಾಳ್ಯಾ' ಜಯಭೇರಿ ಹೊಡೆದಂತೆ ಈ ಕವಿಯ 'ತಿರು ನೀಲಕಂಠ' ಅತ್ಯಂತ ಜನಪ್ರಿಯವಾದ ಶರಣರಾಟವೆನಿಸಿದೆ; ಕಾದರೊಳ್ಳಿ ಆಟವೆಂದೂ ಪ್ರಸಿದ್ಧಿಹೊಂದಿದೆ.

ನೀಲಕಂಠ ಕವಿಗಳು ಆಟದಲ್ಲಿ ಸ್ವತಃ ಪಾತ್ರವಹಿಸಿದ್ದು ಅಪರೂಪ. ಆಟ ಬರೆಯುವುದು, ಹಾಡು ರಚಿಸುವುದು, ಪೇಟಿ ಹಾಗೂ ಪಿಟೀಲು ಬಾರಿಸುವುದು, ಅದರಂತೆ ದಿಗ್ದರ್ಶಕ (ಆಟದ-ಮಾಸ್ತರ)ರಾಗಿ ಆಟ ಕಲಿಸುವುದು— ಇವರಿಗೊಂದು ಹವ್ಯಾಸವೇ (Hobby) ಆಗಿತ್ತು. ಇದರಿಂದಾಗಿ ತಮ್ಮ ಮೂಲ ಉದ್ಯೋಗವಾದ ಪತ್ತಾರಿಕೆಗೆ ಪೆಟ್ಟೂ ಬಿದ್ದುದುಂಟು. ಧೈರ್ಯಗುಂದದೆ ಕಲೆಯ ಬೆಳವಣಿಗೆಗೆಂದು ಆಟ, ಕೀರ್ತನೆ, ಪುರಾಣ ಹಾಗೂ ಹಾಡುಗಳನ್ನು ರಚಿಸುತ್ತಬಂದರು. ಕಾದರೊಳ್ಳಿಯ ಜನರ ಅಪೇಕ್ಷೆಯ ಮೇರೆಗೆ ಅದೃಶಯ್ಯ ಯೋಗಿಗಳ ಪುರಾಣ ಹಾಗೂ ಅನೇಕ ಹಾಡುಗಳನ್ನು ರಚಿಸಿದ್ದಾರೆ. ಅವರದೇ ಒಂದು ಮೇಳಕಟ್ಟಿಕೊಂಡು ಊರೂರು ಅಲೆದಾಡಿ ಆಟ ಆಡಿದ್ದುಂಟು. ಕೆಲವೊಂದು ಸಲ ಗಾಡಿಚಾರ್ಜ್ ದೊರಕದೆ ಬಹುದೂರದ ಹಳ್ಳಿಗೆ ಹೋಗಿ ಕಾಲ್ನಡಿಗೆಯಿಂದಲೇ ತಿರುಗಿ ಬಂದಿದ್ದರಂತೆ. ಕಥೆಗಾರ ಮತ್ತು ಆಟದ ಮಾಸ್ತರರು ಎನ್ನುವ ದೃಷ್ಟಿಯಿಂದ ಇವರನ್ನು ಯುವಕನಮರಡಿ ಸಮೀಪವಿರುವ ಕವಳೀಕಟ್ಟಿ ಗ್ರಾಮದ ಜನರು ಬಹಳೀ ಶ್ರದ್ಧೆಯಿಂದ ಗೌರವಿಸಿದ್ದರಂತೆ.

೧೯೭೨ರಿಂದ ವೃದ್ಧಾಪ್ಯವೇತನ (ತಿಂಗಳಿಗೆ ೩೦-೦೦ ರೂ.) ಪಡೆಯುತ್ತಿದ್ದ ಕವಿಗಳು ೧೯೭೫ರ ಏಪ್ರಿಲ್ ತಿಂಗಳಲ್ಲಿ ಸ್ವರ್ಗಸ್ಥರಾದರು. ಇವರಿಗೆ ಇಬ್ಬರು ಗಂಡು ಮಕ್ಕಳು, ಒಬ್ಬ ಹೆಣ್ಣುಮಗಳು. ಹಿರಿಯಮಗ ಮೂರ್ತಿ ಕೆತ್ತುವ ಕೆಲಸದಲ್ಲಿ

ನುರಿತವರು. ಸೂಳೀಭಾವಿಯಲ್ಲಿ ಅವರ ವಾಸ್ತವ್ಯ. ಕಿರಿಯಮಗ ಕಾದರೊಳ್ಳಿಯಲ್ಲಿ ಪ್ರಾಥಮಿಕ ಶಾಲೆಯ ಶಿಕ್ಷಕರು. ತಂದೆಯಂತೆ ಒಬ್ಬ ಶಿಲ್ಪಕಲೆಯಲ್ಲಿ ಬಲ್ಲಿದವನಾದರೆ ಇನ್ನೊಬ್ಬ ನಾಟಕ, ಹಾಡು ರಚಿಸುವುದರಲ್ಲಿ ಆಸಕ್ತ.

ನೀಲಕಂಠ ಕವಿಗಳು ಗಳಿಸಿದ್ದು—ದುಡ್ಡು ದವಲತ್ತು ಅಲ್ಲ, ಜನತೆಯ ಪ್ರೀತಿಯನ್ನು. 'ನಾನು ಹೇಗೋ ಬದುಕಿದೆ, ನನಗೆ ಜನತೆ ಸಹಾಯನೀಡಿತು. ಇಂದಿನ ಪರಿಸ್ಥಿತಿ ಹಾಗಿಲ್ಲ, ನನ್ನ ಮಕ್ಕಳು ಹೇಗೆ ಜೀವಿಸುತ್ತಾರೊ ?' ಎಂಬ ಉದ್ಗಾರತೆಗೆದಿದ್ದರು. ಇವರ ಅಪಾರ ಆಸ್ತಿಯೆಂದರೆ—ಮುವತ್ತೈದಕ್ಕೂ ಮಿಕ್ಕಿ ಅವರು ಬರೆದಿಟ್ಟ ಆಟಗಳು, ನೂರಾರು ಡೊಳ್ಳಿನ ಹಾಡುಗಳು, ಪುರಾಣ, ಕೀರ್ತನಗಳು ಕನ್ನಡನಾಡಿನ ಸಾರಸ್ವತಲೋಕದ ಮಕ್ಕಳಿಗಾಗಿ ಗಳಿಸಿಟ್ಟು—ಸವಿಯಲು ಬಿಟ್ಟುಹೋದ ಆಸ್ತಿ ಇದು. ಒಂದೂ ಅಚ್ಚಾಗದಿದ್ದುದು ದುರ್ದೈವದ ಸಂಗತಿಯು. ಡೊಳ್ಳಿನ ಹಾಡುಗಳನ್ನು ಕೊಟಬಾಗಿ ಮತ್ತು ಹೊಳೆನಾಗಲಾಪುರದ ಕುರುಬರಿಗೆ ಇವರು ಬರೆದು ಕೊಟ್ಟಿದ್ದರಂತೆ. ಅದೃಶಯ್ಯಯೋಗಿಗಳ ಪುರಾಣ ಕಾದರೊಳ್ಳಿಯ ಹಿರಿಯರಲ್ಲಿ ಇದ್ದುದು ತಿಳಿದು ಬಂದಿದೆ. ಉಳಿದ ಆಟಗಳ ಹಸ್ತಪ್ರತಿಗಳು ನನ್ನಲ್ಲಿದ್ದು ಅವುಗಳನ್ನು ಅಭ್ಯಸಿಸುತ್ತಿದ್ದೇನೆ.

ಬೆಳಗಾವಿಜಿಲ್ಲೆ ಸಣ್ಣಾಟಗಳ ಸೃಷ್ಟಿಯಲ್ಲಿ ಅಪಾರ ಸೇವೆಸಲ್ಲಿಸಿದೆ. ಅಂಥ ಮಹನೀಯರಲ್ಲಿ ನೀಲಕಂಠ ಕವಿಗಳ ಪಾತ್ರ ಹಿರಿಯದು. ಅವರನ್ನು ಸಣ್ಣಾಟಗಳ ಜನಕರೆಂದೂ ಕರೆದು ಜನ ಪ್ರೀತಿ—ಗೌರವಗಳನ್ನು ತೋರಿಸಿದ್ದಾರೆ. ಇವರು ರಚಿಸಿದ ಪ್ರಮುಖ ಕೃತಿಗಳನ್ನು ಇಲ್ಲಿ ಹೆಸರಿಸಲಾಗಿದೆ :

೧	ತಿರುನೀಲಕಂಠ	೨	ಮಹಾದೇವಿಯಕ್ಕ
೩	ಶ್ವೇತರಾಜ	೪	ಪಂಚಾಕ್ಷರೀ ಮಹಾತ್ಮೆ
೫	ದಾಸಾರ್ಯರಾಜನ ಚರಿತೆ	೬	ಶ್ರೀನಿವಾಸ
೭	ದೇವಸೇನ	೮	ಚೂಡಾಲಿ
೯	ತಿಲಕಾಂಬೆ	೧೦	ವೀರಸಂಗಮಾರ್ಯ
೧೧	ಗುರುಭಕ್ತಾಂಡಾರಿ	೧೨	ನಿಜಗುಣ ಶಿವಯೋಗಿ
೧೩	ಸೌಂದರನಂಬಿ	೧೪	ಧರ್ಮಸಾಮ್ರಾಜ್ಯ
೧೫	ಮೋನೇಶ್ವರ ಚರಿತೆ	೧೬	ಕುಣಾಲನ ಚರಿತೆ
೧೭	ಧ್ರುವ ಚರಿತೆ	೧೮	ಭಕ್ತಕೋಶನ ಚರಿತೆ
೧೯	ತಿಲಕಾಂಬೆ ಚರಿತೆ	೨೦	ಸಾನಂದ ಋಷಿಯ ಚರಿತೆ
೨೧	ಮಹಾನಂದೆಯ ಚರಿತೆ	೨೨	ಮೇದಾರ ಕೇತಯ್ಯ
೨೩	ಅದೃಶಯ್ಯ ಚರಿತೆ ಮುಂತಾದವುಗಳು.		

ನಾನು

ಗವಿಸಿದ್ಧ. ಎನ್. ಬಳ್ಳಾರಿ

ಅನೇಕರಿಗೆ
ಏಕಾ ಏಕಿ.
ನಾ ಬಿಂದು
ಅವರೆಲ್ಲಾ ಒಂದು
ವಕ್ರರೇಖೆ, ಕಂಸಾದಿಗಳ ಬಳಗವದು
ನಾ ಹೆಜ್ಜೆ ಇಕ್ಕುತ್ತ ಇಕ್ಕುತ್ತ
ಸರಳ ರೇಖೆಯಾಗಲು ಕೆರಳಿ,
ನನ್ನ ಮೈಯಲ್ಲಾ ಭೇದಿಸಿ ಛೇದಿಸಿ
ನನ್ನ ಭೂಮಿಂತಿಗೆ ಕಳಂಕ ಹಚ್ಚುತ್ತಾರೆ.
ಕಾರಣ ಇವರಿದ್ದಲ್ಲಿಂದ ಸಿಡಿದು ದೂರಕ್ಕೆ,
ನನ್ನದೊಂದು ವೃತ್ತ ರಚಿಸಿಕೊಂಡು
ಅಲ್ಲೇ ನನ್ನ ಬದುಕನ್ನು ಚಿತ್ರಿಸಿಕೊಂಡು
ನನ್ನ ತ್ರಿಜ್ಯವಿದ್ದಷ್ಟೇ ಕಾಲು ಚಾಚಿ
ನೆಲೆಸಿದ್ದೇನೆ.
(ನಿಶ್ಚಿಂತ)

ಸಮಾಜದಲ್ಲಿ ಭಾಷೆ

ಎ. ಮುರಿಗೆಪ್ಪ

ಭಾಷೆ ಒಂದು ಸಾಮಾಜಿಕ ಕ್ರಿಯೆ. ಸಮಾಜದ ಸ್ತರ–ವಿಸ್ತಾರಗಳಲ್ಲಿ, ಕಾಲ, ದೇಶ, ಪರಿಸರಕ್ಕೆ ತಕ್ಕಂತೆ ಅಭಿವ್ಯಕ್ತಿ ಮಾಧ್ಯಮವಾಗಿ ನಿಲ್ಲಬಲ್ಲ ಸಾಧನ ಈ ಭಾಷೆ.

ವ್ಯಕ್ತಿಗಳು ಪರಸ್ಪರ ಸಂಧಿಸಿದಾಗ ಅವರಲ್ಲಿ ಪೂರ್ವಪರಿಚಯುವಿದ್ದರೆ ಕೂಡಲೇ ಮಾತಿನಲ್ಲಿ ತೊಡಗುತ್ತಾರೆ. ಪೂರ್ವಪರಿಚಯುವಿಲ್ಲದಿದ್ದರೂ ಸಹ ಪರಸ್ಪರರು ಮಾತಿನಲ್ಲಿ ತೊಡಗಬಹುದು. ಇದಕ್ಕೆ ಕಾರಣ ಸಮಾಜ ಬಾಂಧವ್ಯ. ಅವರ ಬದುಕು ಒಂದೇ ಅಲ್ಲದಿದ್ದರೂ ತೀರ ಸನಿಹವಾಗಿರುವುದರಿಂದ ಆ ಸಮಾಜ ಪರಿಸರದ ಘಟನೆಗೆ ಸಂಬಂಧಿಸಿದಂತೆ ವಿಚಾರವಿನಿಮಯ ಇಲ್ಲಿ ವಸ್ತುವಾಗುತ್ತದೆ. ಪ್ರಸ್ತುತ ಸಂದರ್ಭಕ್ಕೆ ಸಹಕಾರಿಯಾಗಿ ಪರಸ್ಪರರ ಭಾಷೆ ಪ್ರಯೋಜನಕಾರಿಯಾಗಿ ನಿಲ್ಲುತ್ತದೆ.

ಭಾಷೆ ಸಮಾಜದ ಅಥವಾ ಜೀವನದ ಇತರ ಪ್ರತ್ಯೇಕ ಅಂಗಗಳಂತೆ ಒಂದು ಅಂಗವಲ್ಲ. ವ್ಯಕ್ತಿಯ ಪ್ರತಿ ವಿಚಾರಕ್ಕೂ ಅಭಿವ್ಯಕ್ತಿಕೊಡುವ ಭಾಷೆ ಆತನ ಜೀವನದುದ್ದಕ್ಕೂ ಹಾಸುಹೊಕ್ಕಾಗಿರುತ್ತದೆ. ಸಮಾಜದಲ್ಲಿ ವಿಚಾರ ವಿನಿಮಯಕ್ಕೆ ತೀರ ಹತ್ತಿರದ ಅನಿವಾರ್ಯ ವ್ಯವಸ್ಥೆ ಇದಾಗಿದೆ. ರಾಸಾಯನಿಕ ಕ್ರಿಯೆ ಅಥವಾ ಭೌತ ಕ್ರಿಯೆಗಳಂತೆ ಮಾನವ ಬಳಸದಿದ್ದರೂ ಕೈಯಾಡಿಸದಿದ್ದರೂ ಒಂದು ರೀತಿಯಲ್ಲಿ ಮುಂದುವರಿಯುವ ಕ್ರಿಯೆ ಇದಲ್ಲ. ಮಾನವನಿಂದ ಸಮಾಜದಲ್ಲಿ ಒಪ್ಪಿಕೊಂಡು, ಬಳಸಿಕೊಂಡು ಬಂದಿರುವುದು ಭಾಷೆ. ಒಂದು ವೇಳೆ ಬಳಕೆ ತಪ್ಪಿದ್ದಾದರೆ ಭಾಷೆ ಅಸ್ತಿತ್ವ ಕಳೆದುಕೊಳ್ಳುತ್ತದೆ. ಸಮಾಜದಲ್ಲಿ ಬಳಸುತ್ತಿರುವುದರಿಂದ ಸಮಾಜದಿಂದ ಸಮಾಜಕ್ಕೆ ಭಾಷೆ ಬದಲಾಗುತ್ತದೆ.

ತಾನಿರುವ ಸಮಾಜದ ಪ್ರತಿ ಕ್ರಿಯೆಯ, ವಸ್ತುಗಳ, ಕಟ್ಟುಕಟ್ಟಳೆಗಳಿಗೆ ಸಂಬಂಧಿಸಿದಂತೆ ಶಬ್ದ ಸಂಪತ್ತನ್ನು ಪಡೆದಿರುತ್ತದೆ.

The speech has other function other than referential and stylistic and other shifts in the linguistic context of discourse often serve to make of shifts in the function. –(Firth, Molinowsky 1935). ಭಾಷೆ ಮತ್ತು ಕ್ರಿಯೆ ಅಥವಾ ವಸ್ತು ಇವುಗಳ ನಡುವೆ

ಏಕಸಂಬಂಧ ಕಾರ್ಯವನ್ನು ಭಾಷೆ ಮಾಡುತ್ತಿದೆಯೆಂದಲ್ಲ. ಅದೇ ರಚನೆಯಿದ್ದರೂ, ಸಂದರ್ಭಕ್ಕೆ ತಕ್ಕಂತೆ ಕ್ರಿಯೆ ಬದಲಾಗುವ ಸಾಧ್ಯತೆ ಇರುತ್ತದೆ. ಇದರಿಂದಲೇ ಭಾಷೆ ಯನ್ನು ಅದರ ಸಾಮಾಜಿಕ ಪರಿಸರ, ಪ್ರಾದೇಶಿಕ ಪರಿಸರ ಮತ್ತು ಕಾಲ ಪರಿಸರಕ್ಕನು ಗುಣವಾಗಿ ಅಭ್ಯಸಿಸಬೇಕಾಗುತ್ತದೆ. ಭಾಷಾಸ್ವರೂಪವನ್ನು ನಿರ್ದೇಶಿಸುವ ಅಂಶಗಳನ್ನು G. Sankoll (1971) ಕೆಳಕಂಡಂತೆ ಪಟ್ಟಿಮಾಡುತ್ತಾರೆ. — Participant, Topic, Setting of context, Channel, Message from, mood, tone and intonation.

ಭಾಷೆಯಲ್ಲಿರುವ ವಿವಿಧ ರೂಪಗಳನ್ನು, ಪ್ರಭೇದಗಳನ್ನು ಸಾಮಾಜಿಕ, ಪ್ರಾದೇಶಿಕ ಮತ್ತು ಶೈಲಿಯ ಕೋನಗಳಿಂದ ಅಭ್ಯಸಿಸಬಹುದೆಂದು William Bright (1964) ಅಭಿಪ್ರಾಯಪಡುತ್ತಾರೆ.

ಜಪಾನಿ ಭಾಷೆಯ ಸಾಮಾಜಿಕ ಪ್ರಭೇದಗಳನ್ನು ಗುರುತಿಸುತ್ತ ಭಾಷೆಯನ್ನು ಆಡುವ ಮತ್ತು ಕೇಳುವವರ ಸ್ಥಾನಮಾನ, ಪರಿಚಯಗಳಿಗೆ ಸಂಬಂಧಿಸಿದಂತೆ ವಿಂಗಡಿಸ ಬಹುದು. ಸ್ಥಾನಮಾನ ಎಂದರೆ ಐಶ್ವರ್ಯ, ವಿದ್ಯೆ, ವೃತ್ತಿ, ವಯಸ್ಸು, ಬಾಂಧವ್ಯ ಮತ್ತು ರಾಷ್ಟ್ರೀಯತೆ. ಪ್ರತಿ ಸಂದರ್ಭದಲ್ಲಿ ಪರಸ್ಪರರ ಪರಿಚಯ ಮಹತ್ವದ ಪಾತ್ರವನ್ನು ವಹಿಸುತ್ತದೆ ಎಂದು C. Geertz (1960) ಹೇಳುತ್ತಾರೆ. ಅವರ ಪ್ರಕಾರ 'Javanese identify 3 levels in addressing in reference with status and familiarity. They are Krama, madya and ngoko (High, Middle and low)

ಉದಾ : mangan / neḍa / ḍahar "To eat"

ಈ ರೀತಿಯ ವಿಂಗಡನೆ ಸಾಮಾನ್ಯವಾಗಿ ಎಲ್ಲಾ ಭಾಷೆಗಳಲ್ಲಿ ಕಂಡುಬರುತ್ತದೆ. ಕನ್ನಡದಲ್ಲಿಯೂ ಸಹ ಉನ್ನತ, ಮಧ್ಯ ಮತ್ತು ಕೆಳವರ್ಗ ಬೇಧ ಕಂಡುಬರುತ್ತದೆ. ಆಯಾ ವರ್ಗದ ಆಚಾರ ವಿಚಾರಕ್ಕೆ ತಕ್ಕಂತೆ ಭಾಷಾ ಪ್ರಭೇದ ಭಿನ್ನವಾದರೂ ಜಪಾನಿ ನಂತೆ ಪ್ರತಿ ಶಬ್ದಕ್ಕೆ ಭಿನ್ನ ರೂಪಗಳನ್ನು ಕಾಣಲಾಗದು. ಈ ಎಲ್ಲ ಅಂಶಗಳನ್ನು ಇನ್ನೂ ಕೆಲವೊಂದು ಅಂಶಗಳನ್ನು ಗಮನಿಸಿ ಭಾಷೆಯನ್ನು ಅಭ್ಯಸಿಸಿದರೆ ಅದು ಸಾಮಾಜಿಕ ಭಾಷಾವಿಜ್ಞಾನವಾಗುತ್ತದೆ. ಸಾಮಾಜಿಕ ಭಾಷಾವಿಜ್ಞಾನ, ಯಾರು ? ಯಾವ ಪ್ರಭೇದವನ್ನು ? ಎಲ್ಲಿ ? ಯಾರಿಗೆ ? ಬಳಸುತ್ತಾರೆ ಎಂಬುದನ್ನು ತಿಳಿಸುತ್ತ ದೆಂಬುದು Labov ರ ಮತ. ಅಂದರೆ ಆಡುವವನು ತನ್ನಲ್ಲಿರಬಹುದಾದ ಪ್ರಭೇದ ಗಳಲ್ಲಿ ಯಾರಿಗೆ ಆಡುತಿದ್ದಾನೋ ಆತನ ವಿದ್ಯೆ, ವರ್ಗ, ಹಿನ್ನೆಲೆಗೆ ತಕ್ಕಂತೆ ಆರಿಸ ಬೇಕಾಗುತ್ತದೆ. ಒಬ್ಬ ಹಳ್ಳಿಯಲ್ಲಿ ಬೆಳೆದವನೊಂದಿಗೆ ಇಂಗ್ಲೀಷನ್ನು ಬಳಸುವುದು

ಹಾಸ್ಯಾಸ್ಪದವಾಗುತ್ತದೆ. ಅಂತೆಯೇ ಆತನಿಂದ ಇಂಗ್ಲೀಷ್ ಅಥವಾ ಬರಹ ರೂಪವನ್ನು ಬಯಸುವುದು ಅಭಾಸ ಮತ್ತು ಅಸಾಧ್ಯ ಎನ್ನಿಸುತ್ತದೆ. ಅಂದ ಮಾತ್ರಕ್ಕೆ ಆತನ ಪ್ರಭೇದವನ್ನೆ ಬಳಸಬೇಕು ಎಂಬ ಕಡ್ಡಾಯವಿರುವದಿಲ್ಲ. ಸಾಧ್ಯವಾದಷ್ಟು ಆತನಿಗೆ ಹತ್ತಿರವಾಗುವ ರೂಪವನ್ನು ಬಳಸಿದರೆ ಸಾಕು. ಇದೇ ರೀತಿ ಭಾಷೆಯ ಎಲ್ಲಾ ರಚನೆಗಳನ್ನು ಎಲ್ಲಾ ಸಂದರ್ಭದಲ್ಲಿ ಬಳಸಲಾಗದು. ಆಡುವ ಮತ್ತು ಕೇಳುಗನ ಸ್ಥಾನಮಾನಕ್ಕೆ ತಕ್ಕಂತೆ ನಡೆವಳಿಕೆಯೂ ಬದಲಾಗುತ್ತದೆ. ಅಂದರೆ ವಿನಯಪೂರ್ವಕ ವಾಗಿಯೋ, ಆತ್ಮೀಯವಾಗಿಯೋ, ಆಡುವುದಿರುತ್ತದೆ. ಎಲ್ಲರೂ ಇಲ್ಲಿಯ ಎಲ್ಲಾ ಪ್ರಭೇದಗಳನ್ನು ಬಳಸುತ್ತಾರೆ, ಕಲಿತಿರುತ್ತಾರೆ, ಎಂದೇನೂ ಅಲ್ಲ. ತಮ್ಮ ಪರಿಸರಕ್ಕೆ, ತಮ್ಮ ಅವಶ್ಯಕತೆಗೆ ತಕ್ಕಂತೆ ಕಲಿತಿರುತ್ತಾರೆ ಅಷ್ಟೆ.

ಸಾಮಾಜಿಕ ಭಾಷಾವಿಜ್ಞಾನದ ವಿಭಾಗೀಕರಣ ಭಾಷೆಯ ಕ್ರಿಯೆಯನ್ನು ಮತ್ತು ಆ ಕ್ರಿಯೆಯ ಪರಿಸರವನ್ನು ಒಂದುಗೂಡಿಸುತ್ತದೆ. ಕೆಲವೊಂದು ವೇಳೆ ಅರ್ಥ ಅದೇ ಇರುತ್ತದೆ. ಆದರೆ ಪರಿಸರಕ್ಕೆ ತಕ್ಕಂತೆ ರಚನೆ ಬದಲಾಗುತ್ತದೆ.— J. J. Gumperz. (1970).

ಉದಾ : ಸಾಹೇಬ್ರು ತಮ್ ಮನೇವ್ರ್ ಜತೆ ಬಂದ್ರು.

ಪೋಲಿಸ್ ತನ್ ಹೆಂಡ್ತಿ ಜತೆ ಬಂದ.

ಮನೇವ್ರು ಮತ್ತು ಹೆಂಡ್ತಿ ಎರಡೂ ಒಂದೇ ಅರ್ಥ ಕೊಡುತ್ತವೆ. ಆದರೆ ಬಳಕೆಯ ಸಂದರ್ಭ ಬೇರೆ. ಇದೇ ರೀತಿ ಗಂಡನನ್ನು 'ಮನೇವ್ರು' 'ಮನೇವ' ಎಂದು ಬಳಸು ವುದು. ಈ ಅಂಶಗಳು ವ್ಯಕ್ತಿಯ ಹುಟ್ಟು ಮತ್ತು ಬೆಳವಣಿಗೆಯ ಪರಿಸರವನ್ನು ಅವಲಂಬಿಸಿರುತ್ತವೆ.

ಕೊಸಾಟಿ ಭಾಷೆಯಲ್ಲಿ ಹೆಂಗಸರ ಭಾಷೆ ಗಂಡಸರ ಭಾಷೆಯಿಂದ ಭಿನ್ನವಾಗಿರುತ್ತದೆ.— Mary R. Haas.

W	M	
lakawakkä	lakawtakkos	'ನಾನು ಅದನ್ನು ಎತ್ತುತ್ತಿಲ್ಲ'
kä	kas	'ಅವನು ಹೇಳುತ್ತಿದ್ದಾನೆ'
lokāw	lokāws	'ಅವನು ಅದನ್ನು ಎತ್ತುತ್ತಿದ್ದಾನೆ'
mōl	mōls	'ಅವನು ಅದನ್ನು ಸುಲಿಯುತ್ತಿದ್ದಾನೆ'.

ಒಂದು ಜಾತಿಯ ಪ್ರಭೇದವನ್ನು ಇನ್ನೊಂದು ಜಾತಿಯವರು ಬಳಸುವುದು ಕೆಲವುಸಾರಿ ಸಹನವಾಗಲಿಕ್ಕಿಲ್ಲ. ಹವ್ಯಕ ಪ್ರಭೇದದಲ್ಲಿ ವಚನ ಭೇದವೆಂಬುದಿಲ್ಲ. ಇದರಿಂದಾಗಿ ಈ ಜಾತಿ ಅತಿ ಸಾಮಾನ್ಯವಾಗಿ ಏಕವಚನವನ್ನು ಇತರರಿಗೆ ಬಳಸುತ್ತದೆ.

ಆದರೆ ಅವರಿಂದ ಮಾತ್ರ ಬಹುವಚನವನ್ನೇ ಬಯಸುತ್ತದೆ. ಒಂದು ವೇಳೆ ಆತ ಸಂಪೂರ್ಣ ಹವ್ಯಕ ಪ್ರಭೇದವನ್ನು ಕಲಿತು ಆಡಿದಲ್ಲಿ ಆತನನ್ನು ಸಂಶಯವಾಗಿ ನೋಡಲಾಗುತ್ತದೆ.

ಅದು ಇನ್ನೊಂದು ಪ್ರಭೇದವಿರಲಿ ಅಥವಾ ಭಾಷೆಯಿರಲಿ ಅದನ್ನು ಬಳಸುವುದು, ಕಲಿಯುವುದು ಅದರ ಮೇಲಿರುವ ಮಾನಸಿಕ ದೃಷ್ಟಿಯನ್ನವಲಂಬಿಸಿರುತ್ತದೆ. ಹೆಂಗಸರು ಮಾತ್ರ ಭಾಷೆಯ ಬಗ್ಗೆ ಬಹಳ ಖಂಡಿತವಾಗಿರುತ್ತಾರೆ. ಇತರರೊಂದಿಗೆ ಬೆರೆಯುವ ಅವಕಾಶ ತಪ್ಪಿದರಂತೂ ಇನ್ನೊಂದು ಪ್ರಭೇದವನ್ನು ಎಂದಿಗೂ ಕಲಿಯಲಾರರು.

Every dialect is a language but every language is not a dialect. E. Haugen 1964. ಒಂದು ಭಾಷೆಯ ಹಿಂದೆ ಒಂದಕ್ಕಿಂತ ಹೆಚ್ಚು ಪ್ರಭೇದಗಳಿದ್ದಾಗ ಮಾತ್ರ ಉಪಭಾಷೆ ಪದದ ಬಳಕೆ ಸೂಕ್ತವಾಗುತ್ತದೆ. ಒಂದು ವೇಳೆ ಆ ಭಾಷೆಗೆ ಒಂದೇ ರೂಪವಿದ್ದರೆ ಅಲ್ಲಿ ಉಪಭಾಷೆಯ ಪ್ರಶ್ನೆಯೇ ಇರುವುದಿಲ್ಲ, ಎಂಬುದು ಹ್ಯೂಗನ್‌ರ ಅಭಿಮತ. ಆದರೆ ಪ್ರಭೇದಗಳಿಲ್ಲವಾದರೂ ಒಂದು ಘಟ್ಟದಲ್ಲಿ ಅದು ಉಪಭಾಷೆಯೇ, ಅದೇ ಇನ್ನೊಂದು ಘಟ್ಟದಲ್ಲಿ ಭಾಷೆಯಾಗುತ್ತದೆ. ತಮ್ಮ ವಾದಕ್ಕೆ ಅವರು ನೀಡುವ ಉದಾಹರಣೆಯನ್ನು ನೋಡಬಹುದು. " x is a dialect of y language' or "y has the dialects x and z" ಇಲ್ಲಿ y ಭಾಷೆ ತನ್ನ ಹಿಂದಿರುವ ಪ್ರಭೇದಗಳ ಅಂಶಗಳೆಲ್ಲವನ್ನು ಹೊಂದಿರುವ ಒಂದು ಕಲ್ಪಿತ ರೂಪ. ಆ ಭಾಷೆಗೆ ಪ್ರಭೇದ ಭಿನ್ನತೆ ಇಲ್ಲದಿದ್ದಾಗ ಮಾತ್ರ y ಭಾಷೆಯೂ ಹೌದು, ಉಪಭಾಷೆಯೂ ಹೌದು ಎನ್ನಬೇಕಾಗುತ್ತದೆ. ಆಗ ಮಾತ್ರ ಇದು ಕಲ್ಪಿತ ರೂಪವಲ್ಲ.

ಫ್ರೆಂಚ್‌ನಲ್ಲಿ ಭಾಷೆ, ಉಪಭಾಷೆಯ ಜೊತೆಗೆ 'Patois' ಎನ್ನುವ ಇನ್ನೊಂದು ವಿಭಾಗೀಕರಣವಿದೆ. ಉಪಭಾಷೆ ಸಾಹಿತ್ಯದಲ್ಲಿಯೂ, ಬರವಣಿಗೆಯಲ್ಲಿಯೂ ಬಳಸಲ್ಪಡುತ್ತದೆ. ಬರವಣಿಗೆ ಮತ್ತು ಸಾಹಿತ್ಯಕ್ಕೆ ಬಳಸದೆ ಕೇವಲ ಆಡುವ ಕ್ರಿಯೆಗೆ ಮಾತ್ರ ಸೀಮಿತವಾದರೆ ಅದನ್ನು patois ಎಂದು ಕರೆಯಲಾಗುತ್ತದೆ.

ಉಪಭಾಷೆಯನ್ನು ಶಿಷ್ಟರಾಡುವ ಪ್ರಭೇದದಿಂದ ಭಿನ್ನವಾದದ್ದು ಎಂದು ಗಣಿಸುವುದೂ ಉಂಟು. ಈ ರೀತಿಯ ಕಲ್ಪನೆ ಭಾಷಾಶಾಸ್ತ್ರಕ್ಕೆ ವ್ಯತಿರಿಕ್ತವಾದದ್ದು. ಅದು ಶಿಷ್ಟರೂಪವಿರಲಿ, ಬರಹ ರೂಪವಿರಲಿ, ಆಡುಮಾತಿರಲಿ ಒಂದು ಭಾಷೆಯ ಅಂಗಗಳು–ಉಪಭಾಷೆಗಳು.

ಸಾಮಾಜಿಕ ಉಪಭಾಷೆಯು ಮುಖಾಂತರವಾಗಿ ವ್ಯಕ್ತಿಯ ಸ್ಥಾನಮಾನವನ್ನು ಯಾವ ರೀತಿ ಗುರುತಿಸುತ್ತಾರೆ ಎಂಬುದಕ್ಕೆ ಒಂದು ಉದಾಹರಣೆಯನ್ನು ನೋಡಬಹುದು.

"what is your name boy ?"– the policeman asked
"Dr paussant I am a physician."
"what is your first name boy ?"
"Alvin"
— S. M. Ervin Trip (1969)

ಇಂಗ್ಲೀಷ್ ಸಮಾಜದ ಪ್ರಕಾರ ೧೫ರ ವಯಸ್ಸಿನ ನಂತರ boy ಶಬ್ದವನ್ನು ಬಳಸ ಲಾಗದು. ಇಲ್ಲಿ ಉದ್ದೇಶ ಪೂರ್ವಕವಾಗಿ ಬಳಸಲಾಗಿದೆ. ಉತ್ತರ ರೂಪವಾಗಿ ತನ್ನ ವೃತ್ತಿಯನ್ನು ತಿಳಿಸಿದರೂ ಸಹ ಅತನ ಅಡ್ಡಹೆಸರನ್ನು ಕೇಳಲಾಗಿದೆ. ಆ ಸಮಾಜದ ಪ್ರಕಾರ ಅವರ ವೃತ್ತಿಗನುಗುಣವಾಗಿ ಉನ್ನತವಾಗಿದ್ದರೆ ಅಡ್ಡಹೆಸರನ್ನು ಬಳಸಲಾಗದು. ಆದರೆ ಇಲ್ಲಿ ಕೇಳಲಾಗಿದೆ ಅಲ್ಲದೆ ಪುನಃ boy ಎನ್ನಲಾಗಿದೆ. ಇದರಿಂದಾಗಿ ಯಾರು ಯಾರನ್ನು ಕುರಿತು ಮಾತನಾಡುತ್ತಿದ್ದಾರೆ ಎಂಬುದನ್ನು ತಿಳಿಯಬಹುದು. ಇವರ ಪ್ರಕಾರ ಕರಿಯರು ಬಿಳಿಯರ ಮುಂದೆ ಗೌರವಕ್ಕೆ ಅನರ್ಹರು. ಕನ್ನಡದಲ್ಲಿ ಪರಿಚಯ ಬೆಳೆ ದಷ್ಟೂ ಪರಸ್ಪರರು ಬೈಗುಳಗಳನ್ನು ಸಹಿಸಬೇಕಾಗುತ್ತದೆ. ಪರಿಚಯ ಕಡಿಮೆ ಇದ್ದಷ್ಟೂ ಗೌರವ ಜಾಸ್ತಿ. ಒಂದೇ ಊರಿನವರಾಗಿ ದೂರದೂರದಲ್ಲಿದ್ದಾಗ ಗೌರವ ಬಹಳ. ಅದೇ ಸ್ಥಳದಲ್ಲಿದ್ದಾಗ ಪರಿಚಯ ಬೆಳೆದು ಗೌರವ ಬಳಕೆ ಕಡಿಮೆಯಾಗುತ್ತದೆ. ಒಬ್ಬ ವ್ಯಕ್ತಿಗೆ ತೋರಿಸುವ ಗೌರವ ಕೇವಲ ಅವನು ಎದುರಿದ್ದಾಗ. ಇಬ್ಬರ ಮಾತಿನ ವಸ್ತುವಾಗಿ ಬಂದಾಗ ಬಹುವಚನದಿಂದ ಏಕವಚನಕ್ಕಿಳಿದಿರುತ್ತಾನೆ. ಕಾಲಸಂದಂತೆ ಸಮಾಜಬದ ಲಾವಣೆಯನ್ನು ಹೊಂದುತ್ತದೆ. ಹೊಸತು ಬಂದಂತೆ ಅರಗಿಸಿಕೊಳ್ಳುತ್ತ ಹಳೆಯದನ್ನು ಕಳೆದುಕೊಳ್ಳುತ್ತ ಮುಂದುವರಿಯುತ್ತದೆ. ಇದರ ಜೊತೆ ಭಾಷೆಯೂ ಸಹ ಆಯಾಯ ಅಂಶಗಳನ್ನು ಮೈಗೂಡಿಸಿಕೊಂಡು ನಡೆಯುತ್ತದೆ. ಹಳೆಯ ಅಂಶಗಳು ದಾಖಲೆಗಳಲ್ಲಿ ಉಳಿದರೂ ಜನಮನದಲ್ಲಿ ಅಳಿಯುತ್ತವೆ. ದಾಖಲೆಗಳಲ್ಲುಳಿದ ಅಂಶಗಳು ಮಾತ್ರ ಭಾಷಾ ಬದಲಾವಣೆಯ ಸಾಕ್ಷಿಯಾಗುತ್ತವೆ.

ಅನೇಕ ಪ್ರಭೇದಗಳಲ್ಲಿ ಒಂದನ್ನು ಪ್ರಮಾಣ ಅಥವ ಪ್ರಧಾನ ರೂಪವಾಗಿ ಆರಿಸಬೇಕಾಗುತ್ತದೆ. ಇದರ ಆಯ್ಕೆಯಲ್ಲಿ ಅದು ಹೊಂದಿರಬಹುದಾದ ಪ್ರಭಾವ ಮುಖ್ಯವಾದದ್ದು. ಅಂದರೆ ಆಡಳಿತದ ಭಾಷೆಯಾಗಿಯೋ ಉನ್ನತ ವರ್ಗದ ಭಾಷೆ ಯಾಗಿಯೋ ಆ ಭಾಷೆ ಇರುತ್ತದೆ. ಪ್ರಧಾನ ಭಾಷೆಯೂ ಆ ಭಾಷೆಯ ಒಂದು ಪ್ರಭೇದ ಮಾತ್ರ. ಪ್ರಧಾನ ರೂಪವೆಂದಾಗ ಅದೇ ಶ್ರೇಷ್ಠ, ಶಿಷ್ಟರೂಪ ಎನ್ನುವ ಭಾವನೆ ಗಳುಂಟು. ಭಾಷಾಶಾಸ್ತ್ರ ದೃಷ್ಟಿಯಿಂದ ಈ ಕಲ್ಪನೆ ಅಸಹಜ.

ದ್ವಿಭಾಷಿಕತೆ ಅಥವಾ ಬಹುಭಾಷಿಕತೆ ಇರುವ ಪ್ರದೇಶದಲ್ಲಿ ಅವಶ್ಯಕತೆಗೆ ತಕ್ಕಂತೆ ಒಂದೋ ಎರಡೋ ಅನ್ಯ ಭಾಷೆಗಳನ್ನು ಕಲಿಯಬೇಕಾಗುತ್ತದೆ. ಭಾಷೆಗಳು ಪರಸ್ಪರ

ತಮ್ಮ ಪ್ರಭಾವವನ್ನ ಬೀರುತ್ತಲೇ ಇರುತ್ತವೆ. ಆಡಳಿತ ಭಾಷೆಯೋ ಅಥವಾ ಅಧಿಕ ಬೆಳವಣಿಗೆ ಹೊಂದಿರುವ ರಾಷ್ಟ್ರದ ಭಾಷೆಯೋ ಆಗಿದ್ದರೆ, ಸಹಜವಾಗಿ ಅದು ಹೆಚ್ಚಿನ ಪ್ರಭಾವವನ್ನು ಇತರ ಭಾಷೆಗಳ ಮೇಲೆ ಬೀರುತ್ತದೆ. ಕಲಿತ ಭಾಷೆಗಳು ಬಳಕೆ ಯಿದ್ದಷ್ಟು ಹೆಚ್ಚು ಬೆಳವಣಿಗೆ ಹೊಂದುತ್ತವೆ. ಬಳಕೆ ತಪ್ಪಿದರೆ ಮರೆಯಾಗುತ್ತವೆ. ಎರಡು ಅಥವಾ ಹೆಚ್ಚು ಭಾಷೆಯನ್ನು ಕಲಿಯುತ್ತಿರುವಾಗ ಮಕ್ಕಳಿಗೆ ಎರಡು ಭಾಷೆ ಎನ್ನುವ ಕಲ್ಪನೆ ಇರಲಾರದು. ಬದಲಾಗಿ ಅದೇ ವಸ್ತುವಿಗೆ ಎರಡು ಶಬ್ದಗಳು ಎನ್ನುವ ತಿಳುವಳಿಕೆ ಇರುತ್ತದೆ. ತನ್ನ ಮಗ ಗಾರೊ ಭಾಷೆಯನ್ನು ಕಲಿತ ಸನ್ನಿವೇಶವನ್ನು Robbins Burling ತಿಳಿಸಿದ್ದಾನೆ. However six months later I would still find no evidence that he was aware of the existance of two different languages in his environment. He was under the impression that 'dut' and 'milk' are two words for the same thing.

ಮಾನವ ತನ್ನ ಸುತ್ತಲಿನ ಪ್ರಪಂಚಕ್ಕೆ ತಕ್ಕಂತೆ ಭಾಷೆಯನ್ನು ಬೆಳೆಸುತ್ತಾನೆ ಹಾಗೂ ಮುಂದೆ ಗ್ರಹಿಸುತ್ತಾನೆ ಎಂಬುದು ಸಪೀರ್ ಮತ್ತು ವೂರ್ಫ್‌ರ ವಾದ. ಉದಾ : ಬೆಸ್ತರು ಮೀನುಗಳೆಲ್ಲವನ್ನು ಹೆಸರಿಸಬಲ್ಲರು. ಪ್ರತಿ ಮೀನನ್ನು ಅವರು ಗುರುತಿಸಬಲ್ಲರು. ಇತರರಿಗೆ ಅದು ಯಾವುದೇ ಇರಲಿ ಮೀನು ಮಾತ್ರ.

ಪ್ರಕೃತಿ ಸಮಾಜದ ಮೇಲೆ ಪ್ರಭಾವ ಬೀರುವಂತೆ ಭಾಷೆಯು ವಿಶಿಷ್ಟ ಬೆಳವಣಿಗೆಗೆ, ಶಬ್ದ ನಿರ್ಮಾಣಕ್ಕೆ ಒತ್ತಾಯಿಸುತ್ತದೆ. ಆ ಪರಿಸರದಲ್ಲಿ ಬಾಳುತ್ತಿರುವುದರಿಂದ, ಅವ ಲಂಬಿಸಿರುವುದರಿಂದ ಪ್ರತಿಯೊಂದು ಅಂಶವನ್ನು ಗುರುತಿಸುವ ಹೆಸರಿಸುವ ಒತ್ತಡ ಅಲ್ಲಿ ರುವವನ ಮೇಲೆ ಇರುತ್ತದೆ. ಉದಾಹರಣೆಗೆ ಎಸ್ಕಿಮೋಗಳು ಹಿಮದ ಪ್ರತಿಘಟ್ಟವನ್ನು ಬೇರೆ ಬೇರೆ ಹೆಸರಿನಿಂದ ಗುರುತಿಸುತ್ತಾರೆ. ಇದು ಅನಿವಾರ್ಯ. ಸಸ್ಯಗಳನ್ನು ಸಸ್ಯ ಶಾಸ್ತ್ರಜ್ಞರೂ ಹೆಸರಿಸುತ್ತಾರೆ, ರೈತರೂ ಹೆಸರಿಸುತ್ತಾರೆ. ಆದರೆ ರೈತನಿಗೆ ಇದು ಅನಿವಾರ್ಯ.

ಎಲ್ಲಿ ಒಂದು ಅಂಶಕ್ಕೆ ಪ್ರಾಮುಖ್ಯತೆ ಇರುತ್ತದೊ ಅಲ್ಲಿ ಆ ಅಂಶಕ್ಕೆ ತಕ್ಕ ಶಬ್ದ ನಿರ್ಮಾಣವಾಗುತ್ತದೆ. ಇಲ್ಲದಿದ್ದರೆ ಇಲ್ಲ. ಇಂಗ್ಲೀಷಿನಲ್ಲಿ brother ಮತ್ತು sister ಶಬ್ದಗಳು ಎರಡು ಸಾಕು. ಆದರೆ ಕನ್ನಡ ಮತ್ತು ಇತರ ದ್ರಾವಿಡ ಭಾಷೆಗಳಲ್ಲಿ ಹಿರಿಯರಿಗೆ ಕೊಡುವ ಗೌರವ ಮತ್ತು ಹಿರಿಯರನ್ನು ಕಿರಿಯರಿಂದ ಭಿನ್ನವಾಗಿ ಕಾಣುವ ದೃಷ್ಟಿ ಇವುಗಳ ಮೂಲಕ ಅಣ್ಣ, ತಮ್ಮ ಮತ್ತು ಅಕ್ಕ, ತಂಗಿ ಎಂಬ ಬೇರೆ ಶಬ್ದಗಳೇ ಬೇಕು.

ಸಾಮಾಜಿಕ ಮೌಲ್ಯಗಳು ಹೇರುವ ಒತ್ತಡದಿಂದಾಗಿ ಭಾಷೆಯಲ್ಲಿ ಬದಲಾವಣೆ ಉಂಟಾಗುವುದು ಸಹಜ. ಅಂದರೆ ಸಮಾಜ ಭಾಷೆಯು ಕೆಲ ಶಬ್ದಗಳ ಮೇಲೆ ನಿಷೇಧವನ್ನು ಕಡ್ಡಾಯವಾಗಿ ಹೇರಿದರೆ ಆ ಶಬ್ದಗಳು ಮಾಯವಾಗಬಹುದು. ದ್ವಿಭಾಷಿಕತೆಯಿದ್ದಾಗ ಒಂದು ಭಾಷೆಯ ಸಹಜ ಶಬ್ದ ಇನ್ನೊಂದು ಭಾಷೆಯ ಅಶ್ಲೀಲ ರಚನೆಯಾಗಿದ್ದರೆ ಬಳಕೆಯಲ್ಲಿ ಗೊಂದಲವೇಳುತ್ತದೆ. ಉದಾ : ತಮಿಳಿನ ' ಬಟ್ಟೆ ' ಶಬ್ದವನ್ನು ಅಥವಾ ಮರಾಠಿಯ ' ನಿನ್ನ ' ಶಬ್ದವನ್ನು ಕನ್ನಡಿಗ ಕೇಳಲು, ಬಳಸಲು ಹಿಂಜರಿಯುವ ಸಾಧ್ಯತೆ ಇದೆ. ಆದರೆ ಅನಿವಾರ್ಯವಾದಾಗ ಸಮಾಜ ಒತ್ತಾಯಪೂರ್ವಕವಾಗಿ ಅದನ್ನು ಸಹಿಸಬೇಕಾಗುತ್ತದೆ. ಉದಾ : ಚಿಕ್ಕ ಮಕ್ಕಳ ' ಸುಳ್ಳು ' ಶಬ್ದ.

ಭಾಷಾಶೈಲಿ ಆಡುವ ವ್ಯಕ್ತಿ, ವಿಷಯ, ಕೇಳುವ ವ್ಯಕ್ತಿ ಮತ್ತು ಸಂದರ್ಭದಿಂದ ನಿರ್ಧರಿಸಲ್ಪಡುತ್ತದೆ. ಹೀಗಿರುವಾಗ ಭಾಷಾಪ್ರಭೇದಗಳನ್ನು ಅಭ್ಯಸಿಸಿ ಅದರ ಮುಖಾಂತರ ಅದರ ಪರಿಸರವನ್ನು ಗುರುತಿಸಬೇಕೆ ? ಅಥವಾ ನಿರ್ದಿಷ್ಟ ಸಂದರ್ಭವನ್ನು ಆಯ್ದು ಅದರ ಭಾಷಾಸ್ವರೂಪವನ್ನು ಗುರುತಿಸಬೇಕೆ ? ಎಂಬ ಪ್ರಶ್ನೆಯನ್ನು Labov ನಮ್ಮ ಮುಂದಿಡುತ್ತಾರೆ. ಅವರ ಪ್ರಕಾರ ಭಾಷೆಯಿಂದ ಪರಿಸರವನ್ನು ಗುರುತಿಸುವುದು ಹೆಚ್ಚು ಸರಿಯಾದದ್ದು. ಆದರೆ ಒಂದು ಪ್ರಭೇದ ಪರಿಸರದಲ್ಲಿ ಮಾತ್ರ ಅದರ ಸಾಧ್ಯರಚನೆಯನ್ನು ಸಂಗ್ರಹಿಸಲು ಸಾಧ್ಯ. ಕೆಲವು ರಚನೆಗಳನ್ನು ಮಾತ್ರ ಆಯ್ದು ಅವುಗಳ ಮುಖಾಂತರ ಅದರ ಪರಿಸರವನ್ನು ಗುರುತಿಸುವುದು ಅಧಿಕೃತವೆನಿಸಲಾರದು. ಯಾಕಂದರೆ ಆಯ್ದ ರಚನೆಗಳು ಒಂದೇ ಪರಿಸರಕ್ಕೆ ಸೇರಿದವೆನ್ನಲಾಗದು. ಅವನ್ನು ಆ ಪರಿಸರದಲ್ಲಿ ಹೋಲಿಸಬೇಕೆನ್ನುವುದಾದರೆ ಅದಕ್ಕಿಂತ ಆ ಪರಿಸರದಲ್ಲಿ ಸಾಮಗ್ರಿ ಶೇಖರಿಸಿ ವಿಶ್ಲೇಷಿಸುವುದು ಹೆಚ್ಚು ಸೂಕ್ತ.

ಇನ್ನು ರಾಷ್ಟ್ರಭಾಷೆಯ ಬಗೆಗೆ ಎರಡು ಮಾತು. ಆ ರಾಷ್ಟ್ರದ ಎಲ್ಲಾ ಜನರ ಸನಿಹವಾದ ಎಲ್ಲರಿಂದಲೂ ಒಪ್ಪಿಕೊಂಡಂತಹ ಭಾಷೆ. ಅದು ರಾಷ್ಟ್ರಭಾಷೆ. ರಾಷ್ಟ್ರಭಾಷೆ ಒಂದು ಭಾಷೆ ಎನ್ನುವುದಕ್ಕಿಂತ ರಾಷ್ಟ್ರದ ಭಾಷೆಗಳಲ್ಲಿ ಒಂದು ಭಾಷೆಯಾಗಿರಬೇಕು. ಕೆಲವೊಂದು ಕಡೆ ತನ್ನದಲ್ಲದ ಭಾಷೆ ರಾಷ್ಟ್ರಭಾಷೆ ಆಗಿರುವುದುಂಟು. ಸ್ವಿಝರ್‌ಲ್ಯಾಂಡಿನಲ್ಲಿ ಮೂರು ಭಾಷೆಗಳಿವೆ. ಒಂದೂ ಅಲ್ಲಿಯದಲ್ಲ. ಬೆಲ್ಜಿಯಂದಲ್ಲಿ ಎರಡು ಭಾಷೆಗಳಿವೆ. ಅವೂ ಅಲ್ಲಿಯವಲ್ಲ.

ಕೆಲವೊಂದು ಸಮಾಜಗಳು ಸಂಕೇತಭಾಷೆಯನ್ನು ಬಳಸುತ್ತಲೂ ಇವೆ. George M Cowan ನ ಅನುಭವ ಇಲ್ಲಿ ಅತಿ ಸ್ವಾರಸ್ಯವಾದದ್ದು:

" Eusetio Mortinez was one day standing infront of his house whistling to a man considerably distant. The man was passing trial below, going to market to sell a load of corn

leaves which he was carrying. The man answered Eursebiole's whistle with a whistle. The inter change was repeated several times with different whistles. Finally the man turned around, retraced his steps a short way and came up the footpath to Eustebiole's hut. Without saying a word he dumped his load on the ground. Eustobiole looked the load over, went into his hut returned with some money and paid the man his price. The man turned and left." ಅವರ ವ್ಯಾಪಾರ ಪೂರ್ತಿ ಸಿಳ್ಳಿನ ಮೂಲಕವೇ ನಡೆದಿದೆ. ಇದೇ ರೀತಿ ತಮ್ಮ ವ್ಯವಹಾರಕ್ಕಾಗಿ ಸಂಕೇತ ಭಾಷೆಯನ್ನು ಬಳಸುವ ಸಮಾಜಗಳೂ ಇವೆ.

ಗ್ರಂಥ ಋಣ

Mary R. Haas
Men's and woman's speech in koasati : Language 20

George M. Cowan
Mazateco whistle speech : Language 24

Harry Hoijer
Linguistic and cultural change : Language 24

Robbins Burling
Language Development of a Garo and English speaking child : word 15

Werner F. Leopold
Decline of German Dialects : word 13

John L. Fischer
Social influence in the choice of a Linguistic Variant : word 14

E. Haugen (1966)
Dialect, Language, Nation
Sociolinguistics. Ed : J. B. Pride & J. Holmes (1972)

Williame Bright & A. K. Ramanujam (1964)
Sociolinguistic Variation and language change
Sociolinguistics Ed : J. B. Pride & J. Holmes (1972)

ಲೇಖನ ಓದಿ ತಿದ್ದಿದ ಡಾ. ಎಂ. ಎಂ. ಕಲಬುರ್ಗಿ, ಡಾ. ಕುಳ್ಳಿ, ಮತ್ತು ಮಹಿಮರವರಿಗೆ ಋಣಿಯಾಗಿರುತ್ತೇನೆ.

C. Greetz (1960)

Linguistic etiquette
Sociolinguistics Ed : J. B. Pride & J. Holmes (1972)

J. A. Fishman (1971)

The Relationship between Micro and Macro Sociolinguistics in the study of who speaks what language to whom and when

Sociolinguistics Ed : J. B. Pride & J. Holmes

G. Sankoff (1971)

Language use in Multilingual Societies
Sociolinguistics. Ed : J. B. Pride & J. Holmes

R. F. Salisbury (1962)

Notes on Bilingualism and linguistic change in New Guinea

Sociolinguistics. Ed : J. B. Pride & J. Holmes

W. Labov (1970)

The study of language in its Social context
Sociolinguistics. Ed : J. B. Pride & J. Holmes

S. M. Ervin Trip (1969)

Sociolinguistics Rules of Address
Sociolinguistics Ed : J. B. Pride & J. Holmes (1972)

J. J. Gumperz (1970)

Sociolinguistics and communication in small groups
Sociolinguistics Ed : J. B. Pride & J. Holmes (1972)

Peter Trudgill (1974)

Sociolinguistics : An Introduction : Penguin.

ವಿಮಲಸೂರಿಯ ಮೇಲೆ ವಾಲ್ಮೀಕಿಯ ಪ್ರಭಾವ

ಎಸ್. ಎಸ್. ಬ್ಯಾತನಾಳ

ರಾಮಾಯಣವನ್ನು ಕಥಾವಸ್ತು, ತತ್ವಗಳ ದೃಷ್ಟಿಯಿಂದ ಭಿನ್ನ ಭಿನ್ನ ಪರಂಪರೆಗಳನ್ನು ಹೇಳಬಹುದು. ಅವುಗಳಲ್ಲಿ ವಾಲ್ಮೀಕಿಯ ವೈದಿಕಪರಂಪರೆ; ವಿಮಲಸೂರಿಯ ಜೈನಪರಂಪರೆಗಳು ಪ್ರಮುಖವಾದುವು. ಈ ಒಂದೊಂದು ಪರಂಪರೆಯಲ್ಲಿಯೂ ಭಿನ್ನಾಂಶಗಳುಳ್ಳ ಒಳಪದರುಗಳು ಹಲವಿವೆ. ಬೌದ್ಧಪರಂಪರೆಯ ರಾಮಾಯಣ ಭಾರತದಲ್ಲಿ, ಅಂತೆಯೇ ಕನ್ನಡ ಸಾಹಿತ್ಯದಲ್ಲಿ, ಪ್ರಚಲಿತವಾಗುಳಿಯಲಿಲ್ಲ. ಆದುದರಿಂದ ಈ ಲೇಖನದಲ್ಲಿ ವಾಲ್ಮೀಕಿ ರಾಮಾಯಣ ಮತ್ತು ವಿಮಲಸೂರಿಯ 'ಪಉಮಚರಿಯ' ಗಳೆರಡನ್ನೇ ತುಲನಾತ್ಮಕವಾಗಿ ಪರಿಶೀಲಿಸುವ ಉದ್ದೇಶವಿರಿಸಿಕೊಂಡಿರುವೆ. ಇವೆರಡೇ ಕೃತಿಗಳನ್ನೇ ಏಕೆ ಆಯ್ದುಕೊಂಡಿರುವೆನೆಂದರೆ, ಇವೆರಡೂ ಕಾವ್ಯಗಳು ಆಯಾ ಪರಂಪರೆಯ ಆದಿಕಾವ್ಯಗಳು.

ವಾಲ್ಮೀಕಿ ಮತ್ತು ವಿಮಲಸೂರಿಯರ ಕಾಲದ ಬಗೆಗೆ ಸುದೀರ್ಘ ಚರ್ಚೆಯಿದೆ. ಪ್ರಸ್ತುತ ಉದ್ದೇಶಕ್ಕಾಗಿ ವಾಲ್ಮೀಕಿ ಆದಿಕವಿ; ಬಹುಕಾಲದ ನಂತರ ವಿಮಲಸೂರಿ ಎಂದು ಹೇಳಿದರೆ ಸಾಕು.

ವಾಲ್ಮೀಕಿಗೆ ರಾಮಾಯಣವನ್ನು ಬರೆಯಲು ಸಾಮಗ್ರಿ ಯಾವುದಿತ್ತು ? ಅದರ ಸ್ವರೂಪವೇನು ? ಎಂಬ ಪ್ರಶ್ನೆಗೆ ಖಚಿತವಾಗಿ ಉತ್ತರಿಸುವುದು ಸಾಧ್ಯವಿಲ್ಲ. ಮೊದಲನೆಯದಾಗಿ, ವಾಲ್ಮೀಕಿ ರಾಮಾಯಣದಲ್ಲಿಯೇ ಹೇಳುವಂತೆ, ನಾರದಮುನಿ ರಾಮಾಯಣ ಕಥೆಯ ಮುಖ್ಯ ಅಂಶಗಳನ್ನು ವಾಲ್ಮೀಕಿಗೆ ನಿರೂಪಿಸಿದ; ನಂತರ ಬ್ರಹ್ಮನ ವರದಿಂದ ವಾಲ್ಮೀಕಿ ಕವಿ ಕಣ್ಣಿಗೆ, ರಾಮಾಯಣದ ವಿವರಗಳೆಲ್ಲ ಕಣ್ಮುಂದೆ ಕಟ್ಟಿದುವು ಎಂದು ನಂಬಬೇಕು. 'ಇದು ಹೇಗೆ ಸಾಧ್ಯ ? ಮೂಢ ನಂಬುಗೆ' ಎನ್ನುವುದಾದರೆ, ಎರಡನೆಯದಾಗಿ, ವಾಲ್ಮೀಕಿಯ ಕಾಲದಲ್ಲಿ ರಾಮಾಯಣ ಕಥಾವಸ್ತು ಜನಪದ ಸಾಹಿತ್ಯ ರೂಪದಲ್ಲಿದ್ದಿರಬೇಕು; ಆದಿಕವಿ ಅದರಿಂದ ಮೂಲಸಾಮಗ್ರಿಪಡೆದು, ಪ್ರತಿಭೆಯ ಮಿಂಚು, ಕಲ್ಪನೆಯ ವಿಲಾಸಗಳನ್ನು ಮೆರೆದು ಮಹಾಕಾವ್ಯ ರಚಿಸಿದನೆಂದು ತಿಳಿಯಬೇಕು.

ಈ ಲೇಖನಕ್ಕೆ ಸಲಹೆ, ಸಹಕಾರಗಳನ್ನಿತ್ತ ಡಾ. ಎ. ಎನ್. ಉಪಾಧ್ಯೆ ಅವರಿಗೂ, ಗುರುಗಳಾದ ಶ್ರೀ ಎಚ್. ಜಿ. ಬೆಂಗೇರಿ ಅವರಿಗೂ ಉಪಕೃತನಾಗಿರುವೆನು.

ಆದರೆ ವಿಮಲಸೂರಿಯ 'ಪಉಮಚರಿಯ'ಕ್ಕೆ ರಾಮಾಯಣ ಕಥಾವಸ್ತುವಿನ ನಿಚ್ಚಳವಾದ ಹಿನ್ನಲೆಯಿತ್ತೆಂಬಲ್ಲಿ ಸಂದೇಹವಿಲ್ಲ. ಮಗಧರಾಜ ಶ್ರೇಣಿಕ ಮಹಾರಾಜನಿಗೆ ರಾಮಾಯಣ ಕಥೆಯಲ್ಲಿ ಕೆಲವು ಸಂದೇಹಗಳು ಕಾಣಿಸಿಕೊಂಡವು. ಅವುಗಳ ನಿವಾರಣೆಗಾಗಿ ಭಗವಾನ್ ಮಹಾವೀರ ತೀರ್ಥಂಕರನನ್ನೇ ಕೇಳಬೇಕೆಂದು ಶ್ರೇಣಿಕ ನಿರ್ಧರಿಸಿದನು. ಆಗ ಮಹಾವೀರನ ಪ್ರಥಮ ಗಣಧರನಾದ ಗೌತಮ ಗಣಧರನು ಶ್ರೇಣಿಕನ ಸಂಶಯಗಳನ್ನು ನಿವಾರಿಸಿ, ರಾಮಾಯಣ ಕಥೆಯನ್ನು ಹೇಳಿದನು. ಗೌತಮನಿಗೆ ಮಹಾವೀರ ತೀರ್ಥಂಕರನೇ ಪ್ರಥಮತಃ ರಾಮಾಯಣವನ್ನು ಹೇಳಿದ್ದನು. ಇದೆಲ್ಲವೂ 'ಪಉಮಚರಿಯ'ದ ಉಗಮಕ್ಕಿರುವ ಹಿನ್ನೆಲೆ.[೧] ವಿಮಲಸೂರಿಯೇ ತನ್ನ ಕಾವ್ಯದಲ್ಲಿ ನಿರೂಪಿಸಿರುವನು. ಶ್ರೇಣಿಕನಿಗೆ ಬಂದ ಸಂದೇಹಗಳೆಲ್ಲಕ್ಕೂ ವಾಲ್ಮೀಕಿ ರಾಮಾಯಣವೇ ಆಧಾರವಾಗಿದ್ದರೂ, ವಾಲ್ಮೀಕಿ ರಾಮಾಯಣದ ಉಲ್ಲೇಖವಿಲ್ಲ. ಜೈನಪರಂಪರೆಯ ರಾಮಾಯಣಗಳಿಗೆ ವಿಮಲಸೂರಿಯ ಕಾವ್ಯವೇ ಮೊದಲು.

ವಿಮಲಸೂರಿಯ ಪಉಮಚರಿಯವು ಮೂಲ ರಾಮಾಯಣದ ಅತಿ ಪ್ರಾಚೀನವಾದ ಜೈನ ಅನುವಾದವೆಂದೇ ಡಾ. ಜಕೋಬಿಯವರ ಅಭಿಪ್ರಾಯ. ಕವಿ ವಿಮಲಸೂರಿ ತನ್ನ ಕಾವ್ಯರಚನೆಗಾಗಿ ಹಲವಾರು ಮೂಲಗಳನ್ನು ಬಳಸಿಕೊಂಡಂತೆ ಕಾಣುತ್ತಿದೆ. ಅವುಗಳಲ್ಲಿ, ಅತಿಮಹತ್ವದ ಮತ್ತು ಅರ್ಥಗರ್ಭಿತವಾದುದೆಂದರೆ ವಾಲ್ಮೀಕಿ ರಾಮಾಯಣವೇ. ವಿಮಲಸೂರಿ ಬಹಿರಂಗವಾಗಿ ತರ್ಕಬದ್ಧತೆ, ಅಂತರಂಗದಲ್ಲಿ ಜೈನ ಪಂಥಾಭಿಮಾನಗಳನ್ನು ಮುಂದೊಡ್ಡಿ, ತನ್ನ ಮತತತ್ವ ಭಾವನೆ, ನಂಬುಗೆಗಳಿಗೆ ಸರಿಹೊಂದುವಂತೆ ಹೊಸಬಗೆಯ ರಾಮಾಯಣ ಕಥೆಯನ್ನು ಹೆಣೆದನು. ಅಂತೆಯೇ, ಪಉಮಚರಿಯವು ವಾಲ್ಮೀಕಿಯ ಆದಿಕಾವ್ಯದ ಜೈನಪರಂಪರೆಯ ರೂಪುದಳೆದ ರಾಮಾಯಣ ಎನ್ನಬಹುದೇ ? ಎಂಬುದು ವಿಚಾರಾರ್ಹ. ಪಉಮಚರಿಯ ವಾಲ್ಮೀಕಿ ಕೃತಿಯ ಅನುವಾದವಲ್ಲ; ಆಧರಿತ ಕಾವ್ಯ. ಕಥಾವಸ್ತು, ಸನ್ನಿವೇಶ, ಪಾತ್ರ, ನಿರೂಪಣೆಯ ಕ್ರಮ, ಕಾವ್ಯಸ್ವರೂಪ ಮೊದಲಾದವುಗಳ ದೃಷ್ಟಿಯಿಂದ ಇವೆರಡು ರಾಮಕಾವ್ಯಗಳ ತುಲನಾತ್ಮಕ ಅಭ್ಯಾಸ ಅತ್ಯವಶ್ಯ.

ಕಾವ್ಯಸ್ವರೂಪ

ವಾಲ್ಮೀಕಿಯ ಆದಿಕಾವ್ಯವು ಬುದ್ಧಿಪೂರ್ವಕವಾದ ಸಂಸ್ಕಾರ ಪಡೆದ, ಅಲಂಕಾರಿಕ ಶೈಲಿಯುಳ್ಳ ಮಹಾಕಾವ್ಯ. ರೂಪ, ಶೈಲಿ, ಅಂತಃಸತ್ವ, ಸಾಹಿತ್ಯಿಕ ಶೈಲಿಗಳುಳ್ಳ ಈ ಮಹಾಕಾವ್ಯವನ್ನು, ತರುವಾಯದಲ್ಲಿ ಸಂಸ್ಕೃತದಲ್ಲಿ ರಚಿತವಾದ, ಆಸ್ಥಾನದ ಮನ್ನಣೆ

೧ ಈ ವಿಷಯದ ವಿವರಗಳಿಗೆ ನೋಡಿ : 'ಜೈನರ ದೃಷ್ಟಿಯಲ್ಲಿ ರಾಮಾಯಣ' —ಡಾ. ಎಸ್. ಎಸ್. ಬ್ಯಾತನಾಳ, 'ನಂದನವನ' ಅಭಿನಂದನ ಗ್ರಂಥ. ಅನಾಥ ಸೇವಾಶ್ರಮ – ಮಲ್ಲಾಡಿಹಳ್ಳಿ (ಗ್ರಂಥ ಅಚ್ಚಿನಲ್ಲಿದೆ).

ಪಡೆದ ಕಾವ್ಯಗಳಿಗೆ ನಿದರ್ಶನವಾಗಿದೆ. ವಾ. ರಾ. ದಲ್ಲಿ ಕಾಂಡ–ಸರ್ಗ–ಶ್ಲೋಕಗಳು ಪ್ರಮುಖ ಅಧಿಕರಣಗಗಳು; ಪ. ಉ. ಚ. ದಲ್ಲಿ 'ಅಧಿಕರಣ' ಮತ್ತು 'ಗಾಥೆ' ಎಂಬ ಎರಡೇ ವಿಭಾಗಗಳು. ಗಾತ್ರದಲ್ಲ ಎರಡು ಕಾವ್ಯಗಳೂ ಬಹಳ ವಿಸ್ತಾರವುಳ್ಳವು; ಆದರೆ ಪ. ಉ. ಚ. ವು, ವಾ. ರಾ. ಕ್ಕಿಂತ ನಿಚ್ಚಳವಾಗಿ ಕಿರಿದು. ವಾ. ರಾ. ವು ಮಾನವ ಜೀವನ ಮೌಲ್ಯಗಳು, ಅಲಂಕಾರ ಪ್ರಯೋಗ, ಕಾವ್ಯಗುಣಗಳಿಂದ ಜನಪ್ರಿಯವಾಗಿದ್ದರೆ, ಪ. ಉ. ಚ. ವು ರಾಮಕಥೆಯ ಮೂಲಕ ಜೈನಧರ್ಮದ ತತ್ತ್ವೋಪದೇಶ ನಿರೂಪಣೆಯ ಉದ್ದೇಶವುಳ್ಳದು. ವಾ. ರಾ. ವು ೫೦೦ ಅಧಿಕರಣ, ೨೪,೦೦೦ ಕ್ಕಿಂತ ಮಿಕ್ಕಿದ ಶ್ಲೋಕಗಳುಳ್ಳ ಮಹಾಕಾವ್ಯ; ಪ. ಉ. ಚ. ವು ೧೧೮ ಅಧಿಕರಣ ಮತ್ತು ೮,೬೫೧ ಗಾಥೆಗಳಿರುವ ಕಾವ್ಯ. ಪ. ಉ. ಚ. ದಲ್ಲಿ ವಾ. ರಾ. ದಲ್ಲಿದ್ದಂತೆ ಏಳು ಕಾಂಡಗಳಿರದಿದ್ದರೂ, ೧) ಸೃಷ್ಟಿಯ ಮೂಲ, ೨) ರಾಜಮನೆತನಗಳು, ೩) ರಾಮನ ವನವಾಸ, ೪) ಯುದ್ಧ, ೫) ಲವ ಮತ್ತು ಅಂಕುಶರ ಜನನ, ೬) ರಾಮಾದಿಗಳ ಮೋಕ್ಷ ಮತ್ತು ೭) ರಾಮ ಮೊದಲಾದವರ ಪೂರ್ವಭವಾವಳಿಗಳು ಎಂಬ ಏಳು ವಿಷಯ ವಿಭಾಗಗಳಿವೆ. ವಾ. ರಾ. ದಲ್ಲಿಯ ಏಳು ಕಾಂಡಗಳನ್ನು ಗಮನಿಸಿಯೇ ವಿಮಲಸೂರಿಯು ತನ್ನ ಕಾವ್ಯದಲ್ಲಿಯೂ ಏಳು ವಿಭಾಗಗಳನ್ನು ಮಾಡಿಕೊಂಡಂತಿದೆ. ಪ. ಉ. ಚ. ದಲ್ಲಿ ೧ರಿಂದ ೩೫ರ ವರೆಗಿನ ಅಧಿಕರಣಗಳಿಗೆ 'ಉದ್ದೇಸೋ' ಎಂದೂ, ಉಳಿದವುಗಳಿಗೆ 'ಪವ್ವ' ಗಳೆಂದೂ ಹೆಸರಿಸಲಾಗಿದೆ. ವಾ. ರಾ. ದಲ್ಲಿಯ ಅಧಿಕರಣಗಳಿಗೆ ತಪ್ಪದೆ 'ಸರ್ಗ' ಗಳೆಂಬ ಹೆಸರೇ ಉಂಟು. ವಿಮಲಸೂರಿಯ ನಂತರದಲ್ಲಿ, ಮಹಾಕಾವ್ಯಗಳನ್ನು ರಚಿಸಿರುವ ಕಾಳಿದಾಸ, ಪ್ರವರಸೇನ ಮುಂತಾದವರು ತಮ್ಮ ಕಾವ್ಯಗಳನ್ನು ಅಧಿಕರಣ, ಶ್ಲೋಕಗಳೆಂದು ಹಂಚಿರುವರು. ವಿಮಲನೂ ಮಹಾಕಾವ್ಯ ಮಾದರಿಯನ್ನು ಅನುಸರಿಸಿರುವನು. ಪ. ಉ. ಚ. ಯ ಏಳು ವಿಭಾಗಗಳು ವಾ. ರಾ. ದ ಏಳು ಕಾಂಡಗಳಿಂದಲೇ ಮೈದಾಳಿರಬಹುದಾಗಿದೆ. ವಿಮಲ ತನ್ನ ಕಾವ್ಯವನ್ನು ಪುರಾಣವೆಂದೂ ಹೇಳಿಕೊಂಡಿರುವನು.

ವಿಮಲಸೂರಿಯ ಅಧಿಕರಣವು ಮುಗಿದುದನ್ನು ಸೂಚಿಸಲು ಪ್ರತಿಯೊಂದು ಅಧಿಕರಣದ ಕೊನೆಯ ಶ್ಲೋಕದ ಛಂದಸ್ಸನ್ನು ಬದಲಾಯಿಸಿಕೊಂಡಿರುವನು. ಇದು ಗಮನಾರ್ಹವಾದ ಅಂಶ. ವಾ. ರಾ. ದಲ್ಲಿ ಈ ಕ್ರಮ ಕಂಡುಬರುತ್ತಿಲ್ಲ. ಮಹಾಕಾವ್ಯದ ಪ್ರತಿಯೊಂದು ಅಧಿಕರಣದ ಕೊನೆಯ ಶ್ಲೋಕದ ಛಂದಸ್ಸು, ಉಳಿದ ಶ್ಲೋಕಗಳಿಗಿಂತ ಬೇರೆಯಾಗಿರಬೇಕೆಂಬುದು ಸಂಸ್ಕೃತ ಕಾವ್ಯಶಾಸ್ತ್ರದ ನಿಯಮ. ಕಾಳಿದಾಸ, ಮಾಘರಂತಹ ಕವಿಗಳು ತಮ್ಮ ಕಾವ್ಯಗಳಾದ 'ರಘುವಂಶ', ಮತ್ತು 'ಶಿಶುಪಾಲವಧ' ಗಳಲ್ಲಿ ಮೇಲಿನ ನಿಯಮವನ್ನು ತಪ್ಪದೆ ಪಾಲಿಸಿರುವರು. ವಿಮಲನು ಪ್ರತಿ ಅಧಿಕರಣದ ಕೊನೆಯ ಶ್ಲೋಕದಲ್ಲಿ ತನ್ನ ಹೆಸರು ಅಥವಾ ಅಂಕವನ್ನು ಹೇಳಿರುವನು. ಅವನು ತನ್ನ ಕಾಲದಲ್ಲಿ ಪ್ರಚಲಿತವಿದ್ದ ಕಾವ್ಯಶಾಸ್ತ್ರ ನಿಯಮವನ್ನು ಸರಿಯಾಗಿ ಅನುಸರಿಸಿ

ದ್ದಾನೆ—ಸಂಸ್ಕೃತ, ಪ್ರಾಕೃತ ಕವಿಗಳನೇಕರು ತಮ್ಮ ಅಂಕಗಳನ್ನು ಹೇಳಿದುದಕ್ಕೆ ಉದಾಹರಣೆಗಳಿವೆ : 'ಶಿಶುಪಾಲವಧ' ದಲ್ಲಿ ಮಾಘನ ಶ್ರ್ಯಂಕ, 'ನೈಷಧೀಯ' ದಲ್ಲಿ ಹರ್ಷನ ಆನಂದ, 'ಕಿರಾತಾರ್ಜುನೀಯ'ದಲ್ಲಿ ಭಾರವಿಯ ಲಿಕ್ಷ್ಯಂಕ ಮುಂ. ಪ್ರಾಕೃತ ಕಾವ್ಯಗಳಲ್ಲಿ : 'ಧೂರ್ತಾಖ್ಯಾನ' ದಲ್ಲಿ ಹರಿಭದ್ರನ ವಿರಹಾಂಕ, 'ಯಶೋಧನ ಚರಿತೆ' ಯಲ್ಲಿ ಪುಷ್ಪದಂತನ ಅಭಿಮಾನಾಂಕ, 'ಕುವಲಯಮತ' ದಲ್ಲಿ ಉದ್ಯೋತನ ದಕ್ಷಿಣ್ಯಾಂಕ, ಪ. ಉ. ಚ. ದಲ್ಲಿ ವಿಮಲಾಂಕ ಮುಂ. ವಿಮಲಸೂರಿ ತನ್ನ ಹೆಸರನ್ನು ಸೂಚಿಸಲು ಬೇಕೆಂದೇ ಈ ಅಂಕವನ್ನು ಕಾಣಿಸಿರುವನು. ಮೇಲೆ ಉದಾಹರಿಸಿದ ಕಾವ್ಯಗಳಲ್ಲಿ ಇಂತಹ ಕ್ರಮ ಕಂಡುಬರುತ್ತಿಲ್ಲ. ಈ ವಿಷಯವಾಗಿ, ಶ್ರೀ ವ್ಹಿ. ರಾಘವನ್‌ರವರು.: "ತಮ್ಮ ತಮ್ಮ ಕಾವ್ಯಗಳ ಪ್ರತಿಯೊಂದು ಆಶ್ವಾಸದ ಕೊನೆಯ ಶ್ಲೋಕಗಳಲ್ಲಿ ಕವಿಗಳು ತಮ್ಮ ಪ್ರೀತಿಯ ಅಂಕವನ್ನು ಕಾಣಿಸುವ ರೂಢಿಯ ಬಗೆಗೆ ಹೇಳುವಾಗ 'ಚತುರ್ಮುಖ' ನೆಂಬ ಕವಿ ತನ್ನ ಹೆಸರು ಅಥವಾ ಅಂಕಿತವನ್ನು (ಸ್ವನಾಮಾಂಕ) ಬಳಿಸಿದ್ದಾನೆಂದು ಭೋಜನು ಹೇಳಿರುವನು. ಶ್ಲೇಷೆಯ ಆಧಾರದಿಂದ ಇದು ಬ್ರಹ್ಮನ ಹೆಸರೂ ಆಗುತ್ತದೆಂಬುದು ಸ್ಪಷ್ಟವಾಗಿದೆ. ವಿಮಲನ ಕಾವ್ಯದಲ್ಲಿ ಇದು ಬಹಳ ಎದ್ದು ಕಾಣುತ್ತಿದೆ. ಆದರೆ ಈ ಬಗೆಯ ಯುಕ್ತಿ ವಾಲ್ಮೀಕಿಯ ಕಾವ್ಯದಲ್ಲಿಲ್ಲ" ಎಂದು ಹೇಳಿರುವರು.

ವಿಮಲಸೂರಿಯು ತನ್ನ ರಾಮಾಯಣಕಾವ್ಯದ ಪ್ರತಿಯೊಂದು ಅಧಿಕರಣದ ಕೊನೆಯ ಶ್ಲೋಕಗಳಲ್ಲಿ, ಶಾರ್ದೂಲಿ, ಮಾಲಿನೀ, ಉಪಜಾತಿ, ಸ್ರಗ್ಧರಾ, ಇಂದ್ರವಜ್ರಾ ಮುಂತಾದ ಛಂದಸ್ಸುಗಳನ್ನು ಪ್ರಯೋಗಿಸಿರುವನು. ಪ. ಉ. ಚ. ಯ ಹಾಗೂ ವಾ. ರಾ. ದ ಬಹಳಷ್ಟು ಭಾಗಗಳು ಅನುಷ್ಟುಪ್ ಛಂದಸ್ಸಿನಲ್ಲಿವೆ.

ವಿಷಯಾನುಕ್ರಮಣಿಕೆ

ಸಾಮಾನ್ಯವಾಗಿ, ವಿಮಲಸೂರಿಯ ಪ. ಉ. ಚ. ದ ರಾಮಕಥೆಯ ಸ್ಥೂಲ ಅಂಶಗಳು ವಾ. ರಾ. ದ ಕಥೆಗೆ ಹೊಂದಿಕೊಳ್ಳುತ್ತಿವೆ. ಆದರೆ ಕೆಲವು ಮಹತ್ವದ ಅಂಶಗಳಲ್ಲಿ ಇವೆರಡರಲ್ಲಿಯೂ ಮೂಲಭೂತವಾಗಿರುವ ಅಂತರಗಳು ಉಂಟು. ೧ ರಾಮನ ಜನನ. ೨ ಸೀತೆಯೊಡನೆ ರಾಮನ ಮದುವೆ. ೩ ರಾಮನ ವನವಾಸ ಗಮನ. ೪ ರಾವಣನಿಂದ ಸೀತಾಪಹರಣ. ೫ ಸುಗ್ರೀವ–ಹನುಮಂತ–ರಾಮರಲ್ಲಿ ಸ್ನೇಹ. ೬ ಲಂಕೆಯ ದಂಡಯಾತ್ರೆ. ೭ ರಾವಣನ ಮರಣ ಇವು ರಾಮಾಯಣದ ಮುಖ್ಯ ರೂಪರೇಷೆ; ಎರಡೂ ಕಾವ್ಯಗಳಿಗೆ ಸಾಮಾನ್ಯವಾಗಿರುವ ಘಟನೆಗಳು. ವಿಮಲನೂ ವಾಲ್ಮೀಕಿಯಂತೆ ತನ್ನ ಕಾವ್ಯ 'ರಾಘವ ಚರಿಯ' (ಚರಿತ್ರೆ) ಎಂದು ಹೇಳಿಕೊಂಡಿರುವನು. ವಾಲ್ಮೀಕಿ ಕಾವ್ಯ ಪ್ರಾರಂಭದಲ್ಲಿ, ಕಥಾವಸ್ತುವಿನ ಪರಿವಿಡಿ ಅಥವಾ ವಿಷಯಸೂಚಿಯನ್ನು ಕೊಟ್ಟಿರುವಂತೆ, ವಿಮಲನೂ 'ಸೂತ್ರವಿಧಾನ' ವೆಂಬ ತನ್ನ ಕಾವ್ಯದ ಮೊದಲನೆಯ ಅಧ್ಯಾಯದಲ್ಲಿ ಕಥಾವಸ್ತುವಿನ ಮುಖ್ಯಾಂಶಗಳನ್ನು ಅಡಕವಾಗಿ

ಹೇಳಿರುವನು. ವಾ. ರಾ. ದಲ್ಲಿ ಅಯೋಧ್ಯೆಯಿಂದ ಪ್ರಾರಂಭವಾದ ರಾಮಕಥೆ ಚಿತ್ರಕೂಟ–ಪಂಚವಟಿ–ದಂಡಕಾರಣ್ಯ–ಕಿಷ್ಕಿಂಧೆ–ಲಂಕೆಗಳಲ್ಲಿ ಸುತ್ತಾಡಿ ಅಯೋಧ್ಯೆಯಲ್ಲಿಯೇ ಮುಗಿಯುತ್ತಿದೆ. ಪ.ಉ.ಚ. ದಲ್ಲಿಯೂ ರಾಮಕಥೆಯ ಸಂಚಾರವಿದೆಯಲ್ಲದೆ ವಿವರಗಳಲ್ಲಿ ಹಲವು ಬದಲಾವಣೆಗಳಿವೆ. ಅಯೋಧ್ಯೆಗೆ 'ಸಾಕೇತಪುರ'ವೆಂಬ ಹೆಸರೂ ಇದೆ. ವಾ.ರಾ. ದಲ್ಲಿ ರಾಮನು ವಿಷ್ಣುವಿನ ಅವತಾರ; ಪ.ಉ.ಚ. ದಲ್ಲಿ ರಾಮನು ತ್ರಿಷಷ್ಟಿ ಶಲಾಕಾಪುರುಷರಲ್ಲಿ ಒಬ್ಬನು; ಎಂಟನೆಯ ಬಲದೇವ ಅಥವಾ ಹಲಧರ; ಪ್ರಸಿದ್ಧ ವೀರಪುರುಷ; ಅಚ್ಚ ಮಾನವ. ರಾಮನ ಮತ್ತು ಇತರ ಪ್ರಮುಖ ಪಾತ್ರಗಳ ಮೂಲಕಲ್ಪನೆ, ನಿರೂಪಣೆಗಳಲ್ಲಿ ವಾಲ್ಮೀಕಿ ಮತ್ತು ವಿಮಲರಲ್ಲಿ ಭಿನ್ನಮತ, ಭಿನ್ನ ದೃಷ್ಟಿಗಳು ಸ್ಪಷ್ಟವಾಗಿವೆ.

ವಾ. ರಾ. ಮತ್ತು ಪ. ಉ. ಚ. ಗಳ ಕಥಾವಸ್ತು, ನಿರೂಪಣೆಯ ಕ್ರಮವೂ ಬೇರೆಬೇರೆಯಾಗಿದೆ. ಬಾಲಕಾಂಡದಿಂದ ಪ್ರಾರಂಭವಾಗುವ ವಾ. ರಾ. ದಲ್ಲಿ ರಾಮಚರಿತೆಗೇ ಮೊದಲನೆಯ ಸ್ಥಾನ. ಉತ್ತರಕಾಂಡದಲ್ಲಿ (ಇದು ವಾಲ್ಮೀಕಿಕೃತವಲ್ಲವೆಂದು ವಿಮರ್ಶಕರ ಅಭಿಪ್ರಾಯ) ಮಾತ್ರ ರಾಕ್ಷಸವಂಶ, ವಾನರವಂಶ, ರಾವಣನ ಕುಟುಂಬ ಮತ್ತು ಅವನ ಪೂರ್ವಜನ್ಮಗಳ ವಿವರಣೆಯಿದೆ. ಆದರೆ ಪ. ಉ. ಚ. ದಲ್ಲಿ ಹತ್ತೊಂಬತ್ತು ಅಧಿಕರಣಗಳಲ್ಲಿ ಲೋಕಸ್ಥಿತಿಯನ್ನು ನಿರ್ದೇಶಿಸಿ ಅದರಲ್ಲಿ ವಾನರವಂಶ, ವಿದ್ಯಾಧರವಂಶ, ರಾಕ್ಷಸವಂಶ, ರಾವಣನ ಚರಿತ್ರೆಗಳನ್ನು ವಿವರಿಸಲಾಗಿದೆ. ಇಪ್ಪತ್ತೊಂದನೆಯ ಅಧಿಕರಣದಿಂದ ರಾಮನ ನಿಜವಾದ, ನೇರವಾದ ಚರಿತ್ರೆ ಮೊದಲಾಗುತ್ತಿದೆ.

ವಾಲ್ಮೀಕಿ, ವಿಮಲರಿಬ್ಬರ ಕಾವ್ಯಗಳಲ್ಲಿಯೂ ರಾಮನೇ ಕಥಾನಾಯಕ. ರಾಮ, ಇಕ್ಷ್ವಾಕುವಂಶದ ದಶರಥ ಮಹಾರಾಜನ ಮಗ. ಇಬ್ಬರು ಕವಿಗಳೂ ತಮ್ಮ ಕಾವ್ಯಗಳಲ್ಲಿ ಬಹುಭಾಗವನ್ನು ರಾಮಚರಿತ್ರೆಗಾಗಿಯೇ ಬಳಸಿಕೊಂಡಿರುವರು. ಇಷ್ಟಿದ್ದರೂ ಮತಭೇದ ಇದ್ದೇ ಇವೆ.

ವಾ. ರಾ. ದಲ್ಲಿ ಸಂತಾನಪ್ರಾಪ್ತಿಗಾಗಿ ದಶರಥ ಪುತ್ರಕಾಮೇಷ್ಟಿಯಜ್ಞ ಮಾಡುತ್ತಾನೆ. ಅದರ ಫಲವಾಗಿ ಮೂವರು ರಾಣಿಯರಲ್ಲಿ ನಾಲ್ವರು ಪುತ್ರರು ಜನಿಸುವರು. ಕೌಸಲ್ಯೆಯ ಮಗ ರಾಮ; ಕೈಕೇಯಿಯ ಮಗ ಭರತ; ಲಕ್ಷ್ಮಣ, ಶತ್ರುಘ್ನರು ಸುಮಿತ್ರೆಯ ಮಕ್ಕಳು. ಪ. ಉ ಚ. ದಲ್ಲಿ ಸಂತಾನಕ್ಕಾಗಿ ಯಜ್ಞವಿಲ್ಲ. ದಶರಥನಿಗೆ ಸಹಜವಾಗಿಯೇ ನಾಲ್ವರು ಮಕ್ಕಳಿರುವರು. ರಾಮನ ತಾಯಿ ಅಪರಾಜಿತೆ (ಕೌಸಲ್ಯಾ ಎಂಬ ಹೆಸರೇ ಇಲ್ಲ); ರಾಮ ಪೂರ್ಣವಾಗಿ ಅರಳಿದ ಪದ್ಮದಂತೆ ಕಾಣುವುದರಿಂದ ಅವನಿಗೆ ಪದ್ಮನೆಂದೂ ಹೆಸರು (ರವಿಷೇಣನ ಕಾವ್ಯಕ್ಕೆ ಪದ್ಮಪುರಾಣವೆಂದೇ ಹೆಸರು). ಜೈನಸಂಪ್ರದಾಯದಲ್ಲಿ 'ಪದ್ಮ' ಹೆಸರೇ ಹೆಚ್ಚು ರೂಢಿತ

ವಾಗಿ ಬಂದಿದೆ. ರಾಮನಿಗೆ ರಾಮ, ರಾಘವ, ರಾಮದೇವ ಮುಂತಾದ ಹೆಸರುಗಳೂ ಪ. ಉ. ಚ. ದಲ್ಲಿವೆ. ಲಕ್ಷ್ಮಣ, ಸುಮಿತ್ರೆಯ ಮಗ; ಆದರೆ ಭರತ, ಶತ್ರುಘ್ನರು ಕೈಕೇಯಿಯ ಮಕ್ಕಳು. ದಶರಥನ ನಾಲ್ವರು ಮಕ್ಕಳೂ ಸಾಕೇತಪುರದಲ್ಲಿಯೇ ಜನಿಸುವರಲ್ಲದೆ ಅವರ ವಿದ್ಯಾಭ್ಯಾಸವೂ ಅಲ್ಲಿಯೇ ಸಾಗುವುದು. ಜೀವನದಲ್ಲಿಯ ಎಂತಹ ಪ್ರಸಂಗವನ್ನೂ ಎದುರಿಸಲು ಬಲ ಬರುವಂತೆ ಎಲ್ಲ ಬಗೆಯ ಶಾಸ್ತ್ರಗಳ ಅಭ್ಯಾಸವೂ ನಡೆಯುತ್ತಿದೆ.

ವಾ. ರಾ. ದಲ್ಲಿ, ರಾಮ ಕಿರಿಯನಿರುವಾಗಲೇ ವಿಶ್ವಾಮಿತ್ರನು ದಶರಥನಲ್ಲಿಗೆ ಬಂದು ತನ್ನ ಯಜ್ಞರಕ್ಷಣೆಗಾಗಿ, ರಾಕ್ಷಸರ ಸಂಹಾರಕ್ಕಾಗಿ ರಾಮನನ್ನು ಕರೆದೊಯ್ಯು ವನು; ಜೊತೆಗೆ ಲಕ್ಷ್ಮಣನೂ ಹೋಗುವನು. ಪ. ಉ. ಚ. ದಲ್ಲಿ ಜನಕನ ನಾಡಿನಲ್ಲಿ ಹಾವಳಿ ಎಬ್ಬಿಸಿದ ಬೇಡರನ್ನು ಬಗ್ಗುಬಡಿಯಲು ಜನಕನೇ ರಾಮನ ಸಹಾಯವನ್ನು ಯಾಚಿಸುವನು. ಇವೆರಡರಲ್ಲಿ ರಾಮನು ತನ್ನ ಪರಾಕ್ರಮ ಮೆರೆಯಲು ಮನೆಯಿಂದ ಹೊರಡಬೇಕಾದ ಸನ್ನಿವೇಶ, ಕಾರಣಗಳು ಬೇರೆಬೇರೆಯಾಗಿವೆ.

ಸೀತೆಯ ಜನನದ ಬಗೆಗೂ ವಾಲ್ಮೀಕಿ–ವಿಮಲರಲ್ಲಿ ಒಮ್ಮತವಿಲ್ಲ. ಒಮ್ಮತ ವಿರುವುದು ಜನಕ, ಸೀತೆಯ ತಂದೆ ಎಂದು ತಿಳಿಯುವಲ್ಲಿ ಮಾತ್ರ. ವಾ. ರಾ. ದಲ್ಲಿಯ ಜನಕ, ಮೈಥಿಲವಂಶಜ; ಯಜ್ಞಭೂಮಿಯನ್ನು ನೇಗಿಲಿನಿಂದ ಶುದ್ಧಗೊಳಿಸುತ್ತಿರುವಾಗ ಸೀತೆ ಸಿಕ್ಕಳು; ಜನಕ, ಸೀತೆಯ ಸಾಕುತಂದೆ. ಅದೇ ಉತ್ತರಕಾಂಡದಲ್ಲಿ ವೇದವತಿಯೇ ಸೀತೆಯಾಗಿ ಜನಿಸಿದಳೆಂದು ಹೇಳಿದೆ. ಅವಳ ತಂದೆಯ ಹೆಸರು ಕುಶಧ್ವಜ. ವೇದವತಿ ವಿಷ್ಣುವನ್ನು ಮದುವೆಯಾಗಬೇಕೆಂದಿದ್ದಳು. ರಾವಣ ಅವಳಲ್ಲಿ ಮೋಹಿತನಾಗಿ ವಿಷ್ಣುವನ್ನು ನಿಂದಿಸಿ, ಪೀಡಿಸಿದುದರಿಂದ ವೇದವತಿ ರಾವಣನ ಮರಣಕ್ಕೆ ಕಾರಣಳಾಗಿ ಸೀತೆಯಾಗಿ ಜನಿಸುವೆನೆಂದು ರಾವಣನಿಗೆ ಶಾಪವಿತ್ತಳು. ಪ. ಉ. ಚ. ದ ಜನಕ ಹರಿವಂಶಜ, ಮಿಥಿಲಾಪುರದವನು. ಸೀತೆ, ಜನಕ–ವೈದೇಹಿಯರ (ವಾ. ರಾ. ದಲ್ಲಿ ಜನಕನ ರಾಣಿಯ ಹೆಸರು ಹೇಳಿಲ್ಲ) ಸ್ವಾಭಾವಿಕ ಮಗಳು. ಸೀತೆಯ ಜನಿಸಲು, ಇಲ್ಲಿಯೂ ಪೂರ್ವಜನ್ಮದ ಘಟನೆಯೊಂದೇ ಕಾರಣವಾಗಿದೆ. ಸೀತೆಯು ಹಿಂದಣ ಜನ್ಮದಲ್ಲಿ ವೇಗವತಿ– ಶ್ರೀಭೂತಿಯ ಮಗಳು. ಸ್ವಯಂಭು ಎಂಬ ಅರಸನು ಶ್ರೀಭೂತಿ ಯನ್ನು ಕೊಂದು ಬಲಾತ್ಕಾರದಿಂದ ವೇಗವತಿಯನ್ನು ಸಂಭೋಗಿಸಿದನು. ಆಗ ಕೆರಳಿದ ವೇಗವತಿ 'ಮುಂದಿನ ಜನ್ಮದಲ್ಲಿ ನಿನ್ನ ಮರಣಕ್ಕೆ ಕಾರಣಳಾಗಿ ಜನಿಸುವೆ' ಎಂದು ಶಾಪವಿತ್ತಳು. ಅವಳೇ ಸೀತೆಯಾಗಿ ಹುಟ್ಟಿದಳು. 'ಸ್ವಯಂಭು' ರಾಜನೇ ರಾವಣನಾಗಿ ಹುಟ್ಟಿದನು.

ವಾ. ರಾ. ದಲ್ಲಿ ಸೀತೆಯ ಅಣ್ಣನ ಉಲ್ಲೇಖವಿಲ್ಲ. ಪ. ಉ. ಚ. ದಲ್ಲಿ ಭಾಮಂಡಲನು ಜನಕನ ಮಗ; ಸೀತೆಯ ಅಣ್ಣ.

ಸೀತೆಯ ಸಾಕುತಂದೆಯಾದ ಜನಕ, ಶಿವಧನುಸ್ಸನ್ನು ಮುರಿದವನಿಗೆ ಮಗಳನ್ನು ಕೊಡುವೆನೆಂದು ಘೋಷಿಸುವನು. ವಿಶ್ವಾಮಿತ್ರ ರಾಮ–ಲಕ್ಷ್ಮಣರೊಡನೆ ಜನಕನಲ್ಲಿಗೆ ಬರುವನು; ರಾಮನಿಗೆ ಶಿವಧನುವನ್ನು ತೋರೆಂದು ಜನಕನಿಗೆ ಆದೇಶಿಸುವನು. ರಾಮ ಶಿವಧನುವನ್ನು ಮುರಿದು ಸೀತೆಯೊಡನೆ ವಿವಾಹವಾದನೆಂದು ವಾ, ರಾ, ದಲ್ಲಿ ಹೇಳಿದೆ. ಆದರೆ ಪ, ಉ, ಚ, ದ ಕಥೆಯೇ ಬೇರೆ. ಭಾಮಂಡಲ ಜನಿಸಿದೊಡನೆ, ಪೂರ್ವವೈರಿ ರಕ್ಕಸನೊಬ್ಬ ಆ ಮಗುವನ್ನು ಎತ್ತಿಕೊಂಡು ಹೋಗಿ, ರಥನೂಪುರದಲ್ಲಿ ಬಿಡುವನು. ಭಾಮಂಡಲ ಅಲ್ಲಿಯ ಅರಸ ವಿದ್ಯಾಧರ ಚಂದ್ರಗತಿಯ ಸಾಕುಮಗನಾಗಿ ಬೆಳೆಯುವನು. ಸೀತೆಯಿಂದ ಅವಮಾನಿತನಾದ ನಾರದ, ಸೇಡುತೀರಿಸಿಕೊಳ್ಳಲೆಂದು ಸೀತೆಯ ಚಿತ್ರವನ್ನು ಭಾಮಂಡಲನಿಗೆ ತೋರುವನು. ಭಾಮಂಡಲ ಚಿತ್ರ ನೋಡಿ ಸೀತೆಯಲ್ಲಿ ಅನುರಕ್ತನಾಗುವನು. ಚಂದ್ರಗತಿಯು ಮಗನ ಮನದಾಸೆ ಈಡೇರಿಸಲೆಂದು, ಮಾಯೆಯಿಂದ ಜನಕನನ್ನು ತನ್ನಲ್ಲಿಗೆ ತರಿಸಿಕೊಂಡು ಬೀಗತನ ಬೆಳೆಸಲು ಒತ್ತಾಯಿಸುವನು. ಜನಕ ರಾಮನು ತನಗೆ ಮಾಡಿದ ಉಪಕಾರಕ್ಕಾಗಿ, ಮಗಳನ್ನು ಅವನಿಗೇ ಕೊಡುವ ನಿರ್ಧಾರವನ್ನು ಹೇಳಲು, ವಿದ್ಯಾಧರರು ಕೆರಳಿದರು. ಆಗ ಚಂದ್ರಗತಿಯು ತನ್ನಲ್ಲಿದ್ದ ವಜ್ರಾವರ್ತವೆಂಬ ಧನುವನ್ನು ಮಣಿಸಿದರೆ, ರಾಮನಿಗೆ ಸೀತೆಯನ್ನು ಕೊಡು ಎಂದು ಕರಾರು ಹಾಕುವನು; ವಜ್ರಾವರ್ತವನ್ನು ಜನಕನೊಡನೆ ತನ್ನ ಜನರ ಕಾವಲಿನಲ್ಲಿ ಕಳಿಸುವನು. ಜನಕ ಸೀತೆಯ ಗಾಂಧರ್ವವಿವಾಹದ ವ್ಯವಸ್ಥೆ ಮಾಡುತ್ತಾನೆ. ರಾಮ ಆ ಧನುವನ್ನು ಮಣಿಸಿದುದರಿಂದ ರಾಮ–ಸೀತೆಯರ ವಿವಾಹವಾಗುವುದು. ಜನಕನ ಆಸೆ ಈಡೇರಿತು. ಇದರಿಂದ ಕೋಪಗೊಂಡ ಭಾಮಂಡಲ ರಾಮನ ಮೇಲೆ ದಾಳಿ ಹೊರಡುವನು. ಅಯೋಧ್ಯೆಯ ದಾರಿಯಲ್ಲಿ ಭಾಮಂಡಲನಿಗೆ ಪೂರ್ವಜನ್ಮ ಸ್ಮರಣೆಯಾಗಿ, ಸೀತೆ ತನ್ನ ಒಡಹುಟ್ಟಿದ ತಂಗಿಯೆಂದು ತಿಳಿದು ಪಶ್ಚಾತ್ತಾಪಪಟ್ಟು ಹಿಂದಿರುಗುವನು. ಜೈನ ಪರಂಪರೆಯ ರಾಮಾಯಣಗಳಲ್ಲಿ ಈ ಉಪಕಥೆ ಸಾಮಾನ್ಯವಾಗಿ ಇದ್ದೇ ಇದೆ.

ರಾಮನ ತಮ್ಮಂದಿರ ವಿಷಯವು ಬೇರೆಯಿದೆ. ಲಕ್ಷ್ಮಣನ ಹೆಂಡತಿ ಊರ್ಮಿಳೆ ಜನಕನ ನಿಜವಾದ ಮಗಳು. ಭರತ, ಶತ್ರುಘ್ನರ ಹೆಂಡತಿಯರಾದ ಮಾಂಡವಿ ಹಾಗೂ ಶ್ರುತಕೀರ್ತಿಯರು ಜನಕನ ತಮ್ಮ ಕುಶಧ್ವಜನ ಮಕ್ಕಳು. ರಾಮನ ಮದುವೆಯ ನಂತರ ವಿಶ್ವಾಮಿತ್ರನ ಸೂಚನೆಯಂತೆ ಇವರಿಬ್ಬರ ವಿವಾಹವಾಗುವುದೆಂದು ರಾಮಾಯಣದಲ್ಲಿ ಹೇಳಿದೆ. ಪ, ಉ, ಚ, ದಲ್ಲಿಯ ವಿವರವೇ ಭಿನ್ನವಾಗಿದೆ. ಅಣ್ಣನ ಮದುವೆಯಾದುದನ್ನು ತಿಳಿದ ಭರತನ ಮನಸ್ಸು ಕದಡಿತು. ಇದನ್ನು ಗಮನಿಸಿದ ಸೀತೆ, ಜನಕನ ತಮ್ಮ ಕನಕನ ಮಗಳಾದ ಸುಭದ್ರೆಯೊಡನೆ ಭರತನ ಮದುವೆಯಾಗಲೆಂದು ಸೂಚಿಸುವಳು. ಆಗ ಸುಭದ್ರೆಯ ಗಾಂಧರ್ವವಿವಾಹದ ಏರ್ಪಾಡು, ಸುಭದ್ರೆ ಭರತನನ್ನೇ ಆರಿಸುವಳು. ಪ, ಉ, ಚ, ದ ಕಥಾವಿಶೇಷತೆಗಳಲ್ಲಿ ಇದೂ ಒಂದಾಗಿದೆ.

ರಾಮನು ಕಟ್ಟುನಿಟ್ಟಾದ ಏಕಪತ್ನೀವ್ರತಸ್ಥನೆಂದು ವಾ, ರಾ, ದಲ್ಲಿದೆ. ಇದು ಅವನ ಗುಣವಿಶೇಷ. ಪ, ಉ, ಚ, ದ ರಾಮನ ದಾಂಪತ್ಯಜೀವನಚಿತ್ರಣವೇ ಬೇರೆ.

ರಾಮನಿಗೆ ಒಟ್ಟಿನಲ್ಲಿ ೮,೦೦೦ ಜನ ಹೆಂಡತಿಯರು. ಅವರಲ್ಲಿಯೇ ಸೀತಾ, ಪ್ರಭಾವತಿ, ರತಿನಿಭಾ ಮತ್ತು ಶ್ರೀದಾಮಾ ಇವರು ಹಿರಿಯ ರಾಣಿಯರು. ಈ ವಿಷಯದಲ್ಲಿ ರಾಮನಿಗಿಂತ ಲಕ್ಷ್ಮಣನದೇ ಮೇಲುಗೈ. ಜನಕನ ತಮ್ಮ ಕುಶಧ್ವಜನ ಮಗಳು ಊರ್ಮಿಳೆ, ಲಕ್ಷ್ಮಣನನ್ನು ಕೈಹಿಡಿದಳೆಂಬ ಉಲ್ಲೇಖವಿಲ್ಲ. ಲಕ್ಷ್ಮಣನಿಗೆ ೧೬,೦೦೦ ಜನ ಹೆಂಡತಿಯರು. ಆದರೆ ಲಕ್ಷ್ಮಣ, ರಾಮನ ಸಂಗಡ ವನವಾಸಕ್ಕೆ ಹೊರಡುವ ಮೊದಲೇ ಆಗಿದ್ದ ಮದುವೆಗಳಲ್ಲ. ವನವಾಸ ಸಂಚಾರದಲ್ಲಿಯೇ ಲಕ್ಷ್ಮಣನ ಹೆಂಡತಿಯರ ಸಂಖ್ಯೆ ಬೆಳೆಯುತ್ತ ಹೋಗುತ್ತದೆ. ೧೬,೦೦೦ ಜನರಲ್ಲಿ ವಿಶಲ್ಯಾ, ಜಿತಪದ್ಮಾ, ವನಮಾಲಾ, ಮನೋರಮಾರು ಹಿರಿಯರಾಣಿಯರು. ತನ್ನ ಸದ್ಗುಣ ಅದಕ್ಕಿಂತ ಹೆಚ್ಚಾಗಿ ಪರಾಕ್ರಮಗಳಿಂದ ಹಲವಾರು ಸುಂದರಿಯರನ್ನು ಮನವೊಲಿಸಿಕೊಂಡು ಮದುವೆನಿಂದುದು ಲಕ್ಷ್ಮಣನ ಗುಣವಿಶೇಷವೆಂದು ಪ, ಉ, ಚ, ದಲ್ಲಿ ಬಣ್ಣಿಸಿದೆ. ಅದಕ್ಕೊಂದು ಉದಾ : ವನಮಾಲಾ, ತನ್ನ ಎಳವೆಯಿಂದಲೇ ಲಕ್ಷ್ಮಣನ ಮೇಲೆ ಮನಸ್ಸಿಟ್ಟಿದ್ದಳು. ತನ್ನ ತಂದೆ ತನ್ನ ಗೆಳೆಯನ ಮಗನೊಡನೆ ಮಗಳ ಮದುವೆ ಮಾಡಬೇಕೆಂದು ನಿರ್ಧರಿಸಿದುದನ್ನು ತಿಳಿದು, ಆತ್ಮಹತ್ಯೆ ಮಾಡಿಕೊಳ್ಳಬೇಕೆಂದಾಗ ಲಕ್ಷ್ಮಣ ಅವಳನ್ನು ಉಳಿಸಿದ್ದರಿಂದ ಅವಳೊಡನೆ ವಿವಾಹವಾಗುವುದು. ಇನ್ನೊಂದೆಡೆ ಜಿತಪದ್ಮೆಯ ತಂದೆಯು ಬೀಸಿದ ಶಕ್ತಿಯ ಹೊಡೆತವನ್ನು ತಡೆದುಕೊಂಡುದರಿಂದ ಅವಳೊಡನೆ ವಿವಾಹ. ಹೀಗೆಯೇ ಅನೇಕ ಪ್ರಸಂಗಗಳು ಒದಗಿ ಲಕ್ಷ್ಮಣನ ಹೆಂಡತಿಯರ ಸಂಖ್ಯೆ ಬೆಳೆಯುತ್ತಿದೆ. ರಾಮ-ಲಕ್ಷ್ಮಣರಂತೆ ಭರತನಿಗೂ ಬಹಳ ಜನ ಹೆಂಡರಿದ್ದರು. ಪ, ಉ, ಚ, ದಲ್ಲಿ ಶತ್ರುಘ್ನನ ಮದುವೆಯ ಮಾತೇ ಬರದಿರುವುದೂ ಒಂದು ವಿಶೇಷ.

ರಾಮನ ವನವಾಸದ ವಿಷಯದ ಬಗೆಗೆ ಇವೆರಡೂ ಕಾವ್ಯಗಳಲ್ಲಿ ಮಹದಂತರವಿದೆ. ವಾ, ರಾ, ದಲ್ಲಿ ಭರತ, ಶತ್ರುಘ್ನರು ರಾಜಧಾನಿಯಲ್ಲಿಲ್ಲದಾಗ ದಶರಥನು ರಾಮನಿಗೆ ಯುವರಾಜ ಪಟ್ಟಕಟ್ಟಬೇಕೆಂದು ನಿಶ್ಚಯಿಸುವನು. ಅರಸನ ಇಚ್ಛೆಗೆ ಮಂತ್ರಿಗಳ, ಮಹಾರಾಜರ ಒಪ್ಪಿಗೆ. ಈ ವಿಷಯ ತಿಳಿದ ಕೈಕೇಯಿಯ ದಾಸಿ ಮಂಥರೆ ತನ್ನ ಒಡತಿಗೆ ಬೋಧಿಸಿ ಸವತಿ ಮಾತ್ಸರ್ಯವನ್ನು ಬಿತ್ತಿ, ತನ್ನ ಕಾರ್ಯ ಸಾಧಿಸಿಕೊಳ್ಳುವಳು. ಮಂಥರೆಯ ದುರ್ಬೋಧನೆಗೆ ಮನದಂದ ಕೈಕೇಯಿ, ದಶರಥನಲ್ಲಿ ಹಿಂದಿನ ಎರಡು ವರಗಳನ್ನು ಹೇಸದೆ ಬೇಡುವಳು. ಒಂದು ವರದಿಂದ ರಾಮನಿಗೆ ಹದಿನಾಲ್ಕು ವರ್ಷ ವನವಾಸ, ಇನ್ನೊಂದರಿಂದ ಭರತನಿಗೆ ಪಟ್ಟ. ನೆಚ್ಚಿನ ಹೆಂಡತಿಯ ಕಠೋರ ಮಾತು ಕೇಳಿದ ದಶರಥನಿಗೆ ಸಹಿಸಲಾರದ ಸಂಕಟ, ಮೂರ್ಛೆ. ಕೈಕೇಯಿಯ ಆದೇಶದಂತೆ ಸುಮಂತ್ರನೊಡನೆ ಬಂದ ರಾಮ, ಕಿರಿ ತಾಯಿಯಿಂದ ವಿಷಯ ತಿಳಿದು,

ತನ್ನ ತಂದೆಯ ಮಾತನ್ನು ನಡೆಯಿಸಿಕೊಡುವೆನೆಂದು ವಚನವೀಯುವನು. ರಾಮ ವನಕ್ಕೆ ಹೊರಟಾಗ ಲಕ್ಷ್ಮಣ, ಸೀತೆಯರೂ ಅವನೊಡನೆ ಹೊರಡುವರು. ಆದರೆ ಪ, ಉ, ಚ, ದಲ್ಲಿ ಇದೆಲ್ಲವೂ ಸರಳರೀತಿಯಲ್ಲಿಯೇ ನಡೆಯುವುದು.

ವಿಮಲಸೂರಿಯ ಮೇರೆಗೆ ದಶರಥನು ಸನ್ಯಾಸ ಸ್ವೀಕರಿಸಬೇಕೆಂದು ನಿಶ್ಚಯಿಸಿ, ರಾಮನನ್ನು ತನ್ನ ಉತ್ತರಾಧಿಕಾರಿಯನ್ನಾಗಿ ಮಾಡುವುದು ಹಿತಕರವೆಂದು ವಿಚಾರಿಸುವನು. ಸಂಸಾರದಲ್ಲಿ ದಶರಥನಿಗೆ ಹುಟ್ಟಿದ ವೈರಾಗ್ಯವನ್ನು ನೋಡಿ ಭರತನ ಮನಸ್ಸೂ ಬದಲಾಗಿ ತಾನೂ ತಂದೆಯೊಡನೆ ಅಡವಿಗೆ ಹೊರಡಬೇಕೆಂದು ನಿರ್ಧರಿಸುವನು. ಮಗನ ಮನದೊಲವನ್ನು ತಿಳಿದ ಕೈಕೇಯಿ, ಭರತನ ಮನವೊಲಿಸಿ ಅವನ ನಿರ್ಧಾರ ಬದಲಿಸಬೇಕೆಂದು ಒಂದು ಹಂಚಿಕೆ ಹೂಡುವಳು. ಗಂಡನು ತನಗಿತ್ತ ವರಗಳನ್ನು ನೆನೆದು, ನೇರವಾಗಿ ದಶರಥನಲ್ಲಿಗೆ ಹೋಗಿ ನೆನಪಿಸುವಳಲ್ಲದೆ, ಭರತನಿಗೆ ಪಟ್ಟಗಟ್ಟಬೇಕೆಂದು ಕೇಳುವಳು. ದಶರಥ ಹಿಂದುಮುಂದು ನೋಡದೆ ಸಂತೋಷದಿಂದಲೇ ಒಪ್ಪುತ್ತಾನೆ; ತಾನಿತ್ತ ವಚನ ಪಾಲಿಸುತ್ತಾನೆ. ಇದರಿಂದ ಅನಿವಾರ್ಯವಾಗಿ ರಾಮ ವನಕ್ಕೆ ಹೋಗಬೇಕೆಂದು ಮನಸ್ಸು ಮಾಡುವನು. ತನ್ನ ತಂದೆಯ ಮಾತನ್ನು ಮೀರಬಾರದೆಂದು ಭರತನಿಗೆ ಉಪದೇಶಿಸಿ, ರಾಮನು ಸೀತೆ–ಲಕ್ಷ್ಮಣರೊಡನೆ ವನಕ್ಕೆ ನಡೆದನು. ಪ, ಉ, ಚ, ದಲ್ಲಿ ಮಂಥರೆಯ ಪ್ರಸ್ತಾಪ ಬಂದಿಲ್ಲವೆಂಬುದು ಇದರಿಂದ ನಿಚ್ಚಳವಾಗುತ್ತಿದೆ. ಮಂಥರೆ ಕೈಕೇಯಿಯ ಮನಸ್ಸನ್ನು ಕೆಡಿಸುವ ಪ್ರಶ್ನೆಯೇ ಬರುವುದಿಲ್ಲ. ಭರತನು ಸನ್ಯಾಸ ಸ್ವೀಕರಿಸಬಾರದೆಂದು ಕೈಕೇಯಿ ಕೈಕೊಂಡ ದಾರಿ ಇದು. ಕೈಕೇಯಿಗೆ ರಾಮನ ವಿಷಯದಲ್ಲಿ ಯಾವುದೇ ಬಗೆಯ ಹೊಟ್ಟೆಯುರಿ ಇಲ್ಲ. ತಾಯಿಯ ಕರುಳು ಸ್ವಾಭಾವಿಕವಾಗಿ ನೊಂದು, ಅದರಿಂದ ಪ್ರೇರೇಪಿತಳಾದ ಕೈಕೇಯಿ ಮಗನನ್ನುಳಿಸಿಕೊಳ್ಳಲು ಮಾಡಿದ ಉಪಾಯ ಮಾತ್ರ.

ದಶರಥ, ಕೈಕೇಯಿಗೆ ವರಗಳನ್ನಿತ್ತುದನ್ನು ಇಬ್ಬರು ಕವಿಗಳೂ ಒಪ್ಪುವರು. ವಾ, ರಾ. ದಲ್ಲಿ ಕೈಕೇಯಿ ಬೇಡಿದ ವರಗಳೆರಡಾದರೆ ಪ, ಉ, ಚ, ದಲ್ಲಿ ಒಂದೇ. ಕೈಕೇಯಿಗೆ ವರಗಳನ್ನಿತ್ತ ಕಾರಣಗಳು ಮಾತ್ರ ಎರಡೂ ಕಾವ್ಯಗಳಲ್ಲಿ ಎರಡುತರವಾಗಿವೆ.

ಇಂದ್ರನ ಪರವಾಗಿ ದಶರಥನು ದೈತ್ಯರೊಡನೆ ಕಾದುವಾಗ, ಎಚ್ಚರದಪ್ಪಿದುದನ್ನು ಕಂಡ ಕೈಕೇಯಿ ಬಹಳ ಧೈರ್ಯ, ಜಾಣತನಗಳಿಂದ ಗಂಡನನ್ನು ಯುದ್ಧರಂಗದಿಂದ ದೂರ ಕರೆದೊಯ್ದು ಕಾಪಾಡಿದಳು. ಇದರಿಂದ ಸಂತುಷ್ಟನಾದ ದಶರಥನು ಅವಳಿಗೆ ಎರಡು ವರಗಳನ್ನಿತ್ತನು (ದಶರಥ–ಕೈಕೇಯಿಯರ ಮದುವೆ ಕಾಲದಲ್ಲಿ ದಶರಥನು ತನ್ನ ತರುವಾಯ ಕೈಕೇಯಿಯ ಮಗನಿಗೇ ಪಟ್ಟಗಟ್ಟುವೆನೆಂದು ಕೈಕೇಯಿಯ ತಂದೆಗೆ ವಚನವಿತ್ತಿದ್ದನೆಂದು ಬೇರೊಂದೆಡೆಯಲ್ಲಿ ಹೇಳಿದೆ).

ವಿಮಲಸೂರಿಯು ಹೇಳುವ ಕಥೆಯೇ ಬೇರೆ. ಸ್ವಯಂವರದಲ್ಲಿ ಕೈಕೇಯಿ[೧] ದಶರಥನನ್ನು ಆರಿಸಿಕೊಂಡುದನ್ನು ನೋಡಿದ ಇತರ ರಾಜರು ಬಂಡೇಳುವರು. ಈ ಯುದ್ಧದಲ್ಲಿ, ಕೈಕೇಯಿ ಗಂಡನ ಸಾರಥಿಯಾಗಿ ಚಾತುರ್ಯದಿಂದ ರಥ ನಡೆಯಿಸಿ ವೈರಿಗಳಲ್ಲಿ ಗೊಂದಲವೆಬ್ಬಿಸಿ ಅವರು ಸೋಲುವಂತೆ ಮಾಡುವಳು. ಯುದ್ಧ ಮುಗಿದ ಮೇಲೆ ದಶರಥ ಅವಳನ್ನು ಮದುವೆನಿಂದು, ಅವಳು ರಥ ನಡೆಯಿಸಿದ ವಿಶೇಷ ಕೌಶಲ್ಯಕ್ಕಾಗಿ ಒಂದು ವರವನ್ನು ಕೊಡುವನು.

ವಾ, ರಾ, ಮತ್ತು ಪ, ಉ, ಚ, ಗಳಲ್ಲಿ ದಶರಥ ಕೈಕೇಯಿಗೆ ವರವಿತ್ತುದು ಇದೆ. ವರವೀಯುವ ಕಾರಣ ಕೈಕೇಯಿಯ ಶೌರ್ಯಕ್ಕಾಗಿಯೇ; ಸನ್ನಿವೇಶ ಬೇರೆಯಷ್ಟೆ. ಪತಿಯಿತ್ತ ವರವನ್ನು ಕೈಕೇಯಿ ಕೇಳುವಳು; ದಶರಥ ಅದನ್ನು ಪಾಲಿಸುವನು. ವಾ, ರಾ, ದಲ್ಲಿ ಮಂಥರೆಯ ಕೈಚಳಕವಿದೆ; ಪ, ಉ, ಚ, ದಲ್ಲಿ ಅವಳ ಸುಳಿವಿಲ್ಲ. ಎಲ್ಲವೂ ಸಹಜ, ಸ್ವಾಭಾವಿಕವೆಂಬಂತೆ ನಡೆಯುತ್ತಿದೆ.

(ಮುಂದುವರಿಯುವುದು.)

■ ■

೧ ದಶರಥ–ಕೈಕೇಯಿಯರ ಮದುವೆಯ ಹಿನ್ನೆಲೆಯೂ ಪ, ಉ, ಚ, ದಲ್ಲಿ ಇಂತಿದೆ: ದಶರಥನ ಮಗನಿಂದ, ಜನಕನ ಮಗಳ ಕಾರಣವಾಗಿ ರಾವಣನ ಮರಣವೆಂದು ಜ್ಯೋತಿಷಿಗಳಿಂದ ತಿಳಿದ ವಿಭೀಷಣ, ದಶರಥ–ಜನಕರನ್ನು ಸಂಹರಿಸಲು ಬರುತ್ತಾನೆ. ನಾರದನಿಂದ ವಿಷಯ ತಿಳಿದ ದಶರಥ–ಜನಕರು ವೇಷ ಮರೆಯಿಸಿಕೊಂಡು ದೇಶಾಂತರ ಹೊರಡುವರು. ವಿಭೀಷಣ ಅವರಿಬ್ಬರ ಮೂರ್ತಿಗಳೇ ಅವರೆಂದು ಭ್ರಮಿಸಿ, ಮೂರ್ತಿಗಳನ್ನು ಕತ್ತರಿಸಿ, ಸಮಾಧಾನಹೊಂದಿ ಹಿಂದಿರುಗುವನು. ದಶರಥ–ಜನಕರು ಹೀಗೆ ಅಲೆಯುತ್ತಿರುವ ಕಾಲದಲ್ಲಿ ಕೈಕೇಯಿಯ ಸ್ವಯಂವರಕ್ಕೆ ಹೋಗುವರು, ಕೈಕೇಯಿ ದಶರಥನಿಗೇ ಮಾಲೆ ಹಾಕುವಳು.

ನೆನಪು

ಧರಣೇಂದ್ರ ಕುರಕುರಿ

ನಿನ್ನ ಮ್ಯಾಲ ಕವಿತಾ
ಬರೀಬಾರದಂತ
ಕದ ಹಾಕ್ಕೊಂಡ ಕೋಲ್ಯಾಗ
ಕುಂತರೂ
ಕಿಡಿಕ್ಯಾಗ ಹಾದು ಕನಡ್ಯಾಗ
ಕಾಣತೀದಿ.
ಕನಡೀನs ತಗೀಬೇಕಂತ
ಕೈಯಾಗ ಹಿಡದರ
ಜಾರಿ ಬಿದ್ದು ಒಡದು
ಕಂಡಾಪಟ್ಟಿ ತುಣುಕು;
ಎಲ್ಲಾ ತುಣಕಿನ್ಯಾಗೂ
ನಿಂದs ಮಾರಿ.
ಅಷ್ಟೂ ತುಣಕು ಬಳಕೊಂಡು
ಬೇಲ್ಯಾಗ ಒಗೀಬೇಕಂದಾಗ
ಕೈಗೆ ಕಾಜು ನಟ್ಟು
ಬಳಬಳ ನೆತ್ತರ.
ಗುದಮುರಗಿ ಹಾಕಿ ಗಾಯ
ಮಾಸಗೊಂಡರೂ ಕಚ್ಚ ಮಾತ್ರ
ಇನ್ನೂ ನಿಚ್ಚಳ.

ಕನ್ನಡದಲ್ಲಿ ಸರ್ವನಾಮ ಪ್ರತ್ಯಯಗಳು

ಜಿ. ರಾಮಸ್ವಾಮಿ

ಪ್ರಚಲಿತ ಕನ್ನಡಭಾಷೆಯಲ್ಲಿಯಂತೆ, ಸರ್ವನಾಮ ಪ್ರತ್ಯಯದಲ್ಲಿ ಲಿಂಗ, ವಚನಭೇದವು ಪೂರ್ವದ ಹಳಗನ್ನಡಕ್ಕೂ ಹಿಂದಿನ ಅವಸ್ಥೆಯಲ್ಲಿ ಇದ್ದಿರಲಿಕ್ಕಿಲ್ಲ ಎಂದು ರೆ. ಕಾಲ್ಡವೆಲ್ ಶಂಕಿಸುತ್ತಾರೆ. "ಹಳಗನ್ನಡದಲ್ಲಿ ಏಕೆ, ಮೂಲದ್ರಾವಿಡಭಾಷೆಯಲ್ಲಿಯೂ ಸಹ ಲಿಂಗಗಳ ಗೊಂದಲವಿಲ್ಲದೆ ಜನರು ಸಂದರ್ಭಕ್ಕನುಸಾರವಾಗಿ ಅರ್ಥ ಮಾಡಿಕೊಳ್ಳುತ್ತಿದ್ದರೆಂದು ನಿರ್ಣಯಿಸಬಹುದು" (ಭಟ್ಟ; ೧೯೬೭; ೩೦೩) ಎನ್ನುತ್ತಾರೆ, ಮರಿಯಪ್ಪ ಭಟ್ಟರು. ಈ ವಾದಕ್ಕೆ ಪೋಷಕವಾಗಿ ವಿದ್ವಾಂಸರು ಮಲೆಯಾಳವನ್ನು ಉದಾಹರಿಸುತ್ತಾರೆ. ಸಾಧಾರಣವಾಗಿ ಇಂದಿನ ಯಾವುದೇ ದ್ರಾವಿಡಭಾಷೆಗಳಲ್ಲಿ ಯಾವುದೇ ಕಾಲದ ಕ್ರಿಯಾಪದದ ಕೊನೆಯಲ್ಲಿ ಪುರುಷ, ಲಿಂಗ, ವಚನ ಭೇದವನ್ನು ಸೂಚಿಸುವ ಸರ್ವನಾಮ ಪ್ರತ್ಯಯವನ್ನು ಕಾಣುತ್ತೇವೆ. ಆದರೆ ಈ ವ್ಯವಸ್ಥೆ ಮಲೆಯಾಳದಲ್ಲಿ ಇಲ್ಲ. ಈ ಭಾಷೆಯ ಕ್ರಿಯಾಪದದ ಕೊನೆಯಲ್ಲಿ ಕಾಲವಾಚಕ ಪ್ರತ್ಯಯ ಬರುತ್ತದೆಯೇ ಹೊರತು ಸರ್ವನಾಮ ಪ್ರತ್ಯಯ ಇರುವುದಿಲ್ಲ.

ಉದಾ :	ಞಾನ್	ವರುನ್ನು	'ನಾನು ಬರುತ್ತೇನೆ'
	ನೀ	ವರುನ್ನು	'ನೀನು ಬರುತ್ತೀಯೆ'
	ಅವನ್	ವರುನ್ನು	'ಅವನು ಬರುತ್ತಾನೆ'
	ಅವಳ್	ವರುನ್ನು	'ಅವಳು ಬರುತ್ತಾಳೆ'
	ಅದು	ವರುನ್ನು	'ಅದು ಬರುತ್ತದೆ'
	ಅವರ್	ವರುನ್ನು	'ಅವರು ಬರುತ್ತಾರೆ'
	ಅವ	ವರುನ್ನು	'ಅವು ಬರುತ್ತವೆ'

ಅಂದರೆ ಮಲೆಯಾಳದ ಕ್ರಿಯಾಪದದ ರಚನೆ ಧಾತು + ಕಾಲವಾಚಕ ಪ್ರತ್ಯಯ ವಷ್ಟೆ. ಆದರೆ ಕನ್ನಡದಲ್ಲಿ (ಇನ್ನಿತರ ಪ್ರಮುಖ ದ್ರಾವಿಡಭಾಷೆಗಳಲ್ಲಿ ಸಹ) ಕ್ರಿಯಾಪದದ ರಚನೆ = ಧಾತು ± ಕಾಲವಾಚಕ ಪ್ರತ್ಯಯ ± ಪ್ರೇರಣಾರ್ಥಕ ಪ್ರತ್ಯಯ ± ಸರ್ವನಾಮ ಪ್ರತ್ಯಯ. ಮೂಲದ್ರಾವಿಡಭಾಷೆಯ ಕ್ರಿಯಾಪದದ ರಚನೆಯೂ ಸಹ ಇಂದಿನ ಮಲೆಯಾಳದಂತೆಯೇ ಇದ್ದಿರಬೇಕೆಂದು ಶಂಕಿಸುವ ವಿದ್ವಾಂಸರು ಮಲೆಯಾಳವು ಮೂಲದ್ರಾವಿಡಭಾಷೆಯ ಪ್ರಾಚೀನ ವ್ಯವಸ್ಥೆಯನ್ನು ಉಳಿಸಿಕೊಂಡಿದೆಯೆಂದು ಅಭಿಪ್ರಾಯಪಟ್ಟರು. ದ್ರಾವಿಡಭಾಷೆಯ ಕ್ರಿಯಾಪದ ನಿಜವಾಗಿಯೂ

ಸರ್ವನಾಮ ಪ್ರತ್ಯಯ ಹೀನ, ಕಾಲಾನುಗತಿಯಲ್ಲಿ ಸರ್ವನಾಮಗಳನ್ನೇ ಅರ್ಥಸ್ಪಷ್ಟನೆ ಗೋಸ್ಕರ ಕ್ರಿಯಾಪದಗಳ ಕೊನೆಯಲ್ಲಿ ಹತ್ತಿಸಲಾಯಿತು ಎಂಬ ವಾದವನ್ನು ಡಾಕ್ಟರ ಪಿ. ಎಸ್. ಸುಬ್ರಹ್ಮಣ್ಯಂ ಅವರು ಅಲ್ಲಗಳೆದು "ಇಂಥ ವಾದವು ಕೆಲವೊಮ್ಮೆ ಪದೋತ್ತರ ವ್ಯಂಜನಗಳ, ಸಂಕುಚಿತತೆ ಹಾಗೂ ವ್ಯಂಜನಗಳ ಲೋಪ ಮೊದಲಾದ ನಿಯಮಗಳಿಗೆ ನಮ್ಮನ್ನು ಗುರಿ ಮಾಡಿಸುತ್ತದೆ. ಆದರೆ ಇಂಥ ಕ್ರಿಯೆಗಳಿಗೆ ನಮ್ಮಲ್ಲಿ ನೇರವಾದ ಆಧಾರಗಳೇನೂ ಇಲ್ಲ. ಆದರ ಬದಲು ನಾವು ಹೀಗೆ ಊಹಿಸಬಹುದು. ಪ್ರಾಚೀನ ಕಾಲದಲ್ಲೂ ಸಹ ಕ್ರಿಯಾಪದಗಳ ಕೊನೆಯಲ್ಲಿ ಒಂದು ತೆರನಾದ, ಸರ್ವನಾಮ ವನ್ನು ಸೂಚಿಸುವ ಪ್ರತ್ಯಯವೊಂದಿತ್ತು. ಈ ಪ್ರತ್ಯಯವು ವಾಕ್ಯದಲ್ಲಿ ಸರ್ವನಾಮ ಅಭಿಪ್ರಾಯವನ್ನು ಕೊಡುತ್ತಿತ್ತು" (ಸುಬ್ರಹ್ಮಣ್ಯಂ, ೧೯೭೧; ೩೯೭).

ಈ ಮೇಲಿನ ವಾದ–ವಿವಾದಗಳಿಂದ ನಮಗೆ ತಿಳಿವುದಿಷ್ಟು : (೧) ಮಲೆಯಾಳದ ಸರ್ವನಾಮ ಪ್ರತ್ಯಯ ಹೀನತೆ ಪ್ರಾಚೀನ ವ್ಯವಸ್ಥೆಯನ್ನು ಕಾಯ್ದಿಟ್ಟುಕೊಂಡಿರುವುದಲ್ಲ, ಇತ್ತೀಚಿನ ಬದಲಾವಣೆ. ಇದಕ್ಕೆ ಹದಿನಾಲ್ಕು ಹದಿನೈದನೆಯ ಶತಮಾನಗಳ ಮಲೆಯಾಳ ಗ್ರಂಥಗಳೇ ನಿದರ್ಶನ. ಕೃಷ್ಣಗಾಥೆ, ಲೀಲಾತಿಲಕಂ ಮುಂತಾದ ಗ್ರಂಥಗಳಲ್ಲಿ, ಕ್ರಿಯಾಪದಗಳಲ್ಲಿ ಸರ್ವನಾಮ ಪ್ರತ್ಯಯಗಳ ಪ್ರಯೋಗವಿದೆ. (೨) ಮಲೆಯಾಳವನ್ನುಳಿದು ಮತ್ತೆಲ್ಲ ದ್ರಾವಿಡ ಭಾಷೆಗಳಲ್ಲೂ ಸರ್ವನಾಮ ಪ್ರತ್ಯಯ ಗಳಿವೆ. ಆದ್ದರಿಂದ ಮೂಲದ್ರಾವಿಡ ಭಾಷೆಯಲ್ಲಿಯೂಸಹ ಕ್ರಿಯಾಪದ ರಚನೆಯಲ್ಲಿ ಸರ್ವನಾಮಕ್ಕೆ ಸಂವಾದಿಯಾದ ಒಂದು ಪ್ರತ್ಯಯವಿದ್ದಿರಬೇಕು.

ಕನ್ನಡದಲ್ಲಿ ಮೂರು ವಿಧ ಪುರುಷ, ಎರಡು ವಚನ ಭೇದ ಮೊದಲಿನಿಂದಲೂ ಇದೆ. ಆದರೆ ಈ ಪ್ರತ್ಯಯಗಳು ಕಾಲಭೇದವನ್ನು ಸೂಚಿಸುತ್ತಿರಲಿಲ್ಲ. ಉದಾಹರ ಣೆಗೆ ಪ್ರಥಮ ಪುರುಷ[೧] ಪ್ರತ್ಯಯ –ಎನ್ ಎಂಬುದು ಎಲ್ಲ ಕಾಲ ಕ್ರಿಯಾ ಪ್ರಾತಿಪದಿಕ ಗಳಿಗೂ ಹತ್ತುತ್ತಿತ್ತು.

ಉದಾ : ೧. ಅಱಿದೆನ್
೨. ಅಱಿವೆನ್
೩. ನೋಟಕ್ಕೆನ್
೪. ಉರಿದಪ್ಪೆನ್[೨]

---

೧ ಇಲ್ಲಿ, ಪಾಶ್ಚಿಮಾತ್ಯ ಪರಂಪರೆಗನುಗುಣವಾಗಿ ಉತ್ತಮ, ಮಧ್ಯಮ ಮತ್ತು ಪ್ರಥಮ ಪುರುಷಗಳನ್ನು ಪ್ರಥಮ (first), ದ್ವಿತೀಯ (second) ಮತ್ತು ತೃತೀಯ ಪುರುಷ (third person) ಗಳೆಂದು ಕರೆದಿದ್ದೇನೆ. 'ನಾನು' ಪ್ರಥಮ ಪುರುಷ, 'ನೀನು' ದ್ವಿತೀಯ ಪುರುಷ, 'ಅವನು', 'ಅವಳು', 'ಅದು' ಮುಂತಾದವು ತೃತೀಯ ಪುರುಷ.

೨ ಪಂಪ ಭಾರತ.

ಹಳಗನ್ನಡದಲ್ಲಿ –ಕುಂ, –ಗುಂ ಪ್ರತ್ಯಯ ಹತ್ತಿಸುವುದರ ಮೂಲಕ ಎಲ್ಲ ಲಿಂಗ, ವಚನಗಳ ರೂಢಿಯ (ಸರ್ವಕಾಲ) ಕ್ರಿಯಾಪದ ರಚನೆಯುಂಟಾಗುತ್ತಿತ್ತು. ಹೊಸಗನ್ನಡದಲ್ಲಿ ಇವು ಸಾಕು (ಸಾಲ್ಗುಂ), ಬೇಕು (ಬೇಟ್ಕುಂ) ಎಂಬಲ್ಲಿ ಮಾತ್ರ ಉಳಿದಿವೆ. ಹಳಗನ್ನಡ ಕಾಲದಲ್ಲಿ ದ್ವಿವಿಧ ಕಾಲ[೩]ಭೇದವೇ ಇದ್ದಿತೆನ್ನಬಹುದು. ವರ್ತಮಾನ ಹಾಗೂ ಭವಿಷ್ಯತ್‌ಕಾಲ ರಚನೆಗಳು ಅಷ್ಟಾಗಿ ಕಾಲಭೇದವನ್ನು ಸೂಚಿಸುತ್ತಿರಲಿಲ್ಲ. ಇಂದಿಗೂ ಸಹ ಆಡುನುಡಿಯಲ್ಲಿ –ಉತ್ತ ಪ್ರತ್ಯಯವೇ ವರ್ತಮಾನ, ಭವಿಷ್ಯತ್ ಕಾಲಗಳಿಗೆ ಪ್ರಯೋಗವಾಗುತ್ತದೆ. –ಉತ್ತ ಪ್ರತ್ಯಯ ಪುರುಷವಾಚಕ ಪ್ರತ್ಯಯವನ್ನೊಳಗೊಂಡ ಕ್ರಿಯಾಪದ ರಚನೆಯಲ್ಲಿ ಹನ್ನೆರಡನೆಯ ಶತಮಾನದ ಅನಂತರವೇ ಕಾಣಿಸಿಕೊಂಡಿತೆಂದು ಕಾಣುತ್ತದೆ. ಈ ವರ್ತಮಾನ ಪ್ರತ್ಯಯ ಹತ್ತುವ ಕ್ರಿಯಾಪದ ರಚನೆಗಳಲ್ಲಿ ಬೇರೆಯೇ ಆದ ಸರ್ವನಾಮ ಪ್ರತ್ಯಯ ಬಳಕೆಗೆ ಬಂದಿತು.

ಉದಾ : ೫. ಹೋಗುತ್ತೈದೆನೆ
೬. ನಗುತ್ತೈದರೆಳ
೭. ತೊಳೆಯುತೇನೆ
೮. ಸಾರಿಸುತೇನೆ[೪]

ಇಲ್ಲಿ ಮತ್ತೊಂದು ಗಮನಾರ್ಹ ವಿಷಯವೆಂದರೆ, ಈ ಪ್ರತ್ಯಯ ಬಳಕೆಗೆ ಬಂದ ಆರಂಭದಲ್ಲಿ ಆದಿಸ್ವರ ದೀರ್ಘವಾಗಿರಲಿಲ್ಲ. ಮುಂದೆ ಪುರಂದರದಾಸರ ಕಾಲಕ್ಕೆ ಆದಿಸ್ವರ ದೀರ್ಘವಾದ ಪ್ರತ್ಯಯ ರೂಪಗಳು ದೊರೆಯುತ್ತವೆ. ಮಹಾದೇವಿಯಕ್ಕನ ಕಾಲಕ್ಕೆ –ಎನೆ, –ಅರೆ ಮುಂತಾಗಿದ್ದ ಪ್ರತ್ಯಯಗಳು ಪುರಂದರದಾಸರ ಕಾಲಕ್ಕೆ –ಏನೆ, –ಆರೆ ಎಂದಾಯಿತು. ಆದರೆ ಈ ಆದಿಸ್ವರ ದೀರ್ಘವಾಗುವಿಕೆ ತೃತೀಯ ಪುರುಷ ನಪುಂಸಕ, ಏಕ–ಬಹುವಚನ ಎರಡೂ ರಚನೆಗಳಲ್ಲಿ ಇಲ್ಲ.

ಉದಾ : ೯. ಬರುತ್ತದೆ
೧೦. ಬರುತ್ತವೆ

ಎಲ್ಲ ಲಿಂಗ ವಚನ, ಭೂತ, ಭವಿಷ್ಯತ್ ಕ್ರಿಯಾ ಪದಾಂತ್ಯ ಪುರುಷವಾಚಕ ಪ್ರತ್ಯಯಾಂತ್ಯ ಸ್ವರ –ಉ (enunciative) ಆದರೆ ವರ್ತಮಾನ ಕ್ರಿಯಾಪದದ ಪುರುಷವಾಚಕ ಪ್ರತ್ಯಯಾಂತ್ಯ ಸ್ವರ –ಎ (ದ್ವಿತೀಯ ಪುರುಷ ಬಹುವಚನ ಪ್ರತ್ಯಯವನ್ನುಳಿದು) ಈ ಸ್ವರ ಬದಲಾವಣೆಯನ್ನು ಕುರಿತು ಎರಡು ಭಿನ್ನಾಭಿಪ್ರಾಯಗಳಿವೆ. (೧) ವರ್ತಮಾನಕಾಲದ ಕ್ರಿಯಾರೂಪಗಳಾದ ಮಾಡುತ್ತೇನೆ, ಮಾಡುತ್ತೇವೆ ಮೊದಲಾದವುಗಳಲ್ಲಿ ಅಂತ್ಯಸ್ವರವು ಬದಲಾವಣೆ ಹೊಂದುವುದಕ್ಕೆ ದ್ರಾವಿಡ ಭಾಷೆಗಳಲ್ಲಿಯ ಸ್ವರ ಸಾಮಂಜಸ್ಯವಿಧಿಯು ಕಾರಣವಾಗಿದೆ. (೨) –ಏನು, –ಆನು ಮೊದಲಾದ

೩ ಕನ್ನಡ ಕೈಪಿಡಿ (ಭಾಗ–೧; ೧೯೫೫; ಪುಟ ೩೫೬)
೪ ಮಹಾದೇವಿಯಕ್ಕನ ವಚನಗಳು.
೫ ಪುರಂದರದಾಸರ ಕೀರ್ತನೆಗಳು.

ಪ್ರತ್ಯಯಗಳಿಗೆ ಸಂದೇಹ ಸೂಚನೆಯು ಸೇರಿಹೋಗಿದ್ದುದರಿಂದ ನಿಶ್ಚಿತಾರ್ಥವನ್ನು ಸೂಚಿಸುವ -ಎ ಪ್ರತ್ಯಯವು ಅವುಗಳ ಕೊನೆಗೆ ಸೇರಿತು.

ಈ ಅಭಿಪ್ರಾಯಗಳನ್ನು ತಿರಸ್ಕರಿಸಿ ಡಾ॥ ಗೌಡರು "ಇದು ಸ್ವರಸಾಮ್ಯ ದಿಂದಾದ ಬದಲಾವಣೆಯಲ್ಲ. ಹಾಗಿದ್ದ ಪಕ್ಷದಲ್ಲಿ ಈ ಬದಲಾವಣೆ ಭೂತ, ಭವಿಷ್ಯತ್ ಕಾಲ ಕ್ರಿಯಾಪದಗಳಿಗೆಹತ್ತುವ ಸರ್ವನಾಮಕ ಪ್ರತ್ಯಯಗಳಲ್ಲಿಯೂ ಆಗ ಬೇಕಾಗಿತ್ತು; ಆದರೆ ಹಾಗಾಗಿಲ್ಲ" ಎನ್ನುತ್ತಾರೆ (ಗೌಡ, ೧೯೬೮). ಹಾಗೂ ಎರಡನೆಯ ಅಭಿಪ್ರಾಯವನ್ನು ಕುರಿತು ಹೇಳುವುದಾದರೆ, ಸಂಶಯಾರ್ಥಕ ಅಭಿಪ್ರಾಯ ವನ್ನು ವ್ಯಕ್ತಪಡಿಸುವ ಪ್ರತ್ಯಯಗಳು ಭೂತಕಾಲ ಕ್ರಿಯಾಪದಗಳಿಗೆ ಹತ್ತುವ ಸರ್ವನಾಮ ಪ್ರತ್ಯಯಗಳ ಆದಿಸ್ವರ ದೀರ್ಘವಾಗುವುದರ ಮೂಲಕ ವ್ಯಕ್ತವಾಗುತ್ತದೆ. ಆದ್ದರಿಂದ ಇಲ್ಲಿ ಅರ್ಥಭ್ರಮೆಗೆ ಅವಕಾಶವೇ ಇಲ್ಲ.

ಉದಾ :	ಭೂತಕಾಲಕ್ಕೆ :	೧೧.	ಬಂದೆನು
		೧೨.	ಬಂದನು
	ಸಂಶಯಾರ್ಥಕ್ಕೆ :	೧೩.	ಬಂದೇನು
		೧೪.	ಬಂದಾನು

ಜೊತೆಗೆ ಸಂಶಯಾರ್ಥದ (ಸಂಭಾವನಾರ್ಥ) ಪ್ರತ್ಯಯ ಹತ್ತುವುದು ಭೂತಕಾಲ ಪ್ರಾತಿಪದಿಕಕ್ಕಾದರೂ ಭವಿಷ್ಯದರ್ಥವನ್ನೇ ಸೂಚಿಸುತ್ತದೆ.

ಪ್ರಥಮ ಪುರುಷ ಏಕವಚನ ಸರ್ವನಾಮ ಪ್ರತ್ಯಯದ ಹುಟ್ಟನ್ನು ಡಾ॥ ಗೌಡರು ಹೀಗೆ ಗುರುತಿಸುತ್ತಾರೆ.

ಇರ್-ಪ್-ಎನ್ → ಇ-ಪ್ಪೆ-ಎನ್ → ಇ-ಹ್-ಎನ್ → [ಈ-ಎನ್] → ಈನೆ → ಏನೆ. ಅಂದರೆ ಈ ವರ್ತಮಾನ ಕ್ರಿಯೆಯ ಸರ್ವನಾಮ ಪ್ರತ್ಯಯ ಒಂದು ಇಡೀ ಕ್ರಿಯಾಪದದ ರೂಪಾಂತರ ರೂಪವೆಂದಾಯಿತು.

ಮೊದಲೇ ಹೇಳಿದಂತೆ ಈ -ಏನೆ ಪ್ರತ್ಯಯ ಕನ್ನಡದಲ್ಲಿ ಹನ್ನೆರಡನೆಯ ಶತಮಾನದ ನಂತರ ಬಳಕೆಗೆ ಬಂದಿತೆಂದು ಕಾಣುತ್ತದೆ. ಆದರೆ -ಏನು ಮುಂತಾದ ಸಂಶಯಾರ್ಥಕ ಸರ್ವನಾಮ ಪ್ರತ್ಯಯ (ಸಂಪೂರ್ಣ ಸಂಶಯಾರ್ಥದಲ್ಲಿ) ಗಳು ಹದಿನಾರನೆಯ ಶತಮಾನದ ಅನಂತರದಷ್ಟೇ ಬಳಕೆಗೆ ಬಂದಂತೆ ಕಾಣುತ್ತದೆ.

ಕನ್ನಡದ ಹದಿನಾಲ್ಕು ಉಪಭಾಷೆಗಳನ್ನು ಆರಿಸಿಕೊಂಡು ಅವುಗಳ ಸರ್ವನಾಮ ಪ್ರತ್ಯಯಗಳ ತುಲನಾತ್ಮಕ ಅಭ್ಯಾಸದ ಪ್ರಯತ್ನ ಇಲ್ಲಿ ನಡೆಸಿದ್ದೇನೆ. ಇವುಗಳಲ್ಲಿ ಕೆಲವು ಸಾಮಾಜಿಕ ಉಪಭಾಷೆಗಳು ಮತ್ತೆ ಕೆಲವು ಪ್ರಾದೇಶಿಕ (?) ಉಪಭಾಷೆಗಳು ಪ್ರಸ್ತುತ ಅಭ್ಯಾಸ ಆಯಾ ಉಪಭಾಷೆಗಳ ಕ್ಷೇತ್ರ ವರದಿಗಳ ಮೇಲೆ ಅವಲಂಬಿಸಿದೆ.

ಪ್ರಥಮ ಪುರುಷ ಏಕವಚನ :

ಇದಕ್ಕೆ ಹಳಗನ್ನಡದಲ್ಲಿ –ಎನ್ ಎಂಬ ರೂಪವಿತ್ತು. ಹತ್ತನೆಯ ಶತಮಾನದ ಕಾಲಕ್ಕೆ –ಎನ್ ರೂಪದ ಜೊತೆಗೆ –ಎ ಎಂಬ ರೂಪವೂ ಬಳಕೆಗೆ ಬಂದಂತೆ ಕಾಣುತ್ತದೆ. ನಡುಗನ್ನಡ ಕಾಲಕ್ಕೆ ಇವೆರಡೂ ರೂಪಗಳ ಜೊತೆಗೆ –ಎನ್ ಎಂಬ ರೂಪವೂ ಬಳಕೆಗೆ ಬಂದಿತು. ಉದಾಹರಣೆಗೆ : ಬರೇನ್ ಎಂದರೆ ಬರುವೆನು ಎಂದರ್ಥ. ಮಹಾದೇವಿ ಯಕ್ಕನ ಕಾಲಕ್ಕೆ –ಎನೆ ಎಂಬ ರೂಪವೂ ವರ್ತಮಾನಕಾಲ ಪ್ರಕೃತಿ ಅಂತ್ಯದಲ್ಲಿ ಬಳಕೆಗೆ ಬಂದಿತ್ತೆಂದು ಕಾಣುತ್ತದೆ. ಅಕ್ಕನ ಪದಗಳಲ್ಲಿ 'ಬರುತ್ತೈದೆನೆ', 'ನಗುತ್ತೈದರೆ' ಎಂಬ ರೂಪಗಳು ದೊರೆಯುತ್ತವೆ. ಆ –ಎನೆ ರೂಪವೇ ಈಗ ಹೊಸಗನ್ನಡದಲ್ಲಿ –ಏನೆ ಎಂದು ಆದಿಸ್ವರ ದೀರ್ಘವಾಗಿ ವರ್ತಮಾನ ಪ್ರಾತಿಪದಿಕದಲ್ಲಿ ಬಳಕೆಯಲ್ಲಿದೆ.

ಈಗ ಹೊಸಗನ್ನಡದಲ್ಲಿ –ಏನೆ ಮತ್ತು –ಎನು ಎಂಬೆರಡು ರೂಪಗಳು ಬಳಕೆಯಲ್ಲಿವೆ. –ಎನು ಎಂಬ ಪ್ರತ್ಯಯ ಭೂತ, ಭವಿಷ್ಯತ್‌ಕಾಲ ಪ್ರಾತಿಪದಿಕ ಗಳಿಗೂ –ಏನೆ ಪ್ರತ್ಯಯ ವರ್ತಮಾನಕಾಲ ಪ್ರಾತಿಪದಿಕಗಳಿಗೂ ಹತ್ತುತ್ತವೆ. (ವರ್ತಮಾನಕಾಲ ರೂಪವೇ ಆಡುನುಡಿಯಲ್ಲಿ ಭವಿಷ್ಯತ್ ಕಾಲವನ್ನೂ ಸೂಚಿಸು ತ್ತದೆ. ಆದ್ದರಿಂದ ಈ ಪ್ರಾತಿಪದಿಕವನ್ನು ಅಭೂತಕಾಲ ಪ್ರಾತಿಪದಿಕವೆನ್ನಲೂ ಬಹುದು. ಉದಾ : 'ಬರುತ್ತೇನೆ' ಎಂಬುದು 'ಈಗ ಬರುತ್ತೇನೆ' ಮತ್ತು 'ನಾಳೆ ಬರುತ್ತೇನೆ' ಎಂದು ಬಳಸಲಾಗುತ್ತದೆ).

ಉಪ ಭಾಷೆಗಳನ್ನು ಗಣನೆಗೆ ತೆಗೆದುಕೊಂಡರೆ, ಹಾಲಕ್ಕಿ ಕನ್ನಡ, ಬಾರಕ್ಕೂರು ಕನ್ನಡ ಮತ್ತು ಹವ್ಯಕ ಕನ್ನಡಗಳನ್ನುಳಿದು ಮಿಕ್ಕವೆಲ್ಲ ಹೆಚ್ಚುಕಡಿಮೆ ಒಂದೇ ರೂಪವುಳ್ಳ ಪ್ರತ್ಯಯಂಗಳನ್ನು ಹೊಂದಿವೆ. ಹಾಲಕ್ಕಿ, ಬಾರಕ್ಕೂರು ಮತ್ತು ಹವ್ಯಕ ಕನ್ನಡಗಳಲ್ಲಿ ಎಲ್ಲ ಕಾಲ ಪ್ರಕೃತಿಗಳಿಗೂ ಒಂದೇ ಪ್ರತ್ಯಯ ಹತ್ತುತ್ತದೆ. ವರ್ತಮಾನಕಾಲ ಪ್ರಾತಿ ಪದಿಕಕ್ಕೆ ಹತ್ತುವ ಪ್ರತ್ಯಯದ ಕೊನೆಯ ಸ್ವರ ಗ್ರಾಂಥಿಕ (ಪ್ರಮಾಣ ಭಾಷೆ) ಕನ್ನಡದಲ್ಲಿ –ಎ ಆದರೆ ಎಲ್ಲ ಉಪಭಾಷೆಗಳಲ್ಲಿ ಅದು –ಇ.

ಉದಾ : ಗ್ರಾ. ಕ. : ಬರುತ್ತೇನೆ
ಉ. ಬಾ.: ಬರ್‍ತೀನಿ

ಮತ್ತು ಈ ಪ್ರತ್ಯಯದ ಆದಿ ಸ್ವರವು ಕೊಡಗು ಮತ್ತು ಗುಲ್ಬರ್ಗ ಕನ್ನಡಗಳಲ್ಲಿ ಹ್ರಸ್ವವಾಗಿದೆ (ಧಾರವಾಡ ಕನ್ನಡದಲ್ಲಿಯೂ ಇದರ ಸಾಧ್ಯತೆ ಇದೆ). ಸಾಧಾರಣ ವಾಗಿ ಎಲ್ಲ ಉಪಭಾಷೆಗಳಲ್ಲಿ ಪ್ರತ್ಯಯದ ಕೊನೆಯ –ನು ಲೋಪವಾಗುವುದು ಸಹಜ. ಉದಾ : 'ಬಂದೆನು' ಎಂಬುದು 'ಬಂದೆ' ಎಂದಾಗುವಂತೆ, ಇದಕ್ಕೆ ವಿರುದ್ಧವಾಗಿ ಧಾರವಾಡ, ಗುಲ್ಬರ್ಗ ಕನ್ನಡಗಳು ವರ್ತಿಸುತ್ತವೆ. ಇವುಗಳಲ್ಲಿ ಅಂತ್ಯದ –ನಿ

ಎಂಬುದು ಉಳಿದು ಆದಿಯಂ -ಇ- ಬಿಟ್ಟು ಹೋಗುತ್ತದೆ. ಉದಾ : ಬಂದೆನು (ಗ್ರಾ. ಕ)→ಬಂದಿನಿ→ಬಂದ್‌ನಿ (ಧಾ. ಕ). ಗೌಡ ಕನ್ನಡ ಇವೆಲ್ಲ ಉಪಭಾಷೆಗಳಿಂದ ಭಿನ್ನವಾಗಿ ತನ್ನದೇ ಆದ ರೀತಿಯಲ್ಲಿ ವರ್ತಿಸುತ್ತದೆ. ಇಲ್ಲಿ ಕಾಲ, ವಚನ, ಭೇದವಿಲ್ಲದೆ -ಎ ಎಂಬ ಪುರುಷವಾಚಕ ಪ್ರತ್ಯಯ ಬಳಸಲ್ಪಡುತ್ತದೆ.

ಉದಾ : ಅಳ್ತೆ→ಅತ್ತೆ 'ನಾನು/ನಾವು ಅತ್ತೆವು'
ಕೊಡುವೆ 'ನಾನು/ನಾವು ಕೊಡುವೆವು'

ಮಧುರೈ ಕನ್ನಡದ ವರ್ತಮಾನ ಪ್ರಾತಿಪದಿಕದಲ್ಲಿ -ಅನೆ ಎಂಬ ಪ್ರಥಮ ಪುರುಷ ಏಕವಚನ ಪ್ರತ್ಯಯ ಹತ್ತುತ್ತದೆ.

ಉದಾ : ಕೊಡುತನೆ 'ಕೊಡುತ್ತೇನೆ'.

ಪ್ರಥಮಪುರುಷ ಬಹುವಚನ :

ಹಳಗನ್ನಡದಲ್ಲಿ ಅಂದರೆ ಪಂಪನ ಕೃತಿಗಳಲ್ಲಿ -ಎಮ್, -ಎವು ಮತ್ತು -ಅಮ್ ಎಂಬ ಬಹುವಚನ ಪ್ರತ್ಯಯಗಳು ಕಂಡುಬರುತ್ತವೆ. ಆದರೆ ಶಾಸನಗಳಲ್ಲಿ (ಹತ್ತನೆಯ ಶತಮಾನಕ್ಕೂ ಮುಂಚೆ) ಈ ಪ್ರತ್ಯಯಗಳ ಪ್ರಯೋಗ ಕಾಣಸಿಗುವುದಿಲ್ಲ. ಹತ್ತನೆಯ ಶತಮಾನದ ನಂತರ -ಎವು ಎಂಬ ರೂಪ ಶಾಸನ ಭಾಷೆಯಲ್ಲಿಯೂ ಬಳಕೆಗೆ ಬಂದಿದೆ. ಉದಾ : ಬಹೆವು 'ಬರುವೆವು' (ಡಾ॥ ಗೌಡ; ೧೯೭೨; ೨೫೨). ನಡುಗನ್ನಡ ಕಾಲದಲ್ಲಿ ವರ್ತಮಾನದ -ಏವೆ ಎಂಬ ಪ್ರತ್ಯಯ ಬಳಕೆಗೆ ಬಂದಿತು. ಹೊಸಗನ್ನಡದಲ್ಲಿ ವರ್ತಮಾನ ಪ್ರಾತಿಪದಿಕಕ್ಕೆ -ಏವೆ ಎಂಬ ಪ್ರತ್ಯಯವೂ ಭೂತ, ಭವಿಷ್ಯತ್ ಪ್ರಾತಿಪದಿಕಗಳಿಗೆ -ಎವು ಎಂಬ ಪ್ರತ್ಯಯವೂ ಹತ್ತುತ್ತದೆ.

ಪ್ರಚಲಿತ ಉಪಭಾಷೆಗಳಲ್ಲಿ ಗೌಡ ಕನ್ನಡದ ಪ್ರಥಮ ಪುರುಷವಾಚಕ ಪ್ರತ್ಯಯಗಳಲ್ಲಿ ವಚನ ಭೇದವಿಲ್ಲ. ಗ್ರಾಂಥಿಕ ಕನ್ನಡದ ತೃತೀಯ ಪುರುಷ ಉಭಯಲಿಂಗ ಬಹುವಚನ ಪ್ರತ್ಯಯಕ್ಕೆ ಸಾಮ್ಯವಾದ ಬಹುವಚನ ಪ್ರತ್ಯಯ -ರು ಅನ್ನು ಹಾಲಕ್ಕಿ ಕನ್ನಡ ಎಲ್ಲ ಕಾಲ ಪ್ರಾತಿಪದಿಕಗಳಿಗೂ ಹತ್ತಿಸುತ್ತದೆ. -ಅರೆ ಪ್ರತ್ಯಯವನ್ನು ವರ್ತಮಾನಕಾಲಕ್ಕೂ -ಇರಿ ಪ್ರತ್ಯಯವನ್ನು ಭೂತ, ಭವಿಷ್ಯತ್‌ಕಾಲ ಪ್ರಕೃತಿಗಳಲ್ಲಿಯೂ ಮಧುರೈ ಕನ್ನಡ ಬಳಸುತ್ತದೆ. ಮಧುರೈ ಕನ್ನಡದ ಈ ಪ್ರಥಮಪುರುಷ ಬಹುವಚನ ರೂಪ -ಇರಿ, ಗ್ರಾಂಥಿಕ ಕನ್ನಡದ ತೃತೀಯ ಪುರುಷ ಉಭಯಲಿಂಗ ಬಹುವಚನ ರೂಪದ ಸಮಾನರೂಪ. ಕೊಡಗು ಕನ್ನಡದಲ್ಲಿ ಪೂರ್ಣ ಭಿನ್ನರೂಪವಾದ -ಇಗೆ ಎಂಬ ಪ್ರತ್ಯಯವು ಅಭೂತಕಾಲ (ಭೂತವಲ್ಲದ ಅಂದರೆ ವರ್ತಮಾನ, ಭವಿಷ್ಯತ್) ಪ್ರಕೃತಿಗಳಿಗೆ ಹತ್ತುತ್ತದೆ. ಉದಾ : ಕುಡಿತಿಗೆ 'ಕುಡಿಯುತ್ತೇವೆ'

–ಒ ಎಂಬುದು ಕೊಡಗು, ಬಾರ್ಕೂರು, ನಂಜನಗೂಡು ಕನ್ನಡಗಳಲ್ಲಿ ಭೂತಕಾಲ ರಚನೆಗಳಲ್ಲಿ ಬಹುವಚನ ಪುರುಷವಾಚಕ ಪ್ರತ್ಯಯವಾದರೆ –ಓ ಮತ್ತು -ಯೊ (ಈ ಓ ಅನ್ನು ಇಂಗ್ಲೀಷಿನಲ್ಲಿ College ಎಂಬಲ್ಲಿ ಉಚ್ಚರಿಸುವ ಓ– ಎಂಬಂತೆ ಉಚ್ಚರಿಸಬೇಕು) ಎಂಬವು ಹವ್ಯಕ ಕನ್ನಡದ ಬಹುವಚನ ಪ್ರತ್ಯಯಗಳು :

ಉದಾ :	ಕೊ. ಕ. :	ಕುಡ್ತೊ,	'ಕುಡಿದೆವು'
	ಬಾ. ಕ. :	ಕುಡ್‌ದೊ,	'ಕುಡಿದೆವು'
	ನ. ಕ. :	ಕೊಟ್ಟೊ,	'ಕೊಟ್ಟೆವು'
	ಹ. ಕ. :	ಹೇಳ್ತೊ,	'ಹೇಳುತ್ತೇವೆ'
		ಹೇಳ್ದೊ,	'ಹೇಳಿದೆವು'

ಇತ್ಯಾದಿ.

ದ್ವಿತೀಯ ಪುರುಷ ಏಕವಚನ :

ಹಳಗನ್ನಡದಲ್ಲಿ, ದ್ವಿತೀಯ ಪುರುಷ ಏಕವಚನದ ವಿಧ್ಯರ್ಥದಲ್ಲಿ ಧಾತುವೇ ಪ್ರಯೋಗವಾಗುತ್ತಿತ್ತೆಂದು ಕಾಣುತ್ತದೆ. ಹತ್ತನೆಯ ಶತಮಾನದವರೆಗಿನ ಶಾಸನ ಭಾಷೆಯಲ್ಲಿಯೂ ಇದಕ್ಕೆ ಪ್ರತ್ಯೇಕವಾದ ಪ್ರತ್ಯಯವೇನೂ ಕಂಡುಬರುವುದಿಲ್ಲ. ಆದರೆ ಪಂಪ ಭಾರತದಲ್ಲಿ –ಅಯ್ ಅಥವಾ –ಐ ಮತ್ತು –ಎ ಎಂಬ ಪ್ರತ್ಯಯಗಳ ಪ್ರಯೋಗವಿದೆ.

ಉದಾ : ಮಡಿಮಯ್,
ನುಡಿವೈ,
ಬಂದೈ,
ಮತ್ತು ನುಡಿವೆ,
ಇರ್ದೆ,

ಇತ್ಯಾದಿ.

ಹೊಸಗನ್ನಡದಲ್ಲಿ ಕೂಡ ಧಾತುವೇ ವಿಧ್ಯರ್ಥದಲ್ಲಿ ಬಳಕೆಯಾಗುತ್ತದೆ. ಮತ್ತು –ಈಯೆ, –ಇ ಮತ್ತು –ಎ ರೂಪಗಳು ಪೂರ್ಣ ಕ್ರಿಯಾಪದದಲ್ಲಿ ಬಳಕೆಯಲ್ಲಿವೆ.

ಉದಾ : ಬರುತ್ತೀಯೆ ~ ಬರುತ್ತೀಯ.
ಬಂದೆ,
ಬಂದಿ,

ಇತ್ಯಾದಿ.

ಇವುಗಳಲ್ಲಿ –ಈಯೆ ~ –ಈಯ ಪ್ರತ್ಯಯವು ವರ್ತಮಾನ ಪ್ರಾತಿಪದಿಕಕ್ಕೂ ಎ ~ –ಇ ಪ್ರತ್ಯಯವು ಭೂತ, ಭವಿಷ್ಯತ್ ಕಾಲ ಪ್ರಾತಿಪದಿಕಗಳಿಗೂ ಹತ್ತುತ್ತವೆ.

ಉಪಭಾಷೆಗಳಲ್ಲಿ, ಗೌಡ ಕನ್ನಡದಲ್ಲಿ ಒಂದೇ ರೂಪವು ಎಲ್ಲ ಕಾಲ ಪ್ರಾತಿಪದಿಕ ಗಳಿಗೂ ಹತ್ತುತ್ತದೆ.

ಉದಾ : ಇಳ್ದ '(ನೀನು) ಇಳಿದೆ'
ಇಳ್ದಿಯ '(ನೀನು) ಇಳಿ'ಯುತ್ತಿ

ವಿಧ್ಯರ್ಥದಲ್ಲಿ –ನಿ ಪ್ರತ್ಯಯ ಪ್ರಯೋಗದಲ್ಲಿದೆ.

ನಂಜನಗೂಡು, ಧಾರವಾಡ, ವಿಜಾಪುರ, ಕೊಡಗು ಮತ್ತು ಮಧುರೈ ಕನ್ನಡ ಗಳನ್ನುಳಿದು ಮಿಕ್ಕೆಲ್ಲ ಉಪಭಾಷೆಗಳೂ ಸಾಧಾರಣವಾಗಿ ಸಾಮ್ಯರೂಪವುಳ್ಳ ಪ್ರತ್ಯಯ ಗಳನ್ನು ಅಭೂತಕಾಲ (ವರ್ತಮಾನ + ಭವಿಷ್ಯತ್ ಕಾಲ) ಪ್ರಾತಿಪದಿಕಗಳಿಗೆ ಹತ್ತಿಸು ತ್ತವೆ. ಕೊಡಗು ಕನ್ನಡ ಭಿನ್ನರೂಪವಾದ –ಇಗೆ ಪ್ರತ್ಯಯವನ್ನು ಹೊಂದಿದೆ. ಉದಾ : ಕುಡಿತಿಗೆ. –ಇ ಪ್ರತ್ಯಯದ ಜೊತೆಗೆ ಧಾರವಾಡ ಮತ್ತು ಬಾರಕೂರು ಕನ್ನಡಗಳಲ್ಲಿ –ಈದಿ ಪ್ರತ್ಯಯವೂ ಬಳಕೆಯಲ್ಲಿದೆ. ಉದಾ : ನೋಡ್ತಿ, ನೋಡ್ತೀದಿ ಇತ್ಯಾದಿ. ಎಲ್ಲ ಉಪಭಾಷೆಗಳೂ ಭೂತ ಮತ್ತು ಭವಿಷ್ಯತ್ ಕಾಲ ಪ್ರಾತಿಪದಿಕಗಳಲ್ಲಿ ಒಂದೇ ತೆರನಾದ ರೂಪಗಳನ್ನು ಹೊಂದಿವೆ, –ಎ > –ಇ ಬದಲಾವಣೆಗಳನ್ನುಳಿದು.

ಉದಾ : ಬಂದೆ > ಬಂದಿ,

ಇತ್ಯಾದಿ.

ದ್ವಿತೀಯ ಪುರುಷ ಬಹುವಚನ :

ದ್ವಿತೀಯ ಪುರುಷ ಬಹುವಚನಕ್ಕೆ ಶಾಸನ ಭಾಷೆಯಲ್ಲಿ ಹತ್ತನೆಯ ಶತಮಾನದ ವರೆಗೆ ಪ್ರತ್ಯಯಗಳಾವೂ ಕಾಣಸಿಗುವುದಿಲ್ಲ. ಆದರೆ ಹಳಗನ್ನಡ ಕಾವ್ಯಗಳಲ್ಲಿ –ಇಮ್ ಮತ್ತು –ಇರ್ ಪ್ರತ್ಯಯಗಳ ಪ್ರಯೋಗ ಕಂಡು ಬರುತ್ತದೆ. ಉದಾ : ಓಡಿಂ, ಕೇಳಿಂ, ಬಂದಿರ್, ಕಂಡಿರ್ ಇತ್ಯಾದಿ. (ಪಂಪ ಭಾರತ)

ನಡುಗನ್ನಡ ಕಾಲದಲ್ಲಿ, ಹಳಗನ್ನಡ ಪ್ರತ್ಯಯಗಳಲ್ಲದೆ –ಇ, –ಇರಿ ಎಂಬ ಪ್ರತ್ಯಯಗಳೂ ಪ್ರಯೋಗಕ್ಕೆ ಬಂದವು. (–ಇಮ್ ಪ್ರತ್ಯಯದ ಕೊನೆಯ ಅನುನಾಸಿಕ ಲೋಪವಾಗಿ –ಇ ಪ್ರತ್ಯಯವಾಯಿತು. 'ವಿವರಕ್ಕೆ ನೋಡಿ, ತೀ. ನಂ. ಶ್ರೀಕಂಠಯ್ಯ, ಸಮಾಲೋಕನ, ೨೫೮). ಹರಿಹರನ ಕಾವ್ಯಗಳಲ್ಲಿ 'ಏನಿ' ಎಂಬ ಪದ ಪ್ರಯೋಗ ವಾಗಿದೆ. ಹೊಸಗನ್ನಡದಲ್ಲಿ –ಇ, –ಇರಿ ಪ್ರತ್ಯಯಗಳು ಮಾತ್ರ ಪ್ರಯೋಗದಲ್ಲಿ ಉಳಿದಿವೆ. ಇವುಗಳ ಪ್ರಯೋಗ ಕೂಡ ಹಲವಾರು ಬದಲಾವಣೆಯೊಂದಿಗೆ ನಡೆಯು ತ್ತದೆ (ನೋಡಿ : ಕೈಪಿಡಿ, ೧೯೬೯; ೩೭೬).

ಉದಾ : ಬನ್ನಿರಿ — ಬನ್ನಿ — ಬರ್ರಿ
ತನ್ನಿರಿ — ತನ್ನಿ — ತರ್ರಿ

ಇದೇ ರೀತಿ ತಿನ್ನಿರಿ – ತಿನ್ನಿ, ಆದರೆ ತಿರ್‍ರಿ ಸಾಧ್ಯವಿಲ್ಲ. ಕಾರಣ ಬನ್ನಿರಿ, ತನ್ನಿರಿ ಮೊದಲಾದ ಪದಗಳಲ್ಲಿ ಧಾತು ಬರ್, ತರ್, ಆದರೆ ತಿನ್ನಿರಿ ಪದದ ಧಾತು ತಿನ್ ಎಂದು. ಅಲ್ಲಿ ಧಾತುವಿಗೆ ನೇರವಾಗಿ ಬಹುವಚನ ಪ್ರತ್ಯಯ ಹತ್ತಿ ಬರ್‍ರಿ, ತರ್‍ರಿ ಎಂದಾಗುವಂತೆ ಇಲ್ಲಿ ತಿನ್ರಿ ರೂಪ ಸಾಧ್ಯವಷ್ಟೆ. ಉಪಭಾಷೆಗಳಾದ ನಂಜನಗೂಡು, ಗುಲ್ಬರ್ಗ ಕನ್ನಡಗಳಲ್ಲಿ ದ್ವಿತೀಯ ಪುರುಷ ಬಹುವಚನ ಪ್ರತ್ಯಯದ ಆದಿಸ್ವರ ಹ್ರಸ್ವ.

ಉದಾ : ನ. ಕ. : ಕೊಡ್ತಿರಿ
ಗು. ಕ. : ಕೊಯ್ತಿರಿ

ಇತ್ಯಾದಿ.

ಹಾಲಕ್ಕಿ ಕನ್ನಡದಲ್ಲಿ –ರು ಎಂಬುದು ಪ್ರತ್ಯಯ. ಉದಾ : ಕುಡೀತ್ರು. ಇದು ಗ್ರಾಂಥಿಕ ಕನ್ನಡ ತೃತೀಯ ಪುರುಷ ಉಭಯ ಲಿಂಗ ಬಹುವಚನ ಪ್ರತ್ಯಯವನ್ನು ಹೋಲುತ್ತದೆ. ಮಧುರೈ ಕನ್ನಡದಲ್ಲಿ –ಅರೆ ಎಂಬುದು ಪ್ರಯೋಗದಲ್ಲಿದ್ದರೆ, ಕೊಡಗು ಕನ್ನಡದಲ್ಲಿ –ಒ ಎಂಬುದು ಭೂತ, ಭವಿಷ್ಯತ್ ಕಾಲ ಪ್ರಾತಿಪದಿಕಗಳಲ್ಲಿ ಪ್ರಯೋಗವಾಗುತ್ತದೆ. ಮತ್ತು ಈ ಉಪಭಾಷೆಯಲ್ಲಿ, ಭೂತಕಾಲ ಪ್ರಾತಿಪದಿಕಗಳಲ್ಲಿ ಪುರುಷ ಭೇದವೇನೂ ಕಂಡುಬರುವುದಿಲ್ಲ.

ಉದಾ : ಮ. ಕ. : ನೆಗುತರೆ 'ನಗುತ್ತೀರಿ'
ಕೊ. ಕ. : ಕುಡ್ಚೊ 'ಕುಡಿದಿರಿ'

ತೃತೀಯ ಪುರುಷ ಪುಲ್ಲಿಂಗ ಏಕವಚನ :

ಹಳಗನ್ನಡದಲ್ಲಿ –ಆನ್, –ಆಂ, –ಅನ್, –ಅಂ, –ಅಮ್, –ಒಂ, –ಓಮ್, –ಓನ್, –ಒನ್ ಮತ್ತು –ಅ ಎಂಬ ರೂಪಗಳು ಪುಲ್ಲಿಂಗ ಏಕವಚನಕ್ಕೆ ಪ್ರಯೋಗದಲ್ಲಿದ್ದುವು. ನಡುಗನ್ನಡ ಕಾಲದಲ್ಲಿ –ಅನ್, –ಅಮ್, –ಅಂ ಮತ್ತು –ಅ ರೂಪಗಳು ಹೆಚ್ಚು ಬಳಕೆಯಲ್ಲಿದ್ದವು. ಹೊಸಗನ್ನಡದಲ್ಲಿ –ಅನು ಮತ್ತು –ಅ ರೂಪಗಳು ಮಾತ್ರ ಉಳಿದಿವೆ.

ಉದಾ : ಹ. ಕ. ಎಯ್ದಾನ್, ಪಡೆದಾಂ, ಒಡೆದನ್, ಗೆಯ್ದಂ
ಕೊಟ್ಟವಮ್, ನಿಲಿಸಿದೊಂ, ಸತ್ತೋಂ, ಇಟ್ಟಿರ್ದೊಮ್
ಕೆಯ್ದೋನ್, ಅಟ್ಟಿದೊನ್, ಅಟ್ಟಿವ (ಅಳಿವನು).

ವರ್ತಮಾನಕಾಲ ಪ್ರಾತಿಪದಿಕಗಳಲ್ಲಿ ಸಾಧಾರಣವಾಗಿ ಎಲ್ಲ ಉಪಭಾಷೆಗಳಲ್ಲಿಯೂ ಒಂದೇ ರೂಪವುಳ್ಳ ಪ್ರತ್ಯಯ ಪುಲ್ಲಿಂಗ ಏಕವಚನಕ್ಕೆ ಪ್ರಯೋಗದಲ್ಲಿದೆ. ನಂಜನಗೂಡು, ಗುಲ್ಬರ್ಗ ಕನ್ನಡಗಳಲ್ಲಿ ಈ ಪ್ರತ್ಯಯ ಆದಿಸ್ವರ ಹ್ರಸ್ವವಾಗಿರುವುದು ವಿಶೇಷ.

ಉದಾ :	ನ. ಕ. :	ಕೊಡ್ತನೆ	'ಕೊಡುತ್ತಾನೆ'
	ಗು. ಕ. :	ಕೊಯ್ತನ	'ಕೊಯ್ಯುತ್ತಾನೆ'

–ಅದೆ ಎಂಬ ಪ್ರತ್ಯಯ ಮೂರೂ ಲಿಂಗಗಳಿಗೆ ಏಕವಚನದಲ್ಲಿ ಗೌಡ ಕನ್ನಡದಲ್ಲಿ ಬಳಕೆಯಲ್ಲಿದೆ.

ಉದಾ :	ಅಂವಾ ತಿಂದದೆ	'ಅವನು ತಿನ್ನುತ್ತಾನೆ'
	ಅದು ತಿಂದದೆ	'ಅವಳು/ಅದು ತಿನ್ನುತ್ತಾಳೆ/ತಿನ್ನುತ್ತದೆ'

ಗ್ರಾಂಥಿಕಕನ್ನಡದಲ್ಲಿ –ಅದು ಪ್ರತ್ಯಯ ಬಳಕೆಯಲ್ಲಿದೆ. ಆದರೆ ಬಹಳಷ್ಟು ಉಪಭಾಷೆಗಳಲ್ಲಿ ಕೊನೆಯ –ನು ಲೋಪವಾಗಿ ಬರೆ –ಅ ಮಾತ್ರ ಉಳಿಯುತ್ತದೆ. ಸಾಧಾರಣವಾಗಿ ಎಲ್ಲ ಉಪಭಾಷೆಗಳಲ್ಲಿಯೂ ಭೂತ, ಭವಿಷ್ಯತ್ ಕಾಲ ಪ್ರಾತಿಪದಿಕಗಳಲ್ಲಿ ಒಂದೇ ವಿಧ ಪುರುಷವಾಚಕ ಪ್ರತ್ಯಯ ಬಳಸಲ್ಪಡುತ್ತದೆ. ಆದರೆ ಗೌಡ ಕನ್ನಡದಲ್ಲಿ ಭೂತ ಮತ್ತು ಭವಿಷ್ಯತ್ ಪ್ರಾತಿಪದಿಕಗಳಿಗೆ ಬೇರೆಬೇರೆ ಪ್ರತ್ಯಯಗಳು ಪ್ರಯೋಗದಲ್ಲಿವೆ.

ಉದಾ :	ಪ್ರ. ಕ. :	ಬಂದನು	(–ಅನು)	(ಭೂತ)
		ಬರುವನು	(–ಅನು)	(ಭವಿಷ್ಯತ್)
	ಗೌ. ಕ. :	ಅಂವಾ ತಿಂದದೆ	(–ಅದೆ)	(ವರ್ತಮಾನ)
		ಅಂವಾ ತೀಂತು	(–ತು)	(ಭೂತ)
		ಅಂವಾ ತಿಂಬೊದು	(–ಒದು)	(ಭವಿಷ್ಯತ್)

ತೃತೀಯ ಪುರುಷ ಸ್ತ್ರೀಲಿಂಗ ಏಕವಚನ :

ಹಳಗನ್ನಡದಲ್ಲಿ ಪುಲ್ಲಿಂಗ ಏಕವಚನಕ್ಕೆ ಅಷ್ಟೊಂದು ರೂಪಗಳು ಬಳಕೆಯಲ್ಲಿದ್ದರೂ ಸ್ತ್ರೀಲಿಂಗ ಏಕವಚನಕ್ಕೆ ಮೂರೇ ರೂಪಗಳು ಬಳಕೆಯಲ್ಲಿದ್ದುವೆಂದು ಕಾಣುತ್ತದೆ. ಅವು : –ಆಳ್, –ಅಳ್ ಮತ್ತು –ಓಳ್.

ಉದಾ : ಕೊಟ್ಟಾಳ್
ಮಾಡಿಸಿದೋಳ್
ಬಂದಳ್ ...ಇತ್ಯಾದಿ.

ನಡುಗನ್ನಡ ಕಾಲದಲ್ಲಿ –ಅಳ್ ರೂಪ ಮಾತ್ರ ಹೆಚ್ಚು ಪ್ರಚುರದಲ್ಲಿದ್ದು, ಹೊಸಗನ್ನಡ ಕಾಲದಲ್ಲಿ –ಅಳು ಆಗಿ ಪ್ರಯೋಗವಾಗುತ್ತಿದೆ.

ಗೌಡ ಕನ್ನಡದ ಪುರುಷವಾಚಕ ಪ್ರತ್ಯಯಗಳಲ್ಲಿ ಲಿಂಗ ಭೇದವಿಲ್ಲ. ಹವ್ಯಕ ಮತ್ತು ಹಾಲಕ್ಕಿ ಕನ್ನಡಗಳು –ಅ ಮತ್ತು –ಅದೆ ಎಂಬ ರೂಪಗಳನ್ನು ಸ್ತ್ರೀಲಿಂಗ ಏಕವಚನಕ್ಕೆ ಅಭೂತ ಮತ್ತು ವರ್ತಮಾನ ಪ್ರಾತಿಪದಿಕಗಳಲ್ಲಿ ಬಳಸುತ್ತಿವೆ.

ಉದಾ : ಹ. ಕ. : ಹೇಳ್ತ '(ಅವಳು) ಹೇಳುತ್ತಾಳೆ'
ಹಾ. ಕ. : ಕುಡೀತದೆ '(ಅವಳು) ಕುಡಿಯುತ್ತಾಳೆ'

ಹಾಲಕ್ಕಿ ಕನ್ನಡ ಭೂತ, ಭವಿಷ್ಯತ್ ಕಾಲ ಪ್ರಾತಿಪದಿಕಗಳಲ್ಲಿ ಸ್ತ್ರೀಲಿಂಗ ಏಕವಚನಕ್ಕೆ –ದು ಮತ್ತು –ತು ರೂಪಗಳು ಬಳಕೆಯಲ್ಲಿವೆ.

ಉದಾ : ಕುಡೂದು 'ಕುಡಿವಳು'
ಕುಡೀತು 'ಕುಡಿದಳು' ...ಇತ್ಯಾದಿ.

ನಂಜನಗೂಡು ಮತ್ತು ಕೊಡಗು ಕನ್ನಡಗಳಲ್ಲಿ —ಅ ಪ್ರತ್ಯಯ, ಪುಲ್ಲಿಂಗ ಹಾಗೂ ಸ್ತ್ರೀಲಿಂಗ ಎರಡಕ್ಕೂ ಏಕವಚನಕ್ಕೆ, ಭೂತಕಾಲ ಪ್ರಾತಿಪದಿಕದಲ್ಲಿ ಬಳಕೆಯಲ್ಲಿದೆ.

ಉದಾ : ನ. ಕ: ಕೊಟ್ಟ 'ಕೊಟ್ಟನು – ಕೊಟ್ಟಳು'
ಕೊ. ಕ: ಕುಡ್ತ 'ಕುಡಿದನು – ಕುಡಿದಳು'

ತೃತೀಯ ಪುರುಷ ಉಭಯಲಿಂಗ ಬಹುವಚನ :

ಹಳಗನ್ನಡದಲ್ಲಿ – ಆರ್, – ಅರ್, – ಓರ್, ಮತ್ತು – ಒರ್ ರೂಪಗಳು ಬಳಕೆಯಲ್ಲಿದ್ದವು. ಉದಾ : ಏಱಿದಾರ್, ಪೊಯ್ದರ್, ಕೊಟ್ಟೋರ್, ಮತ್ತು ಬಿಟ್ಟೊರ್. ನಡುಗನ್ನಡಕಾಲದಲ್ಲಿ – ಅರ್ ಎಂಬುದು ಹೆಚ್ಚು ಬಳಕೆಯಲ್ಲಿದ್ದು ಹೊಸಗನ್ನಡಕಾಲಕ್ಕೆ –ಅರು ಮಾತ್ರ ಉಳಿದಿದೆ. ವರ್ತಮಾನಕಾಲ ಪ್ರಾತಿಪದಿಕಗಳಲ್ಲಿ –ಆರೆ ಎಂಬ ಪ್ರತ್ಯಯ ಪ್ರಯೋಗದಲ್ಲಿದೆ.

ಉದಾ : ಬಂದರು
ಬರುತ್ತಾರೆ

(ವರ್ತಮಾನಕಾಲ ಪ್ರಾತಿಪದಿಕಗಳಲ್ಲಿ ಪ್ರಯೋಗವಾಗುವ ಪ್ರತ್ಯಯ, ಹಳಗನ್ನಡದಲ್ಲಿ ಇಲ್ಲವೆಂದು ಹಿಂದೆಯೇ ಹೇಳಿದೆ. ಇದರ ಬಳಕೆ ಹನ್ನೆರಡನೆಯ ಶತಮಾನದಿಂದೀಚೆಗಷ್ಟೆ ಪ್ರಾರಂಭವಾಯಿತು).

ಉಭಯಲಿಂಗ ಬಹುವಚನಕ್ಕೆ ನಪುಂಸಕ ಬಹುವಚನ ಪ್ರತ್ಯಯವನ್ನೂ ಸಹ ಹೊಸಗನ್ನಡದಲ್ಲಿ ಬಳಸಲಾಗುತ್ತದೆ. ಹಳಗನ್ನಡದಲ್ಲೂ ಇದರ ಪ್ರಯೋಗವಿತ್ತೆಂದು ಕಾಣುತ್ತದೆ. ಉದಾ : ಮಕ್ಕಳ್. ಪುಲ್ಲಿಂಗಕ್ಕೂ ಕೆಲವೊಮ್ಮೆ ಬಹುವಚನ ಪ್ರತ್ಯಯ ವಾಗಿ –ಗಳ್ ಪ್ರತ್ಯಯ ಬಳಕೆಯಲ್ಲಿತ್ತೆಂದು ಕಾಣುತ್ತದೆ. ಕೇಶಿರಾಜನು "ಸ್ತ್ರೀಲಿಂಗ ಪುಲ್ಲಿಂಗ ವಿಷಯಂದೊಳ್ ಗಳ್ಗಾದೇಶಮಾಗಿ ಇರ್, ಅರ್, ದಿರ್, ವಿರ್ ಎಂದಕ್ಕುಂ" ಎಂದು ಹೇಳಿದ್ದರೂ 'ಕಲಿಗಳ್' ಎಂಬಲ್ಲಿ ಕಲಿ ಎಂಬುದು ಪುಲ್ಲಿಂಗವೇ ಹೊರತು ಬೇರಲ್ಲವೆಂಬುದು ಗಮನಿಸತಕ್ಕದ್ದು. ಜೊತೆಗೆ –ಗಳ್ ಪ್ರತ್ಯಯ ಗೌರವಸೂಚಕ

ಬಹುವಚನವಾಗಿಯೂ ಬಳಸಲ್ಪಟ್ಟಿದೆ. ಉದಾ : ನವೋಸ್ತುಗಳ್, ಗುರುಗಳ್ ಇತ್ಯಾದಿ. ಹೊಸಗನ್ನಡದಲ್ಲಿ ಉಭಯಲಿಂಗ ಬಹುವಚನಕ್ಕೆ : ವಿದ್ಯಾರ್ಥಿಗಳು, ಮಕ್ಕಳು, ಪ್ರಜೆಗಳು ಇತ್ಯಾದಿ. ಗೌರವಸೂಚಕ ಬಹುವಚನಕ್ಕೆ : ಮಂತ್ರಿಗಳು, ಗುರುಗಳು, ಸ್ವಾಮಿಗಳು ಇತ್ಯಾದಿ. ಕೇಶಿರಾಜನ ಕಾಲಕ್ಕೆ ಪುಲ್ಲಿಂಗ, ಸ್ತ್ರೀಲಿಂಗ ಸರ್ವನಾಮಗಳಿಗೆ –ಇರ್ ಬಹುವಚನ ಪ್ರತ್ಯಯ ಹತ್ತುವ ಪದ್ಧತಿಯಿತ್ತೆಂದು ಕಾಣುತ್ತದೆ.

ಉದಾ : ಇವಂದಿರ್
ಇವಳ್ದಿರ್ ...ಇತ್ಯಾದಿ.

ಆದರೆ ಹೊಸಗನ್ನಡದಲ್ಲಿ ಈ ತರಹದ ಪ್ರಯೋಗಗಳೇನೂ ಕಂಡುಬರುವುದಿಲ್ಲ. ತಮಿಳಿನಲ್ಲಿ ಆಡುಭಾಷೆಯಲ್ಲಿ ಈ ರೀತಿಯ ಪ್ರಯೋಗಗಳು ಈಗಲೂ ಇವೆ.

ಉದಾ : ತಮಿಳು : ಅವನುಗ(ಳ್) ವರ್ರಾನುಗ
ಅವಳುಗ(ಳ್) ವರ್ರಾಳುಗ ...ಇತ್ಯಾದಿ.

–ಅವೆ ಎಂಬ ಪ್ರತ್ಯಯ ಗೌಡ ಕನ್ನಡದಲ್ಲಿ ಬಹುವಚನ ಪ್ರತ್ಯಯವಾಗಿ ಎಲ್ಲ ಲಿಂಗ ವರ್ತಮಾನ ಪ್ರಾತಿಪದಿಕಗಳಿಗೆ ಹತ್ತುತ್ತದೆ, ಮತ್ತು –ಒ ಅಥವಾ –ವೊ ಸರ್ವಲಿಂಗ ಬಹುವಚನ ಪ್ರತ್ಯಯವಾಗಿ ಭೂತ, ಭವಿಷ್ಯತ್ ಪ್ರಾತಿಪದಿಕಗಳಲ್ಲಿ ಬಳಕೆಯಾಗುತ್ತದೆ.

ಉದಾ : ಅವು ತಿಂದವೆ 'ಅವರು ತಿನ್ನುತ್ತಾರೆ'
ಅವು ತಿಂದೊ 'ಅವರು ತಿಂದರು'
ಅವು ತಿಂಬೊ 'ಅವರು ತಿನ್ನುವರು'
ಅವು ಕೊಡುವೊ 'ಅವರು ಕೊಡುವರು' ...ಇತ್ಯಾದಿ.

ಉಳಿದೆಲ್ಲ ಉಪಭಾಷೆಗಳಿಂದ, ಹಾಲಕ್ಕಿ ಮತ್ತು ಬಾರಕೂರು ಕನ್ನಡಗಳು ಭಿನ್ನವಾಗಿ ವರ್ತಿಸುತ್ತವೆ. ಇವುಗಳಲ್ಲಿ –ರು ಮತ್ತು –ರೃ (ru, rī) ಉಭಯಲಿಂಗ ಬಹುವಚನ ಪ್ರತ್ಯಯವಾಗಿ ಎಲ್ಲ ಕಾಲ ಪ್ರಾತಿಪದಿಕಗಳಲ್ಲೂ ಪ್ರಯೋಗವಾಗುತ್ತದೆ.

ಉದಾ : ಹಾ. ಕ. : ಬರ್ ತ್ರು [bartru] 'ಬರುತ್ತಾರೆ'
ಬಾ. ಕ. : ಕುಡೀ ತೃ [kuḍi : trī] 'ಕುಡಿಯುತ್ತಾರೆ'

ಮಧುರೈ ಕನ್ನಡವನ್ನುಳಿದು ಮಿಕ್ಕೆಲ್ಲ ಉಪಭಾಷೆಗಳಲ್ಲಿ ಭವಿಷ್ಯತ್‌ಕಾಲ ಪ್ರಾತಿಪದಿಕಗಳಿಗೆ ಹತ್ತುವ ಪ್ರತ್ಯಯಗಳಲ್ಲಿ ಆದಿಸ್ವರ ದೀರ್ಘವಾಗುವುದಿಲ್ಲ. ಇಲ್ಲಿ

ವರ್ತಮಾನ ಮತ್ತು ಭವಿಷ್ಯತ್ ಕಾಲದ ಪ್ರತ್ಯಯಗಳ ವ್ಯತ್ಯಾಸವೆಂದರೆ ಈ ಪ್ರತ್ಯಯಗಳ ಅಂತ್ಯ ಸ್ವರವಷ್ಟೆ. ವರ್ತಮಾನಕಾಲ ಪ್ರಾತಿಪದಿಕಕ್ಕೆ ಹತ್ತುವ ಪ್ರತ್ಯಯದ ಅಂತ್ಯ ಸ್ವರ –ಅ ಆದರೆ, ಭವಿಷ್ಯತ್‌ಕಾಲ ಪ್ರಾತಿಪದಿಕಕ್ಕೆ ಹತ್ತುವ ಪ್ರತ್ಯಯದ ಅಂತ್ಯಸ್ವರ –ಉ.

ಉದಾ : ಮ. ಕ : ಕೊಯ್ತಾರ 'ಕೊಯ್ಯುತ್ತಾರೆ'
ನೆಗಾರು 'ನಗುವರು'

ಎಲ್ಲ ಉಪಭಾಷೆಗಳಲ್ಲೂ ಭೂತಕಾಲ ಪ್ರಾತಿಪದಿಕಕ್ಕೆ ಹತ್ತುವ ಪ್ರತ್ಯಯ –ರು.[೫]

ಉದಾ : ಮೈ. ಕ : ಬಂದ್ರು 'ಬಂದರು'
ನ. ಕ : ಕೊಟ್ರು 'ಕೊಟ್ಟರು'
ಧಾ. ಕ : ನೋಡ್ದ್ರು 'ನೋಡಿದರು'
ಗು. ಕ : ಕೊಯ್ದ್ರು 'ಕೊಯ್ದರು' ...ಇತ್ಯಾದಿ.

ನಪುಂಸಕ ಏಕವಚನ :

ಹಳಗನ್ನಡದಲ್ಲಿ ಇದಕ್ಕೆ –ಅದು ಎಂಬ ಪ್ರತ್ಯಯ ಪ್ರಯೋಗದಲ್ಲಿತ್ತು. ಒಂದು ವಿಶೇಷವೆಂದರೆ, ಪುಲ್ಲಿಂಗ, ಸ್ತ್ರೀಲಿಂಗ, ಏಕ-ಬಹುವಚನ ಪ್ರತ್ಯಯಗಳಲ್ಲಿಲ್ಲದ ಪ್ರತ್ಯಯಾಂತ –ಉ ಕಾರ ಈ ನಪುಂಸಕ ಏಕ–ಬಹುವಚನ ಪ್ರತ್ಯಯಗಳಲ್ಲಿ ಹಳಗನ್ನಡ ಕಾಲದಲ್ಲಿಯೇ ಕಂಡುಬರುತ್ತವೆ. –ಅದು ಪ್ರತ್ಯಯದ ಜೊತೆ –ತು ಮತ್ತು –ಅತ್ತು (ಶಮದ) ಪ್ರತ್ಯಯಗಳು ಸಹ ಹಳಗನ್ನಡದಲ್ಲಿ ಪ್ರಯೋಗದಲ್ಲಿದ್ದುವು.

ಉದಾ : ನಿಂದುದು
ಆಯ್ತು ...ಇತ್ಯಾದಿ.

–ಟು ರೂಪ ಸಹ ನಪುಂಸಕ ಏಕವಚನ ಪ್ರತ್ಯಯವಾಗಿ ಪ್ರಯೋಗವಾಗುತ್ತಿತ್ತೆಂದು ಡಾ. ರಾಮಚಂದ್ರರಾವ್ ಹೇಳುತ್ತಾರೆ (ರಾಮಚಂದ್ರರಾವ್, ೧೯೭೨; ೧೩೬). 'ಉಂಟು' ಎಂಬ ಪದದಲ್ಲಿ 'ಉಣ್' ಎಂಬುದು 'ಉಳ್' ಧಾತುವಿನ ಪ್ರತಿರೂಪ (Alternant) ವೆಂದೂ, ಅದಕ್ಕೆ –ಟು ಪ್ರತ್ಯಯ ಹತ್ತಿ 'ಉಣ್ಟು' ಅಥವಾ 'ಉಂಟು'

---

೫ ಸ್ತ್ರೀಲಿಂಗ ಏಕವಚನ, ಉಭಯಲಿಂಗ ಬಹುವಚನ, ನಪುಂಸಕ ಏಕವಚನ ಮತ್ತು ನಪುಂಸಕ ಬಹುವಚನ ಪ್ರತ್ಯಯಗಳಲ್ಲಿ ಎಲ್ಲ ಉಪಭಾಷೆಗಳಲ್ಲೂ ಆದಿಸ್ವರ ಲೋಪವಾಗುವುದು ಸಹಜ. ಆದರೆ ಪುಲ್ಲಿಂಗ ಏಕವಚನದಲ್ಲಿ ಮಾತ್ರ ಕೆಲವೊಮ್ಮೆ ಪ್ರತ್ಯಯದ ಅಂತ್ಯದ –ನು ಲೋಪವಾಗುತ್ತದೆಯೇ ಹೊರತು ಆದಿಸ್ವರವಲ್ಲ.

ಎಂದಾಗಿದೆಯೆನ್ನುತ್ತಾರೆ. 'ಉಂಟು' ಎಂದರೆ 'ಅದು ಇದೆ' ಎಂದರ್ಥ. ಈ ಪದ ಇವೆ ಎಂಬ ಅರ್ಥದಲ್ಲಿ ಈಗಲೂ ಬಳಕೆಯಲ್ಲಿದೆ.

ಹೊಸಗನ್ನಡದಲ್ಲಿ –ಅದೆ ಎಂಬ ಪ್ರತ್ಯಯ ವರ್ತಮಾನ ಪ್ರಾತಿಪದಿಕಕ್ಕೂ –ಇತು ಎಂಬುದು ಭೂತಕಾಲ ಪ್ರಾತಿಪದಿಕಕ್ಕೂ, –ಉದು ಅಥವಾ –ಅದು ಎಂಬುದು ಭವಿಷ್ಯತ್‌ಕಾಲ ಪ್ರಾತಿಪದಿಕಕ್ಕೂ ಹತ್ತುತ್ತವೆ.

ನಪುಂಸಕ ಏಕವಚನಕ್ಕೆ ವಿವಿಧ ಉಪಭಾಷೆಗಳಲ್ಲಿ ವಿವಿಧ ರೂಪಗಳು ಬಳಕೆಯಲ್ಲಿವೆ. ಮೈಸೂರು ಕನ್ನಡದಲ್ಲಿ ವರ್ತಮಾನಕಾಲ ಪ್ರಾತಿಪದಿಕಕ್ಕೆ –ತೆ ಪ್ರತ್ಯಯ ಹತ್ತುತ್ತದೆ. ಉದಾ : ಬರುತ್ತೆ. ಧಾರವಾಡ, ವಿಜಾಪುರ, ಗುಲ್ಬರ್ಗ ಕನ್ನಡಗಳು ಒಂದೇರೀತಿ ವರ್ತಿಸುತ್ತವೆ. ಭೂತ, ಭವಿಷ್ಯತ್‌ಕಾಲ ಪ್ರಾತಿಪದಿಕಗಳಲ್ಲಿ ಸಾಧಾರಣವಾಗಿ ಎಲ್ಲ ಉಪಭಾಷೆಗಳೂ ಒಂದೇ ರೂಪವುಳ್ಳ ಪ್ರತ್ಯಯವನ್ನು ಬಳಸುತ್ತವೆ. ಆದರೆ ಬಾರ್ಕೂರು ಕನ್ನಡ, ಭವಿಷ್ಯತ್‌ಕಾಲ ಪ್ರಾತಿಪದಿಕದಲ್ಲಿ –ಯು ಎಂಬ ಪ್ರತ್ಯಯವನ್ನು ಬಳಸುತ್ತದೆ. ಭೂತ ಮತ್ತು ಭವಿಷ್ಯತ್‌ಕಾಲ ಪ್ರಾತಿಪದಿಕಗಳಲ್ಲಿ, ಸಾಧಾರಣವಾಗಿ ಎಲ್ಲ ಲಿಂಗ, ಪುರುಷವಾಚಕ ಪ್ರತ್ಯಯಗಳು ಒಂದೇ ಇರುತ್ತದೆ. ಆದರೆ ನಪುಂಸಕ ಏಕವಚನದ ವಿಷಯದಲ್ಲಿ ಹಾಗಿಲ್ಲ.

ಉದಾ :	ಬಂದೆನು	ಬರುವೆನು	(–ಎನು)
	ಬಂದನು	ಬರುವನು	(–ಅನು)
	ಬಂದಳು	ಬರುವಳು	(–ಅಳು)
	ಬಂದರು	ಬರುವರು	(–ಅರು)
	ಬಂದವು	ಬರುವವು	(–ಅವು)

ಆದರೆ ನ.ಪು. ಏ.ವ. ದಲ್ಲಿ ಬಂದಿತು – ಬರುವುದು (–ಇತು; –ಉದು)

ನಪುಂಸಕ ಬಹುವಚನ :

–ಅವು ಮತ್ತು –ಉವು ಎಂಬ ರೂಪಗಳು ಹಳಗನ್ನಡದಲ್ಲಿ ನಪುಂಸಕ ಬಹುವಚನವಾಗಿ ಬಳಸಲ್ಪಟ್ಟಿವೆ. ಕೆಲವೊಮ್ಮೆ –ಉವು ಪ್ರತ್ಯಯದ ಆದಿಸ್ವರವಾದ –ಉ ಲೋಪವಾಗುವುದೂ ಉಂಟು.

ಉದಾ : ಪಡೆದ್ವು (–ವು)
ಬಂದುವು (–ಉವು)

(೮ನೆಯ ಶತಮಾನದ ಪ್ರಯೋಗ)

–ಅವು ಪ್ರತ್ಯಯ ಪ್ರಯೋಗದ ಬಗ್ಗೆ ಸ್ವಲ್ಪ ಭಿನ್ನಾಭಿಪ್ರಾಯವಿದೆ. ಶಾಸನಭಾಷೆಯಲ್ಲಿ ಇದರ ಪ್ರಯೋಗವನ್ನು ಡಾ. ಜಿ. ಎಸ್. ಗಾಯಿ ಅವರು ಗುರುತಿಸಿದ್ದಾರೆ (ಜಿ. ಎಸ್.

ಗಾಯಿ; ೧೯೪೬; ೮೮). ಆದರೆ ಡಾ. ಬಿ. ರಾಮಚಂದ್ರರಾವ್ ಅವರು ಪಂಪಭಾರತದಲ್ಲಿ ಇದರ ಪ್ರಯೋಗ ಒಮ್ಮೆ ಮಾತ್ರ ಆಗಿದೆಯೆಂದೂ ಆದ್ದರಿಂದ ಅದು ಬರೆವಣಿಗೆಯ ತಪ್ಪು ಎಂದೂ ಅಭಿಪ್ರಾಯಪಟ್ಟಿದ್ದಾರೆ. [The occurrence of -aru after past tense stem (one instance) may be a scribal error (ā-d-aru) (S. 71)] (ರಾಮಚಂದ್ರರಾವ್ : ೧೯೭೨; ೧೩೬). ಡಾ. ಕೆ. ಕುಶಾಲಪ್ಪಗೌಡರು, ವಡ್ಡಾರಾಧನೆಯಲ್ಲಿ ಇದರ ಬಳಕೆಯಾಗಿರುವುದನ್ನು ಗುರುತಿಸಿದ್ದಾರೆ. ಅವರೇ ಉದಹರಿಸಿರುವ ವಾಕ್ಯಗಳನ್ನು ಗಮನಿಸೋಣ. "ಬಾವಿಯ ನೀರಂ ಮಿಂದೋರ್ಗೆಲ್ಲಂ ಕುತ್ತಂ ಕೆಡುವುವಾದವು", "ಪಾಪದ ಫಲದಿಂದ ಅನೇಕ ವ್ಯಾಧಿಗಳು ಮಾದವು" (ಡಾ. ಗೌಡ, ೧೯೬೩; ೧೦೫). ಇವುಗಳಿಂದ ಹಳಗನ್ನಡದಲ್ಲಿ ನಪುಂಸಕ ಬಹುವಚನಕ್ಕೆ -ಅವು ರೂಪವುಳ್ಳ ಪ್ರತ್ಯಯವೊಂದಿತ್ತೆಂದು ಖಚಿತವಾಗಿ ಹೇಳಬಹುದು.

ಹೊಸಗನ್ನಡದಲ್ಲಿ ವರ್ತಮಾನಕಾಲ ಪ್ರಾತಿಪದಿಕಕ್ಕೆ -ಅವೆ ಪ್ರತ್ಯಯವೂ ಭೂತ, ಭವಿಷ್ಯತ್ ಕಾಲ ಪ್ರಾತಿಪದಿಕಗಳಿಗೆ -ಅವು ಪ್ರತ್ಯಯವೂ ಹತ್ತುತ್ತವೆ. ಸಾಧಾರಣವಾಗಿ ವರ್ತಮಾನ ಪ್ರಾತಿಪದಿಕಗಳಿಗೆ ಹತ್ತುವ ಪ್ರತ್ಯಯಗಳ (ಇತರ ಪುರುಷ, ಲಿಂಗ) ಆದಿಸ್ವರ ದೀರ್ಘವಿದ್ದರೆ ನಪುಂಸಕ ಬಹುವಚನ ಪ್ರತ್ಯಯದಲ್ಲಿ ಹ್ರಸ್ವವಾಗಿದೆ.

ಉದಾ : ಬರುತ್ತೇನೆ
ಬರುತ್ತಾನೆ
ಬರುತ್ತಾಳೆ
ಬರುತ್ತವೆ ...ಇತ್ಯಾದಿ.

ಆದರೆ ಕೆಲವೊಮ್ಮೆ ಆಡುನುಡಿಯಲ್ಲಿ (ಉದಾ : ಮೈ. ಕ.) ಇದು, 'ಬರ್ತಾವೆ' ಎಂದಾಗುವುದೂ ಉಂಟು.

ಎಲ್ಲ ಉಪಭಾಷೆಗಳಲ್ಲೂ ವರ್ತಮಾನ ಪ್ರಾತಿಪದಿಕಕ್ಕೆ ಹತ್ತುವ ಪ್ರತ್ಯಯದಿಂದ ಭೂತ, ಭವಿಷ್ಯತ್ ಪ್ರಾತಿಪದಿಕಗಳಿಗೆ ಹತ್ತುವ ಪುರುಷವಾಚಕ ಪ್ರತ್ಯಯಗಳು ಭಿನ್ನವಾಗಿವೆ. ಹಾಲಕ್ಕಿ ಕನ್ನಡದಲ್ಲಿ ಪ್ರಥಮ, ದ್ವಿತೀಯ, ತೃತೀಯ ಪುರುಷ ಬಹುವಚನಕ್ಕೆ ಎಲ್ಲ ಕಾಲದ ಪ್ರಾತಿಪದಿಕಗಳಿಗೂ -ರು ಒಂದೇ ರೂಪ ಬಳಕೆಯಾಗುತ್ತದೆ. ಆದರೆ ಗೌಡ, ಬಾರಕೂರು, ನಂಜನಗೂಡು, ಕೊಡಗು ಮತ್ತು ಹವ್ಯಕ ಕನ್ನಡಗಳು ಬೇರೆಬೇರೆ ರೂಪಗಳನ್ನು ಬಳಸುತ್ತವೆ. ಇವುಗಳಲ್ಲಿ ನಂಜನಗೂಡು, ಕೊಡಗು ಮತ್ತು ಗೌಡ ಕನ್ನಡಗಳನ್ನು ಒಂದು ಗುಂಪಾಗಿಸಬಹುದು. ಬಾರಕೂರು ಮತ್ತು ಹವ್ಯಕ ಕನ್ನಡಗಳು ಬೇರೆ ರೀತಿ ವರ್ತಿಸುತ್ತವೆ.

ಉಪವರ್ಗೀಕರಣ :

ಈ ಉಪಭಾಷೆಗಳಲ್ಲಿರುವ ಪುರುಷವಾಚಕ ಪ್ರತ್ಯಯಗಳಲ್ಲಿ ಕಂಡುಬರುವ ಭೇದ-ಪ್ರಭೇದಗಳನ್ನೇ ಆಧರಿಸಿ, ಅಭ್ಯಾಸಕ್ಕೆ ಎತ್ತಿಕೊಂಡ ಹದಿನಾಲ್ಕು ಉಪಭಾಷೆಗಳ ಉಪವರ್ಗೀಕರಣದ ಒಂದು ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ಆದರೆ ಇದು ವ್ಯಾಪಕ ಅಥವಾ ಸಂಪೂರ್ಣವಾದ ವರ್ಗೀಕರಣವೆಂದು ತಿಳಿಯಬಾರದು. ಇದು ಪ್ರಸ್ತುತ ಅಭ್ಯಾಸದ ಪರಿಮಿತಿಯೊಳಗೆ ಮಾಡಿದ ಒಂದು ಪ್ರಯತ್ನವಷ್ಟೆ. ಇದರ ಸಹಾಯದಿಂದ ಬರೆದಿರುವ ರೇಖಾಚಿತ್ರ (tree diagram), ಕನ್ನಡದ ಉಪಭಾಷೆಗಳ ವಿವಿಧ ಗುಂಪುಗಳು ಮತ್ತು ಅವುಗಳ ಪರಸ್ಪರ ಸಂಬಂಧವನ್ನು ಸೂಚಿಸುತ್ತದೆ.

ಇಲ್ಲಿ ಮತ್ತೆ ಕೆಲವು ವಿಷಯಗಳನ್ನು ಉಪಭಾಷೆಗಳ ವರ್ಗೀಕರಣದ ಸಂಬಂಧ ದಲ್ಲಿ ಗಮನಿಸಬೇಕಾಗಿದೆ. ಕನ್ನಡದಲ್ಲಿ ಈಗಾಗಲೇ ನಾಲ್ಕು ಪ್ರಧಾನ ಪ್ರಾದೇಶಿಕ ಉಪಭಾಷೆಗಳನ್ನು ಒಪ್ಪಿಕೊಳ್ಳಲಾಗಿದೆ. ಇವು : (೧) ಮೈಸೂರು ಕನ್ನಡ, (೨) ಮಂಗಳೂರ ಕನ್ನಡ, (೩) ಧಾರವಾಡ ಕನ್ನಡ ಮತ್ತು (೪) ಗುಲ್ಬರ್ಗ ಕನ್ನಡ ಇದು ವ್ಯಾಪಕವಾದುದೊಂದು ವರ್ಗೀಕರಣ. ಮತ್ತೊಂದು ರೀತಿಯ ವರ್ಗೀಕರಣವೂ ಆಗಿದೆ. ಅದು ಮೈಸೂರು, ಧಾರವಾಡಗಳನ್ನು ಕೇಂದ್ರವಾಗಿಸಿಕೊಂಡ ಎರಡು ಪ್ರಧಾನ ಉಪಭಾಷೆಗಳು. ಇವನ್ನು ಕ್ರಮವಾಗಿ ದಕ್ಷಿಣ ಉಪಭಾಷೆ ಮತ್ತು ಉತ್ತರದ ಉಪಭಾಷೆಯೆಂದು ಕರೆಯಬಹುದು. ಇವುಗಳೊಳಗೆ ಮತ್ತೆರಡು ಕಿರಿಯ ಉಪ ಭಾಷೆಗಳು; ಕ್ರಮವಾಗಿ ಕಡಲತೀರದ ಕನ್ನಡ ಮತ್ತು ಕರ್ನಾಟಕದ ಪೂರ್ವೋತ್ತರ ಪ್ರದೇಶದ ಕನ್ನಡ (ಮೆಖಾರ್ಮೈಕ್). ಆದರೆ ಪ್ರಸ್ತುತ ಉಪವರ್ಗೀಕರಣದ ಪ್ರಯತ್ನ ಇವುಗಳನ್ನೇನೂ ಆಧರಿಸಿಲ್ಲ. ಪ್ರಕಟವಾಗಿ, ಉಪಲಬ್ಧವಿರುವ ಕ್ಷೇತ್ರವರದಿ (field reports) ಗಳನ್ನೇ ಆಧರಿಸಿ ಪ್ರಸ್ತುತ ವಿಶ್ಲೇಷಣೆಯನ್ನು ಮಾಡಲಾಗಿದೆ. ವಿಶ್ಲೇಷಣೆಗೆ ಆಧರಿಸಿರುವ ಈ ಕ್ಷೇತ್ರವರದಿಗಳು ನಿಜಕ್ಕೂ ಪ್ರಾದೇಶಿಕ ಉಪಭಾಷೆ ಯನ್ನು ಪ್ರತಿನಿಧಿಸುತ್ತವೆಯೋ ಅಥವಾ ಸಾಮಾಜಿಕ ಉಪಭಾಷೆಯನ್ನೋ ಎಂದರೆ ಉತ್ತರ ಸ್ವಲ್ಪ ಕಠಿಣ. ಏಕೆಂದರೆ ಮೂಲತಃ ಸಾಮಾಜಿಕ ಮತ್ತು ಪ್ರಾದೇಶಿಕ ಉಪ ಭಾಷೆಯೆಂಬ ಪಾರಿಭಾಷಿಕ ಶಬ್ದಗಳಲ್ಲೇ ಗೊಂದಲವಿದೆ. ಧಾರವಾಡ ಕನ್ನಡ ಒಂದು ಪ್ರಧಾನ ಪ್ರಾದೇಶಿಕ ಉಪಭಾಷೆಯೆಂದರೆ ಆ ಪ್ರಭೇದದ ಒಳಗೆ ಮತ್ತೆ ಹಲವಾರು ಸಾಮಾಜಿಕ ಉಪಭಾಷೆಗಳನ್ನು ಗುರುತಿಸಬಹುದು. ಉದಾಹರಣೆಗೆ ಧಾರವಾಡದ ಲಿಂಗಾಯತ ಕನ್ನಡ, ಧಾರವಾಡದ ಬ್ರಾಹ್ಮಣ ಕನ್ನಡ, ಧಾರವಾಡದ ಹರಿಜನ ಕನ್ನಡ ಇತ್ಯಾದಿ. ಹೀಗೆಯೇ 'ಲಿಂಗಾಯತ ಕನ್ನಡ' ಎಂದು ಒಂದು ಪ್ರಧಾನ ಸಾಮಾಜಿಕ

ಉಪಭಾಷೆಯನ್ನು ತೆಗೆದುಕೊಂಡರೆ ಈ ಪ್ರಭೇದದ ಒಳಗೂ ಮೈಸೂರು ಲಿಂಗಾಯಂತ ಕನ್ನಡ, ಶಿವಮೊಗ್ಗ ಲಿಂಗಾಯತ ಕನ್ನಡ, ಧಾರವಾಡ ಲಿಂಗಾಯತ ಕನ್ನಡ, ಬೆಳಗಾವಿ ಲಿಂಗಾಯತ ಕನ್ನಡ ಎಂದು ಪ್ರಾದೇಶಿಕ ಭೇದಗಳನ್ನು ಗುರುತಿಸಬಹುದು.

ಇಲ್ಲಿ ಅಭ್ಯಾಸಕ್ಕೆ ತೆಗೆದುಕೊಂಡಿರುವ ಉಪಭಾಷೆಗಳಲ್ಲಿ ಕೂಡ ಕೆಲವು ಸಾಮಾಜಿಕ ಉಪಭಾಷೆಗಳು. ಹಲವು ಪ್ರಾದೇಶಿಕ ಉಪಭಾಷೆಗಳು. ಗೌಡ, ಹಾಲಕ್ಕಿ, ಹವ್ಯಕ ಕನ್ನಡಗಳು ನಿರ್ದಿಷ್ಟವಾಗಿ ಸಾಮಾಜಿಕ ಉಪಭಾಷೆಗಳು ಇವು ಮೂರೂ ಒಂದೇ ಪ್ರದೇಶದಲ್ಲಿ ಬಳಸಲ್ಪಡುವ ಮೂರು ಸಾಮಾಜಿಕ ಪ್ರಭೇದಗಳು. ಮಿಕ್ಕ ಉಪಭಾಷೆಗಳಿಂದ ತೀರ ಭಿನ್ನವಾದುವೂ ಆಗಿವೆ. ಜೊತೆಗೆ ಇವು ಮೂರೂ ಒಂದೇ ಪ್ರದೇಶದಲ್ಲಿ ಬಳಸಲ್ಪಟ್ಟರೂ ಭಿನ್ನತೆಯ ವಿಷಯದಲ್ಲಿ ಸಾಕಷ್ಟು ಅಂತರವನ್ನು ಕಾಯ್ದುಕೊಂಡಿವೆ (ಹವ್ಯಕ ಕನ್ನಡ, ಉತ್ತರ ಕನ್ನಡ ಜಿಲ್ಲೆಯ ಕುಮಟಾ, ಹೊನ್ನಾವರ, ಸಿರ್ಸಿ, ಸಿದ್ಧಾಪುರ ಮತ್ತು ಯಲ್ಲಾಪುರ ತಾಲೂಕುಗಳಲ್ಲಿಯೂ ಹಾಲಕ್ಕಿ ಕನ್ನಡವು ಕುಮಟ, ಹೊನ್ನಾವರ, ಕಾರವಾರ ಮತ್ತು ಅಂಕೋಲ ತಾಲೂಕುಗಳಲ್ಲಿಯೂ ಬಳಕೆಯಾಗುತ್ತಿದೆ. ಗೌಡ ಕನ್ನಡ ಪುತ್ತೂರು, ಸುಳ್ಯ ಮತ್ತು ಮಡಕೇರಿ ಪ್ರದೇಶಗಳಲ್ಲಿ ಬಳಕೆಯಲ್ಲಿದೆ).

ಉಳಿದ ಉಪಭಾಷೆಗಳು ಹೆಚ್ಚು ಕಡಿಮೆ ಆಯಾ ಪ್ರದೇಶವನ್ನು ಪ್ರತಿನಿಧಿಸುತ್ತವೆ. ಉದಾಹರಣೆಗೆ ಧಾರವಾಡ ಕನ್ನಡವೆಂದು ಇಲ್ಲಿ ಕರೆಯಲ್ಪಟ್ಟಿರುವ ಉಪಭಾಷೆಯ ಕ್ಷೇತ್ರವರದಿ, ಧಾರವಾಡದ ಲಿಂಗಾಯತರ ಭಾಷೆಯನ್ನೇ ಆಧರಿಸಿದೆ. ಆದರೂ ಇದು ತಕ್ಕಮಟ್ಟಿಗೆ (ಸಂಪೂರ್ಣವಾಗಿ ಅಲ್ಲ) ಧಾರವಾಡದ ಒಟ್ಟು ಭಾಷೆಯನ್ನು ಪ್ರತಿನಿಧಿಸುತ್ತದೆ. ಜೊತೆಗೆ ಆಯಾ ಪ್ರದೇಶದ ಸಾಮಾನ್ಯ ಉಪಭಾಷೆಗಳ (ಅಂದರೆ ಎಲ್ಲ ಸಾಮಾಜಿಕ ಪ್ರಭೇದಗಳನ್ನೊಳಗೊಂಡ) ಪರಿವೀಕ್ಷಣೆಯೇನೂ ನಡೆದಿಲ್ಲ.


ಉಪಲಬ್ಧವಿರುವ ಈ ವರದಿಗಳ ಆಧಾರದ ಮೇಲೆ ನಡೆಸಿದ ಪ್ರಸ್ತುತ ಅಭ್ಯಾಸದ ಸಹಾಯದಿಂದ ಉಪಭಾಷೆಗಳನ್ನು ಹೀಗೆ ಉಪವರ್ಗೀಕರಿಸಬಹುದು. ಮೂರು ಸಾಮಾಜಿಕ ಉಪಭಾಷೆಗಳೂ ಸ್ವತಂತ್ರವಾಗಿ ಉಳಿಯುತ್ತವೆ. ಉಳಿದವುಗಳನ್ನು ನಾಲ್ಕು ಗುಂಪಾಗಿ ವಿಂಗಡಿಸಬಹುದು. ಅವು :

(೧) ಮಧುರೈ ಕನ್ನಡ.

(೨) ಧಾರವಾಡ, ಗುಲ್ಬರ್ಗ, ವಿಜಾಪುರ ಕನ್ನಡ.

(೩) ನಂಜನಗೂಡು, ಕೊಡಗು, ಬಾರಕೂರು ಕನ್ನಡ.

(೪) ಮೈಸೂರು, ತುಮಕೂರು, ತಿಪಟೂರು ಕನ್ನಡ.



ದ. ಕ. ಭಾ. – ದಕ್ಷಿಣ ಕರ್ನಾಟಕದ ಉಪಭಾಷೆಗಳು

ಉ. ಕ. ಭಾ. – ಉತ್ತರ ಕರ್ನಾಟಕದ ಉಪಭಾಷೆಗಳು

ಹೊ. ಕ. ಭಾ. – ಹೊರನಾಡಕನ್ನಡ ಉಪಭಾಷೆ

ದ. ಗು. ೧ – ದಕ್ಷಿಣ ಗುಂಪು ೧

ದ. ಗು. ೨ – ದಕ್ಷಿಣ ಗುಂಪು ೨

ತೃತೀಯ ಪುರುಷ

	ೂತ			ವರ್ತಮಾನ					
	.ಬ.	ನ ಏ.	ನ.ಬ.	ಪು.ಏ.	ಸ್ತ್ರೀ.ಏ.	ಉ.ಬ.	ನ.ಏ.	ನ.ಬ.	
				–ಅನೆ	–ಆಳೆ	–ಅರೆ	–ಅದೆ	–ಅವೆ	–
೧ ಗ್ರಾಂಥಿಕ									
				–ಅ	–ಅದೆ	–ರು	–ಅದೆ	–ರು	–
				–ನ					–
೨ ಗೌಡ ಕನ									
೩ ಹಾಲಕ್ಕಿ	–	–ತು	–						
೪ ಹವ್ಯಕ ಕ									
	ರೆ	–ತೆ	–ಆವೆ						
೫ ತುಮಕೂ									
				–ಆನೆ	–ಆಳೆ	–ಆರೆ	–ತೆ	–ಆವೆ	–
೬ ತಿಪಟೂರ									–
೭ ಮೈಸೂರ್	ರೆ	–ತೆ	–ವೆ						
೮ ನಂಜನಗ	ರೆ	–ಅದೆ	–ಅವೆ						
				–ಅ	–ಲಿ	–ರಿ	–ತಿ	–ತೊ	–
೯ ಬಾರಕೂ									
	ರೆ	–ಆದೆ	–ಅವೆ						
೧೦ ಕೊಡಗು									
೧೧ ಧಾರವಾ	ರ	–ತ –ಅಯ್ತು	–ಆವು						
	ರ	–ತ	–ಆವು						
೧೨ ವಿಜಾಪುರ		–ಅಯ್ತು							
	ರ	–ಅದ	–ಅವ						
೧೩ ಗುಲ್ಬರ್ಗ									
				–ಆನ	–ಆಲ	–ಆರ	–ಆದ	–ಆದ	-
೧೪ ಮಧುರೈ									

ಭವಿಷತ್					ಭೂತ				
ಪು.ಏ.	ಸ್ತ್ರೀ.ಏ.	ಉ.ಬ.	ನ.ಏ.	ನ.ಬ.	ಪು.ಏ.	ಸ್ತ್ರೀ.ಏ.	ಉ.ಬ.	ನ ಏ.	ನ.ಬ.
-ಅನು	-ಅಳು	-ಅರು	-ಅದು	-ಅವು	-ಅನು	-ಅಳು	-ಅರು	-ಇತು	-ಅವು
-ಅ	-ದು	-ರು	-ದು	-ರು	-ಅ	-ತು	-ರು	-ತು	-ರು
-ನ					-ನ				
					-ಯು	-ಜ	-	-ಉ	-ಉ
					-ಅ	-ಅ		-ತು	
					-ಅ	-ಳು	-ರು	-ತು	-ವು
-ಅ	-ಳು	-ರು	-ಉದು	-ಅವು	-ಅ	-ಳು	-ರು	-ಉದು	-ಅವು
-ಅನು	-ಲು	-ಅರು	-ತು	-ಉ	-ಅನು	-ಲು	-ಅರು	-ತು	-ಉ
	-ಅಳು					-ಅಳು			
					-ಅ	-ಲು	-ರು	- +u	-ವು
						-ಳು			
					-ಅ	-ಅ	-ರು	-ತು	-ಒ
-ಅ	-ಲಿ	-ರಿ	-ಯು	-ವು	-ಅ	-ಲಿ	-ರಿ	-ತ್	-ದೊ
					-ಅ	-ಅ	-ಆರು	-ಆತು	-ಒ
								-ಉತು	
					-ಅ	-ಲು	-ರು	-ತು	-ವು
					-ಅ	-ಲು	-ರು	-ತು	-ವು
					-ಅ	-ಲು	-ರು	-ತು	-ವು
							-ಉರು		
-ಆನು	-ಆಲು	-ಆರು	-ಆದು	-ಆದು	-ಅ	-ಲು	-ರು	-ತಿ	-ತಿ
						-ಉ	-ಉರು	-ಉತಿ	-ಉತಿ

ಗ್ರಂಥಋಣ

1. Acharya, A. S. : *Halakki Kannada* Deccan College, Poona, 1967.
2. Acharya, A. S. : *Barkur Kannada* Deccan College, Poona, 1971.
3. Acharya, A. S : *Tiptur Kannada* Deccan College, Poona, 1971.
4. Bright, William : *An outline of Colloquial Kannada*, Poona, 1958.
5. Chandran : *The Phonology and Morphology of Madurai Kannada*, M. A. Thesis Annamalai University, A. Nagar, 1972.
6. Gai, G. S. : *Historical Grammar of Old Kannada*, (Based entirely on the Kannada inscription of the 8th, 9th and 10th Cent. A. D.) Deccan College, Poona, 1946.
7. Gowda, K. Kushalappa : *Descriptive Grammar of Vadda:ra:dhana* (unpublished M. Litt thesis), Annamalai University, A. Nagar, 1963.
8. Gowda, K. Kushalappa : *Gowda Kannada*, Annamalai University, A. Nagar, 1970.
9. Gowda, K. Kushalappa : *A Grammar of Kannada* (Based on the inscriptions of Coorg, South Kanara and North Kanara Dts. 1000 to 1400 A. D.) Annamalai University, A. Nagar, 1972.
10. Gowda, K. Kushalappa : Gender distinction in Gowda Kannada, *Studies in Linguistics.*
11. Halemane, Lingadevaru : *Tumkur Kannada*, M. A. thesis, Annamalai University, A. Nagar, 1973.
12. Hiremath, R. C. : *The Structure of Kannada*, Karnatak University, Dharwar, 1961.
13. Mahadevan, R. : *Gulbarga Kannada*, Deccan College, Poona, 1968.

14. Meenakshi Sundaram, T. P. : The History and development of gender in Dravidian Languages, *Papers on Linguistics and Literature*, Annamalai University, A. Nagar, 1965.

15. Ramachandra Rao, B. : *Descriptive Grammar of Pampabharata*, University of Mysore, Mysore, 1972.

16. Subrahmanyam, P. S. : *Dravidian verb Morphology*, Annamalai University, A. Nagar, 1971.

17. Shastry, K. G. : *The Havyaka dialect of North Kanara* Karnatak University, Dharwar, 1971.

18. Upadhyaya, U. P. : *Nanjangud Kannada*, Deccan College, Poona, 1968.

19. Upadhyaya, U. P. : *Coorg Kannada*, Deccan College, Poona, 1971.

20. William Maccarmech and Krishamurthy, M. G. : *Kannada a Cultural introduction to the Spoken Styles of the Language.*

೨೧. ಕುಲಕರ್ಣಿ, ಪ್ರ. ಗೋ. : ಕನ್ನಡ ಭಾಷೆಯ ಚರಿತ್ರೆ, ಬೆಳಗಾಂವ. ೧೯೬೭.

೨೨. ಕೇಶಿರಾಜ (ಸಂ. : ನರಸಿಂಹಾಚಾರ್) : ಶಬ್ದಮಣಿ ದರ್ಪಣಂ, ಮೈಸೂರು, ೧೯೬೮.

೨೩. ಗೌಡ, ಕೆ. ಕ಼ಶಾಲಪ್ಪ : ಕನ್ನಡದಲ್ಲಿ ವರ್ತಮಾನ ಕ್ರಿಯೆ, ಪ್ರಬುದ್ಧ ಕರ್ನಾಟಕ, ಸಂ. ೫೦, ಸಂಚಿಕೆ ೩. ಮೈಸೂರು, ೧೯೬೮.

೨೪. ರಾಮಸ್ವಾಮಿ, ಚಿ. : ಕನ್ನಡ ಭಾಷೆಯ ಅಧ್ಯಯನ, ಕರ್ನಾಟಕ ಭಾರತಿ, ಸಂ. ೭, ಸಂಚಿಕೆ ೧. ಧಾರವಾಡ, ೧೯೭೪.

೨೫. ಶ್ರೀಕಂಠಯ್ಯ, ಬಿ. ಎಮ್. : ಕನ್ನಡ ಕೈಪಿಡಿ, ಮೈಸೂರು, ೧೯೬೯.

೨೬. ಶ್ರೀಕಂಠಯ್ಯ, ತೀ. ನಂ : ಸಮಾಲೋಕನ, ಮೈಸೂರು, ೧೯೭೪.

೨೭. ಹಿರೇಮಠ, ಆರ್. ಸಿ. : ಧಾರವಾಡ, ವಿಜಾಪುರಗಳ ಕನ್ನಡ, ಸುವರ್ಣ ಸಂಚಯ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೬೭.

■ ■

* ಈ ಲೇಖನದ ಸಿದ್ಧತೆಯಲ್ಲಿ ಉಚಿತ ಸಲಹೆಗಳನ್ನು ನೀಡಿದ ಡಾ. ಕೆ. ಕುಶಾಲಪ್ಪಗೌಡ ಅವರಿಗೆ ಕೃತಜ್ಞತೆಗಳು.

ಬೆಕ್ಕಾಗಿ ಗೋಣ ಮುರದಾನ

(ಒಂದು ಜಾನಪದ ಗೀತ)

ಲೀಲಾವತಿ ತೋರಣಗಟ್ಟ

ಮದುವೆ ನಮ್ಮ ಸಂಪ್ರದಾಯದಂತೆ ಒಂದು ಪವಿತ್ರ ಬಂಧನ. ಹೀಗಿದ್ದರೂ ಕೆಲವೊಂದುಸಲ, ವಿಷಮ ದಾಂಪತ್ಯ ವಿರಸಕ್ಕೆಡೆಗೊಟ್ಟು, ಕೊನೆಗೆ ವಿಷವನ್ನೂಡಿದ ಪ್ರಸಂಗಗಳೆಷ್ಟೋ ಜಾನಪದಸಾಹಿತ್ಯದಲ್ಲಿ ಕಂಡುಬರುತ್ತವೆ. ಡಿ. ಕೆ. ರಾಜೇಂದ್ರರ "ನುಚ್ಚಾಯ್ತು ನೀರ ಹೊಳೆಯಾಗೆ" ಹಾಲಾಹಲ ನೀಡಿದ ಒಂದು ದುರಂತಗೀತೆ. ಹೆಣ್ಣೊಬ್ಬಳು ಮದುವೆಯಾದವಳು. ಅವಳ ಕೊರಳಲ್ಲಿಯ ಕರಿಮಣಿ ಅವಳಿಗೆ ಬಂಧನ. ಕರಿಮಣಿ ಕಟ್ಟಿದ ಹೆಣ್ಣಿನೆಡೆಗೆ ಕೆಟ್ಟ ದೃಷ್ಟಿ ಬೀರುವುದೊಂದೆಡೆ ಇರಲಿ, ಕಣ್ಣೆತ್ತಿ ನೋಡುವವೂ ದುಸ್ತರ. ಹೀಗಿರುವಾಗ, ಪ್ರೇಮಿಯೊಬ್ಬ ಅದನ್ನು ಲೆಕ್ಕಿಸದೆ ಅವಳನ್ನು ಪ್ರೀತಿಸುತ್ತಾನೆ. ಇದೆಂಥ ಪ್ರೇಮ! ಕಾಮದ ಅತಿರೇಕವೆನ್ನಬಹುದು. ಇಲ್ಲಿ ಅದೇ ಮಾನವಸಹಜ ಶುದ್ಧಪ್ರೇಮ. ಅದನ್ನು ಬಾಹ್ಯಬಂಧನಗಳಾವವೂ ತಡೆಯವು.

ಕನ್ನಡಸಾಹಿತ್ಯದ ವೈಲಕ್ಷಣಗಳನ್ನು ಹೇಳುತ್ತ ಇ. ಪಿ. ರೈಸ್ ಅವರು "ಭಾರತೀಯ ಸಾಹಿತ್ಯದಲ್ಲಿ ಶುದ್ಧವಾದ ಮಾನವಪ್ರೇಮದಕಾವ್ಯ (The poetry of pure human love) ಕಾಣುವುದಿಲ್ಲ ಎಂದು ಒತ್ತಿ ಹೇಳಿದ್ದಾರೆ. ಕನ್ನಡ ಸಾಹಿತ್ಯದಲ್ಲಿ ಕೂಡ, ಶುದ್ಧವಾದ ಮಾನವಪ್ರೇಮದಕಾವ್ಯ (The poetry of pure human love) ವನ್ನು ಕಾಣಬಹುದಾಗಿದೆ. ಅದಕ್ಕೆ ಉದಾಹರಣೆ: ''ನುಚ್ಚಾಯ್ತು ನೀರ ಹೊಳೆಯಾಗೆ" ಅದು ಪ್ರೇಮ, ಪ್ರಣಯ ಪರಾಕಾಷ್ಠದಿಂದೊದಗಿದ ದುರಂತಗೀತವಾದರೆ, ವಿಷಮದಾಂಪತ್ಯದ ವಿರಸದಿಂದೊದಗಿದ ದುಃಖಾಂತ ಗೀತವಾಗಿದೆ, ''ಬೆಕ್ಕಾಗಿ ಗೋಣ ಮುರದಾನ'' ಎಂಬುದು.

ಈ ಕಥನಕವನ, ಸಂಕೇತಗಳಿಂದ ಆರಂಭವಾಗಿ ಸಂಕೇತದಲ್ಲೇ ಮುಕ್ತಾಯವಾದದ್ದೊಂದು ಹೊಸರೀತಿ.

ಕರ್‍ರಿಯ ಸೀರಿಯನುಟ್ಟು ಕರ್‍ರಿಯ ನೀರ್‍ರಿಗಿ ಬಾಲಿ
ತೆರವಾಯಿ ಗಂಡಾ ಇದರಂಗೆವ್ವಾ । ಕೋ । ಕೋ ।

ಇದ್ದೂರ ಬೀಗತನ ಮಾಡಬಾರದೆಂದು ಹಿರಿಯರು ಹೇಳುತ್ತಲೇ ಬಂದಿದ್ದಾರೆ. ಹೀಗಿದ್ದರೂ ಅದರ ಅನುಭವ ಸಾಕಷ್ಟಿದ್ದರೂ ಮತ್ತೂ ನಮ್ಮ ಜನ ಇದ್ದೂರ ಬೀಗತನ ಮಾಡುತ್ತಲೇ ಬಂದಿದ್ದಾರಲ್ಲದೆ, ಅದರ ದುಷ್ಪರಿಣಾಮವನ್ನು ಅನುಭವಿಸುತ್ತಲೂ ಬಂದಿದ್ದಾರೆ.

'ಕರ್‍ರಿಯಯ ಸೀರ್‍ರಿಯನುಟ್ಟು
ಕೆರ್‍ರಿಯಯ ನೀರ್‍ರಿಗಿ ಬಾಲಿ'

ಈ ಹಾಡಿನುದ್ದಕ್ಕೂ ಅವಳೆಂಥವಳು ಎಂಬ ಅಭಿವ್ಯಕ್ತಿ ಎಲ್ಲೂ ಇಲ್ಲ. 'ಕರಿಯ ಸೀರಿಯನುಟ್ಟು' ಎಂಬ ಒಂದೇ ಒಂದು ಶಬ್ದದಲ್ಲಿ ಅವಳ ವ್ಯಕ್ತಿತ್ವವನ್ನು ಸೂಚ್ಯವಾಗಿ ಹೇಳಿದೆ. ಆ ಒಂದು ಶಬ್ದದಲ್ಲಿಯೇ ಅರ್ಥೈಸಿಕೊಳ್ಳಬೇಕು. ಕರಿಯಸೀರಿ, ಚಂದ್ರಕಾಳಿ ಸೀರಿ ಎಂದು ಜನಸಾಮಾನ್ಯರಲ್ಲಿ ಪ್ರಸಿದ್ಧಿ ಪಡೆದದ್ದು. ಚಂದ್ರಕಾಳಿ ಸೀರಿಯೆಂದರೆ ರಸಿಕತೆಯ ಲಕ್ಷಣ. ಕರಿಯಸೀರಿಯನುಟ್ಟ ಬಾಲಿ, ರಸಿಕ ಹುಡುಗಿ ಎಂಬ ಅರ್ಥ ಸ್ಪಷ್ಟ.

ಆ ರಸಿಕ ಹುಡುಗಿ ಲಕ್ಷಣವಾಗಿ ಸಂಜೆಹೊತ್ತು ಕೆರಿಯ ನೀರಿಗೆ ಬಂದಿದ್ದಾಳೆ. "ತೆರವಾಯಿ ಗಂಡಾ ಇದರಿಗೆವ್ವಾ" ಈ ಒಂದೇ ಒಂದು ಶಬ್ದದಲ್ಲಿ ಅವಳ ಗಂಡ ಎಂಥವ, ಅವರ ದಾಂಪತ್ಯಜೀವನವೆಂಥದು ಎಂಬ ಪ್ರಶ್ನೆಗೆ ಉತ್ತರವಿದೆ. 'ರಸಿಕ ಹುಡುಗಿ', 'ತೆರವಾಯಿ ಗಂಡಾ' ಮುಗಿಯಿತು, ಇದೇ ಅವರ ವಿಷಮದಾಂಪತ್ಯ. ಅದೇ ಅವರ ವಿರಸಕ್ಕೆ ಕಾರಣ. ಇವೆರಡು ಉಕ್ತಿಗಳ ಹೊರತಾಗಿ ಅವರ ವಿಷಯವಾಗಿ ಎಲ್ಲೆಲ್ಲೂ ಯಾವ ವಿವರಣೆಯೂ ಇಲ್ಲ. ಈ ಜಾನಪದಗೀತಗಳು ಕನ್ನಡದಲ್ಲಿ ಆಯ್ದ ಆಣಿಮುತ್ತುಗಳೆಂದು ಅಭಿಮಾನದಿಂದ ಹೇಳಬೇಕೆನಿಸುತ್ತದೆ. ಅವಳು ಅಂಥವಳು, ಅವನು ಇಂಥವನು, ಅವರ ಕಥೆ ಹೀಗೆ, ಇದಕ್ಕೆ ವಿಷಮತೆ, ಇದೇ ವಿರಸಕ್ಕೆ ಕಾರಣ ಎಂದು ಪುಟಪುಟಗಳಷ್ಟು ವಿವರಣೆ ನೀಡಿ ಇಲ್ಲದ 'ಪಲ್ಯಾಳ' ಮಾಡದೆ, ಎರಡೇ ಎರಡು ಮಾತುಗಳಲ್ಲಿ ಇದೇ ಕಥನಕವನದ ಜೀವಾಳವನ್ನೇ ಬರೆದಿರುವಾಗ ಜಾನಪದಕಾವ್ಯ ಯಾವ ಕಾವ್ಯಕ್ಕೂ ಕಡಿಮೆಯಿಲ್ಲವೆಂದು ಒಂದೊಂದು ಸಲ ವಿಚಾರಿಸಬೇಕೆನಿಸುತ್ತದೆ.

'ತೆರವಾಯಿ' ಎಂದರೆ ತೆರೆದ ಬಾಯಿ ಮುಚ್ಚದೇ ಇರುವ ಅರಬ, ಮಳ್ಳ, ತೆರೆದ ಬಾಯಿ ಮುಚ್ಚಿಕೊಳ್ಳುವಷ್ಟು ಪ್ರಜ್ಞೆಯಿಲ್ಲದವ, ತಿಳುವಳಿಕೆ ಇಲ್ಲದವ ಎಂದು ಅರ್ಥ.

ತೆರವಾಯಿ ಗಂಡಾ ಇದರಿಗಿ ಬರುವಾಗ
ಚಿಗರ್‍ಯಾಗಿ ಜಿಗತಾ ಜಿಗದಾಳಂತವ್ವ । ಕೋ । ಕೋ ।

ಆಯಿತು, ಮಳ್ಳ ಗಂಡ ಎದುರಿಗೆ ಬಂದೊಡನೆ ಅವನ ಸಾಮಿಪ್ಯವನ್ನು ಸಹಿಸದೆ ಚಿಗರಿಯಂತೆ ಜಿಗಿಯುತ್ತಾಳಂತೆ. ಎಂಥಾ ಮಳ್ಳನಿದ್ದರೂ ಪ್ರಕೃತಿಸಹಜ ಬಯಕೆ

ಯಿರುವದು ಸಹಜವಲ್ಲವೇ ! ಹೀಗೆ ಎಷ್ಟೋ ಸಲ ಅವನು ಅವಳನ್ನು ಬಯಸಿದ್ದು, ಅವಳು ಅದನ್ನು ನಿರಾಕರಿಸಿದ್ದೂ ಇರಬೇಕು. ಅವರಿಬ್ಬರೂ ಒಂದೇ ಊರಿನವರು, ಅವರನ್ನು ಒಟ್ಟುಗೂಡಿಸಲು ಹಿರಿಯರು ಪ್ರಯತ್ನಿಸಿರಬೇಕು, ಅವಳು ನಿರಾಕರಿಸಿರಬೇಕು, ಗಂಡು, ಸಹಜ ಬಯಕೆ ಹೆಡೆಯೆತ್ತಿ ಭುಸುಗುಡುತ್ತಿರಬೇಕು ಎಂದು ತರ್ಕಿಸಿದ್ದು.

ಬಯಕೆ ಬುಸುಗುಡುತ್ತಿರುವಾಗ ಅವನನ್ನು ನಿರ್ಲಕ್ಷಿಸಿ ಅವಳು ಚಿಗರಿಯಂತೆ ಜಿಗಿದದ್ದು, ಅವನ ಗಂಡಸುತನಕ್ಕೆ ಅವಮಾನವಲ್ಲವೇ ? ಬಹಳ ದಿವಸಗಳಿಂದ ತಡೆಹಿಡಿದ ಅವನ ತಾಳ್ಮೆ, ಇಂದು ಸೀಮೆ ಮೀರಿದೆ. ಗಂಡಸು ಸಹಜ ಅಭಿಮಾನ, ಯಾವದಾದರೂ ಒಂದು ಇತ್ಯರ್ಥ ಆಗಲೇಬೇಕೆಂದು ನಿರ್ಧರಿಸಿ, ಇಂದು ತನ್ನದಾದರೂ ಆಗಬೇಕು ಇಲ್ಲವೆ ಅವಳದಾದರೂ ಆಗಬೇಕೆಂದು

ಚಿಗರ್‍ಯಾಗಿ ಜಿಗತಾ ಜಿಗ್ಯೂದರಾಗs
ನಾಯಾಗಿ ಬೆನ್ನ ಹತ್ತಿದನಂತವ್ವ । ಕೋ । ಕೋ ।

ಹುಡುಗಿ ಜಿಂಕೆಯಂತೆ ನೆಗೆಯುವುದರಲ್ಲಿ, ಬೇಟೆಗಾಗಿ ಹಸಿದ ನಾಯಿಯಂತೆ ಬೆನ್ನು ಹತ್ತುತ್ತಾನಂತೆ.

ನಾಯಾಗಿ ಬೆನ್ನ ಹತ್ತೂದರಾಗs
ಪಾರಿವಾಳ ಮರಿಯಾಗಿ ಹಾರಿದಳಂತವ್ವ । ಕೋ । ಕೋ ।

ಬೇಟೆಯ ನಾಯಿಯಂತೆ ಬೆನ್ನಟ್ಟಿರುವಾಗ ಅವಳು ಪಾರಿವಾಳ ಮರಿಯಂತೆ ಹಾರಿ ಹೋದಳಂತೆ.

ಪಾರಿವಾಳ ಮರಿಯಾಗಿ ಹಾರುದರಾಗs
ಗಿಡಗನ ಮರಿಯಾಗಿ ಎರಗಿದನಂತವ್ವs । ಕೋ । ಕೋ ।

ಬೇಟೆ ತಪ್ಪಿಸಿ ಪಾರಿವಾಳ ಮರಿಯಂತೆ ಎತ್ತರಕ್ಕೆ ಹಾರಿದ ಅವಳನ್ನು ಹೇಗಾದರೂ ಸರಿ, ಹಿಡಿದೇ ಹಿಡಿಯಬೇಕೆಂದು ಗಿಡುಗನ ಮರಿಯಂತೆ ಮೇಲೆರಗಿದನಂತೆ.

ಗಿಡಗನ ಮರಿಯಾಗಿ ಎರಗುದರಾಗ
ಮೋಡು ಮುಗಿಲಾಗಿ ನಿಂತಾಳಂತವ್ವ । ಕೋ । ಕೋ ।

ಗಿಡಗನ ಕೈಯಿಂದ ತಪ್ಪಿಸಿಕೊಂಡ ಪಾರಿವಾಳ ಬೇಗ ಮೋಡ ಮುಗಿಲಿನಂತೆ ಮರೆಯಾಗ ಬಯಸಿತಂತೆ.

ಮೋಡು ಮುಗಲಾಗಿ ನಿಂದರುದರಾಗs
ಮಿಂಚುಟ್ಟಿ ಸಿಡಿಲ ಬಡದಾನಂತವ್ವ । ಕೋ । ಕೋ ।

ಪೋಡ ಮುಗಿಲಿನಂತೆ ಮರೆಯಾಗ ಬಯಸಿದವಳನ್ನು, ಮಿಂಚಿನ ವೇಗದಿಂದ ಬಂದು ಸಿಟ್ಟಿನ ಸಿಡಿಲಾಗಿ ಜಡಿದನಂತೆ, ಅತಿಕೋಪ ಕೊನೆಗೆ ಹೊಡೆತವಾಗಿ ಪರಿಣಮಿಸಬೇಕು.

ಮಿಂಚುಟ್ಟಿ ಸಿಡಿಲ ಜಡೆಯುದರಾಗs
ಸಾತಿ ಮಳೆಯಾಗಿ ಸುರದಾಳಂತವ್ವ । ಕೋ । ಕೋ ।

ಸಿಟ್ಟಿನ ಸಿಡಿಲಾಗಿ ಜಡಿಯುತ್ತಿರುವಾಗ ಹೆಣ್ಣು ಆ ಪೌರುಷದೆದುರು ಮೆತ್ತಗಾಗುವದೊಂದೇ ದಾರಿ. ಸಿರಿ ಸ್ವಾತಿ ಮಳೆಯಂತೆ ಕಣ್ಣೀರು ಸುರಿಸುತ್ತಾಳಂತೆ.

ಸಾತಿ ಮಳೆಯಾಗಿ ಸುರಿಯುದರಾಗ
ವಡ್ಡು, ವಡಬ್ಲಾಗಿ ತರಬ್ಯಾನಂತವ್ವ । ಕೋ । ಕೋ ।

ಕಾಠಿಣ್ಯ ಸ್ವಲ್ಪ ಕಡಿಮೆಯಾಗಿ ವರ್ಷಾಧಾರೆಯನ್ನು 'ವಡ್ಡು ವಡಬ್ಲಾಗಿ' ವಡ್ಡು ಬಾಂದುಗಳಾಗಿ ತರುಬಲು, ಬಂಧಿಸಲು ಪ್ರಯತ್ನಿಸಿದನಂತೆ.

ವಡ್ಡು ವಡುಬ್ಲಾಗಿ ತರಬುದರಾಗ
ಮೀನಾ ಮುಸಳ್ಯಾಗಿ ಹರದಾಳಂತವ್ವ । ಕೋ । ಕೋ ।

ಬಂಧಿಯಾಗಿದ್ದರೆ ಮುಗಿಯುತ್ತಿತ್ತು, ಕಥೆಯು ಕವನ ಸುಖಾಂತವಾಗುತ್ತಿತ್ತು. ಆದರೆ ಆ ಹೆಣ್ಣು ಸಿಗದೆ ನುಣಚಿಕೊಳ್ಳಬೇಕೆನ್ನುವವಳು. ಅವನದು ಪಡೆದೇ ತೀರಬೇಕೆಂಬ ಜಿದ್ದು, ಅವಳದು ಜಾರಿಕೊಳ್ಳಲೇಬೇಕೆಂಬ ಯತ್ನ. ಬಂಧಿಯಾಗದೇ ಮೀನ ಮೊಸಳೆಗಳಂತೆ ನುಣಚಿಕೊಳ್ಳುತ್ತಾಳಂತೆ.

ಮೀನಾ ಮುಸಳ್ಯಾಗಿ ಹರಿಯುದರಾಗs
ಜಾಲ್ಗಾರಾಗಿ ಜಾಲಾ ಒಗದಾನಂತವ್ವ । ಕೋ । ಕೋ ।

ಮೀನ ಮೊಸಳೆಯಂತೆ ಜಾರಿಕೊಳ್ಳಬಯಸಿದವಳನ್ನು ಯಾವದಾದರೂ ಜಾಲ ಬೀಸಿ ಹಿಡಿಯಬೇಕೆಂದು ಜಾಲಗಾರನಾಗಿ ಜಾಲಾ ಬೀಸುತ್ತಾನಂತೆ.

ಜಾಲ್ಗಾರಾಗಿ ಜಾಲಾ ಬೀಸುದರಾಗs
ಬೆಳಗಿನ ಕೋಳ್ಯಾಗಿ ಕೂಗ್ಯಾಳಂತವ್ವ । ಕೋ । ಕೋ ।

ಜಾಲಗಾರನಂತೆ ಬಲೆ ಬೀಸುವುದರಲ್ಲಿ ಇನ್ನೇನು ಬೆಳಗಾಯಿತು, ಪಾರಾದೆನೆಂದು ಉತ್ಸಾಹಗೊಂಡು ಬೆಳಗಿನ ಕೋಳಿಯಂತೆ ಕೂಗಿದಳಂತೆ.

ಬೆಳಗಿನ ಕೋಳ್ಯಾಗಿ ಕೂಗುದರಾಗs
ಬೆಕ್ಕಾಗಿ ಗೋಣ ಮುರದನಂತವ್ವ । ಕೋ । ಕೋ ।

ಸಂಜೆ ಮಬ್ಬಿನಲ್ಲಿ ಆರಂಭವಾದ ಅವರ ಕಾಳಗ ಬೆಳಗಿನೊಂದಿಗೆ ಅವಸಾನ ಮುಗಿಯಿತೆಂದು ಕೊಬ್ಬಿ ಕೋಳಿಯಂತೆ ಕೂಗುವದರಲ್ಲಿ ಕೆರಳಿದ ಪೌರುಷ 'ಬೆಕ್ಕಾಗಿ ಗೋಣ' ಮುರಿಯಿತಂತೆ.

ಈ ರೀತಿ ವಿರಸ ದುಃಖಾಂತವಾಗಿ ಪರಿಣಮಿಸುತ್ತದೆ. ಚಿಗರಿ–ನಾಯಿ, ಪಾರಿವಾಳ – ಗಿಡಗ, ಮೀನು, ಮೊಸಳೆ – ಜಾಲ ಇವೆಲ್ಲ ಒಂದಕ್ಕೊಂದು ಶತ್ರುಗಳು. ಆ ವಿರೋಧ ಮುಂಬರುವ ದುಃಖಾಂತವನ್ನು ಹೆಜ್ಜೆ ಹೆಜ್ಜೆಗೂ ಪ್ರಖರಗೊಳಿಸುತ್ತದೆ. ಕೊನೆಗೆ ಬಳಸಿದ

ಬೆಳಗಿನ ಕೋಳ್ಯಾಗಿ ಕೂಗುದರಾಗs
ಬೆಕ್ಕಾಗಿ ಗೋಣ ಮುರದಾನಂತವ್ವ । ಕೋ । ಕೋ ।

ಎಂಬುದಂತೂ ದುಃಖಾಂತವನ್ನು ಸ್ಪಷ್ಟಗೊಳಿಸುತ್ತದೆ. ನಮ್ಮ ಜಾನಪದಸಾಹಿತ್ಯದಲ್ಲಿ 'ನುಚ್ಚಾಯ್ತು ನೀರ ಹೋಳಿಯಾಗೆ' ಶುದ್ಧ ಪ್ರೇಮಕ್ಕೆ ಉದಾಹರಣೆಯಾಗಿ ನಿಂತರೆ, ಬೇಡವಾದರೆ ವಿರಸಕ್ಕೆಡೆಗೊಟ್ಟರೆ ಯಾವ ನಿಯಮ – ನಿಬಂಧಗಳನ್ನು ಲೆಕ್ಕಿಸದೆ ಮದುವೆ ದಾಂಪತ್ಯವೆಂಬುದೇ ನೀಣಾಗುವದೆಂಬುದಕ್ಕೆ 'ಬೆಕ್ಕಾಗಿ ಗೋಣ ಮುರದಾನ' ಎಂಬ ದುಃಖಾಂತ ಗೀತೆಯು, ಉದಾಹರಣೆಯಾಗಿದೆ. ಅದು ಹೀಗಿದೆ :

ಕರಿsಯ ಸೀರಿಯನುಟ್ಟು ಕೆರಿಯ ನೀರಿsಗಿ ಬಾಲಿ
ತೆರವಾಯಿ ಗಂಡಾ ಇದರಿಗೆವ್ವಾ । ಕೋ । ಕೋ ।

ತೆರವಾಯಿ ಗಂಡಾ ಇದರಿಗಿ ಬರುವಾಗ
ಚಿಗರ್ಯಾಗಿ ಜಿಗಿತಾ ಜಿಗದಾಳಂತವ್ವ । ಕೋ । ಕೋ ।

ಚಿಗರ್ಯಾಗಿ ಜಿಗತಾ ಜಿಗ್ಯಾದರಾಗs
ನಾಯಾಗಿ ಬೆನ್ನ ಹತ್ತಿದನಂತವ್ವ । ಕೋ । ಕೋ ।

ನಾಯಾಗಿ ಬೆನ್ನ ಹತ್ತ್ಯಾದರಾಗs
ಪಾರಿವಾಳ ಮರಿಯಾಗಿ ಹಾರಿದಳಂತವ್ವ । ಕೋ । ಕೋ ।

ಪಾರಿವಾಳ ಮರಿಯಾಗಿ ಹಾರುದರಾಗs
ಗಿಡಗನ ಮರಿಯಾಗಿ ಎರಗಿದನಂತವ್ವ । ಕೋ । ಕೋ ।

ಗಿಡಗನ ಮರಿಯಾಗಿ ಎರಗೂದರಾಗs
ಮಾಡು ಮುಗಿಲಾಗಿ ನಿಂತಾಳಂತವ್ವ । ಕೋ । ಕೋ ।

ಮಾಡು ಮುಗಿಲಾಗಿ ನಿಂದರುದರಾಗs
ಮಿಂಚ್ಹುಟ್ಟಿ ಸಿಡಿಲ ಜಡದಾನಂತವ್ವ । ಕೋ । ಕೋ ।

ಮಿಂಚ್ಹುಟ್ಟಿ ಸಿಡಿಲ ಜಡಿಯೂದರಾಗs
ಸಾತಿ ಮಳಿಯಾಗಿ ಸುರದಾಳಂತವ್ವ । ಕೋ । ಕೋ ।

ಸಾತಿ ಮಳಿಯಾಗಿ ಸುರಿಯುದರಾಗs
ವಡ್ಡು ವಡಬ್ಲಾಗಿ ತರಬ್ಯಾನಂತವ್ವ । ಕೋ । ಕೋ ।

ವಡ್ಡು ವಡಬ್ಲಾಗಿ ತರಬುದರಾಗs
ಮೀನಾ ಮಸಳ್ಯಾಗಿ ಹರದಾಳಂತವ್ವ । ಕೋ । ಕೋ ।

ಮೀನಾ ಮಸಳ್ಯಾಗಿ ಹರಿಯುದರಾಗs
ಜಾಲ್ಗಾರಾಗಿ ಜಾಲಾ ಒಗದಾನಂತವ್ವ । ಕೋ । ಕೋ ।

ಜಾಲ್ಗಾರಾಗಿ ಜಾಲಾ ಒಗ್ಯಾದರಾಗs
ಬೆಳಗಿನ ಕೋಳ್ಯಾಗಿ ಕೂಗಿದಳಂತವ್ವ । ಕೋ । ಕೋ ।

ಬೆಳಗಿನ ಕೋಳ್ಯಾಗಿ ಕೂಗುದರಾಗs
ಬೆಕ್ಕಾಗಿ ಗೋಣ ಮುರದಾನಂತವ್ವ । ಕೋ । ಕೋ ।

■ ■

ಮೂರನೆಯ ಮಂಗರಸನ ಕಾಲವಿಚಾರ

ಬಿ. ಬಿ. ಮಹೀಶವಾಡಿ

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಮಂಗರಸ ಅಥವಾ ಮಂಗರಾಜ ಎಂಬ ಹೆಸರಿನ ಮೂವರು ಕವಿಗಳಿದ್ದಾರೆಂದು ಕವಿಚರಿತೆಕಾರರಾದ ಆರ್. ನರಸಿಂಹಾಚಾರ್ಯರು ಹೇಳಿದುದುಂಟು. **ಮೊದಲನೆಯವನು** ಖಗೇಂದ್ರಮಣಿದರ್ಪಣವನ್ನು ಬರೆದ ಮಂಗರಾಜ (ಸು. ೧೩೬೦). **ಎರಡನೆಯವನು** ಅಭಿನವನಿಘಂಟು ಅಥವಾ ಮಂಗಾಭಿಧಾನವನ್ನು ಬರೆದ ಅಭಿನವ ಮಂಗರಾಜ (೧೩೯೮). **ಮೂರನೆಯವನು** ಜಯನೃಪಕಾವ್ಯ, ಪ್ರಭಂಜನ ಚರಿತೆ, ಶ್ರೀಪಾಲಚರಿತೆ, ನೇಮಿಜಿನೇಶಸಂಗತಿ, ಸಮ್ಯಕ್ತ್ವಕೌಮುದಿ, ಸೂಪಶಾಸ್ತ್ರ ಮುಂತಾದ **ಆರು** ಗ್ರಂಥಗಳನ್ನು ಬರೆದ ಮಂಗರಸ (III) — (೧೫೦೮)[೧]. ಇವರಲ್ಲಿ ಮೊದಲನೆಯವನ ಕಾಲ ಮಾತ್ರ **ಸುಮಾರು ೧೩೬೦** ಎಂದಿದೆ. ಉಳಿದಿಬ್ಬರ ಕಾಲವನ್ನು ಕವಿಗಳ ನಿಶ್ಚಿತ ಹೇಳಿಕೆಗಳ ಮೇಲಿಂದಲೇ ನಿರ್ಧರಿಸಲಾಗಿದೆ.

ಮೂರನೆಯ ಮಂಗರಸನ ಆರು ಕಾವ್ಯಗಳಲ್ಲಿ ಕೇವಲ ಸಮ್ಯಕ್ತ್ವಕೌಮುದಿಯಲ್ಲಿ ಮಾತ್ರ ಕಾಲಸೂಚಕ ಪದ್ಯವಿದೆ. ಈ ಸಮ್ಯಕ್ತ್ವಕೌಮುದಿಯನ್ನು ಪ್ರಥಮಸಲ ೧೯೨೩ರಲ್ಲಿ ಪ್ರಕಟಿಸಲಾಗಿದೆ.[೨] ಅದರಲ್ಲಿ ಕಾಲಸೂಚಕ ಪದ್ಯ ಹೀಗಿದೆ :

ಸಾಸಿರದ ಮೇಲೆ ನಾನೂರ ಮೂವತ್ತೊಂದು
ಭಾಸುರಂಬಡೆದ ಶಕವರ್ಷದೆಸೆವಾಶ್ವಯುಜ
ಮಾಸದಾ ಶುಕ್ಲಪಕ್ಷದ ಪಾಡ್ಯಮುಂಮಂದವಾರದೊಳಗೀಕೃತಿಯನು
ಈ ಸಂಸೃತಿಶ್ರಾಂತವಿಶ್ರಾಂತಮಂ ಮಾಡು
ವಾಸೆಯಿಂದಲೆ ಸಮಾಪ್ತಂಗೆಯ್ದು ನಿಂತಿದನು
ದಾಷೀನೆಪಂ ಮಾಡದೇ ಭವ್ಯಸಮಿತಿಸಂತೋಷದೊಳು ಲಾಲಿಸುವುದು.

(೧೨ : ೪೭)

–ಸಾಸಿರದ ಮೇಲೆ ನಾನೂರ ಮೂವತ್ತೊಂದು (೧೪೩೧) ಶಕವರ್ಷದಲಿ ಆಶ್ವಯುಜ ಮಾಸದ ಶುದ್ಧ ಪ್ರತಿಪದೆಯಂದು ಶನಿವಾರ (ಮಂದವಾರ) ದಿವಸ ಕೃತಿ ಮುಗಿದಿದೆ,

೧. ಆರ್. ನರಸಿಂಹಾಚಾರ್ಯ : ಕರ್ನಾಟಕ ಕವಿಚರಿತೆ I (೧೯೬೧) ಪು. ೪೭೧.
೨. ಆರ್. ತಾತಾಚಾರ್ಯ (ಸಂ): ಸಮ್ಯಕ್ತ್ವಕೌಮುದಿ (೧೯೨೩) ಪು. ೧೫೨.

ಎಂಬುದು ಮೇಲಿನ ಪದ್ಯದಿಂದ ಸ್ಪಷ್ಟವಾಗುವುದು. ಶಕ ೧೪೩೧+೭೮=೧೫೦೯ ಕ್ರಿಸ್ತ ವರ್ಷವಾಗುತ್ತದೆ. ಜಂತ್ರಿಯ ಪ್ರಕಾರ ತಿಥಿವಾರಾದಿಗಳನ್ನು ಗಣಿಸುವಾಗ ಒಂದು ವರ್ಷ ಹೆಚ್ಚುಕಡಿಮೆಯಾಗಬಹುದು. ಕ್ರಿ. ಶ. ೧೫೦೮ ಮಂಗರಸ (III) ನ ಕಾಲವೆಂದು ಕವಿಚರಿತೆಕಾರರು ಹೇಳಿದುದನ್ನು ಸಾಮಾನ್ಯವಾಗಿ ಇಂದಿನವರೆಗೂ ಎಲ್ಲ ವಿದ್ವಾಂಸರು ಸ್ವೀಕರಿಸಿದುದರಿಂದ ಮಂಗರಸ III ಕವಿಯ ಕಾಲದ ಬಗ್ಗೆ ಸಮಸ್ಯೆ ಇರಲಿಲ್ಲ. ಹಂಪನಾಗರಾಜಯ್ಯನವರು ಮಾತ್ರ ಜಯನೃಪ ಕಾವ್ಯಸಂಗ್ರಹ (೧೯೬೭) ಸಂಪಾದಿಸಿ ಪ್ರಕಟಿಸಿದಾಗ ಪೀಠಿಕೆಯಲ್ಲಿ ಈ ವಿಷಯದ ಬಗ್ಗೆ ಬರೆಯುತ್ತ ತಮ್ಮ ಬಳಿಯಲ್ಲಿರುವ ಸಮ್ಯಕ್ತ್ವಕೌಮುದಿಯ ಓಲೆಗರಿ ಗ್ರಂಥದ ಕಾಲಸೂಚಕ ಪದ್ಯದ ಭಾಗವನ್ನು ಅಡಿಟಿಪ್ಪಣಿಯಲ್ಲಿ ಉಲ್ಲೇಖಿಸಿದ್ದಾರೆ :

'ಸಾಸಿರದಮೇಲೆ ಮುಂನೂರ ಮೂವತ್ತೊಂದು
ಭಾಸುರಂಬಡೆದ ಶಕವರುಷವೆಸೆವಾಶ್ವೀಜ
ಮಾಸದತಿ ಶುಕ್ಲಪಕ್ಷದ...ಕೃತಿಯನೂ'[೩]

'ಈ ಪಾಠಾಂತರ ಸರಿಯೆ ಎಂಬ ವಿಷಯದಲ್ಲಿ ಅನುಮಾನವಿದೆ. ಇದು ಸರಿಯಾಗಿದ್ದಲ್ಲಿ ಈ ಮೂರನೆಯ ಮಂಗರಸನಕಾಲ ಒಂದುನೂರುವರ್ಷ ಹಿಂದೆ ಹೋಗುತ್ತದೆ'[೪] — ಎಂದು ಹಂಪನಾಗರಾಜಯ್ಯನವರು ತಮ್ಮ ಅಭಿಪ್ರಾಯವನ್ನು ಅನುಮಾನಿಸುತ್ತ ಪ್ರಕಟಿಸಿದ್ದಾರೆ. ಆಮೇಲೆ ಹಂಪನಾಗರಾಜಯ್ಯನವರಾಗಲಿ, ಉಳಿದ ಯಾವ ವಿದ್ವಾಂಸರಾಗಲಿ ಈ ವಿಷಯವನ್ನು ಎತ್ತಲಿಲ್ಲ.

ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದ ಹಸ್ತಪ್ರತಿ ಸಂಗ್ರಹದ ಸಮ್ಯಕ್ತ್ವಕೌಮುದಿಯ ಓಲೆಗರಿ ಗ್ರಂಥವೊಂದರಲ್ಲಿ ಕಾಲಸೂಚಕ ಪದ್ಯದ ಪೂರ್ತಿಪಾಠ ಹೀಗಿದೆ : (ಕ. ವಿ. ವಿ. ಪ್ರಕಟನೆ ಸಮ್ಯಕ್ತ್ವಕೌಮುದಿ)[೫]

ಸಾಸಿರದಮೇಲೆ ಮುನ್ನೂರ ಮೂವತ್ತೊಂದು
ಭಾಸುರಂಬಡೆದ ಶಕವರುಷವೆಸೆವಾಶ್ವೀಜ
ಮಾಸದಲಿ ಶುಕ್ಲಪಕ್ಷದ ಪಾಡ್ಯ ಮುಮ್ಮಂಗವಾರದೊಳಗೀಕೃತಿಯನು
ಯೀಸಂಸ್ಕೃತೀ ಶ್ರಾಂತವಿಶ್ರಾಂತವಂ ಮಾಡು
ವಾಸೆಯಿಂದವೆ ಸಮಾಪ್ತಂಗೆಯ್ದು ನಿಂತಿದನು
ದಾಸೀನವಂ ಮಾಡದೇ ಭವ್ಯಸಮಿತಿ ಸಂತೋಷದಿಂ ಲಾಲಿಸುವುದು.

ಸಾಸಿರದ ಮೇಲೆ ಮುನ್ನೂರು ಮೂವತ್ತೊಂದು (೧೩೩೧) ಶಕ, ಆಶ್ವೀಜ ಶುದ್ಧ ಪ್ರತಿಪದೆ ಮಂಗಳವಾರ(ಮಂಗವಾರ) ದಿವಸ ಕೃತಿ ಮುಗಿದಿದೆ. ೧೯೭೬ ರಲ್ಲಿ ಸಮ್ಯಕ್ತ್ವ

೩–೪. ಹಂಪನಾಗರಾಜಯ್ಯ : ಜಯನೃಪಕಾವ್ಯಸಂಗ್ರಹ (೧೯೬೭) ಪೀಠಿಕೆ, ಪು. vii (ಅಡಿಟಿಪ್ಪಣಿ).
೫. ಸಂ. : ಬಿ. ಬಿ. ಮಹೀಶವಾಡಿ. ಸಮ್ಯಕ್ತ್ವಕೌಮುದಿ (೧೯೭೬) ಪು. ೨೩೭ (೧೨ : ೪೭).

ಕೌಮುದಿಯನ್ನು ಸಂಪಾದಿಸಿದ ಆರ್. ತಾತಾಚಾರ್ಯರಾಗಲಿ, ಕರ್ಣಾಟಕ ಕವಿಚರಿತೆ ದ್ವಿತೀಯ ಸಂಪುಟದಲ್ಲಿ ಮೂರನೆಯ ಮಂಗರಸನನ್ನು ಉಲ್ಲೇಖಿಸಿದ ಆರ್. ನರಸಿಂಹಾಚಾರ್ಯರಾಗಲಿ "**ಸಾವಿರದ ಮೇಲೆ ನಾನೂರ ಮೂವತ್ತೊಂದು**" ಎಂದು ಪಾಠವನ್ನು ಓದಿ ನಿರ್ಧರಿಸಿದ್ದಾರೆ. ಈಗ '**ನಾನೂರ**' ಇರುವ ಸ್ಥಳದಲ್ಲಿ '**ಮುನ್ನೂರ**' ಎಂಬ ಅಕ್ಷರಗಳು ಇದ್ದ ವಿಷಯ ನಮ್ಮ ಪಾಠಾಂತರದಿಂದ ಸುಸ್ಪಷ್ಟವಾಗಿದೆ. ಹಂಪನಾಗರಾಜಯ್ಯನವರ ಕೃತಿಯಲ್ಲಿ (ಓಲೆಗರಿಯಲ್ಲಿ) ಸಹ '**ಮೂನೂರ**' ಎಂದೇ ಪಾಠಾಂತರವಿದೆ. ಉಳಿದ ವಿಷಯದಲ್ಲಿ ಒಂದೆರಡು ಅಕ್ಷರಗಳ ಬದಲಾವಣೆ (ಅರ್ಥಬದಲಾವಣೆ ಇಲ್ಲದೆ) ಕಂಡುಬರುತ್ತದೆಯೇ ಹೊರತು ಮತ್ಯಾವ ಬದಲಾವಣೆಯೂ ಇಲ್ಲ. ಅದೇ ಮಾಸ ಪಕ್ಷ ತಿಥಿಗಳುಂಟು. ಆದರೆ ವಾರ ಬೇರೆಯಾಗಿದೆ. ಶಕ ೧೩೩೧ ಅಂದರೆ, ಕ್ರಿ. ಶ. ೧೪೦೯ ಮಂಗರಸಕವಿ(III)ಯ ಕಾಲವಾಗುವುದು. ಒಂದು ನೂರು ವರ್ಷ ಕವಿಯ ಕಾಲ ಹಿಂದೆ ಸರಿಯುವುದು. ಇದರಿಂದ ಅನೇಕ ಹೊಸ ಅಂಶಗಳು ಬೆಳಕಿಗೆ ಬರುತ್ತವೆ.

ಡಿ. ಎಲ್. ನರಸಿಂಹಾಚಾರ್ಯರು ಸಾಹಿತ್ಯ ಪರಿಷತ್ ಪತ್ರಿಕೆ (೧೬) ಯಲ್ಲಿ ಉಲ್ಲೇಖಿಸಿದ ಮನ್ಮಥಮಣಿದರ್ಪಣವನ್ನು ಬರೆದ ೧೭ನೆಯ ಶತಮಾನದ ನಾಲ್ಕನೆಯ ಮಂಗರಸನು ಅಭಿನವ ಮಂಗರಸನೆಂದು ಹೇಳಿಕೊಂಡಿರುವನು. ಆರ್. ನರಸಿಂಹಾಚಾರ್ಯರು ಉಲ್ಲೇಖಿಸಿದ ಅಭಿನವ ನಿಘಂಟುಕಾರನಾದ ಎರಡನೆಯ ಮಂಗರಾಜನು ೧೩೯೮ರಲ್ಲಿ ಕೃತಿ ಬರೆದುದು ಸ್ಪಷ್ಟವಿದೆ. ಅಭಿನವ ಮಂಗರಾಜ (II) ಮತ್ತು ಅಭಿನವ ಮಂಗರಸ(IV)ರ ಮೇಲೆ ಮೂರನೆಯ ಮಂಗರಸನ ಕಾಲನಿರ್ಣಯದಿಂದ (೧೪೦೯) ಯಾವ ಪರಿಣಾಮವೂ ಆಗುವುದಿಲ್ಲ. ಒಂದನೆಯ ಮಂಗರಾಜನ ಮೇಲೆ ಮಾತ್ರ ಪರಿಣಾಮವಾಗುತ್ತದೆ. ಕವಿಚರಿತೆಕಾರರು ಒಂದನೆಯ ಮಂಗರಾಜನ ಕಾಲ ನಿರ್ಣಯಕ್ಕೆ ಅವರು (ವಿಜಯನಗರದ) ಹರಿಹರ–ಸಂಗಮೇಶ್ವರರನ್ನು ಉಲ್ಲೇಖಿಸಿದುದೂ ಸಾರತ್ರಯವೇದಿಯಾದ ಕೇಶವವರ್ಣಿ (೧೩೫೯) ಯನ್ನು ಸ್ತುತಿಸುವುದೂ ಕಾರಣವಾಗಿ, ಸುಮಾರು ೧೩೬೦ರಲ್ಲಿ ಒಂದನೆಯ ಮಂಗರಾಜ ಇದ್ದನೆನ್ನುತ್ತಾರೆ. ಎ. ವೆಂಕಟಸುಬ್ಬಯ್ಯನವರು ಎರಡನೆಯ ಹರಿಹರನ ಕಾಲದಲ್ಲಿ ಸು. ೧೩೮೦ರಲ್ಲಿ ಒಂದನೆಯ ಮಂಗರಾಜನಿದ್ದನೆನ್ನುತ್ತಾರೆ. ಮೂರನೆಯ ಮಂಗರಸನು ೧೪೦೯ರಲ್ಲಿ ಸಮ್ಯಕ್ತ್ವಕೌಮುದಿ ರಚಿಸಿರಬೇಕಾದರೆ ಅದಕ್ಕಿಂತ ಹಿಂದೆ ಸಹ ಕೃತಿರಚನೆ ಮಾಡಿರಬಹುದು, ಅಂದರೆ ೧೩೮೦–೯೦ರಲ್ಲಿ ಸಹ ಅವನು ಬರೆಯಲು ಪ್ರಾರಂಭಿಸಿರಬೇಕು. ಆದ್ದರಿಂದ ಒಂದನೆಯ ಮಂಗರಾಜ ಮತ್ತು ಮೂರನೆಯ ಮಂಗರಸರು ಸಮಕಾಲೀನ ಕವಿಗಳೆ ? ಅಥವಾ ಹೆಸರಿನ ಸಾಮ್ಯದಿಂದ ಅವರಿಬ್ಬರೂ ಭಿನ್ನವ್ಯಕ್ತಿಗಳಾಗಿರಲಿಕ್ಕಿಲ್ಲವೆಂಬ ಸಂಶಯ ಬರುವುದಿಲ್ಲವೆ ?

ಮೊದಲನೆಯ ಮಂಗರಾಜ ಮತ್ತು ಮೂರನೆಯ ಮಂಗರಸರು ಭಿನ್ನವ್ಯಕ್ತಿಗಳಾಗಿರಲಿಕ್ಕಿಲ್ಲವೆಂಬುದಕ್ಕೆ ಕೆಲವು ಅನುಕೂಲ ಕಾರಣಗಳೂ ಉಂಟು. (೧) ಇಬ್ಬರೂ ಹೊಯ್ಸಳದೇಶದ ಸಚಿವಕುಲಕ್ಕೆ ಸಂಬಂಧಿಸಿದ ಜೈನಕ್ಷತ್ರಿಯರು. (೨) ಇಬ್ಬರ ಹೆಸರುಗಳಲ್ಲಿಯೂ ಹೋಲಿಕೆ ಇದೆ. (೩) ಇಬ್ಬರೂ ಸ್ವಲ್ಪ ಹೆಚ್ಚುಕಡಿಮೆ ಸಮಕಾಲೀನ ವ್ಯಕ್ತಿಗಳೇ ಆಗಿದ್ದಾರೆ. (೪) ಇಬ್ಬರೂ ಕಾವ್ಯಗಳನ್ನು ಪಂಚಪರಮೇಷ್ಠಿ, ಸರಸ್ವತಿ, ಯಕ್ಷಯಕ್ಷಿಣಿಯರ ಸ್ತುತಿಯಿಂದ ಪ್ರಾರಂಭಿಸುತ್ತಾರೆ. ಇಬ್ಬರೂ ಧರಣೇಂದ್ರ–ಪದ್ಮಾವತಿಯರನ್ನು – ಅದರಲ್ಲಿಯೂ ಪದ್ಮಾವತಿಯ ಭಕ್ತಿಯನ್ನು ಸಂಪ್ರಕಟಗೊಳಿಸಿದ್ದಾರೆ. (೫) ಇಬ್ಬರಿಗೂ ಕೊಂಡಕುಂದಾನ್ವಯದ ಗುರುಮುನಿವಂಶಪರಂಪರೆ ಒಂದೇ ಆಗಿದ್ದು, ಅನೇಕ ವ್ಯಕ್ತಿಗಳ ಸ್ತುತಿ ಇಬ್ಬರಲ್ಲಿ ಒಂದೇತೆರನಾಗಿದೆ. (೬) ತಾಯಿಯ ಹೆಸರು ಮಂಗರಾಜನಿಗೆ '**ಪೇರ್ಮಾಳೆ**' ಮಂಗರಸನಿಗೆ '**ದೇವಿಲೆ**' ಅಥವಾ ಪದ್ಮರಾಜಮ್ಮಣ್ಣಿ ಎಂದು ಹೇಳಿದರೂ, ಪೆರ್ಮಾಳೆ>ಪೊಮ್ಮಯಿ, ಪದ್ಮಾಳೆ, ದೇವಿಲೆ, ದೇವಕಿ, ದೇವತೆ (ಪದ್ಮಾವತಿ), ಪದ್ಮಾರಾಜಮ್ಮಣ್ಣಿ (ಪದ್ಮಾವತಿ) ಎಲ್ಲವೂ ಒಂದೇ. ಅವರ ಮನೆತನದ 'ಪದ್ಮಾವತಿ'ದೇವಿಯ ಹೆಸರಿನ ಬೇರೆಬೇರೆ ರೂಪಗಳು, ಅಷ್ಟೆ.

ಮಂಗರಾಜ ಮತ್ತು ಮಂಗರಸ ಒಂದೇ ವ್ಯಕ್ತಿಯಲ್ಲವೆಂಬುದಕ್ಕೆ ಕೆಲವು ಕಾರಣಗಳೂ ಉಂಟು : (೧) ಮಂಗರಾಜ ದೇವಳೆನಾಡಿನ ಮುಗಳಿಪುರದ ಪ್ರಭು, ಮಂಗರಸ ಚೆಂಗಾಳ್ವನೃಪರ ಸಚಿವಾನ್ವಯದ ಹೊಸವೃತ್ತಿನಾಡಿನ ಕಲ್ಲಹಳ್ಳಿಯ ಪ್ರಭು. (೨) ಮಂಗರಾಜನ ತಂದೆಯ ಹೆಸರು ಮಂಗಣೋತ್ತಮ, ಮಂಗರಸನ ತಂದೆಯ ಹೆಸರು ವಿಜಯಭೂಪಾಲ. (೩) ಮಂಗರಾಜನಿಗೆ ಈಡ್ಯಾನುಜ ತಮ್ಮ, ಜವ್ವಾನೆ–ಮೇಧಾವಿ ಮಕ್ಕಳು ಇದ್ದಾರೆ; ಮಂಗರಸನಿಗೆ ಅವನು ಹೇಳದಿದ್ದರೂ ಮಾಧವ–ವಿಜಯರೆಂಬ ತಮ್ಮಂದಿರುಂಟೆಂದು ತೋರುತ್ತದೆ. ಮಕ್ಕಳ ಉಲ್ಲೇಖವಿಲ್ಲ. (೪) ಮಂಗರಾಜನು ಪೂಜ್ಯಪಾದರನ್ನು (ಪರೋಕ್ಷವಾಗಿಯಾದರೂ) ಗುರುವೆಂದು ಭಾವಿಸಿ, ವಿಶೇಷ ಸ್ತುತಿಮಾಡಿದ್ದಾನೆ; ಮಂಗರಸನು ಪೂಜ್ಯಪಾದರ ಹೆಸರನ್ನು ಗುರುಪರಂಪರೆಯ ಮಧ್ಯದಲ್ಲಿ ಸಹಜವಾಗಿ ಉಲ್ಲೇಖಿಸಿದ್ದಾನೆ. ತನ್ನ ಗುರು (ಚಿಕ್ಕ) ಪ್ರಭೇಂದುವೆಂದು ಸ್ಪಷ್ಟಮಾಡಿದ್ದಾನೆ. ಅವನ ಶಿಷ್ಯರಾದ ಶ್ರುತಮುನಿ–ವಿಮಲಕೀರ್ತಿಗಳನ್ನೂ ಗೌರವಿಸಿದ್ದಾನೆ. (೫) ಮಂಗರಾಜನು ಐತಿಹಾಸಿಕ ವ್ಯಕ್ತಿಗಳಾದ ಹರಿಹರ–ಸೋಮ, ಬೊಪ್ಪ, ಬೈಚಮಂತ್ರಿಸುತ ಇರುಗಪ್ಪನೆಂಬ ಉಪಸಚಿವ ಮುಂತಾದವರನ್ನು ಉಲ್ಲೇಖಿಸಿದ್ದಾನೆ. ಮಂಗರಸನು ಇವರಾರನ್ನೂ ಉಲ್ಲೇಖಿಸಿಲ್ಲ; ಆದರೆ ಅಜ್ಜನಾದ ಮಾಧವ, ತಂದೆಯಾದ ವಿಜಯನೃಪಾಲ, ಅವರು ಸೇವಿಸಿದ ಚೆಂಗಾಳ್ವನೃಪಾಲರು ಮುಂತಾದವರನ್ನು ವರ್ಣಿಸುತ್ತಾನೆ. ಈ ಮೇಲಿನ ಆಧಾರಗಳಿಂದ ಇಬ್ಬರೂ ಭಿನ್ನವ್ಯಕ್ತಿಗಳಾಗಿದ್ದು, ಒಂದು ತಲೆಮಾರಿನಷ್ಟು ಅಂತರದವರಾಗುತ್ತಾರೆ. ಒಂದೇ ವಂಶದವರು ಇದ್ದರೂ ಇರಬಹುದೆನಿಸುತ್ತದೆ.

ಶ್ರವಣಬೆಳುಗೊಳದ ಶಿಲಾಲೇಖನ (೩೫೭) ದ ಪ್ರಕಾರ* ಇರುಗಪ್ಪದಂಡನಾಯಕನು ಗೊಮ್ಮಟೇಶ್ವರನ ಪೂಜೆಗೆ ಬೆಳುಗೊಳ ಎಂಬ ಹಳ್ಳಿಯನ್ನು ದಾನವಾಗಿ ಬಿಟ್ಟವಿಷಯು ಉಲ್ಲೇಖವಾಗಿದೆ. ಅವನ ಈ ದಾನವು ಶ್ರುತಮುನಿಗೆ ಅರ್ಪಿತವಾಗಿದೆ ಇರುಗಪ್ಪ ದಂಡನಾಯಕನ ಈ ಶಾಸನದ ಪ್ರಕಾರ ಕೆಳಗಿನ ವಂಶವೃಕ್ಷ ಲಭ್ಯವಾಗಿದೆ.

ಬೈಚ–I

ಮಂಗಪ (ಜಾನಕಿ ಹೆಂಡತಿ) | ಇರುಗಪ–I | ಬುಕ್ಕಣ
} ಹರಿಹರ–I (೧೩೩೬–೧೩೫೭)
ಬುಕ್ಕರಾಯ (೧೩೫೭–೧೩೭೮)

ಬೈಚ–II (ಮಂಗಣೋತ್ತಮ?) | ಇರುಗಪ–II (೧೪೨೨)
} ಹರಿಹರ–II (೧೩೭೭–೧೪೦೪)
ದೇವರಾಯ–I (೧೪೦೬–೧೪೨೨)

ಹರಿಹರ–I (೧೩೩೬–೧೩೫೭) ಕಾಲದಲ್ಲಿ ಮತ್ತು ಬುಕ್ಕರಾಯ (೧೩೫೭–೧೩೭೮) ನ ಕಾಲದಲ್ಲಿ ದಂಡನಾಯಕನಾಗಿಯೂ ಸಚಿವನಾಗಿಯೂ ಸೇವೆಸಲ್ಲಿಸಿದ ಬೈಚ–I ನಿಗೆ ಮಂಗಪ ಮತ್ತು ಇರುಗಪ–I ಮತ್ತು ಬುಕ್ಕಣ ಎಂಬ ಮೂವರು ಮಕ್ಕಳು. ಮತ್ತೆ ಬೈಚ–II ಮತ್ತು ಇರುಗಪ–II ಎಂಬವರು ಮಂಗಪನ ಮಕ್ಕಳು. ಎರಡನೆಯ ಇರುಗಪನು ದೇವರಾಯ–I (೧೪೦೬–೧೪೨೨) ನ ಕಾಲಕ್ಕೆ ಅವನ ಆಳಿಕೆಯ ಕಡೆಯ ವರ್ಷ ಈ ಶಾಸನವನ್ನು ಮಾಡಿಸಿದ್ದಾನೆ (೧೪೨೨). ಮಂಗಪನಿಗೆ ಜಾನಕಿ ಎಂಬ ಹೆಂಡತಿ ಇದ್ದುದನ್ನು ಹೇಳಲಾಗಿದೆ.

ಮಂಗರಾಜ–I (೧೩೬೦, ೧೩೮೦) ನ ಖಗೇಂದ್ರಮಣಿದರ್ಪಣದ ಪ್ರಕಾರ ಈ ಕೆಳಗಿನ ವಂಶವೃಕ್ಷ ಸಿದ್ಧವಾಗುತ್ತದೆ :

(ಮಂಗಣೋತ್ತಮ) ಮಂಗಪ – ಪೆವರ್ಗಾಳೆ

ಮಂಗರಾಜ–I (ಸು. ೧೩೬೦ ಅಥವಾ ೧೩೮೦) | ಈಡ್ಯಾನುಜ (ಈಗ್ಯ?) (ಇರುಗಪ?)
| ಹರಿಹರ–I (೧೩೩೬–೧೩೫೭)
ಬುಕ್ಕರಾಯ (೧೩೫೭–೦೩೭೮)
ಹರಿಹರ–II (೧೩೭೮–೧೪೦೪)

ಜವ್ವಾನೆ | ಮೇಧಾವಿ (ಮಾಧವ?)

ಮಂಗರಾಜ ಕವಿಗೆ ಮಂಗಣೋತ್ತಮನೆಂಬ ತಂದೆ ಇದ್ದುದೂ ಈಡ್ಯಾನುಜ (ಈಗ್ಯ ?) ಅಂದರೆ ಇರುಗಪ (?) ನೆಂಬ ತಮ್ಮನಿದ್ದುದೂ ಜವ್ವಾನೆ–ಮೇಧಾವಿ

* E. C. Vol. II (1973) pp. 209–212.

(ಮಾಧವ ?) ಮಕ್ಕಳಿದ್ದುದೂ ವರ್ಣಿತವಾಗಿದೆ. ತನ್ನ ಮತ್ತು ದೊರೆಯ ಆಡಳಿತೆ ಸುಸೂತ್ರವಾಗಲು ತಮ್ಮ ಮತ್ತು ಮಕ್ಕಳ ಶೌರ್ಯ ಕಾರಣವೆಂದು ಹೇಳಲಾಗಿದೆ. ಬೈಚದಂಡಾಧಿಪನ ಪುತ್ರ ಇರುಗಪನನ್ನು ವರ್ಣಿಸಿದ ಪದ್ಯಗಳು ಖಗೇಂದ್ರಮಣಿದರ್ಪಣದಲ್ಲಿ ಉಂಟು. ಈ ಇರುಗಪನು ಒಂದನೇ ಇರುಗಪನಾಗಿರಬಹುದು.*

ಮಂಗರಸ (III) ನ ಕಾವ್ಯಗಳಿಂದಲೂ ನಂಜುಂಡಕವಿಯ ರಾಮನಾಥಚರಿತದಿಂದಲೂ ಚರಿತ್ರಾಂಶಗಳನ್ನು ಸಂಗ್ರಹಿಸಿ ಈ ಕೆಳಗಿನ ವಂಶವೃಕ್ಷವನ್ನು ದೇ. ಜವರೇಗೌಡರು ರಚಿಸಿದ್ದಾರೆ. ಅದರಲ್ಲಿ ಮಂಗರಸ III (೧೫೦೮) ನಂಜುಂಡಕವಿ (೧೫೪೦) ಎಂದಿದ್ದಾರೆ.[೬] ನಾನು ಅವರ ಕಾಲವನ್ನು ಬದಲಿಸಿದ್ದೇನೆ.[೭] ಕೆಳಗೆ ಅದನ್ನು ಕಾಣಬಹುದು :

ಮಾಧವ
|
ವಿಜಯಭೂಪಾಲ
|
ಮಂಗರಸ–III (೧೪೦೯) | ಮಾಧವ–II ನಂಜುಂಡಕವಿ (ಸು. ೧೪೪೦) | ವಿಜಯ–II

ವೀರವಿಜಯರಾಯ (೧೪೨೨–೧೪೨೪)
ದೇವರಾಯ–II (೧೪೨೪–೧೪೪೬) (ಪ್ರೌಢದೇವರಾಯ)

ಮಂಗರಸ–III ೧೪೦೯ರಲ್ಲಿ ಸಮ್ಯಕ್ತ್ವಕೌಮುದಿ ರಚಿಸಿದ್ದಾನೆ. ಅಜ್ಜ ಮಾಧವ ತಂದೆ ವಿಜಯಭೂಪಾಲರನ್ನು ವರ್ಣಿಸಿದ್ದಾನೆ. ನಂಜುಂಡನ ಹಿರಿಮಯ್ಯ ಮಂಗರಸ–III, ತಂದೆ ಮಾಧವ, ಕಿರಿಯಯ್ಯ ವಿಜಯನನ್ನು ತನ್ನ ಕಾವ್ಯದಲ್ಲಿ ವರ್ಣಿಸಿದ್ದಾನೆ. ೧೪೩೨ರಲ್ಲಿ ಶ್ರುತಮುನಿಯ ಸಲ್ಲೇಖನ ವರ್ಣಿಸಿದ ಸಂಸ್ಕೃತ ಶಾಸನವನ್ನು ಮಂಗರಾಜ ಬರೆದಿದ್ದಾನೆ[೮]. ಆ ಮಂಗರಾಜನು ಮಂಗರಸ–III ಆಗಿದ್ದಿರಬೇಕು. ಈ ಮೇಲೆ ಕೊಟ್ಟ **ಮೂರೂ** ವಂಶವೃಕ್ಷವನ್ನು ಹೊಂದಿಸಿಟ್ಟರೆ ಒಂದೇ ವಂಶವೃಕ್ಷವಾಗುವುದು. ಮಂಗರಾಜ (ಮಂಗರಸ) – (I) ನ ವಂಶಜನೇ ಮಂಗರಸ (III) ಎಂಬುವುದು ಗಮನಕ್ಕೆ ಬರುವುದು.

■

---

೬ ದೇ. ಜವರೇಗೌಡ : ನಂಜುಂಡಕವಿ (೧೯೬೪) ಪು. ೨೭

೭ ಬಿ. ಬಿ. ಮಹೀಶವಾಡಿ (ಸಂ) : ಸಮ್ಯಕ್ತ್ವಕೌಮುದಿ (೧೯೭೬), ಪ್ರಸ್ತಾವನೆ, ಪು. xxii

೮ E. C. (ಶ್ರವಣಬೆಳುಗೊಳ) Vol. II (1973) No. 364 (258) pp. 226–232.

* ಖ. ದರ್ಪಣ, ಮುನ್ನುಡಿ, ಪು. ೫

ಮೈಸೂರುಪ್ರದೇಶದ ಅಪ್ರಕಟಿತ ಶಾಸನಗಳ ಸಮೀಕ್ಷೆ ಹಾಗೂ ಪ್ರಕಟಿತ ಶಾಸನಗಳ ಸೂಚಿ

ಎಸ್. ಶೆಟ್ಟರ್
ಎಸ್. ರಾಜಶೇಖರ

ಅ.ನಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ.ಶ.	ಆಳುವಅರಸ	ಅರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೧೭೧.	ನಂಜನಗೂಡು	ನಂಜನಗೂಡು	ಮೈಸೂರು	—	ಕೃಷ್ಣರಾಜ ಒಡೆಯ III	ಮೈಸೂರು	ಮರಿನಂಜಮ್ಮನಿಂದ (ಚಿನ್ನದ ಲೋಟ) ಕಾಣಿಕೆ	ಆ.ಸ.ಮೈ.ಆ.ರಿ. ೧೯೧೮, ಪು. ೬೪
೧೭೨.	,,	,,	,,	—	,,	,,	ಕೃಷ್ಣವಿಲಾಸದ ಲಿಂಗಾಜಮ್ಮಣ್ಣಿಯಿಂದ (ರುದ್ರಾಕ್ಷಿ ವಾಹನ) ಕಾಣಿಕೆ.	,,
೧೭೩.	,,	,,	,,	—	,,	,,	ಅರಸನಿಂದ ಚಿನ್ನದ ಹರಿಯಾಣ ಮತ್ತು ಬೆಳ್ಳಿಯ ಅಡ್ಡಣಿಗೆ ಮುಂತಾದ ಕಾಣಿಕೆ.	ಅದೇ, ಪು. ೬೨
೧೭೪.	ಕಳಲೆ	,,	,,	—	,,	,,	ಬೆಲುವೆ ಅರಸನಿಂದ ಬೆಳ್ಳಿಯ ಲೋಟದ ದಾನ.	ಆ.ಸ.ಮೈ.ಆ.ರಿ. ೧೯೧೭, ಪು. ೫೯

ಅ.ನಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ.ಶ.	ಆಳುವಅರಸ	ಅರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೧೭೫.	ದೊಡ್ಡಗದ್ದವಳ್ಳಿ	ಹಾಸನ	ಹಾಸನ	೧೧೬೮	—	—	ದೋರಸಮುದ್ರದ ಮಾರ್ಗದಲ್ಲಿ ಮಹಾಜನರಿಗೆ ಅರವಟ್ಟಿಗೆ ನಡೆಸಲು ಉಭಯ ನಾನಾದೇಶಿ ಕುಮಾರ ನಾರಣನಾಯಕನಿಂದ ೬ ಗದ್ಯಾಣಗಳ ದತ್ತಿ.	ಆ.ಸ.ವ್ಯೆ.ಆ.ರಿ. ೧೯೧೭. ಪು.೬೦
೧೭೬.	ಹದಿನಾರು	ನಂಜನಗೂಡು	ಮೈಸೂರು	ಸು. ೧೧೭೮	—	—	ಅದಿಹಾಜಿನ ಮಹಾಪ್ರಭು ಮತ್ತು ಪ್ರಜೆಗಳಿಂದ ದತ್ತಿ.	ಆ.ಸ.ವ್ಯೆ.ಆ.ರಿ. ೧೯೧೮, ಪು ೬೫
೧೭೭.	ಗ್ರಾಮ	ಹಾಸನ	ಹಾಸನ	ಸು. ೧೨೦೦	—	—	ತ್ರುಟಿತ. ಶಾಂತಿಗ್ರಾಮದ ಹೊನ್ನಿಸೆಟ್ಟಿ ಮತ್ತು ಭವ್ಯರಿಂದ ಸುಮಂತಿಭಟ್ಟಾರಕನ ವಿಗ್ರಹ ಪ್ರತಿಷ್ಠೆ.	ಆ.ಸ.ವ್ಯೆ.ಆ.ರಿ. ೧೯೧೭, ಪು.೬೦
೧೭೮.	ಹೊಂಗನೂರು	ಚಾಮರಾಜ ನಗರ	ಮೈಸೂರು	ಸು. ೧೨೫೦	—	—	ಏಚಿಗಾಮುಂಡನಿಂದ ಕೆರೆ ಮತ್ತು ತೂಬಿನ ನಿರ್ಮಾಣ.	,,

ಅ.ನಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ.ಶ.	ಆಳುವಅರಸ	ಅರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೧೭೯.	ಹಾರಗದ್ದೆ	ಆನೇಕಲ್	ಬೆಂಗಳೂರು	ಸು. ೧೩೦೦	—	—	ಶೇರುಪಳ್ಳಿಯು ತಿರುವನಂದಾ-ಟ್ವಾರ್ ಮತ್ತು ಮುಪ್ಪುಟಿಂನ ಪುಟಿಯಾಟ್ವಾರರಿಂದ ಸ್ತಂಭಗಳ ದಾನ.	ಆ ಸ.ವ್ಯೆ.ಆ.ರಿ. ೧೯೧೯, ಪು. ೫೧
೧೮೦.	,,	,,	,,	,,	—	—	,,	,,
೧೮೧.	ಕೊಂಡರಹಳ್ಳಿ	ಹೊಸಕೋಟೆ	,,	೧೩೫೫	—	—	ಪಮ್ಮರಸನಿಂದ ಅಟ್ಟಿಪ್ಪ ಗಾವುಂಡನಿಗೆ ನೊಂಡಂಗುಟಿಯಲ್ಲಿಯು ಭೂದಾನ.	,,
೧೮೨.	ಬೇಜಿರಾಖ್ ಕೋಡಿಹಳ್ಳಿ	ತಿಪಟೂರು	ತುಮಕೂರು	೧೩೯೨	—	—	ನಾಗಗವುಡನಿಂದ ಗಂಡಭೈರವ ದೇವಸ್ಥಾನ ಮತ್ತು ಕೆರೆಯು ನಿರ್ಮಾಣ ಹಾಗೂ ದೇವಸ್ಥಾನಕ್ಕೆ ಮಹಾಜನ ಮತ್ತು ಗವುಡರಿಂದ ಭೂದತ್ತಿ.	ಆ.ಸ.ವ್ಯೆ.ಆ.ರಿ. ೧೯೧೭, ಪು. ೬೧

ಅ.ನಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ.ಶ.	ಆಳುವಅರಸ	ಅರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೧೮೩.	ಹೆಗ್ಗೆರೆ	ಹೊಸದುರ್ಗ	ಚಿತ್ರದುರ್ಗ	ಸುಂ. ೧೪೦೦	—	—	ವೀರದೇವಯ್ಯನಿಂದ ಸರಸ್ವತಿ ವಿಗ್ರಹದ ಮುಖವನ್ನು ಸರಿಪಡಿಸಿದುದು.	ಆ.ಸ.ಮೈ.ಆ.ರಿ. ೧೯೧೮, ಪು. ೬೫
೧೮೪.	ಜೋಡಿಕೆಂಪನಪುರ	ಚಾಮರಾಜನಗರ	ಮೈಸೂರು	,,	—	—	ವೀರಶೈವಗುರು ಏಕಾಂತ ಬಸವೇಶ್ವರನಿಂದ ದೇವಿಲಕ್ಕೆ ದತ್ತಿ.	ಆ.ಸ.ಮೈ.ಆ.ರಿ. ೧೯೧೭, ಪು. ೬೧
೧೮೫.	ಜ್ಯೋತಿಗೊಂಡನಪುರ	,,	,,	೧೪೦೧	—	—	ಸಿದ್ಧಹರಿದಾಸನಿಂದ ಗೋಪಿನಾಥ ದೇವಸ್ಥಾನ ನಿರ್ಮಾಣವಾದಾಗ, ಅದಕ್ಕೆ ಬುಕ್ಕಣ, ಪೋಚೆಯಂನಾಯಂಕ ಮತ್ತು ಸೇನಬೋವ ಮಧುವರಸರಿಂದ ಭೂದತ್ತಿ.	,,
೧೮೬.	ತ್ಯಾಮಗೊಂಡ್ಲು	ನೆಲಮಂಗಲ	ಬೆಂಗಳೂರು	೧೫೨೬	—	—	ತ್ರುಟಿತ. ಬಾಣವಾಡಿಯ ಅಧಿಕಾರಿಯೊಬ್ಬನಿಂದ ದತ್ತಿ.	ಆ.ಸ.ಮೈ.ಆ.ರಿ. ೧೯೧೭, ಪು. ೬೧

ಅ.ನಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ.ಶ.	ಆಳುವಅರಸ	ಅರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೧೮೭.	ತೊಣ್ಣೂರು	ಚಾಮರಾಜ ನಗರ	ಮೈಸೂರು	೧೫೪೦	—	—	ವರದಪ್ಪನಿಂದ ತೊಂಡನೂರಿನ ದಾನ.	ಆ.ಸ.ಮೈ.ಆ.ರಿ. ೧೯೧೭, ಪು. ೬೧
೧೮೮.	ಕರಿಬೀರನ ಹೊಸಳ್ಳಿ	ಹೊಸಕೋಟೆ	ಬೆಂಗಳೂರು	೧೫೬೩	—	—	ಹಂಪೆಯ ಒಡೆಯರಿಗೆ ಕೊಟ್ಟ ದಾನ.	ಆ.ಸ.ಮೈ.ಆ.ರಿ. ೧೯೧೯, ಪು. ೫೧
೧೮೯.	ಸಿಂಗನಗದ್ದೆ	ಕೊಪ್ಪ	ಚಿಕ್ಕಮಂಗಳೂರು	೧೫೮೪	—	—	ತಾಮ್ರಶಾಸನ. ದಾನಿವಾಸದ ವೀರಪ್ಪ ಒಡೆಯ ಮತ್ತು ವೀರಸೇನದೇವರ ಮಧ್ಯೆ ಆದ ವಿಕ್ರಯದ ವಿವರ.	,,
೧೯೦.	,,	,,	,,	೧೫೮೫	—	—	,,	,,
೧೯೧.	,,	,,	,,	೧೫೮೭	—	—	,,	,,
೧೯೨.	ಚಿಕ್ಕೊಂಡನಹಳ್ಳಿ	ಹೊಸಕೋಟೆ	ಬೆಂಗಳೂರು	೧೬೦೦	—	—	ದಂಡಿಸೆಟ್ಟಿಯಿಂದ ಬಯಿರ ದೇವರಿಗೆ ದತ್ತಿ.	,,
೧೯೩.	(ಆರ್ಕಿಯಾಲಜಿ ಆಫೀಸ, ಮೈಸೂರು)			೧೬೦೬	—	—	ತೆಲುಗು ಶಾಸನ. ನರಸಿಂಹ ತಾತಾಚಾರ್ಯನಿಗೆ ಪದ್ಮಸಾಲೆ ನೇಕಾರರಿಂದ ದತ್ತಿ.	ಆ.ಸ.ಮೈ.ಆ.ರಿ. ೧೯೧೮, ಪು. ೬೫

ಅ.ಸಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ.ಶ.	ಆಳುವಅರಸ	ಅರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೧೯೪.	ನಂಜನಗೂಡು	ನಂಜನಗೂಡು	ಮೈಸೂರು	೧೬೩೩	—	—	ಮೂಗೂರು ಸಣ್ಣಬಸವ ಗವುಡನಿಂದ ನಂಜುಂಡೇಶ್ವರನಿಗೆ ದತ್ತಿ.	ಆ.ಸ.ಮೈ.ಆ.ರಿ. ೧೯೧೮, ಪು. ೬೬
೧೯೫.	,,	,,	,,	೧೬೭೮	—	—	ಕುಂಬಕೋಣಂನ ವಿಶೇಂದಿರ ಉಡೈಯಂ ಶುವಾಮಿಗೆ ಕುಮಾರಯ್ಯನಿಂದ ಮುಗಂದನೂರು ಗ್ರಾಮದ ದತ್ತಿ.	ಆ.ಸ.ಮೈ.ಆ.ರಿ. ೧೯೧೭, ಪು. ೬೧
೧೯೬.	ಹೊಸಹಳ್ಳಿ	ಹೊಸಕೋಟೆ	ಬೆಂಗಳೂರು	ಸಂ. ೧೬೮೩	—	—	ಕೋಟೆಯ ರಕ್ಷಣೆಗಾಗಿ ಯಳಚೆಗವುಡನಿಗೆ ಕೊಟ್ಟ ಕೋಟೆಕೊಡಗಿ ಭೂಮಿ.	ಆ.ಸ.ಮೈ.ಆ.ರಿ. ೧೯೧೯, ಪು. ೫೨
೧೯೭.	ಗೊಣಕನಹಳ್ಳಿ	,,	,,	೧೭೦೩	—	—	ರಾಮಾಜಿ–ವೆಂಕಾಜಿಗೆ ಗ್ರಾಮವೊಂದರ ಸುರುಗು–ಮಾನ್ಯ.	,,
೧೯೮.	ಬಸವನಪುರ	ನಂಜನಗೂಡು	ಮೈಸೂರು	೧೭೨೬	—	—	ಶ್ರೀರಂಗಪಟ್ಟಣದ ಬಾಲಣ್ಣ ಸೆಟ್ಟಿಯಿಂದ ದೇವಾಲಯ ನಿರ್ಮಾಣ.	ಆ.ಸ.ಮೈ.ಆ.ರಿ. ೧೯೧೮, ಪು. ೬೬

ಅ.ನಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ.ಶ.	ಆಳುವಅರಸ	ಅರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೧೯೯.	ಸರ್ಜಾಪುರ	ಆನೇಕಲ್	ಬೆಂಗಳೂರು	೧೭೭೦	—	—	ಶಾನುಭೋಗ ವೆಂಕಯ್ಯನಿಗೆ ಮುಹಮ್ಮದ್‌ಖಾನನಿಂದ ಸನದು. ಇದರಲ್ಲಿ ನಾರಣಪ್ಪನಿಗೆ ಇನಾಮಾಗಿ ಕೊಟ್ಟ ಮನೆಯ ಉಲ್ಲೇಖ ಇದೆ.	ಆ.ಸ.ಮೈ.ಅ.ರಿ. ೧೯೧೯, ಪು. ೫೨
೨೦೦.	ಹೊಸಕೋಟೆ	ಹೊಸಕೋಟೆ	,,	೧೭೭೨	—	—	ಸುಬೇದಾರ್ ರಘುನಾಥ ಬಾವಾಜಿಯಿಂದ (ವಿಠಲೇಶ್ವರ) ದೇವಸ್ಥಾನದ ನಿರ್ಮಾಣ ಹಾಗೂ ದತ್ತಿಗಳ ವಿವರ.	,,
೨೦೧.	,,	,,	,,	,,	—	—	ದೇವಸ್ಥಾನಕ್ಕೆ ಕೊಟ್ಟ ದತ್ತಿಗಳು.	,,
೨೦೨.	ಮೈಸೂರು	ಮೈಸೂರು	ಮೈಸೂರು	೧೮೧೫	—	—	ಮರಿನಾಗಯ್ಯನಿಂದ ಹಿತ್ತಾಳೆ ಪೀಠಗಳ ದಾನ.	,,

ಅ.ಸಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ.ಶ.	ಆಳುವಅರಸ	ಅರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೨೦೩.	ಆನೇಕಲ್	ಆನೇಕಲ್	ಬೆಂಗಳೂರು	೧೮೧೫	—	—	ತ್ರುಟಿತ. ಪೆರಿಯದೇವನ ಮಡಂನ ಉಲ್ಲೇಖ.	ಆ.ಸ.ಮೈ.ಆ.ರಿ. ೧೯೧೯, ಪು. ೫೧
೨೦೪.	,,	,,	,,	?	—	—	ಹಾಫಿಜ ಮುಹಮ್ಮದಖಾನ್ ಸಾಹೇಬನಿಂದ ಕಬರಸ್ಥಾನಕ್ಕಾಗಿ ಮೊಹಬತ್‌ಷಾ ಬಕಾತಿಗೆ ಹೊಲವೊಂದರ ದಾನ.	ಅದೇ, ಪು. ೫೨

(೧೯೨೦—೧೯೨೧)

ಅ.ಸಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ.ಶ.	ಆಳುವಅರಸ	ಅರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೧.	ಕೊಡಲೂರು	ಟಿ. ನರಸೀಪುರ	ಮೈಸೂರು	೨೬೬	ಹರಿವರ್ಮ	ಗಂಗ	ತಾಮ್ರಶಾಸನ. ಅರಸನು ತಳವನಪುರದಲ್ಲಿ ಇದ್ದಾಗ, ಬಡಗಥೆನಾಡು ೨೦೦ರ ಬಾಗೆಯೂರು ಗ್ರಾಮವನ್ನು ದತ್ತಿಯಾಗಿ ದರವೋದರ ಭಟ್ಟನಿಗೆ ಕೊಟ್ಟುದು. ರೂವಾರಿ ವಿಶ್ವಕರ್ಮಾಚಾರ್ಯ.	ಆ.ಸ.ಮೈ.ಆ.ರಿ. ೧೯೨೧,ಪು. ೧೭–೧೮

ಅ.ನಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ.ಶ.	ಆಳುವಅರಸ	ಅರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೨.	ನರಸಿಂಹರಾಜಪುರ	ಕೊಪ್ಪ	ಚಿಕ್ಕಮಗಳೂರು	ಸು. ೭೮೦	ಶ್ರೀಪುರುಷ	ಗಂಗ	ತಾಮ್ರಶಾಸನ. ಇದು ಮೂರು ಶಾಸನಗಳನ್ನು ಒಳಗೊಂಡಿದೆ. ೧. ಶ್ರೀಪುರುಷನಿಗೆ ಸಂಬಂಧಿಸಿದೆ. ಪಿಸಿಂಡಿಗಂಗ ವಂಶದ ನಾಗವರ್ಮನಿಂದ ತಗರೆನಾಡಿನ ಮಲ್ಲಹಳ್ಳಿಯು ತೊಳ್ಳಗ್ರಾಮದ ಬಸ್ತಿಗೆ ದತ್ತಿಯಾದುದು. ೨ ಮತ್ತು ೩, ಶಿವಮಾರನಿಗೆ ಸಂಬಂಧಿಸಿವೆ. ಸಿಂದನಾಡು ೮೦೦೦ ಮತ್ತು ತಗರೆನಾಡಿನ ಅಧಿಕಾರಿ ವಿಟ್ಟ-ರಸನಿಂದ ತೊಳ್ಳರದ ಬಸ್ತಿಗೆ ಕರಿಯಾನೆಯ ದಾನ ಹಾಗೂ ವಿಜಯಶಕ್ತಿ ಅರಸನಿಂದ ಚೇದಿಯಕ್ಕೆ ಭೂದತ್ತಿ.	ಆ.ಸ.ಮೈ.ಆ.ರಿ. ೧೯೨೦,ಪು. ೨೭–೨೯

ಅ.ನಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ.ಶ.	ಆಳುವಅರಸ	ಅರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೩.	ಪೂರಿಗಾಲಿ	ಮಳವಳ್ಳಿ	ಮಂಡ್ಯ	—	ಶ್ರೀಪುರುಷ	ಗಂಗ	ಅತ್ತಿಗಾಲದ ಚಾವುತ್ತನಿಂದ ಕೊಂಗಣಿ ಕೆಱೆಯ ನಿರ್ಮಾಣ ಮತ್ತು ಬೋವರಿಗೆ ಕೊಟ್ಟ ದತ್ತಿ.	ಆ.ಸ.ಮೈ.ಆ.ರಿ. ೧೯೩೦,ಪು.೨೯
೪.	ನರಸಿಂಹರಾಜ ಪುರ	ಕೊಪ್ಪ	ಚಿಕ್ಕಮಂಗಳೂರು	—	ಶಿವಮಾರ	,,	,,	,,
೫.	ಕೂಳಿಗೆರೆ	ಮಳವಳ್ಳಿ	ಮಂಡ್ಯ	೮೭೩	ಸತ್ಯವಾಕ್ಯ ಪೆರ್ಮಾನಡಿ (ರಾಚಮಲ್ಲII)	,,	ಸವಕಲು. ಭಟ್ಟಾರಕತಿಪ್ಪೆ ಯೂರಿನ ನಿವಾಸಿಗಳು ಮತ್ತು ನೀನೆಗ, ಬೀರಮಂಡಲ ಸಂಗ-ಮಾರ ಮುಂತಾದವರ ನಡುವೆ ಆದ ಒಪ್ಪಂದ.	,,
೬.	ಸಾತನೂರು	ಕಾನಕಾನಹಳ್ಳಿ	ಬೆಂಗಳೂರು	೮೯೮	,,	,,	ವೀರಗಲ್ಲು. ತುರುಂಗಾಳಗದಲ್ಲಿ ಸಿದ್ದಪ್ಪ–ದುಗ್ಗಯ್ಯನ ವೀರ ಮರಣ.	ಆ.ಸ.ಮೈ.ಆ.ರಿ. ೧೯೨೨, ಪು. ೧೦

ಅ.ನಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ.ಶ.	ಆಳುವಅರಸ	ಅರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೭.	ಚೇಳೂರು	ಬಾಗೇಪಲ್ಲಿ	ಕೋಲಾರ	೯೦೦	ಸತ್ಯವಾಕ್ಯ ಪೆರ್ಮಾನಡಿ (ರಾಚಮಲ್ಲII)	ಗಂಗ	ತ್ರುಟಿತ. ವೀರಗಲ್ಲು. ಗುಂಗೂರಿನಲ್ಲಿ ನಡೆದ ಕಾಳಗದಲ್ಲಿ ನೊಂಚಕಾವುಣ್ಡನ ಉಲ್ಲೇಖ.	ಆ.ಸ.ಮೈ.ಆ.ರಿ. ೧೯೨೧, ಪು. ೧೮
೮.	ಪರಸಯ್ಯನ ಹುಂಡಿ	ಮೈಸೂರು	ಮೈಸೂರು	—	,,	,,	ತ್ರುಟಿತ. ದೊರಗೊಂಡನಿಂದ ದತ್ತಿ.	ಆ.ಸ.ಮೈ.ಆ.ರಿ. ೧೯೨೦, ಪು. ೩೦
೯.	ರಾಮಂದೂರು	ಮಳವಳ್ಳಿ	ಮಂಡ್ಯ	—	,,	,,	ಸವಕಲು. ಮೇರುಮಂಗಲ, ಗಂಗವಾಡಿ, ವಡಗರೆನಾಡು, ಪೆರುಗಾವಲು ಮತ್ತು ಕಿಱು-ಗಾವಲಂಗಳ ಉಲ್ಲೇಖ.	,,
೧೦.	ದುಂತೂರು	ಕಾನಕಾನಹಳ್ಳಿ	ಬೆಂಗಳೂರು	೯೦೦	ಎಱೆಯಪ್ಪ	,,	ವೀರಗಲ್ಲು. ತುರುಗಾಳಗದಲ್ಲಿ ವೈಂದನ ವೀರಮರಣ.	ಆ.ಸ.ಮೈ.ಆ.ರಿ. ೧೯೨೨, ಪು. ೧೦

ಅ.ನಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ.ಶ.	ಆಳುವಅರಸ	ಅರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೧೧.	ದನುಗೂರು	ಮಳವಳ್ಳಿ	ಮಂಡ್ಯ	—	ಗಂಗಗಾಂಗೇಯ (ಬೂತುಗ)	ಗಂಗ	ಅರಸನಿಂದ ನಾಚಮನಿಗೆ ದನುಗೂರು ಗ್ರಾಮವನ್ನು ಕಲ್‌ನಾಟ್ಟಾಗಿ ಕೊಟ್ಟುದು.	ಆ.ಸ.ಮೈ.ಆ.ರಿ. ೧೯೨೦, ಪು. ೩೦
೧೨.	ಕೊಡಲೂರು	ಟಿ. ನರಸೀಪುರ	ಮೈಸೂರು	೯೨೬	ಮಾರಸಿಂಹ	,,	ತಾಮ್ರಶಾಸನ. ಮಾರಸಿಂಹನಿಂದ ವಾದಿಂಘಳ ಭಟ್ಟನಿಗೆ ಗಂಗಪಾಟಿಯ ಪುಣಾಟ ೬೦೦೦ದ ಬಡಗರೆ ೩೦೦ರ ಬಾಗಿಯೂರು ಗ್ರಾಮದ ದತ್ತಿ.	ಆ.ಸ.ಮೈ.ಆ.ರಿ. ೧೯೨೧, ಪು. ೧೮
೧೩.	ಬೇಚಿರಾಖ್ ಮಾಲಾಗಾಲ	ಮೈಸೂರು	,,	—	ಪೆರ್ಮಾಡಿ	,,	ತ್ರುಟಿತ. ವೀರಗಲ್ಲು. ಕಾಳಗದಲ್ಲಿ ಮರಣವನ್ನಪ್ಪಿದವನ ಉಲ್ಲೇಖ.	ಆ.ಸ.ಮೈ.ಆ.ರಿ. ೧೯೨೦, ಪು. ೩೦
೧೪.	ರಾವಂದೂರು	ಮಳವಳ್ಳಿ	ಮಂಡ್ಯ	ಸು. ೯೦೦	—	,,	ಅಸವಯ್ಯ, ದುಗ್ಗಯ್ಯ ಮತ್ತು ನೊಳಂಬರಿಂದ ದಾನ. ಶಾಸನ ಬರೆದವನು ಈಶ್ವರಯ್ಯ.	,,

ಅ.ನಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ.ಶ.	ಆಳುವಅರಸ	ಅರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೧೫.	ಹುಲ್ಲೇಗಾಲ	ಮಳವಳ್ಳಿ	ಮಂಡ್ಯ	ಸು. ೯೫೦	—	ಗಂಗ	ನೊಳಮಯ್ಯನ ನಿಶಿಧಿ.	ಆ.ಸ.ಮೈ.ಆ.ರಿ. ೧೯೨೦, ಪು. ೩೦
೧೬.	ಕ್ಯಾತಗಟ್ಟ	,,	,,	,,	—	,,	ವೀರಗಲ್ಲು. ಕುಣಂಗನ ಮರಣ.	,,
೧೭.	ಕಾಡುಕೊತ್ತನಹಳ್ಳಿ	,,	,,	೯೮೬	—	,,	ಗೋಯರರ ಆಳ್ವಿಕೆಯಲ್ಲಿ, ಬಲ್ಲಪ್ಪನಿಂದ ಗಂಗವಾಡಿಯ ಮೇಲೆ ಆದ ದಾಳಿಯಲ್ಲಿ ಅರ್ಜುನ ಗಾವುಂಡನ ಮಗ ಮರಣವನ್ನಪ್ಪಿದ.	,,
೧೮.	ಸೆಟ್ಟಿಹಳ್ಳಿ	,,	,,	—	—	,,	ಅರಿಯಸೆಟ್ಟಿಯಿಂದ ದತ್ತಿ.	,,
೧೯.	ಸಾತನೂರು	ಕಾನಕಾನಹಳ್ಳಿ	ಬೆಂಗಳೂರು	ಸು. ೯೦೦	—	ನೊಳಂಬ	ತ್ರುಟಿತ. ವೀರಗಲ್ಲು. ತುರುಗಾಳಗದಲ್ಲಿ ಸಾವನ್ನಪ್ಪಿದವನ ಉಲ್ಲೇಖ.	ಆ.ಸ.ಮೈ.ಆ.ರಿ. ೧೯೨೨, ಪು. ೧೦

ಅ.ಸಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ.ಶ.	ಆಳುವಅರಸ	ಅರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೨೦.	ಸಾತನೂರು	ಕಾನಕಾನಹಳ್ಳಿ	ಬೆಂಗಳೂರು	ಸು ೯೦೦	—	ನೊಳಂಬ	ತ್ರುಟಿತ. ಸಾವಂದಿನಾಡು ೭೦ ಮತ್ತು ವೀರಗಲ್ಲು ಕೆತ್ತಿದ ರೂವಾರಿಯ ಉಲ್ಲೇಖ.	ಆ.ಸ.ಮೈ.ಆ.ರಿ. ೧೯೨೨, ಪು. ೧೦
೨೧.	,,	,,	,,	,,	—	,,	ತ್ರುಟಿತ. ವೀರಗಲ್ಲು. ರಾಚಯ್ಯನ ಉಲ್ಲೇಖ.	,,
೨೨.	ಚಾಮರಾಜನಗರ	ಚಾಮರಾಜ ನಗರ	ಮೈಸೂರು	೮೦೭	ಗೋವಿಂದ III	ರಾಷ್ಟ್ರಕೂಟ	ಅಪೂರ್ಣ. ಕಂಬದೇವನಿಂದ ತಳವನನಗರದಲ್ಲಿ ಕಟ್ಟಲಾದ ಶ್ರೀವಿಜಯ ವಸತಿಗಾಗಿ, ವರ್ಧಮಾನ ಗುರುವಿಗೆ ವದಣಗುಪ್ಪೆ ಗ್ರಾಮದ ದತ್ತಿ.	ಆ.ಸ.ಮೈ.ಆ.ರಿ. ೧೯೨೦, ಪು. ೩೧
೨೩.	ದನುಗೂರು	ಮಳವಳ್ಳಿ	ಮಂಡ್ಯ	೧೦೫೦	—	ಚೋಳ	ಸವಕಲು. ವರ್ತಕರು, ಸೈನಿಕರು ಮತ್ತಿತರೊಡನೆ ಆದ ಒಪ್ಪಂದ ಇರಬಹುದು.	,,

ಅ.ನಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ.ಶ.	ಆಳುವಅರಸ	ಅರಸುಮನೆತನ	ಶಾಸನದ ವಿವರ	ವರದ ಮತ್ತು ಉಲ್ಲೇಖ
೨೪.	ಬಸ್ತಿಹೊಸ ಕೋಟೆ	ಕೃಷ್ಣರಾಜ ಪೇಟೆ	ಮಂಡ್ಯ	೧೧೧೭	ವಿಷ್ಣುವರ್ಧನ	ಹೊಯ್ಸಳ	ಮಂತ್ರಿ ಪುಣಿಸಮಯ್ಯನಿಂದ ವಿಷ್ಣುವರ್ಧನ ಪೊಯ್ಸಳ ಜಿನಾಲಯದ ಮೂಲಸ್ಥಾನ ಬಸದಿಯ ನಿರ್ಮಾಣ ಮತ್ತು ದತ್ತಿ.	ಆ.ಸ.ಮೈ.ಆ.ರಿ. ೧೯೨೦, ಪು. ೩೨
೨೫.	,,	,,	,,	—	,,	,,	ಪುಣಿಸನ ಪತ್ನಿಯ ವರ್ಣನೆ. ಶಾಸನ ಕೊರೆದವನು ಛಾಯಾಚಾರಿ.	,,
೨೬.	,,	,,	,,	೧೧೬೫	ನರಸಿಂಹ I	,,	ಹೆಗ್ಗಡೆ ಸೋಮಯ್ಯ ಮತ್ತು ಶಿವರಾಜರಿಂದ ಮಾಣಿಕ್ಯ-ವೊಳಲಿನ ಹೊಯ್ಸಳ ಜಿನಾ-ಲಯಕ್ಕೆ ದತ್ತಿ. ಶಾಸನ ಕೊರೆದವನು ಮಲ್ಲೋಜ.	,,

ಅ.ನಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ.ಶ.	ಆಳುವಅರಸ	ಅರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೨೭.	ಹುಲ್ಲಹಳ್ಳಿ	ಮಳವಳ್ಳಿ	ಮಂಡ್ಯ	೧೧೭೧	ನರಸಿಂಹ I	ಹೊಯ್ಸಳ	ವೀರಗಲ್ಲು. ಸಾಲಗಾವುಂಡನ ಮರಣ.	ಆ.ಸ.ಮೈ.ಆ.ರಿ. ೧೯೨೦, ಪು. ೩೨
೨೮.	ಚಿಕ್ಕ ಅರಸಿನಕೆರೆ	,,	,,	,,	,,	,,	ಸರ್ವಾಧಿಕಾರಿ ಮಾಚಯ್ಯ ಮಂತ್ರಿತರರಿಂದ ಮಾದೆದೇವರಿಗೆ ದತ್ತಿ.	,,
೨೯.	ಮಂಟ್ನಹಳ್ಳಿ	,,	,,	,,	,,	,,	ತ್ರುಟಿತ. ದೇವಸ್ಥಾನವೊಂದಕ್ಕೆ ದತ್ತಿ.	,,
೩೦.	ಕಡಲವಾಗಿಲು	,,	,,	೧೧೯೨	ಬಲ್ಲಾಳ II	,,	ಕಾಳಗದಲ್ಲಿ ಮೃತನಾದ ಪೆರು- ಮಾಳಂ ನಾಯಂಕನ ಉಲ್ಲೇಖ.	ಅದೇ, ಪು. ೩೩
೩೧.	,,	,,	,,	,,	,,	,,	ವೀರಗಲ್ಲು. ತುರುಗಾಳಗದಲ್ಲಿ ಕಾಮೆಯಂನಾಯಂಕನ ಮರಣ.	,,
೩೨.	ಬೊಪ್ಪಸಂದ್ರ	,,	,,	೧೧೯೬	,,	,,	ವೀರಗಲ್ಲು. ತುರುಗಾಳಗದಲ್ಲಿ ಬೀರಗೌಡನ ಮರಣ.	.

ಅ.ನಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ.ಶ.	ಆಳುವಅರಸ	ಅರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೩೩.	ವಾರಲಹಳ್ಳಿ	ಮಳವಳ್ಳಿ	ಮಂಡ್ಯ	೧೧೯೯	ಬಲ್ಲಾಳ II	ಹೊಯ್ಸಳ	ಅರಸನಿಂದ ತಟ್ಟೈಕ್ಕಾಡಿನ ಇರಾಜರಾಜೇಶ್ವರಂ ಉಡ್ಡೈಯಂ ನಾಯನಾರ್‌ಗೆ ದತ್ತಿ.	ಆ.ಸ.ವ್ಯೆ.ಆ.ರಿ. ೧೯೨೦, ಪು. ೩೩
೩೪.	ಕಲ್ಕುಣಿ	,,	,,	ಸಂ. ೧೨೨೦	,,	,,	ಮಾದಿರಾಜ ಹೆಗ್ಗಡೆಯಿಂದ ನಾಗೇಶ್ವರ ದೇವರ ಪ್ರತಿಷ್ಠೆ. ಅದಕ್ಕೆ ಬಡಗರೆನಾಡಿನ ಪ್ರಭು ಗಾವುಂಡಗಳಿಂದ ಬಲಸಮುದ್ರ ಕೆರೆಯ ನಿರ್ಮಾಣ ಮತ್ತು ದತ್ತಿ.	,,
೩೫.	ಬೊಪ್ಪಸಂದ್ರ	,,	,,	—	,,	,,	ಅಪೂರ್ಣ. ಅರಸನ ಹೆಸರಿನ ಉಲ್ಲೇಖ.	,,
೩೬.	ಬೇಚಿರಾಖ್ ಕದಬಳ್ಳಿ	,,	,,	೧೨೩೩	ಸೋಮೇಶ್ವರ	,,	ವೀರಗಲ್ಲು. ವೀರನೊಬ್ಬನ ಮರಣ.	,,

ಅ.ನಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ.ಶ.	ಆಳುವಅರಸ	ಅರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೩೭.	ಅಂತರವಳ್ಳಿ	ಮಳವಳ್ಳಿ	ಮಂಡ್ಯ	೧೨೩೭	ಸೋಮೇಶ್ವರ	ಹೊಯ್ಸಳ	ಅರಸನಿಂದ ರಾಮೇಶ್ವರ ದೇವರಿಗೆ ಅಂತರವಳ್ಳಿ ಗ್ರಾಮಂದ ದತ್ತಿ.	ಆ.ಸ.ಮೈ.ಆ.ರಿ. ೧೯೨೦, ಪು. ೩೩
೩೮.	ಗೌಡಗೆರೆ	,,	,,	೧೨೫೩	,,	,,	ಅರಸನಿಂದ ಗವುಡಗೆಱೆಯ ಪಟ್ಟಣಸ್ವಾಮಿಂಗಳಿಗೆ ದೇವ–ಮಾನ್ಯವಾಗಿ ೪ ಸಲಗೆ ಭೂದತ್ತಿ.	,,
೩೯.	ಸಾಲಹಳ್ಳಿ	,,	,,	೧೨೫೪	,,	,,	ಕಾಡಿಲಗೌಡನಿಗೆ ಸಾವೆಹಳ್ಳಿಯ ದತ್ತಿ.	,,
೪೦.	ಕಲ್ಕುಣಿ	,,	,,	೧೨೫೮	ನರಸಿಂಹ III	,,	ತ್ರುಟಿತ. ಅಧಿಕಾರಿ ಹರಿಹರ ಮತ್ತು ಬಡಗರೆ ಮಹಾಪ್ರಜೆ ಗಾವುಂಡರಿಂದ ದತ್ತಿ.	ಅದೇ, ಪು. ೩೩-೩೪
೪೧.	ಹುಸಗೂರು	,,	,,	೧೨೬೮	,,	,,	ಚಟ್ಟೋದೆಯನಿಂದ ಮಾಚ–ಗಾವುಂಡ ಮತ್ತಿತರರಿಗೆ ದತ್ತಿ.	ಅದೇ, ಪು. ೩೪

ಅ.ನಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ.ಶ.	ಆಳುವಅರಸ	ಅರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೪೨.	ಕಿರುಗಾವಲು	ಮಳವಳ್ಳಿ	ಮಂಡ್ಯ	೧೨೭೨	ನರಸಿಂಹ III	ಹೊಯ್ಸಳ	ಸೋಮನಾಥಪುರ ದೇವಸ್ಥಾನ ವೊಂದಕ್ಕೆ ದತ್ತಿ.	ಆ.ಸ.ವೈ.ಆ.ರಿ. ೧೯೨೦, ಪು. ೩೪
೪೩.	ಬೇಡರವಾಡಿ	,,	,,	೧೨೭೪	,,	,,	ವೀರಗಲ್ಲಂ. ಮಂಸಣಗವುಡ ಮತ್ತು ಸಿರಿಯಗವುಡರ ವೀರ ಮರಣ.	,,
೪೪.	ಹುಲ್ಲೇಗಾಲ	,,	,,	೧೨೭೯	,,	,,	ವೀರಗಲ್ಲಂ. ಹೆಬ್ಬಟ್ಟದ ನಾರಸಿಂಗದೇವನೊಡನೆ ನಡೆದ ಕದನದಲ್ಲಿ ಕರಿಯಮಾರ ಗವುಡನ ಮರಣ.	,,
೪೫.	ದೊಡ್ಡ ಅರಸಿನಕೆರೆ	,,	,,	೧೨೮೩	,,	,,	ವಡಕರೈನಾಡಿನ ಅರಶಂಕಿಜ್ಯೈನ ಮಾಧವಪೆರುಮಾಳ ದೇವರಿಗೆ ದತ್ತಿ.	,,

ಅ.ನಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ.ಶ.	ಆಳುವಅರಸ	ಅರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೪೬.	ಕಿರಗಸೂರು	ಮಳವಳ್ಳಿ	ಮಂಡ್ಯ	೧೨೮೫	ನರಸಿಂಹ III	ಹೊಯ್ಸಳ	ವೀರಗಲ್ಲು.ತೆಂಕನಹಳ್ಳಿ ಮಾರಪ್ಪ ಮತ್ತು ಅಳಿಯ ಮಾದೆಯರ ಮರಣ.	ಆ.ಸ.ಮೈ.ಆ.ರಿ. ೧೯೨೦, ಪು ೩೪
೪೭.	ಸುಜಟೂರು	,,	,,	ಸಂ. ೧೨೯೭	,,	,,	ಅಗ್ರಹಾರ ಸರ್ವಜ್ಞಪ್ರಸನ್ನ ಕೇಶವಪುರದ ಮಹಾಜನರಿಂದ ಗೋಬೂರಿನ ಮಹಾಜನರಿಗೆ ಮತ್ತು ಸೆಟ್ಟಿಗಳಿಗೆ ಭೂಮಿಯ ಕಟ್ಟುಗೊಡಗೆ.	,,
೪೮.	ಸೋಮನಹಳ್ಳಿ	,,	,,	೧೩೦೦	ಬಲ್ಲಾಳ III	,,	ತಲಕಾಡು ಎಬೇಶ್ವರ ದೇವ ಸ್ಥಾನದ ಪೆರಿಯಂಣ ಸಂಬು-ದೇವ, ಸ್ಥಾನಿಕರು ಮತ್ತು ಬೂದಿಹಾಳಿನ ಸೆಟ್ಟಿಯರು ಮಾಡಿಕೊಂಡ ಒಪ್ಪಂದ.	,,

ಅ.ನಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ.ಶ.	ಆಳುವಅರಸ	ಅರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೪೯.	ಮುಟ್ನಹಳ್ಳಿ	ಮಳವಳ್ಳಿ	ಮಂಡ್ಯ	೧೩೦೩	ಬಲ್ಲಾಳ III	ಹೊಯ್ಸಳ	ತಲಕಾಡು ಕಾತ್ತುದಯಪಲ್ಲೈ ಕೂತ್ತಾವಳಭಟ್ಟನ್‌ನಿಂದ ಕುಡಂಗೈಪಳ್ಳಿಯ ಭೂದಾನ.	ಅ.ಸ.ಮೈ.ಅ.ರಿ. ೧೯೨೦, ಪು. ೩೪
೫೦.	ಎಡಮಾರನಹಳ್ಳಿ	ಕಾನಕಾನಹಳ್ಳಿ	ಬೆಂಗಳೂರು	೧೩೧೦	,,	,,	ಸೋಮಯಂದಣ್ಣಾಯಕನಿಂದ ಜನಾರ್ದನ ದೇವರಿಗೆ ಮಾರೆಯಹಳ್ಳಿಯ ದಾನ.	ಅ.ಸ.ಮೈ.ಅ.ರಿ. ೧೯೨೨, ಪು. ೧೧
೫೧.	ಕಾನಕಾನಹಳ್ಳಿ	,,	,,	,,	,,	,,	ತಾಮ್ರಶಾಸನ. ಅರಸನು ಪಾಂಚಾಳರಿಗೆ ಕೆಲವು ತೆರಿಗೆ ಎತ್ತುವ ಅಧಿಕಾರವನ್ನೂ ಅದರ ವಿನಿಯೋಗವನ್ನೂ ತಿಳಿಸಿರುವನು.	,,
೫೨.	ಬನ್ನಹಳ್ಳಿ	ಮಳವಳ್ಳಿ	ಮಂಡ್ಯ	೧೩೧೩	,,	,,	ಮಲ್ಲಪ್ಪನಾಗಪಂಡಿತನಿಗೆ ವಿಭಾಗಪತ್ರ. ಬರೆದವನು ವಾಸುನಾರಾಯಣ.	ಅ.ಸ.ಮೈ.ಅ.ರಿ. ೧೯೨೦, ಪು. ೩೪

ಅ.ಸಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ.ಶ.	ಆಳುವಅರಸ	ಅರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೫೩.	ಹುಂಸಗೂರು	ಮಳವಳ್ಳಿ	ಮಂಡ್ಯ	೧೩೧೩	ಬಲ್ಲಾಳ III	ಹೊಯ್ಸಳ	ತಲಕಾಡಿನ ಆದಿದೇವರಸ ಮತ್ತು ಪಂಚಮಂಠಗಳ ಸ್ಥಾನಪತಿಗಳಿಂದ ಆನೆಬಸದಿಯ ಜೀರ್ಣೋದ್ಧಾರಕ್ಕಾಗಿ ಕೆಲವು ಗೌಡರಿಗೆ ಭೂದತ್ತಿ.	ಆ.ಸ.ವೈ.ಆ.ರಿ. ೧೯೨೦, ಪು. ೩೪–೩೫
೫೪.	,,	,,	,,	,,	,,	,,	ತಲಕಾಡಿನ ಆನೆಬಸದಿಯ ಸ್ಥಾನಪತಿ ಮತ್ತು ಶಿವ ಗಾವುಂಡನಿಂದ ಕೋವಾಳಿಗೆ ದತ್ತಿ.	ಅದೇ, ಪು. ೩೫
೫೫.	ಜೋಡಿಚಂದಹಳ್ಳಿ	,,	,,	,,	,,	,,	ವಿವಿಧ ವ್ಯಕ್ತಿ, ಪುರ, ಮಠ, ವರ್ತಕರಿಂದ ನಾಲ್ವರು ಪಟ್ಟಣ ಸ್ವಾಮಿಗಳಿಗಾಗಿ ಚಂದಹಳ್ಳಿಗೆ ಪೂರ್ವದಲ್ಲಿ ಹೊಸಪಟ್ಟಣ ನಿರ್ಮಿಸಲು ವಿನಾಯಿತಿ.	,,

ಕ್ರ.ಸಂ.	ಗ್ರಾಮ	ತಾಲ್ಲೂಕು	ಜಿಲ್ಲೆ	ಕ್ರಿ.ಶ.	ಆಳುವರಸ	ಅರಸುಮನೆತನ	ಶಾಸನದ ವಿವರ	ಪ್ರಕಟಣೆ ಮತ್ತು ಉಲ್ಲೇಖ
೫೬.	ಅರಳಾಳು	ಕಾನಕಾನಹಳ್ಳಿ	ಬೆಂಗಳೂರು	೧೩೧೬	ಬಲ್ಲಾಳ III	ಹೊಯ್ಸಳ	ತ್ರುಟಿತ. ಸಿಂಗಲನಾಡನ್ನು ಆಳುವ ಮಾರದೇವನಿಂದ ದತ್ತಿ. ರೂವಾರಿ ಕಣ್ಣಪ್ಪನ್.	ಆ.ಸ.ವ್ಯ.ಆ.ರಿ. ೧೯೨೨, ಪು.೧೧
೫೭.	ನಾಯಂಕನಹಳ್ಳಿ	..	..	೧೩೧೮	..	..	ಸಿಂಗಲನಾಡಿನ ಮಾರದೇವ, ಮಾರಪ್ಪ ಮತ್ತು ಪ್ರಜೆ ಗಾವುಂಡರಿಂದ ಮಾಧವ ಸೆಟ್ಟಿಗೆ ಅರುಳಹಳ್ಳಿಯ ಸೆಟ್ಟಿಕೊಡುಗೆ.	..
೫೮.	ಹಳ್ಳೂರು	..	..	..	..	..	ಸವಕಲು. ಮಾರದೇವ ಮತ್ತು ಇತರರಿಂದ ಅಚಲುಗ್ರಾಮದ ಮಾರಾಟ.	..
೫೯.	..	..	..	..	..	..	ಜಾಯಿದೇವ ಮತ್ತು ಜೋಗಾಯಿ ಅಕ್ಕರಿಂದ ಪಾರಿಸಸೆಟ್ಟಿಗೆ ದಾನ.	..

ಅ.ನಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ.ಶ.	ಆಳುವಅರಸ	ಅರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೬೦.	ಜೋಡಿಬಾಚಹಳ್ಳಿ	ಕಾನಕಾನಹಳ್ಳಿ	ಬೆಂಗಳೂರು	೧೩೨೮	ಬಲ್ಲಾಳ III	ಹೊಯ್ಸಳ	ಸಿಕ್ಕವಿಟ್ಟಪ್ಪನ್‌ನಿಂದ ದಾಮೋದರ ಪೆರುಮಾಳ ದೇವರಿಗೆ ಗ್ರಾಮವೊಂದರ ದತ್ತಿ.	ಆ.ಸ.ಮೈ.ಆ.ರಿ. ೧೯೨೨, ಪು. ೧೧
೬೧.	ಚಿಕ್ಕೊಪ್ಪ	,,	,,	೧೩೩೭	,,	,,	ಮಾರದೇವನಿಂದ ವಿಟ್ಟಲಚನ್ನ ಸೆಟ್ಟಿಗೆ ಮೂರುಗ್ರಾಮಗಳ ದಾನ.	,,
೬೨.	ತಿಗಡಹಳ್ಳಿ	ಮಳವಳ್ಳಿ	ಮಂಡ್ಯ	,,	,,	,,	ತಳಕಾಡಿನ ಮಲ್ಲಪ್ಪ ಮುಂತಾದವರಿಂದ ಮಾರಭಕ್ತ ಮತ್ತು ಇತರರಿಗೆ ಗ್ರಾಮವೊಂದರ ದಾನ. ಪ್ರತಿಯೊಬ್ಬನಿಗೂ ಸಲ್ಲುವ ಭಾಗದ ಉಲ್ಲೇಖವೂ ಇದೆ.	ಆ.ಸ.ಮೈ.ಆ.ರಿ. ೧೯೨೦, ಪು. ೩೫

ಅ.ನಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ.ಶ.	ಆಳುವಅರಸ	ಅರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೬೩.	ಶಿವನಹನಹಳ್ಳಿ	ಕಾನಕಾನಹಳ್ಳಿ	ಬೆಂಗಳೂರು	೧೩೪೧	ಬಲ್ಲಾಳ III	ಹೊಯ್ಸಳ	ಶೆಂಬಗಾಮಿಣ್ಣನಿಂದ ಸ್ಥಾನಪತಿ ಮಾಧವಭಟ್ಟ ಮತ್ತು ಶೋವುಡ್ಯೆಯಾಟ್ವಾರ್‌ರಿಗೆ ಕೆರೆ ಹಾಗೂ ಭೂದಾನ.	ಆ.ಸ.ಮೈ.ಆ.ರಿ. ೧೯೨೨, ಪು. ೧೧
೬೪.	ಸಾತನೂರು	,,	,,	೧೩೭೦	ಮಲ್ಲಪ್ಪ ಒಡೆಯ	ವಿಜಯನಗರ	ಕೊಮ್ಮೆಚಿಯ ಗುಡ್ಡಪ್ಪನಿಂದ ದತ್ತಿ.	ಅದೇ, ಪು. ೧೨
೬೫.	ಕುಂದೂರು	ಮಳವಳ್ಳಿ	ಮಂಡ್ಯ	೧೩೭೮	ಹರಿಹರ II	,,	ಸವಕಲಂ. ಮೂಲಸ್ಥಾನ ದೇವರಿಗೆ ದತ್ತಿ.	ಆ.ಸ.ಮೈ.ಆ.ರಿ. ೧೯೨೦, ಪು. ೩೫
೬೬.	ಬೊಪ್ಪಸಂದ್ರ	,,	,,	೧೩೮೮	,,	,,	ಬುಕ್ಕಣ್ಣನಿಂದ ಗ್ರಾಮದೇವರ ಸೇವೆಗಾಗಿ ಕಂಪಣ್ಣ ಮುಂತಾದವರಿಗೆ ಬೊಪ್ಪಸಂದ್ರದ ದತ್ತಿ. ಅಲ್ಲದೆ ಹಲವು ತೆರಿಗೆಗಳ ಉಲ್ಲೇಖವಿದೆ.	,,

ಅ.ನಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ.ಶ.	ಆಳುವ ಅರಸ	ಅರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೬೭.	ಹಿನಿಕಲ್	ಮೈಸೂರು	ಮೈಸೂರು	—	ಹರಿಹರ II	ವಿಜಯನಗರ	ಸುಂಕಾಧಿಕಾರಿ ತಿಮ್ಮಣ್ಣನಿಂದ ನನ್ನೇಶ್ವರ ದೇವರಿಗೆ ದತ್ತಿ.	ಆ.ಸ.ಮೈ.ಆ.ರಿ. ೧೯೨೦, ಪು. ೩೫
೬೮.	ಬೊಪ್ಪಸಂದ್ರ	ಮಳವಳ್ಳಿ	ಮಂಡ್ಯ	೧೪೦೫ ಅಥವಾ ೧೪೦೬	ಬುಕ್ಕ II	,,	ತಿಪ್ಪೂರಿನ ಹಿರಿಯಣ್ಣನಿಂದ ಹಾದರವಾಗಿಲಿನ ವ್ಯಕ್ತಿಯೊಬ್ಬನಿಗೆ ದತ್ತಿ.	ಅದೇ, ಪು. ೩೬
೬೯.	ಕಬ್ಬಾಳ	ಕಾನಕಾನಹಳ್ಳಿ	ಬೆಂಗಳೂರು	೧೪೨೨	ದೇವರಾಯ II	,,	ವೀರಗಲ್ಲು. ಮಾಲೋಜ ಮತ್ತು ಮಾರೋಜರ ಮರಣ.	ಆ.ಸ.ಮೈ.ಆ.ರಿ. ೧೯೨೨, ಪು. ೧೨
೭೦.	,,	,,	,,	೧೪೨೯	,,	,,	ವೀರಪಾಂಚಾಳರಿಂದ ಪೆರುಗಾಳುವಿನ ಮಲ್ಲೋಜ-ಬೈರೋಜರಿಗೆ ಬಡಗಿ, ಕಮ್ಮಾರ, ಪತ್ತಾರ ಮೊದಲಾದ ವೃತ್ತಿ ಅಧಿಕಾರ ನೀಡಿಕೆ.	,,

ಅ.ನಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ.ಶ.	ಆಳುವಅರಸ	ಅರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೨೧.	ಚಿತ್ರದುರ್ಗ	ಚಿತ್ರದುರ್ಗ	ಚಿತ್ರದುರ್ಗ	೧೪೩೫	ದೇವರಾಯ II	ವಿಜಯನಗರ	ತಾಮ್ರಶಾಸನ. ಅರಸನಿಂದ ಲಕ್ಷ್ಮೀಧರಾರ್ಯನಿಗೆ ಕನ್ನೇನ ಹಳ್ಳಿಯ (ಪ್ರತಾಪದೇವ ರಾಜೇಂದ್ರಪುರ) ದತ್ತಿ. ರೂವಾರಿ ವೀರಣ್ಣ.	ಆ.ಸ.ಮೈ.ಆ.ರಿ. ೧೯೨೧, ಪು. ೨೯–೩೦
೨೨.	ಬೇಚಿರಾಖ್ ಮಾದಾಪಟ್ಟಣ	ಮಳವಳ್ಳಿ	ಮಂಡ್ಯ	೧೪೩೯	,,	,,	ದಣ್ಣಾಯಂಕ ರಾಯಣ್ಣ ಮತ್ತು ತಳಕಾಡು ಮಾಗಣಿಯ ಗಾವುಂಡರಿಂದ ಕೀರ್ತಿ-ನಾರಾಯಣದೇವರಿಗೆ ದತ್ತಿ.	ಆ.ಸ.ಮೈ.ಆ.ರಿ. ೧೯೨೦, ಪು. ೩೬
೨೩.	ಕ್ಯಾತನಹಳ್ಳಿ	,,	,,	,,	,,	,,	ತಳಕಾಡಿನ ಅಧಿಕಾರಿ ಪೆರುಮಾಳ ದೇವರಸನಿಂದ ಕೀರ್ತಿನಾರಾಯಣನಿಗೆ ದತ್ತಿ.	,,
೨೪.	ಕಿರಗಸೂರು	,,	,,	೧೪೪೦	,,	,,	ಲಖಣ ದಣ್ಣಾಯಕನಿಂದ ತಳಕಾಡಿನ ವೈದ್ಯನಾಥ ದೇವರಿಗೆ ಸುಂಕ ಕೊಡಲು ಸೂಚನೆ.	,,

ಅ.ನಂ.	ಗ್ರಾಮ	ತಾಲ್ಲೂಕು	ಜಿಲ್ಲೆ	ಕ್ರಿ.ಶ.	ಆಳುವಅರಸ	ಅರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೭೫.	ದಾಸದೊಡ್ಡಿ	ಮಳವಳ್ಳಿ	ಮಂಡ್ಯ	೧೪೬೩	ಮಲ್ಲಿಕಾರ್ಜುನ	ವಿಜಯನಗರ	ಸವಕಲು. ಕುಂದೂರಿನ ಮಹಾಜನರಿಂದ ದತ್ತಿ.	ಆ.ಸ.ಮೈ.ಆ.ರಿ. ೧೯೨೦, ಪು. ೩೬
೭೬.	ಚೀರಣಗುಂಪ್ಪೆ	ಕಾನಕಾನಹಳ್ಳಿ	ಬೆಂಗಳೂರು	೧೪೬೯	ವಿರೂಪಾಕ್ಷ	,,	ಚೆನ್ನವೀರಣ್ಣನಿಂದ ಗ್ರಾಮವೊಂದರ ದತ್ತಿ.	ಆ.ಸ.ಮೈ.ಆ.ರಿ. ೧೯೨೨, ಪು. ೧೨
೭೭.	ಚೆನ್ನರಾಯಪಲ್ಲಿ	ಬಾಗೇಪಲ್ಲಿ	ಕೋಲಾರ	೧೫೨೦	ಕೃಷ್ಣದೇವರಾಯ	,,	ತ್ರುಟಿತ. ಅರಸನ ಹೆಸರು ಮಾತ್ರ ಉಳಿದಿದೆ.	ಆ.ಸ.ಮೈ.ಆ.ರಿ. ೧೯೨೧, ಪು. ೩೦
೭೮.	ನೆಟ್ಟಕಲ್ಲು	ಮಳವಳ್ಳಿ	ಮಂಡ್ಯ	೧೫೩೨	ಅಚ್ಯುತರಾಯ	,,	ಮಲ್ಲರಾಜ ಒಡೆಯರಿಂದ ತಿಕ್ಕಸಾದಿಪ್ಪನಿಗೆ ನೆಟ್ಟಕಲ್ಲು ಗ್ರಾಮದ ದಾನ.	ಆ.ಸ.ಮೈ.ಆ.ರಿ. ೧೯೨೦, ಪು. ೩೭–೩೮
೭೯.	ಚಾಕೋನಹಳ್ಳಿ	ತರೀಕೆರೆ	ಚಿಕ್ಕಮಂಗಳೂರು	೧೫೩೪	,,	,,	ತಾಮ್ರಶಾಸನ. ಅರಸನಿಂದ ಶ್ರೀರಂಗಾರ್ಯನಿಗೆ ಹಳೆತಜೀಕೆಜೀಯ ದಾನ.	ಆ.ಸ.ಮೈ.ಆ.ರಿ. ೧೯೨೨, ಪು. ೧೨–೧೩

ಅ.ನಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ.ಶ.	ಆಳುವಅರಸ	ಅರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೮೦.	ಬೊಪ್ಪಸಂದ್ರ	ಮಳವಳ್ಳಿ	ಮಂಡ್ಯ	೧೫೩೭	ಅಚ್ಯುತರಾಯ	ವಿಜಯನಗರ	ವಾರಣಾಸಿ ವಿರೂಪಣ್ಣಯ್ಯ ನಿಂದ ನಂಜಯ್ಯ ಹಾಬ್ಬಾರು ವನಿಗೆ ಬೊಪ್ಪಸಮುದ್ರದ ದಾನ.	ಆ.ಸ.ಮೈ.ಆ.ರಿ. ೧೯೨೦, ಪು. ೩೮
೮೧.	ಹಣಕುಲ	,,	,,	,,	,,	,,	ತ್ರುಟಿತ. ತಳಕಾಡಿನ ವೈದ್ಯನಾಥನಿಗೆ ದತ್ತಿ.	,,
೮೨.	ಪಿಲ್ಲಗುಂಟ್ಟೆ	ಬಾಗೇಪಲ್ಲಿ	ಕೋಲಾರ	,,	,,	,,	ತ್ರುಟಿತ. ಕದರಿಗ್ರಾಮದ ಸರ್ವಮಾನ್ಯ ದತ್ತಿ.	ಆ.ಸ.ಮೈ.ಆ.ರಿ. ೧೯೨೧, ಪು. ೩೦
೮೩.	,,	,,	,,	೧೫೩೯	,,	,,	ತ್ರುಟಿತ.	ಅದೇ, ಪು. ೩೦–೩೧
೮೪.	ಬೊಮ್ಮನಹಳ್ಳಿ	ಮಳವಳ್ಳಿ	ಮಂಡ್ಯ	೧೫೪೨	,,	,,	ವೀರಣ....ನಿಂದ ಚಿಕ್ಕಸಾವಿ ಯಪನಿಗೆ ಬೊಮ್ಮನಹಳ್ಳಿಯ ದತ್ತಿ.	ಆ.ಸ.ಮೈ.ಆ.ರಿ. ೧೯೨೦, ಪು. ೩೮

ಅ.ನಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ.ಶ.	ಆಳುವಅರಸ	ಅರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೮೫.	ಚಾಕವೇಲು	ಬಾಗೇಪಲ್ಲಿ	ಕೋಲಾರ	—	ಅಚ್ಯುತರಾಯ	ವಿಜಯನಗರ	ಸವಕಲು. ಮಹಾಬಲೇಶ್ವರನಿಂದ ದತ್ತಿ.	ಆ.ಸ.ಮೈ.ಆ.ರಿ. ೧೯೨೧, ಪು. ೩೦
೮೬.	ಮಾರೆಹಳ್ಳಿ	ಮಳವಳ್ಳಿ	ಮಂಡ್ಯ	೧೫೫೦	ಸದಾಶಿವ	..	ಅಮೃತೇಶ್ವರನಿಗೆ ಬಾದುರ ಮಲ್ಲಂಕಯ್ಯನಿಂದ ದತ್ತಿ.	ಆ.ಸ.ಮೈ.ಆ.ರಿ. ೧೯೨೦, ಪು. ೩೯
೮೭.	ದಾಸನದೊಡ್ಡಿ	..	..	೧೫೫೪	..	..	ಮಲುಕ ಒಡೆಯನಿಂದ ಚಂದ್ರಶೇಖರ ಒಡೆಯರಿಗೆ ಆಚನಹಳ್ಳಿಯ ಕೊಡುಗೆ.	..
೮೮.	ಚಿಕ್ಕಮಂದದೆ	ಕಾನಕಾನಹಳ್ಳಿ	ಬೆಂಗಳೂರು	೧೫೬೩	..	..	ಸೆಟ್ಟಿಯೊಬ್ಬನಿಗೆ ಮಾಣಿಕ ಅಯ್ಯನಿಂದ ಅಂಬಿಗಹಳ್ಳಿಯ ದಾನ.	ಆ.ಸ.ಮೈ.ಆ.ರಿ. ೧೯೨೨, ಪು. ೧೩
೮೯.	ಕಾಡುಕೊಟ್ಟನಹಳ್ಳಿ	ಮಳವಳ್ಳಿ	ಮಂಡ್ಯ	—	..	..	ತಿರುಮಲರಾಜಯದೇವನಿಂದ ಕೊತನಹಳ್ಳಿಯ ದಾನ.	ಆ.ಸ.ಮೈ.ಆ.ರಿ. ೧೯೨೦, ಪು. ೩೯

ಅ.ನಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ.ಶ.	ಆಳುವಅರಸ	ಅರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೯೦.	ಚಿಂತನಪಲ್ಲಿ	ಕಲ್ಯಾಣದುರ್ಗ	ಅನಂತಪುರ (ಆಂಧ್ರಪ್ರದೇಶ)	೧೫೮೯	ವೆಂಕಟಪತಿ ರಾಯ I	ವಿಜಯನಗರ	ತಾಮ್ರಶಾಸನ. ಅರಸನಿಂದ ಸಿಂಗಾರಿಭಟ್ಟನಿಗೆ ಮೂರು ಗ್ರಾಮಂಗಳ ದತ್ತಿ. ರೂವಾರಿ ವೀರಣಮಹಾಚಾರ್ಯ.	ಆ.ಸ.ಮೈ.ಆ.ರಿ. ೧೯೨೧, ಪು. ೩೯
೯೧.	ಹೊನ್ನಿಗನಹಳ್ಳಿ	ಮಳವಳ್ಳಿ	ಮಂಡ್ಯ	೧೪೫೫	ಇಮ್ಮಡಿರಾಯ ಒಡೆಯ	ಉಮ್ಮತ್ತೂರು	ಅರಸನಿಂದ ಮಾಚಪಗೌಡನಿಗೆ ಹೊನ್ನಿಗನಹಳ್ಳಿಯ ದಾನ.	ಆ.ಸ.ಮೈ.ಆ.ರಿ. ೧೯೨೦, ಪು. ೩೯
೯೨.	ಚಿತ್ರದುರ್ಗ	ಚಿತ್ರದುರ್ಗ	ಚಿತ್ರದುರ್ಗ	೧೭೯೬	ವೀರರಾಜೇಂದ್ರ	ಕೊಡಗು	ತಾಮ್ರಶಾಸನ. ಅರಸನಿಂದ ಶಾಂತವೀರಸ್ವಾಮಿಗೆ ಐದು ಗ್ರಾಮಂಗಳ ದತ್ತಿ.	ಆ.ಸ.ಮೈ.ಆ.ರಿ. ೧೯೨೦, ಪು. ೩೯–೪೦
೯೩.	,,	,,	,,	,,	,,	,,	ತಾಮ್ರಶಾಸನ. ಅರಸನಿಂದ ಅಬ್ಬಿಮಠದ ನಿರಂಜನದೇವನಿಗೆ ದತ್ತಿ.	ಅದೇ, ಪು. ೪೦
೯೪.	ಸಸ್ಯಾಲಪುರ	ಮಳವಳ್ಳಿ	ಮಂಡ್ಯ	೧೬೭೨	ದೊಡ್ಡದೇವ ರಾಜ ಒಡೆಯ	ಮೈಸೂರು	ಅರಸನಿಂದ ಗಂಗಾಧರೇಶ್ವರನ ಅಂಗಭೋಗಕ್ಕೆ ದತ್ತಿ.	,,

ಅ.ನಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ.ಶ.	ಆಳುವಅರಸ	ಅರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೯೫.	ಮಂಚನಹಳ್ಳಿ	ಮಳವಳ್ಳಿ	ಮಂಡ್ಯ	೧೬೭೨	ದೊಡ್ಡದೇವ ರಾಜ ಒಡೆಯ	ಮೈಸೂರು	ಸವಕಲು. ಬ್ರಾಹ್ಮಣರಿಗೆ ದತ್ತಿ.	ಆ.ಸ.ಮೈ.ಆ.ರಿ. ೧೯೨೦, ಪು. ೪೦
೯೬.	ಉಳ್ಳಂಬಳ್ಳಿ	,,	,,	೧೬೭೩	ಚಿಕ್ಕದೇವರಾಜ ಒಡೆಯ	,,	ತಾಮ್ರಶಾಸನ. ರೇವಣಾರಾಧ್ಯ ಮಠದ ರುದ್ರಮುನಿದೇವಾ-ರಾಧ್ಯನಿಗೆ ಅರಸನಿಂದ ೨೧೨ ವರಹಗಳ ದಾನ.	ಆ.ಸ.ಮೈ.ಆ.ರಿ. ೧೯೨೦, ಪು. ೪೦–೪೧
೯೭.	ಲಿಂಗಾಂಬುಧಿ	ಮೈಸೂರು	ಮೈಸೂರು	೧೮೨೮	ಕೃಷ್ಣರಾಜ ಒಡೆಯ III	,,	ಕೃಷ್ಣವಿಲಾಸದ ಲಿಂಗಾಜಮ್ಮ-ಣ್ಣಿಯು ಮಹಾಲಿಂಗೇಶ್ವರ ದೇವಾಲಯ ಮತ್ತು ಲಿಂಗಾಂ-ಬುಧಿ ಕೆರೆ ನಿರ್ಮಿಸಿದುದಕ್ಕೆ ಅರಸನಿಂದ ದತ್ತಿ.	ಅದೇ,ಪು.೪೧
೯೮.	ಆಲನಹಳ್ಳಿ	,,	,,	೧೮೫೯	,,	,,	ಮುದ್ದುಕೃಷ್ಣಾಜಮ್ಮಣ್ಣಿ-ಯವರಿಂದ ಮನೋರಂಜನ ಮಹಲು ನಿರ್ಮಾಣ.	,,

ಅ.ನಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ.ಶ.	ಆಳುವಅರಸ	ಅರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೯೯.	ಚಾಮರಾಜ ಪೇಟೆ	ಚಾಮರಾಜ ಪೇಟೆ	ಮೈಸೂರು	೧೬೮೫	ಕೃಷ್ಣಪ್ಪ ನಾಯಂಕ	ಬೇಲೂರು	ತಾಮ್ರಶಾಸನ. ಅರಸನಿಂದ ಪುರಾಣ ಲಕ್ಷ್ಮಣ ಜೋಯಿಸನಿಗೆ ಹುಲುಗಳಲೆ ಗ್ರಾಮದ ದತ್ತಿ.	ಆ.ಸ.ಮೈ.ಆ.ರಿ. ೧೯೨೨,ಪು.೧೩
೧೦೦.	ಮೇಲುಕೋಟೆ	ಶ್ರೀರಂಗ ಪಟ್ಟಣ	ಮಂಡ್ಯ	೧೬೮೮	ದೊಡ್ಡ ವೀರಪ್ಪಗೌಡ	ಯಲಹಂಕ	ತಾಮ್ರಶಾಸನದ ಪ್ರತಿ. ಅರಸನಿಂದ ಮಾಗಡಿ ಲಕ್ಷ್ಮೀದೇವತೆಯ ರಥೋತ್ಸವ ಮುಂತಾದ ಕಾರ್ಯಗಳಿಗೆ ಬೇಡರ ಹಳ್ಳಿಯ ದತ್ತಿ.	ಅದೇ, ಪು. ೧೪
೧೦೧.	(ಸರಕಾರಿ ಮುದ್ರಣಾಲಯ)			(೧೭೨೮ ರ ನಂತರ)	ಕೆಂಪವೀರಗೌಡ	,,	ಕೆಂಪವೀರಗೌಡನು ಶ್ರೀರಂಗ ಪಟ್ಟಣದ ಸೆರೆಯಲ್ಲಿ ಮರಣೋನ್ಮುಖ ಸ್ಥಿತಿಯಲ್ಲಿದ್ದಾಗ ತನ್ನ ಮರಣೋತ್ತರದಲ್ಲಿ ಕೃಷ್ಣರಾಜಗೌಡನು ಸಿಂಹಾಸನ ಏರಬೇಕೆಂದು ತಿಳಿಸುವ ಪತ್ರ.	,,

ಅ.ನಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ.ಶ.	ಆಳುವಅರಸ	ಅರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೧೦೨.	ಅಬ್ಬೂರು	ಚನ್ನಪಟ್ಟಣ	ಬೆಂಗಳೂರು	೧೭೭೩	ಜವ್ವಾದಿ ವೀರಪ್ಪನಾಯಂಕ	ಮೇಲುಪಾಳೆಂ	ತೆಲುಗು ಸನದು. ಅರಸನು (ಕುಂದೂರುಪುರ ವ್ಯಾಸರಾಯ ಮಂಠ) ದ ಸ್ವಾಮಿಂಗೆ ನೀಡಿದ ದತ್ತಿ.	ಆ.ಸ.ಮೈ.ಆ.ರಿ. ೧೯೨೨, ಪು. ೧೭
೧೦೩.	ಚಿಳಕವಾಡಿ	ಮಳವಳ್ಳಿ	ಮಂಡ್ಯ	ಸು. ೧೨೦೦	—	—	ಅಗತ್ತಿಯಾಣ್ಣಾರನಿಂದ ಗಾಣ ದಾನ.	ಆ.ಸ.ಮೈ.ಆ.ರಿ. ೧೯೨೦, ಪು. ೪೧
೧೦೪.	ಕಲ್ಕುಣಿ	,,	,,	೧೨೦೦	—	—	ವೀರಗಲ್ಲು. ಸಿರೋಮಣಿಗನ ಮರಣ ಮತ್ತು ಅವನಿಗೆ ನೀಡಿದ ದತ್ತಿ.	,,
೧೦೫.	ಸಾತನೂರು	ಕಾನಕಾನಹಳ್ಳಿ	ಬೆಂಗಳೂರು	ಸು. ೧೨೦೦	—	—	ತ್ರುಟಿತ. ಶೆಯ್ಯಂಬಾರ್ಕಿಟಾನ್‌ನಿಂದ ದತ್ತಿ.	ಆ.ಸ.ಮೈ ಆ.ರಿ. ೧೯೨೨, ಪು. ೧೭
೧೦೬.	ಕಡಲವಾಗಿಲು	ಮಳವಳ್ಳಿ	ಮಂಡ್ಯ	೧೨೩೧	—	—	ಸವಕಲು ದಾಯೋಜನಿಂದ ನಿಲ್ಲಿಸಲಾದ ವೀರಗಲ್ಲು.	ಆ.ಸ.ಮೈ.ಆ.ರಿ. ೧೯೨೦, ಪು. ೪೧

ಅ.ನಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ.ಶ.	ಆಳುವಅರಸ	ಅರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೧೦೭.	ದೊಡ್ಡಅರಸಿನಕೆರೆ	ಮಳವಳ್ಳಿ	ಮಂಡ್ಯ	೧೨೫೦	—	—	ತ್ರುಟಿತ. ದೇವರಿಗಿತ್ತ ದತ್ತಿ.	ಆ.ಸ.ಮೈ.ಆ.ರಿ. ೧೯೨೦, ಪು. ೪೧
೧೦೮.	ಚಿಕ್ಕ ಅರಸಿನಕೆರೆ	,,	,,	ಸಂ. ೧೩೦೦	—	—	ಪನ್ನಿಪೆರೂಡೈಯಾನ್ ನಾರಾಯಣನು ಕೊಂಪಲ್ಲಿಯನ್ನು ದಾನವಾಗಿ ಪಡೆದ.	,,
೧೦೯.	ಸುಜಲೂರು	,,	,,	,,	—	—	ಚಾವುಂಗವುಡ ಮತ್ತು ಇತರರು ಎನಗನಿಗೆ ನಿಲ್ಲಿಸಿದ ಸ್ಮಾರಕ ಸ್ತಂಭ.	,,
೧೧೦.	ಮಾರೇಹಳ್ಳಿ	,,	,,	,,	—	—	ಅಮೃತಾರ್ಕೇಶ್ವರ ದೇವರಿಗೆ ಬೀರಗಂಗರಾಜನಿಂದ ದತ್ತಿ.	,,
೧೧೧.	ದೊಡ್ಡಅರಸಿನಕೆರೆ	,,	,,	,,	—	—	ಮಾಧವ ಪೆರುಮಾಳನಿಗೆ ಅಪ್ಪಾನಮ್ಮೈನಿಂದ ಮೂರು ಹರಿವಾಣಗಳ ದಾನ.	,,

ಅ.ನಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ.ಶ.	ಆಳುವಅರಸ	ಅರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೧೧೨.	ನಡಕಲ್‌ಪುರ	ಮಳವಳ್ಳಿ	ಮಂಡ್ಯ	೧೩೧೩	—	—	ದಕ್ಷಿಣ ಸೋಮೇಶ್ವರ ದೇವರಿಗೆ ತಳಕಾಡು (ರಾಜರಾಜಪುರ) ಏಳುಪುರದವರಿಂದ ಹಾಗೂ ಪದ್ಮದೇವಣ್ಣ, ಗಂಗಣ್ಣ ಮುಂತಾದವರಿಂದ ಹರದ-ನಾಯಕನಹಳ್ಳಿಯ ದಾನ.	ಆ.ಸ.ಮೈ.ಆ.ರಿ. ೧೯೨೦, ಪು. ೪೧
೧೧೩.	ಹಿನಿಕಲ್	ಮೈಸೂರು	ಮೈಸೂರು	೧೩೪೭	—	—	ನನ್ನೇಶ್ವರ ದೇವರಿಗೆ ಮಾಳಿಗನ ಹಳ್ಳಿಯ ಯಲಕರಗವುಡನಿಂದ ಗಾಣದಾನ.	ಅದೇ, ಪು. ೪೨
೧೧೪.	ಅಂತರವಳ್ಳಿ	ಮಳವಳ್ಳಿ	ಮಂಡ್ಯ	೧೩೬೯	—	—	ವೀರಗಲ್ಲು. ತೊರಕ (ಮುಸಲ್ಮಾನ?) ರೊಡನೆ ನಡೆದ ಕಾಳಗದಲ್ಲಿ ನಾರಣದೇವನ ಮರಣ.	,,
೧೧೫.	ಕುಂದೂರು	,,	,,	೧೩೮೩	—	—	ಕುಂದೂರಿನ ಮೂಲಸ್ಥಾನ ದೇವರಿಗೆ ಚನ್ನಪ್ಪನಿಂದ ದತ್ತಿ.	,,

ಅ.ನಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ.ಶ.	ಆಳುವಅರಸ	ಅರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೧೧೬.	ಹುಲ್ಲಹಳ್ಳಿ	ಮಳವಳ್ಳಿ	ಮಂಡ್ಯ	೧೩೮೭	—	—	ಸವಕಲು. ಸೋಮನಾಥ ಗವುಡನ ಮಗನ ಸಾವನ್ನು ಉಲ್ಲೇಖಿಸುವ ವೀರಗಲ್ಲು.	ಆ.ಸ.ಮೈ.ಆ.ರಿ. ೧೯೨೦, ಪು. ೪೨
೧೧೭.	ಅರುವನಹಳ್ಳಿ	,,	,,	೧೩೮೯	—	—	ಬಡಿಕೋಲಭಟ್ಟ–ನಾಗದೇವನಿಂದ (ಬೃಂದಾವನದ) ನಿರ್ಮಾಣ.	,,
೧೧೮.	ಗೇರಹಳ್ಳಿ	ಕಾನಕಾನಹಳ್ಳಿ	ಬೆಂಗಳೂರು	ಸು. ೧೪೦೦	—	—	ದೊಡ್ಡಜಸಯ್ಯನಿಂದ ಅತಿ-ಹಳ್ಳಿಯಲ್ಲಿ ಕಟ್ಟಿದ ಕೆರೆಗೆ ಮಲಪ್ಪನಿಂದ ದತ್ತಿ.	ಆ.ಸ.ಮೈ.ಆ.ರಿ. ೧೯೨೨, ಪು. ೧೭–೧೮
೧೧೯.	ವರಕೋಡು	ಮೈಸೂರು	ಮೈಸೂರು	೧೪೨೫	—	—	ವ್ಯಕ್ತಿಯೊಬ್ಬನು ಆಚರಿಸಿದ ಅನಂತನೋಂಪಿ.	ಆ.ಸ.ಮೈ.ಆ.ರಿ. ೧೯೨೦, ಪು. ೪೨
೧೨೦.	ಅರುವನಹಳ್ಳಿ	ಮಳವಳ್ಳಿ	ಮಂಡ್ಯ	೧೪೩೦	—	—	ತ್ರುಟಿತ. ಮಾಲ...ಬ್ಬೆಗಾಗಿ, ಅವಳ ಮಗ ಬಾಸಪ್ಪನು ನಿಲ್ಲಿಸಿದ ಮಹಾಸತಿಕಲ್ಲು.	,,

ಅ.ನಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ.ಶ.	ಆಳುವಅರಸ	ಅರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೧೨೧.	ವರಕೋಡು	ಮೈಸೂರು	ಮೈಸೂರು	೧೪೩೧	—	—	ವ್ಯಕ್ತಿಯೊಬ್ಬನು ಆಚರಿಸಿದ ಅನಂತನೋಂಪಿ.	ಆ.ಸ.ಮೈ.ಆ.ರಿ. ೧೯೨೦, ಪು. ೪೨
೧೨೨.	ಸಾಹಳ್ಳಿ	ಮಳವಳ್ಳಿ	ಮಂಡ್ಯ	೧೪೫೨	—	—	ಕಾಳನಾಯಂಕನಿಗೆ ಗವುಡ-ಗೆಜಿಯು ಮಹಾಜನರಿಂದ ದತ್ತಿ.	,,
೧೨೩.	ಚಿಕ್ಕ ಅಬ್ಬಾಗಿಲು	,,	,,	೧೪೬೦	—	—	ಮಾಲಿಂಗಿಯ ಮಾರಪ್ಪಗವುಡ ಮತ್ತು ಚನ್ನಯ್ಯರಿಂದ ನಾರಾಯಣದೇವರ ಗುಡಿಯ ಜೀರ್ಣೋದ್ಧಾರ.	,,
೧೨೪.	ಹಿನಿಕಲ್	ಮೈಸೂರು	ಮೈಸೂರು	೧೫೦೧	—	—	ನನ್ನೇಶ್ವರ ದೇವರಿಗೆ ಅಪ್ಪ-ರಾಯ ಹೆಬಾರುವನಿಂದ ಗುಡಿಹಳ್ಳಿಯ ದಾನ.	,,

ಅ.ನಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ.ಶ.	ಆಳುವಅರಸ	ಅರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೧೨೫.	ಕಲ್ಲಹಳ್ಳಿ	ಕಾನಕಾನಹಳ್ಳಿ	ಬೆಂಗಳೂರು	೧೫೦೮	—	—	ತಾಮಣ್ಣನಿಗೆ ವಿಜೋಜನಿಂದ ನಿರ್ಮಾಣವಾದ ವೀರಗಲ್ಲು.	ಆ.ಸ.ಮೈ.ಅ.ರಿ. ೧೯೨೨, ಪು. ೧೮
೧೨೬.	ಸಸ್ಯಾಲಪುರ	ಮಳವಳ್ಳಿ	ಮಂಡ್ಯ	೧೫೧೭	—	—	ದೇವರಸಗವುಡ ಮತ್ತಿತರರು ಬೇರೊಬ್ಬನೊಡನೆ ಒಪ್ಪಂದ ಮಾಡಿಕೊಂಡು, ಅವನಿಗೆ ಹಲಸಿನತಾಳುವಿನಲ್ಲಿ ಭೂದತ್ತಿ ನೀಡಿದರು.	ಆ.ಸ.ಮೈ.ಆ.ರಿ. ೧೯೨೦, ಪು. ೪೨
೧೨೭.	(ಮಹಾರಾಜರಿಂದ ದೊರೆತುದು)			,,	—	—	ನೇವಾರಿ ಭಾಷೆಯಲ್ಲಿದೆ. ತಲಭ್ಯುಕ್ರಧನನು ಮಾಡಿಸಿದ ಪ್ರತಿಮೆ.	ಆ.ಸ.ಮೈ ಆ.ರಿ. ೧೯೨೧, ಪು. ೩೧–೩೨
೧೨೮.	ಚೊಟ್ಟನಹಳ್ಳಿ	ಮಳವಳ್ಳಿ	ಮಂಡ್ಯ	೧೫೧೯	—	—	ವೀರಭದ್ರದೇವರ ಅಂಗಭೋಗಕ್ಕೆ ಮಲ್ಲಯ್ಯನಿಂದ ದಾನ.	ಆ.ಸ.ಮೈ.ಆ.ರಿ. ೧೯೨೦, ಪು. ೪೨
೧೨೯.	ಚಿಕ್ಕಹಳ್ಳಿ	ಮೈಸೂರು	ಮೈಸೂರು	೧೫೩೩	—	—	ಮರುಪುರದ ಚಿಂಗಹೆಬಾರುವನು ವರ್ಷಕ್ಕೆ ೨೭ ಗದ್ಯಾಣಗಳ	,,

ಅ.ನಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ.ಶ.	ಆಳುವಅರಸ	ಅರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
							ಪ್ರತಿಫಲ ಪಡೆಯುವ ಒಪ್ಪಂದ-ದಂತೆ ಚಿಕ್ಕಹಳ್ಳಿಯನ್ನು ಕಾರೆಗಾನಹಳ್ಳಿಯ ಶಾಂತಯದೇವನಿಗೆ ನೀಡಿದುದು.	
೧೩೦.	ಕ್ಯಾತನಹಳ್ಳಿ	ಮಳವಳ್ಳಿ	ಮಂಡ್ಯ	೧೫೩೭	—	—	ಕೊಟಗಗವುಡನಿಂದ ಕದಗ-ಹಳ್ಳಿಯ ಹೊನ್ನು ಒಡೆಯರಿಗೆ ಒಂದು ಹೊನ್ನಿನ ದಾನ.	ಆ.ಸ.ಮೈ.ಆ.ರಿ. ೧೯೨೦, ಪು. ೪೨–೪೩
೧೩೧.	ಕಂದೇಗಾಲ	,,	,,	೧೫೪೧	—	—	ಜರಿಪುರದ ಲಕ್ಷ್ಮೀನೃಸಿಂಹ ದೇವರಿಗೆ ಸೊಟಪನಾಯಕ-ನಿಂದ ಕಂದಲಗ್ರಾಮದ ದಾನ.	ಅದೇ, ಪು. ೪೩
೧೩೨.	ತಲಗವಾಡಿ	,,	,,	೧೫೫೮	—	—	ಮಹಾನಾಯಕಾಚಾರ್ಯ ಇಮ್ಮಡಿ ಕೆಂಪನಾಯಕನಿಂದ ಗ್ರಾಮ-ವೊಂದರ ದತ್ತಿ.	,,

ಅ.ನಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ.ಶ.	ಆಳುವಅರಸ	ಆರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೧೩೩.	ಶಿವನಹಳ್ಳಿ	ಕಾನಕಾನಹಳ್ಳಿ	ಬೆಂಗಳೂರು	೧೫೫೮	—	—	ಸಾವಂದಿ ವೀರೇಶ್ವರ ದೇವರಿಗೆ ಅಮೃತ ವೀರಪ್ಪ ಒಡೆಯ-ರಿಂದ ಗ್ರಾಮವೊಂದರ ದತ್ತಿ.	ಆ.ಸ.ಮೈ.ಆ.ರಿ. ೧೯೨೨, ಪು. ೧೮
೧೩೪.	ಚಿಕ್ಕಮುದಡೆ	ಕಾನಕಾನಹಳ್ಳಿ	ಬೆಂಗಳೂರು	೧೫೬೮	—	—	ಮಹಾನಾಯಂಕ ಅಯ್ಯನಿಂದ ಮಂಠವೊಂದಕ್ಕೆ ಕೆಲವು ಭೂ-ಮಿಯ ಸರ್ವಮಾನ್ಯದತ್ತಿ.	,,
೧೩೫.	ಬ್ರಹ್ಮಪುರಿ	ಹರಿಹರ	ಚಿತ್ರದುರ್ಗ	೧೫೭೧	—	—	ಕೊಟ್ಟಳಿನಾಯಂಕನಿಗೆ ಸತಿಗೆ ಉಂಬಳಿಯಾಗಿ ತುಕಾನ ಒಡೆಯರಿಂದ ಭೂದಾನ.	ಆ.ಸ.ಮೈ.ಆ.ರಿ. ೧೯೨೦, ಪು. ೪೩
೧೩೬.	ಮೇಲುಕೋಟೆ	ಶ್ರೀರಂಗಪಟ್ಟಣ	ಮಂಡ್ಯ	ಸು. ೧೬೦೦	—	—	ಸಿಂಗಿಯಂಪನಾಯಂಕನಿಂದ ಮಂಟಪ ನಿರ್ಮಾಣ.	,,
೧೩೭.	ಸೋಮೇನಹಳ್ಳಿ	ಬಾಗೇಪಲ್ಲಿ	ಕೋಲಾರ	,,	—	—	ಗಂಗಾನಿಪಲ್ಲಿ ಅಗ್ರಹಾರದ ಮಹಾಜನರು ಮಾಡಿದ ಮಾನ್ಯ.	ಆ.ಸ.ಮೈ.ಆ.ರಿ. ೧೯೨೧, ಪು.೩೨

ಅ.ನಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ.ಶ.	ಆಳುವಅರಸ	ಅರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೧೩೮.	ಆಲಹಳ್ಳಿ	ಕಾನಕಾನಹಳ್ಳಿ	ಬೆಂಗಳೂರು	೧೬೦೦	—	—	ಸುಂಕ ಸಂಗ್ರಹದಲ್ಲಿ ಮುಕೊಡಲುವಿನ ಬೀರಪ್ಪ ಒಡೆಯನು ಮಾಡಿದ ವ್ಯವಸ್ಥೆ.	ಆ.ಸ.ಮೈ.ಆ.ರಿ. ೧೯೨೨, ಪು. ೧೮
೧೩೯.	ಪರಗೋಡು	ಬಾಗೇಪಲ್ಲಿ	ಕೋಲಾರ	೧೬೮೨	—	—	ತಿಮ್ಮಸೆಟ್ಟಿಯಿಂದ ದೇವಸ್ಥಾ-ನದ ಜೀರ್ಣೋದ್ಧಾರ.	ಆ.ಸ.ಮೈ.ಆ.ರಿ. ೧೯೨೧, ಪು. ೩೨
೧೪೦.	ಹಾಗಲಹಳ್ಳಿ	ಮಳವಳ್ಳಿ	ಮಂಡ್ಯ	೧೬೯೭	—	—	ಚಾಮುಗಾಮುಣ್ಡನಿಂದ ಗಾಣವೊಂದರ ನಿರ್ಮಾಣ.	ಆ.ಸ.ಮೈ.ಆ.ರಿ. ೧೯೨೦, ಪು. ೪೩
೧೪೧.	ಮೇಲುಕೋಟೆ	ಶ್ರೀರಂಗಪಟ್ಟಣ	,,	ಸು. ೧೭೦೦	—	—	ಕರಣಿಕ ಗೋವಿಂದಯ್ಯನ ಪತ್ನಿ ಚನ್ನಮ್ಮನಿಂದ ದತ್ತಿ.	,,
೧೪೨.	ವಂದ್ದೆಪಲ್ಲಿ	ಬಾಗೇಪಲ್ಲಿ	ಕೋಲಾರ	,,	—	—	ತೆಲುಗು ಶಾಸನ. ಕರ್ತಾಲ ಚೆನ್ನಮಾಚಾರು ನೀಡಿದುದು.	ಆ.ಸ.ಮೈ.ಆ.ರಿ. ೧೯೨೧, ಪು. ೩೨

ಅ.ನಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ.ಶ.	ಆಳುವಅರಸ	ಅರಸುವಂಶನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೧೪೩.	ಮದ್ದೆಪಲ್ಲಿ	ಬಾಗೇಪಲ್ಲಿ	ಕೋಲಾರ	ಸು. ೧೭೦೦	—	—	ತೆಲುಗು ಶಾಸನ. ಸವರಾಲ ಸೇಷಾದ್ರಿ ನೀಡಿದುದು.	ಆ.ಸ.ಮೈ.ಆ.ರಿ. ೧೯೨೧, ಪು. ೩೨
೧೪೪.	,,	,,	,,	,,	—	—	ತೆಲುಗು ಶಾಸನ. ಮಾದ-ಲೋರಯ ನೀಡಿದುದು.	,,
೧೪೫.	ಕಲ್ಲಹಳ್ಳಿ	ಕಾನಕಾನಹಳ್ಳಿ	ಬೆಂಗಳೂರು	೧೮೪೦	—	—	ಆರುಕಾಡು (ಅರ್ಕಾಟ್) ಗಜರಾಜ ಮೊದಲಿಯು ಧ್ವಜ ಸ್ತಂಭದ ಕೆಳಭಾಗಕ್ಕೆ ಹಿತ್ತಾಳೆ ಹೊದಿಕೆ ಮಾಡಿಸಿದ.	ನಆ.ಸ.ಮೈ.ಆ.ರಿ. ೧೯೨೨, ಪು. ೧೮

(ಮುಗಿದುದು)

ಒರೆಗಲ್ಲು

ಶಾಂತಬಸವೇಶನ ಲಿಂಗಚಿದಮೃತಬೋಧೆ : ಒಂದು ಟಿಪ್ಪಣಿ

ಲಿಂಗಚಿದಮೃತಬೋಧೆ (ಲಿಂಗಚಿ) ವಚನ ವಾಙ್ಮಯದ ಸಂಕಲನ ವಿಭಾಗಕ್ಕೆ ಸಂಬಂಧಿಸಿದ ಕೃತಿಗಳಲ್ಲೊಂದಾಗಿದ್ದು, ಇತ್ತೀಚೆಗೆ ಕ್ರಿ. ಶ. ೧೯೭೫ರಲ್ಲಿ, 'ಕನ್ನಡ ಅಧ್ಯಯನಪೀಠ'ದ (ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ) ವತಿಯಿಂದ ಪ್ರಕಟವಾಗಿದೆ. ಪ್ರಕಟಿತ ಕೃತಿಯು ಮೂಲ ಅಪೂರ್ಣವಾಗಿದೆ. ಈಗಿರುವಂತೆ ಅಚ್ಚಾಗಿರುವ ಪ್ರತಿಯಲ್ಲಿ ೩೦ನೆಯ 'ಸ್ವಯಾನುಭಾವ ನಿರ್ದೇಶಸ್ಥಲ'ದಲ್ಲಿ ಕೃತಿ ಮುಗಿದಿದೆ. ಲಿಂಗಚಿ. ಯಿಂದ ಸಂಕಲನಕಾರನನ್ನು ಕುರಿತ ಯಾವ ಸಂಗತಿಯು ತಿಳಿಯುವುದಿಲ್ಲ.

ಮೈಸೂರು ವಿಶ್ವವಿದ್ಯಾನಿಲಯದ 'ಕನ್ನಡ ಅಧ್ಯಯನ ಸಂಸ್ಥೆ'ಯಲ್ಲಿನ ಹಸ್ತಪ್ರತಿ ಸಂಗ್ರಹದಲ್ಲಿ ಲಿಂಗಚಿ.ಯ ಸಮಗ್ರ ಓಲೆ ಪ್ರತಿಯೊಂದಿದ್ದು (K. 1595) ಅದರಿಂದ ತಿಳಿದುಬರುವ ಹೆಚ್ಚಿನ ಅಂಶಗಳನ್ನು ಈ ಕೆಳಗೆ ಕೊಟ್ಟಿದೆ

ಲಿಂಗಚಿ.ಯ ಸಂಕಲನಕಾರ ಶಾಂತಬಸವೇಶನೆಂಬ ಅಂಶ ಕೃತಿಯ ಅಂತ್ಯದಲ್ಲಿನ ಕಂದದಿಂದ ತಿಳಿಯುತ್ತದೆ. ಆ ಕಂದ ಹೀಗಿದೆ :

*ಜಯ ಜಯ ಲಿಂಗಚಿದಮೃತ ಬೋಧೆಯ
ಜಯಸಂವತ್ಸರದಿ ಭಾವಿಸಿ ಭಕ್ತಿವಿರಕ್ತಿಯ
ತಲುಮೆನೆಯನಲೊಪ್ಪಿ ಸೇರಿಸಿ
ಜಯ ಸದ್ಗುರು ಶಾಂತಬಸವೇಶ್ವರನೊರೆದಂ

ಪ್ರಕಟಿತ ಕೃತಿಯ ೩೦ನೆಯ ಸ್ಥಲದಲ್ಲಿ ೧೧ ವಚನಗಳಿವೆ. ಓಲೆ ಪ್ರತಿಯಿಂದ ಈ ಸ್ಥಲಕ್ಕೆ ಇನ್ನೂ ೯ ವಚನಗಳು ಹಾಗೂ 'ಯೋಗಿನಾಥಾ'ಂಕಿತದ ೩ ತ್ರಿವಿಧಿಗಳು ಸೇರಬೇಕೆಂಬ ಅಂಶ ತಿಳಿಯುತ್ತದೆ. (ವಿವರಗಳಿಗೆ ಅನುಬಂಧ ನೋಡಿ). ೩೧ನೆಯ 'ನಿರ್ಭಾವಾನಂದೈಕ್ಯಸ್ಥಲ'ದ ಆದಿಯಲ್ಲಿ 'ಮಹದೈಪುರೀಶ್ವರಾ'ಂಕಿತದ ವೃತ್ತವಿದೆ. ಅನಂತರ ೨೨ ವಚನ ಹಾಗೂ ೩ ತ್ರಿವಿಧಿಗಳಿವೆ. ಮುಂದೆ ಕೃತಿಯ ಪಠಣದ ಫಲನಿರೂಪಣೆಯ ಕಂದವಿದೆ. ಅನಂತರ ಕೃತಿಯ ಸ್ಥಲ ಹಾಗೂ ವಚನಗಳ ಸಂಖ್ಯಾ

---

* ಕಂದದಲ್ಲಿ ಛಂದಸ್ಸಿನ ಹಾಗೂ ಪ್ರಾಸದ ದೋಷಗಳಿವೆ.

ಪ್ರಮಾಣದ ವಿವರವಿದೆ. ಕೃತಿಯ ಕೊನೆಯಲ್ಲಿ ಸಂಕಲನಕಾರನನ್ನು ಹೆಸರಿಸಿರುವ ಕಂದವಿದೆ.

ಪ್ರಕಟಿತ ಲಿಂಗಚಿ. ಪುಟ ೨೨೬, ವಚನ ೪ ರ ಅಂಕಿತ ಸ್ಪಷ್ಟವಾಗಿಲ್ಲ. ಆ ವಚನ 'ಚೆನ್ನಮಲ್ಲಿಕಾರ್ಜುನಯ್ಯ' ಅಂಕಿತದ ಮಹಾದೇವಿಯಕ್ಕನದಾಗಿದೆ.

ಪುಟ ೨೬೪, ವಚನ ೨೭ರಲ್ಲಿ ವಚನಾಂಕಿತವಿಲ್ಲ. ಓಲೆ ಪ್ರತಿಯಿಂದ ಆ ವಚನ ಸಿಮ್ಮಲಿಗೆಯ ಚಂದಯ್ಯನದೆಂದು ತಿಳಿಯುತ್ತದೆ. ಪ್ರಕಟಿತ ಅಪೂರ್ಣ ವಚನದ ಮುಂದಿನ ಭಾಗ ಇಂತಿದೆ :

'ಅದು ಬೆಸಗೊಂಬವರಿಗೆ ವಿಷಮ ಸಿಮ್ಮಲಿಗೆಯ ಚೆನ್ನರಾಮನೆಂಬ ಲಿಂಗದ ದೆಸೆಯನಱಿಯದೆಹೋದರು.'

ಅನುಬಂಧ

(೩೦ ನೆಯ ಸ್ಥಲದ ಮುಂದಿನ ಭಾಗ)

ಕ್ರಮ ಸಂಖ್ಯೆ	ವಚನದ ಆದಿ	ವಚನದ ಅಂಕಿತ
೧೨	ಮುನ್ನಿನವರು ನಡೆದ ಪರಿ....	ಕೂಡಲಚೆನ್ನಸಂಗ
೧೩	ಶಿವತತ್ವ ಇದು ಆವ್ಯಾವೆದಡೆ....	ಕಪಿಲಸಿದ್ಧಮಲ್ಲಿಕಾರ್ಜುನ
೧೪	ಭಕ್ತನ ಭಕ್ತಿ ಮಾಹೇಶ್ವರನ ಮಾಹೇಶ....	ನಿಃಕಳಂಕ ಮಲ್ಲಿಕಾರ್ಜುನ
೧೫	ಸ್ಥಳಕುಳವನಱಿಯಬೇಕೆಂಬರು....	ಅಲೇಖನಾದ ಶೂನ್ಯಕಲ್ಲಿನೊಳಗಾದ
೧೬	ಬಿದ್ದಬೀಜ ಇಕ್ಕಿದ ಸಸಿ....	ನಿಃಕಳಂಕ ಮಲ್ಲಿಕಾರ್ಜುನ
೧೭	ಭಕ್ತಂಗೆ ಬೀಜ ರೂಪು ಮಾಹೇಶ್ವರಂಗೆ....	,, ,,
೧೮	ಇಷ್ಟಲಿಂಗದ ವಿಶ್ವಾಸ....	ಕೂಡಲಚೆನ್ನಸಂಗ
೧೯	ಆದಿಯನಾದಿ ಭಕ್ತಸ್ಥಲ....	ಗೊಹೇಶ್ವರ
೨೦	ಸತ್ಕಾತ ಗುರು ಹೊತ್ಕಾತ ಲಿಂಗ....	ಮಹಾಲಿಂಗ ಗುರುಶಿವಸಿದ್ಧೇಶ್ವರ ಪ್ರಭುವೇ

(ತ್ರಿವಿಧಿಗಳು)

೨೧ ಶಿವಭಕ್ತಿ ಶಿವಜ್ಞಾನ ಶಿವಚಿಂತೆಯನಂಬುನೀ
ಶಿವನಲ್ಲಿ ಪೊಡವೆರವ ಬುದ್ಧಿಯನ್ನು
ವಿವರದಿಂದಲಿ ತಿಳಿದು ಅವಿರಳ ಜ್ಞಾನವನಱಿದ
ಶಿವನನುಭಾವಿಯಾಗು ಯೋಗಿನಾಥ.

೨೨ ಅನುಭಾವದನುವನು ಮನವಾರೆ ವೇಧಿಸಿ
ತನು ಕರಗಿ ಪುಳಕಂಗಳೊಡೆದು ಪೊಣ್ಮಿ
ಘನಸುಖರಸದೊಳಗಾಳಿ ಮುಳುಗುವ ತೃಪ್ತಿ
ಅನುವಾಯಿತು ನಿಮ್ಮಲ್ಲಿ ಯೋಗಿನಾಥ.

೨೩ ಜಗವನುಂಗಿದ ಬ್ರಹ್ಮ...............

[ಅಷ್ಟಾವರಣಸ್ತೋತ್ರತ್ರಿವಿಧಿ, ೫೮]

(೩೧ ನೆಯ ನಿರ್ಭಾವಾನಂದೈಕ್ಯ ಸ್ಥಲ)

॥ ವೃತ್ತ ॥ ಎಲ್ಲಿಯು ಮುಕ್ತಿ ಎಲ್ಲಿಯು ಪರಾಂಗತಿ........... ಮಹದೈಪುರೀಶ್ವರಾ.

೧	ಮಾಡುವಂತಿರಬೇಕು....	ಕೂಡಲಸಂಗ
೨	ಕೀಟಕ ಸೂತ್ರದ ಗೂಡಮಾಡಿ....	ಕೂಡಲಚೆನ್ನಸಂಗ
೩	ಪುಣ್ಯಪಾಪವಿಲ್ಲವಾಗಿ....	ಗೊಹೇಶ್ವರಾಲ್ಲಯ್ಯ
೪	ಕಲ್ಲೊಳಗಣ ಕಿಚ್ಚಿನಂತೆ....	ರೇಕಣ್ಣಪ್ರಿಯ ನಾಗಿನಾಥ
೫	ಇದಿರೆಡೆಯಾದಲ್ಲಿ ಹಿಂದಣಲಗ್ಗಸತ್ತಿತ್ತು....	ಮನಸಂದಿತ್ತು ಮಾರೇಶ್ವರ
೬	ಮೃದು ಕಠಿಣ ಸೀತೋಷ್ಣಾದಿ....	ಆನಂದ ಸಿದ್ಧೇಶ್ವರ
೭	ಸರ್ವಸಂಗ ಪರಿತ್ಯಾಗವಮಾಡಿ....	ಕೂಡಲಚೆನ್ನಸಂಗ
೮	ಸ್ಥಾವರಾರಾಧಕ ಶೈವಂಗೆ ಇಷ್ಟಲಿಂಗ....	,, ,,
೯	ಮಠವೇಕೋ ಪರ್ವತವೇಕೋ....	ಗೋಹೇಶ್ವರ
೧೦	ಬೊಬ್ಬೆಯು ಬಾಯಿ ಬಾಚಿದ ಮಂಡೆ....	ಕೂಡಲಚೆನ್ನಸಂಗ
೧೧	ಆನೆಂಬುದೇನು ಇದಿರೆ ತೋರುವ ದಿದೇನೋ....	ಅಂಬಿಗರ ಚೌಡಯ್ಯ
೧೨	ತೊಗಟಿನೊಳಗಣ ಬೀಜ....	ಕಾಲಕರ್ಮವಿರಹಿತ ತ್ರಿಪುರಾಂತಕಲಿಂಗ
೧೩	ಸರ್ಪನ ಸಲಹಿದಲ್ಲಿ ಬೇಟಿ....	ನಿಃಕಳಂಕ ಮಲ್ಲಿಕಾರ್ಜುನ
೧೪	ಅಂಗ ಲಿಂಗಕ್ಕೆ ಗೂಡಾಯಿತ್ತು....	ಮಹಾದಾನಿ ಸೊಡ್ಡಳ
೧೫	ಕರ್ತನಟ್ಟಿದರೆ ಮರ್ತ್ಯದಲ್ಲಿ....	ಕೂಡಲಸಂಗಮದೇವ
೧೬	ಭಕ್ತಿಯಂತವನಿಧಿಯೆ ಮುಕ್ತಿಯಂ....	ಬಸವಣ್ಣಪ್ರಿಯ ಚೆನ್ನಸಂಗ
೧೭	ಎನ್ನ ತನು ನಿಮ್ಮ ಸೇವೆಯಲ್ಲಿ ಸವೆದು....	ಬಸವಪ್ರಿಯ ಕೂಡಲಸಂಗಮ ದೇವ
೧೮	ಅಂಗದೊಳಗೆ ಅಂಗವಾಗಿ ಅಂಗಲಿಂಗೈಕ್ಯ....	ಚೆನ್ನಮಲ್ಲಿಕಾರ್ಜುನ

೧೯	ಬಿಂದುವ ಹಱಿದೆಯಲ್ಲಾ ಬಸವಣ್ಣ...	ಕಲಿದೇವಯ್ಯ
೨೦	ಅಂಗೈಯ್ಯ ಲಿಂಗ ಕಂಗಳನೋಟ....	ಕಲಿದೇವರದೇವ
೨೧	ಯುಗದುತ್ಸಾಹವ ನೋಡಿರೆ....	ಗೊಹೇಶ್ವರ
೨೨	ಕ್ರಿಯಾಸ್ವರೂಪವೆ ಲಿಂಗವೆಂದು....	ಮಹಾಲಿಂಗ ಗುರುಶಿವ ಸಿದ್ಧೇಶ್ವರ ಪ್ರಭುವೇ

(ತ್ರಿವಿಧಿಗಳು)

೨೩ ಎರಡೆಂಟನತಿಗಳೆದು ಅಯಿದಾಱನೆ ಮೀಱಿ
ಸರಧಿ ಏಳನು ದಾಂಟಿ ಸಾಯುಜ್ಯದ
ಫಲಪದದ ಜನನವನು ಕರುಣದಿಂದಲೆ ಮೀಱಿ
ತವಕಿಸಿದ ರೂಪಯ್ಯ ಯೋಗಿನಾಥ.

೨೪ ಮನಕರಣ ಜ್ಞಾನವು ತನುವನಂಗೀಕರಿಸಿ
ವಿನೆಯದವಳ ಕೂಡಿ ಸುಖದೊಳಿರ್ದು
ಅನುವು ಆಯತವಾಗಿ ತನುವು ನಿರ್ವಯಲಾಗಿ
ಚಿನುಮಯನು ನಾನಾದೆ ಯೋಗಿನಾಥ.

೨೫ ಬಸವ ಕಾರಣ ಬಸವ ಬಸವ ಕಾರಣ ವಸುಧೆ
ಬಸವ ಕಾರಣ ಚೆನ್ನಬಸವ ಬಂದ
ಬಸವ ಚೆನ್ನಬಸವ ಪ್ರಭು ಶಿವಯೆಂಬ ಮಾತೆಯಲಿ
ಶಿಶುವಾಗಿ ಇರುತಿರ್ದೆ ಯೋಗಿನಾಥ.

ಎಸ್. ಶಿವಣ್ಣ

ಗ್ರಂಥಾವಲೋಕನ

ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ, ಸಂಪುಟ ೧. : ಪ್ರಧಾನ ಸಂಪಾದಕರು : ಡಾ. ಜಿ. ಎಸ್. ಶಿವರುದ್ರಪ್ಪ, ಪ್ರ : ಪ್ರಕಟನ ಮತ್ತು ಪ್ರಚಾರೋಪನ್ಯಾಸ ವಿಭಾಗ ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು, ೧೯೭೪. ಬೆಲೆ : ರೂ. ೨೦-೦೦ ಪುಟ : x + ೧೬೯.

ಕನ್ನಡ ಸಾಹಿತ್ಯ ಚರಿತ್ರೆಯ ಪ್ರಮಾಣಭೂತವಾದ ಗ್ರಂಥಗಳು ನಮ್ಮಲ್ಲಿ ಬಹಳಷ್ಟಿಲ್ಲ. ಅದರಲ್ಲೂ ಸಮಗ್ರ ಸಾಹಿತ್ಯವನ್ನು ವಿವರವಾಗಿ ಅವಲೋಕಿಸುವ, ಸಾಧಾರವಾಗಿ ಚರ್ಚಿಸುವ, ವಿಮರ್ಶಾತ್ಮಕವಾಗಿ ಮೌಲ್ಯಮಾಪನ ಮಾಡುವ ಕೃತಿಗಳ ಸಂಖ್ಯೆ ಇನ್ನೂ ಕಡಿಮೆ. ಅಂಥ ಒಂದು ಸಾಹಿತ್ಯ ಚರಿತ್ರೆಯನ್ನು ಪ್ರಕಟಿಸುವ ಬಯಕೆ ದಿ. ಪ್ರೊ. ತೀ. ನಂ. ಶ್ರೀಕಂಠಯ್ಯನವರಲ್ಲಿತ್ತೆಂದು ತಿಳಿದುಬರುತ್ತದೆ. ಆದರೆ ಅದು ಅವರ ಜೀವಮಾನದಲ್ಲಿ ಕೈಗೂಡಲಿಲ್ಲ. ಅವರ ಆ ಬಯಕೆಯು ಹೋಗಿಹೂ ಅವರ ಜೊತೆಗೆ ಕಾರ್ಯಮಾಡಿದವರಲ್ಲಿ ಹಾಗೂ ಅವರ ಶಿಷ್ಯರಲ್ಲಿ ಜೀವಂತವಾಗಿ ಉಳಿದು, ಸರಿಯಾದ ಸಮಯಕ್ಕಾಗಿ ಕಾದುಕುಳಿತ್ತಂತೆ ತೋರುತ್ತದೆ. ಈಗ ಅಂಥ ಸಮಯ ಕೂಡಿಬಂದು ಏಕಕಾಲಕ್ಕೆ ಎರಡು ವಿಶ್ವವಿದ್ಯಾಲಯಗಳು (ಬೆಂಗಳೂರು ಮತ್ತು ಮೈಸೂರು) ಆ ಕಾರ್ಯದಲ್ಲಿ ತೊಡಗಿದ್ದುದು ಸಾಹಿತ್ಯಾಭ್ಯಾಸಿಗಳಿಗೆ ಸಂತೋಷ ವನ್ನುಂಟುಮಾಡುವ ವಿಷಯವಾಗಿದೆ. ಈಗಾಗಲೆ ಈ ಎರಡು ವಿಶ್ವವಿದ್ಯಾಲಯಗಳು ಎರಡು-ಮೂರು ಸಂಪುಟಗಳನ್ನು ಪ್ರಕಟಿಸಿದ್ದುದನ್ನು ಇಲ್ಲಿ ನೆನೆಯಬಹುದು.

ಪ್ರಸ್ತುತದಲ್ಲಿ ಅವಲೋಕಿಸಬೇಕಾಗಿದ್ದುದು ಬೆಂಗಳೂರು ವಿಶ್ವವಿದ್ಯಾಲಯ ಪ್ರಕಟಿಸಿದ ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆಯ ಪ್ರಥಮ ಸಂಪುಟವನ್ನು. ಡಾ. ಜಿ. ಎಸ್. ಶಿವರುದ್ರಪ್ಪನವರ ಪ್ರಧಾನ ಸಂಪಾದಕತ್ವದಲ್ಲಿ ಬಹುವ್ಯಾಪಕವಾದ, ಸಾರ್ಥಕವಾದ ಯೋಜನೆಯೊಂದನ್ನು ರೂಪಿಸಿಕೊಂಡ ಈ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರ 'ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ'ಯ ಹತ್ತು ಸಂಪುಟಗಳನ್ನು ಕೊಡಲು ಸಿದ್ಧವಾಗಿದ್ದು, ಇದು ಅದರ ಪ್ರಥಮ ಸಂಪುಟ.

ಈ ಸಂಪುಟದಲ್ಲಿ ಕನ್ನಡ ಸಾಹಿತ್ಯದ ಪ್ರಾರಂಭ ಕಾಲದ ಅಂದರೆ ಆರಂಭದಿಂದ ಕ್ರಿ. ಶ. ೮೫೦ ರ ವರೆಗಿನ ಚರಿತ್ರೆಯಿದೆ. ಈ ಅವಧಿಯಲ್ಲಿಯ ಸಾಹಿತ್ಯವನ್ನು

ವಸ್ತುನಿಷ್ಠವಾಗಿ ಅವಲೋಕಿಸುವುದು, ವಿಮರ್ಶಿಸುವುದು ಕಠಿಣತರವಾದ ಕೆಲಸ. ಯಾಕೆಂದರೆ 'ಕವಿರಾಜಮಾರ್ಗ'ವೊಂದನ್ನು ಬಿಟ್ಟರೆ ಇಲ್ಲಿಯ ಗ್ರಾಂಥಿಕ ಸಾಹಿತ್ಯವೆಲ್ಲ ಅನುಪಲಬ್ಧ. ಶಾಸನಗಳಿಂದ, 'ಕವಿರಾಜಮಾರ್ಗ'ದಲ್ಲಿಯ ಸೂಚನೆಗಳಿಂದ, ಇತರ ಗ್ರಂಥಗಳು ಕೊಡುವ ಪ್ರಾಚೀನ ಕವಿ, ಕೃತಿಗಳ ಸುಳುಹು-ಹೊಳಹುಗಳಿಂದ ಇಲ್ಲಿಯ ಸಾಹಿತ್ಯವನ್ನು ಪತ್ತೆಹಚ್ಚುತ್ತ ಹೋಗಬೇಕಾಗುವುದು. ಹೀಗೆ ಮಾಡುವಾಗ ಊಹಾಪೋಹಕ್ಕೆ ಎಡೆಯಿರುವುದರಿಂದ ಐತಿಹಾಸಿಕ ಘಟನೆಗಳಿಗೆ ಕಲ್ಪನೆಯ ಬಣ್ಣಬರುವ ಸಾಧ್ಯತೆಯಿದೆ. ಹಾಗಿದ್ದರೂ ಈ 'ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ'ಯಲ್ಲಿಯ ಲೇಖನಗಳು ಹೆಚ್ಚು ವಸ್ತು ನಿಷ್ಠವಾಗಿವೆ ಇಲ್ಲಿಯ ಬಹುಪಾಲು ಸಂಶೋಧಕರು ತಮ್ಮ ತಮ್ಮ ವಿಷಯಗಳಿಗೆ ಸೂಕ್ತವಾದ ಆಧಾರಗಳನ್ನು ಒದಗಿಸಿ, ಸಪ್ರಮಾಣವಾಗಿ ಚರ್ಚಿಸಿದ್ದುದು ಕಂಡುಬರುತ್ತದೆ. ಈ ವರೆಗೆ ದೊರೆತ ಎಲ್ಲ ಸಾಮಗ್ರಿಯನ್ನೂ ಕಣ್ಣುಮುಂದಿಟ್ಟುಕೊಂಡು, ಸಂಶೋಧನ ಮತ್ತು ವಿಮರ್ಶನ ದೃಷ್ಟಿಯಿಂದ ಎಲ್ಲ ಬಗೆಯ ಅಭಿಪ್ರಾಯಗಳನ್ನು ನಿಷ್ಕರ್ಷಿಸುವ. ಕಾರ್ಯ ಇಲ್ಲಿ ಸರ್ವಸಾಮಾನ್ಯವಾಗಿ ನಡೆದಿದೆ. ಅದರಿಂದಾಗಿಯೇ ಈ ಗ್ರಂಥ ತನ್ನ ವಿಶೇಷತೆಯನ್ನು ಮೆರೆಯುವಂತಾಗಿದೆ.

ಈ ಸಂಪುಟದಲ್ಲಿರುವ ಒಟ್ಟು ಅಧ್ಯಾಯಗಳು ಹದಿನಾರು. ಇವುಗಳಲ್ಲಿ ಕೊನೆಯ ಮೂರು ಅಧ್ಯಾಯಗಳು ಕನ್ನಡೇತರ ಭಾಷೆಗಳಿಗೆ ಸಂಬಂಧಿಸಿದವು; ಮೊದಲಿನ ಐದು ಅಧ್ಯಾಯಗಳು ಕನ್ನಡ ಸಾಹಿತ್ಯಕ್ಕೆ ಭೂಮಿಕೆಯಾಗಿರುವಂತಹವು. ಉಳಿದ ಎಂಟು ಅಧ್ಯಾಯಗಳು ನಮ್ಮ ಸಾಹಿತ್ಯ ಚರಿತ್ರೆಗೆ ನೇರವಾಗಿ ಅನ್ವಯಿಸುವಂತಹವು.

ಸಾಹಿತ್ಯ ಚರಿತ್ರೆಯ ಪೂರ್ವಪೀಠಿಕೆಯಾಗಿ ಬರುವ ಮೊದಲನೆಯ ಅಧ್ಯಾಯದಲ್ಲಿ ಪ್ರಸ್ತುತ ಸಂಪುಟದ ಧೋರಣೆಯನ್ನು ತಿಳಿಸುವುದರೊಂದಿಗೆ, ಈ ಹಿಂದೆ ನಡೆದ ನಡೆಯಲಾಶಿಸಿದ ಚರಿತ್ರೆಯ ಕಾರ್ಯದ ಬಗ್ಗೆ ಕೆಲವು ಮಾತುಗಳನ್ನು ಹೇಳಲಾಗಿದೆ. ಇಲ್ಲಿ 'ಸಾಹಿತ್ಯ ಚರಿತ್ರೆಯ ವಿಭಾಗ' ಕ್ರಮವನ್ನು ಚರ್ಚಿಸಿದ್ದು ಒಂದು ವಿಶೇಷ. ಈ ಸಂದರ್ಭದಲ್ಲಿ 'ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ'ಯ ಹತ್ತು ಸಂಪುಟಗಳ ವಿಭಜನೆಯ ಬಗ್ಗೆಯೂ ಒಂದು ಮಾತು ಹೇಳಬೇಕಾಗಿತ್ತು ಎನಿಸುತ್ತದೆ. ಆದರೆ ಅದು 'ಸಮಾರೋಪ'ದಲ್ಲಿ ಬಂದು ನಮ್ಮ ಅನಿಸಿಕೆಯನ್ನು ಪೂರ್ಣಮಾಡುತ್ತದೆ. ಆದ್ದರಿಂದ 'ಪೀಠಿಕೆ' ಮತ್ತು 'ಸಮಾರೋಪ'ಗಳು ಒಂದಕ್ಕೊಂದು ಪೂರಕವಾದವುಗಳೆಂದು ಹೇಳಬಹುದು.

'ಕವಿ ಕಾಲ ನಿರ್ಣಯ ವಿಚಾರ' 'ಕನ್ನಡ ನಾಡು, ನುಡಿಗಳ ಪ್ರಾಚೀನತೆ' 'ಭಾರತೀಯ ಹಿನ್ನೆಲೆಯಲ್ಲಿ ಕರ್ನಾಟಕದ ರಾಜಕೀಯ ಚರಿತ್ರೆ' 'ಭಾರತೀಯ ಹಿನ್ನೆಲೆಯಲ್ಲಿ ಕರ್ನಾಟಕದ ಧಾರ್ಮಿಕ-ಸಾಮಾಜಿಕ ಜೀವನ' ಈ ನಾಲ್ಕು ಅಧ್ಯಾಯಗಳು ಕನ್ನಡ ಸಾಹಿತ್ಯದ ಅಧ್ಯಯನಕ್ಕೆ ಹಿನ್ನೆಲೆಯಾಗಿ ನಿಂತಿವೆ. ಸಾಹಿತ್ಯ ಚರಿತ್ರೆಯಲ್ಲಿ ಕವಿ ಕಾಲ ನಿರ್ಣಯ'ದಂಥ ಮಹತ್ವದ ಹಾಗೂ ತೊಡಕಿನ ವಿಷಯ ಇನ್ನೊಂದಿಲ್ಲ.

ಈ ವಿಷಯುವನ್ನು ಎಚ್. ದೇವೀರಪ್ಪನವರು ವಿವರವಾಗಿ, ಅನುಭವಪೂರ್ಣವಾಗಿ ಸೋದಾಹರಣವಾಗಿ, ಸುವ್ಯವಸ್ಥಿತವಾಗಿ ಚರ್ಚಿಸಿದ್ದು ಗಮನಾರ್ಹವಾಗಿದೆ. ಹೊಸ ಸಂಶೋಧಕರಿಗೆ ಈ ಅಧ್ಯಾಯು ಒಂದು ಮಾದರಿಯಾಗಿ ನಿಲ್ಲುತ್ತದೆಂದು ಹೇಳಬಹುದು. 'ಕನ್ನಡ ನಾಡು, ನುಡಿಗಳ ಪ್ರಾಚೀನತೆ'ಯುನ್ನು ಡಾ. ಕಾಮತರು ಸಂಕ್ಷೇಪವಾಗಿ ಅವಲೋಕಿಸಿದ್ದಾರೆ. ಈ ಲೇಖನ ಇನ್ನಷ್ಟು ವಿವರಣೆಗಳನ್ನೊಳಗೊಂಡಿದ್ದರೆ ಚೆನ್ನಾಗುತ್ತಿತ್ತು ಎಂದೆನಿಸುತ್ತದೆ.

ಭಾರತೀಯ ಹಿನ್ನೆಲೆಯಲ್ಲಿ ಚರ್ಚಿತವಾದ ಕರ್ನಾಟಕ ರಾಜಕೀಯ ಚರಿತ್ರೆ ಮತ್ತು ಧಾರ್ಮಿಕ–ಸಾಮಾಜಿಕ ಜನಜೀವನದಲ್ಲಿ ಹಲವಾರು ಮಹತ್ವದ ಅಂಶಗಳಿವೆ. ಅದರಲ್ಲಿಯೂ ಡಾ. ಎಂ. ಚಿದಾನಂದಮೂರ್ತಿಯವರ ಲೇಖನ ವಿಶಿಷ್ಟವಾದದ್ದು ಎನಿಸುತ್ತದೆ. ಉದ್ಧರಣೆಗಳ ಮೇಲೆ ಉದ್ಧರಣೆಗಳನ್ನು ಕೊಡುವ, ವೆಗ್ಗಳವಾದ ಅಡಿಟಿಪ್ಪಣೆಗಳನ್ನು ಕೊಡುತ್ತ ಹೋಗುವ ಹಳೆಯ ರೂಢಿಯನ್ನು ಬಿಟ್ಟುಕೊಟ್ಟು, ಒಟ್ಟು ವಿಷಯುವನ್ನು ತಮ್ಮದಾಗಿಸಿಕೊಂಡು ಅವರು ಚರ್ಚಿಸಿದ ರೀತಿ ನವೀನವೆನಿಸುತ್ತದೆ. ಈ ಲೇಖನದಿಂದ ಅಂದಿನ ಧಾರ್ಮಿಕ-ಸಾಮಾಜಿಕ ಜೀವನದ ಸ್ಪಷ್ಟ ಪರಿಚಯುವಾಗುವುದರಲ್ಲಿ ಸಂಶಯುವಿಲ್ಲ.

ಕನ್ನಡ ಸಾಹಿತ್ಯೇತಿಹಾಸವನ್ನು ಕುರಿತು ಬರೆದ ಪ್ರತಿಯೊಂದು ಲೇಖನವೂ ತನ್ನ ರೀತಿಯಲ್ಲಿ ಮಹತ್ವದ್ದಾಗಿದೆ. ಹಾಗಿದ್ದರೂ ಈ ಲೇಖನಗಳನ್ನು ಅವಲೋಕಿಸಿದ ಮೇಲೆ ಪುನರಾವೃತ್ತಿಯ ದೋಷ, ಕಾಲಸೂಚಿಯಲ್ಲಿ ಅನವಶ್ಯಕವಾದ ವ್ಯತ್ಯಾಸ, ಆಧಾರಗಳನ್ನು ಕೊಡುವಲ್ಲಿ ಕೆಲವೆಡೆಯಲ್ಲಿ ತೋರಿದ ಅಲಕ್ಷ್ಯತನ ಮುಂತಾದ ನ್ಯೂನತೆಗಳು ಕಂಡುಬರದಿರವು. ಉದಾಹರಣೆಗೆ ಕಾಲಮಾನ ಸೂಚನೆಯಲ್ಲಿ ಕಂಡು ಬರುವ ವ್ಯತ್ಯಾಸಗಳನ್ನು ನೋಡಬಹುದು : ಚಂದ್ರಗುಪ್ತನ ಕಾಲ ಕ್ರಿ. ಶ. ಪೂರ್ವ ಮೂರನೆಯ ಶತಮಾನವೆಂಬುದು ಸರ್ವಸಮ್ಮತವಾದ ವಿಷಯ. ಅದನ್ನು ಈ ಗ್ರಂಥದ ನಾಲ್ಕು ಸಂದರ್ಭದಲ್ಲಿ ಸೂಚಿಸುವ ಪ್ರಸಂಗ ಬಂದಾಗ ಬೇರೆ ಬೇರೆಯಾದ ಕಾಲಗಳನ್ನು ಹೇಳಲಾಗಿದೆ. (ಪು. ೨೬, ೩೪, ೪೦ ಮತ್ತು ೫೦ ರಲ್ಲಿ) ಹಾಗೆಯೇ ದುರ್ಗಸಿಂಹನ ಕಾಲ ೧೦೩೧ (ಪು. ೪೪), ೧೦೩೦ (ಪು. ೪೬), ೧೦೩೧ (ಪು. ೭೬), ೧೨೦೫ (ಪು. ೭೩) ಮತ್ತು ಅಸಗನ ಕಾಲ ಕ್ರಿ. ಶ. ೮೫೩ (ಪು. ೪೮), ೮೫೦ (ಪು. ೭೨), ೮೫೩ (ಪು. ೧೧೯), ಸು ೯೧೦ (ಪು. ೧೨೦) ಎಂದಿರುವುದು ಸೂಕ್ತವಾಗಿ ತೋರುವುದಿಲ್ಲ. ಒಂದು ಸಾಹಿತ್ಯ ಚರಿತ್ರೆಯಲ್ಲಿ ಒಬ್ಬ ಕವಿಯ ಕಾಲದ ಬಗ್ಗೆ ಬೇರೆ ಬೇರೆ ಅಭಿಪ್ರಾಯಗಳಿರುವುದು ಎಷ್ಟರ ಮಟ್ಟಿಗೆ ಸಮಂಜಸವಾದದ್ದು, ಎಂಬುದೇ ಪ್ರಶ್ನೆ.

ಕೆಲವು ಮಹತ್ವಪೂರ್ಣ ಅಭಿಪ್ರಾಯಗಳಿಗೆ ಸರಿಯಾದ ಆಧಾರ ನೀಡದಿರುವು

ದನ್ನೂ ಅಲ್ಲಲ್ಲಿ ಕಾಣಬಹುದು. ಉದಾ : (ಆಗ ಸರಸ್ವತಿ ಮತ್ತು ಯಮುನಾ ನದಿಗಳ ನಡುವೆ ನೆಲಿಸಿದ್ದ ಭರತವೆಂಬ ಪಂಗಡದಿಂದಾಗಿಯೇ ನಮ್ಮ ದೇಶಕ್ಕೆ ಭಾರತ ಎಂಬ ಹೆಸರು ಬಂದಿತೆಂಬುದು ಒಂದು ಪ್ರಬಲ ಅಭಿಪ್ರಾಯ) ಪು. ೧೬ ಈ ಪ್ರಬಲ ಅಭಿಪ್ರಾಯ ಯಾರದು? ಯಾವ ಗ್ರಂಥದಲ್ಲಿ ಹೇಳಲ್ಪಟ್ಟಿದ್ದು ? ಇವುಗಳ ಸೂಚನೆಯೇ ಇಲ್ಲ. ಹಾಗೆಯೇ 'ಕರ್ನಾಟಕ ರಾಕ್ಷಸ'ನನ್ನು ಆರ್ಯರು ಗೋದಾವರಿಯಿಂದ ಅಟ್ಟಿದರಂತೆ ಈ ವಿಚಾರವನ್ನು ಶಂ. ಬಾ. ಜೋಶಿಯವರು ಎತ್ತಿ ತೋರಿಸಿದ್ದಾರೆ'. ಪು. ೧೬ ಎಂಬ ಹೇಳಿಕೆಗೂ ಗ್ರಾಂಥಿಕ ಆಧಾರ ಕೊಡಲಾಗಿಲ್ಲ. ಇಂಥ ಹಲಕೆಲವು ಮಹತ್ವದ ಸಂಗತಿಗಳು ಆಧಾರವಿಲ್ಲದೆ ಬಳಲುತ್ತವೆ. 'ಸಮಕಾಲೀನ ಭಾರತೀಯ ಸಾಹಿತ್ಯ'ವನ್ನು ಕುರಿತು ಬರೆದ ಕೆ. ಟಿ. ಪಾಂಡುರಂಗಿಯವರು ಅಲ್ಲಿಗಲ್ಲಿಗೆ ಆಧಾರ ಸೂಚಿಸುವುದೊತ್ತಟ್ಟಿಗಿರಲಿ, ಗ್ರಂಥಸೂಚಿಯನ್ನೂ ಕೊಡದಿರುವುದು ಅಚ್ಚರಿಯನ್ನುಂಟು ಮಾಡುತ್ತದೆ. ಅವರ ಲೇಖನ ಎಷ್ಟೇ ಅಭ್ಯಾಸಪೂರ್ಣವಾಗಿದ್ದರೂ ಆಧಾರ ಸಾಮಗ್ರಿಯ ಋಣವನ್ನು ನೆನೆಯದಿರುವುದು ಒಳ್ಳೆಯ ಪರಿಪಾಠವಾಗಿ ಕಾಣುವುದಿಲ್ಲ. ಸಾಹಿತ್ಯ ಚರಿತ್ರೆಯನ್ನು ಅಭ್ಯಸಿಸುವ ವಿದ್ಯಾರ್ಥಿಗಳ ಹೆಚ್ಚಿನ ಜ್ಞಾನಾರ್ಜನೆಗಾಗಿಯಾದರೂ ಗ್ರಂಥಸೂಚಿ ಕೊಡುವುದು ಅಗತ್ಯವೆಂದು ಈ ಸಂದರ್ಭದಲ್ಲಿ ಹೇಳಬೇಕಾಗುವುದು.

ಒಂದು ನಿರ್ದಿಷ್ಟವಾದ ಕಾಲ ಪರಿಮಿತಿಗೆ ಒಳಪಡಿಸಿ, ಬರೆದ ಇಲ್ಲಿಯ ಲೇಖನಗಳು ತಮ್ಮ ತಮ್ಮ ವ್ಯಾಪ್ತಿಯಲ್ಲಿ ಸಮರ್ಪಕವಾಗಿವೆಯಾದರೂ ಒಟ್ಟು ಗ್ರಂಥದ ದೃಷ್ಟಿಯಿಂದ ನೋಡಿದಾಗ ಪುನರಾವೃತ್ತಿಯ ದೋಷ ಕಂಡುಬರುತ್ತದೆ. ಒಂದು ಲೇಖನದಲ್ಲಿ ಚರ್ಚಿತವಾದ ವಿಷಯವೇ ಇನ್ನೊಂದು ಲೇಖನದಲ್ಲಿ ಮತ್ತೆ ಬರುತ್ತಿದೆ. ಒಬ್ಬ ವ್ಯಕ್ತಿಯೇ ಸಮಗ್ರ ಸಾಹಿತ್ಯ ಚರಿತ್ರೆಯನ್ನು ಬರೆದಿದ್ದರೆ ಈ ಪುನರಾವೃತ್ತಿ ದೋಷ ಕಾಣಿಸಿಕೊಳ್ಳುತ್ತಿರಲಿಲ್ಲವೆನಿಸುತ್ತದೆ. ಅನೇಕ ವ್ಯಕ್ತಿಗಳು ಬರೆಯುವ ಪ್ರಸಂಗ ಬಂದಾಗ ಅದರಲ್ಲೂ ಒಬ್ಬರು ಏನು ಬರೆದಿದ್ದಾರೆಂಬುದು ಇನ್ನೊಬ್ಬರಿಗೆ ತಿಳಿಯದಿದ್ದಾಗ—ಹೀಗಾಗುವುದು ಸಹಜ. ಇಂಥ ಸಂದರ್ಭದಲ್ಲಿ ಸಂಪಾದಕರ ಜವಾಬ್ದಾರಿ ಹೆಚ್ಚು ಗುರುತರವಾದದ್ದಾಗುತ್ತದೆ. ಹಲ್ಮಿಡಿ ಶಾಸನ, ಆಕ್ಸಿರಿಂಖಸ್ ಕೃತಿ, ಕವಿರಾಜಮಾರ್ಗದ ಗದ್ಯ-ಪದ್ಯ ಕವಿಗಳು, ದಕ್ಷಿಣೋತ್ತರಮಾರ್ಗ ಮುಂತಾದವುಗಳ ಪುನರಾವೃತ್ತಿ ಈ ಗ್ರಂಥದಲ್ಲಿ ಒಂದಿಷ್ಟು ಹೆಚ್ಚಾಗಿಯೇ ಆಗಿದ್ದುದನ್ನು ಕಾಣಬಹುದು.

ಹೀಗೆ ಕೆಲವು ಸಣ್ಣ-ಪುಟ್ಟ ದೋಷಗಳು ಕಂಡುಬಂದರೂ 'ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ' ಒಂದು ವಿಶಿಷ್ಟ ಕೃತಿ. ಅದರ ವಿಷಯ ಸಂಯೋಜನೆ, ಚರ್ಚೆ, ವಿಮರ್ಶೆ ಇವೆಲ್ಲ ಎತ್ತಿ ಹೇಳುವಂತಹ ಗುಣಗಳು. ಕನ್ನಡ ಸಾಹಿತ್ಯಕ್ಕಿರುವ ಭಾರತೀಯ ರಾಜಕೀಯ, ಸಾಮಾಜಿಕ, ಧಾರ್ಮಿಕ ಹಿನ್ನೆಲೆಯಂಥ ವಿಷಯಗಳು, ನಮ್ಮ ಸಾಹಿತ್ಯಿಕ ಚಟುವಟಿಕೆಗಳ ಒಂದು ಕಾಲದಲ್ಲಿ ಇತರ ಸಾಹಿತ್ಯಗಳ ಸ್ಥಿತಿ-ಗತಿಗಳನ್ನು ಅವಲೋಕಿಸುವ

ದೃಷ್ಟಿ ಇವು ಅತ್ಯಂತ ಮಹತ್ವದ ವಿಚಾರಗಳಾಗಿವೆ. ಆಯಾ ವಿಷಯಗಳಲ್ಲಿ ತಜ್ಞರಾದವರನ್ನು ಗುರುತಿಸುವ, ಅವರಿಂದ ಪ್ರಯೋಜನಪಡೆಯುವ, ತನ್ಮೂಲಕ ಅಖಿಲ ಕರ್ನಾಟಕ ವಿದ್ವಾಂಸರ ಲೇಖನಗಳು ಒಂದೆಡೆಯಲ್ಲಿ ಬರುವಂತೆ ಮಾಡುವ ಈ ಯೋಜನೆ ನಮ್ಮ ಸಾಹಿತ್ಯದಲ್ಲಿಯೇ ಹೊಸದು. ಇಂಥ ಒಂದು ವಿಶೇಷ ಹಾಗೂ ಸಾರ್ಥಕವಾದ ಕಾರ್ಯವನ್ನು ನಿರ್ವಹಿಸುವ ಸಂಸ್ಥೆ ನಿಜವಾಗಿಯೂ ಕನ್ನಡಿಗರ ಕೃತಜ್ಞತೆಗೆ ಪಾತ್ರವಾದುದು.

—ಗುರುಲಿಂಗ ಕಾಪಸೆ

ಹೊಲೆ ಮಾದಿಗರ ಹಾಡು : ಸಿದ್ಧಲಿಂಗಯ್ಯ. ಪ್ರ : ಮುಂಗಾರು ಪ್ರಕಾಶನ, ಬೆಂಗಳೂರು, ೧೯೭೫. ಬೆಲೆ : ರೂ. ೨–೦೦ ಪುಟ : ೩೦.

ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ವಿದ್ಯಾರ್ಥಿ, ಶ್ರೀ ಸಿದ್ಧಲಿಂಗಯ್ಯನವರ ಈ ೨೦ ಹಾಡುಗಳ ಸಂಕಲನವನ್ನು ಕೇವಲ ಸಾಹಿತ್ಯ ಮಾನದಂಡಗಳ ಮೂಲಕ ಅಕೆಡಮಿಕ್ಕಾಗಿ ವಿಮರ್ಶೆ ಮಾಡುವುದು ಸಾಧ್ಯವೇ ಇಲ್ಲ. ಗಟ್ಟಿಯಾಗಿ, ಲಯಬದ್ಧವಾಗಿ ಹಾಡಿದಾಗ, ಹಾಡಿಕೊಂಡಾಗ ಮಾತ್ರ ಈ ಹಾಡುಗಳ ಒಳ ತಿರುಳು ಸ್ಫೋಟವಾಗುತ್ತದೆ. ದಲಿತವರ್ಗದ ಸಾಹಿತ್ಯ ಬರಬೇಕು, ಬರಬೇಕು ಎಂದು ಮೇಲುವರ್ಗದ ಜನರೇ ದುಮ್ಮಡಿ ಹಾಕುತ್ತಿರುವ ಈ ಕಾಲದಲ್ಲಿ ನಿಜವಾಗಿಯೂ ದಲಿತಕಾವ್ಯ ಬಂದೇಬಿಟ್ಟಿದೆ. ಸಿದ್ಧಲಿಂಗಯ್ಯನವರ ದನಿ ಒಂದು 'ವಿಶಿಷ್ಟ' ದನಿ ಮಾತ್ರವಲ್ಲ. ಇನ್ನು ಮುಂದೆ ಭೋರ್ಗರೆಯಬಹುದಾದ ಮಹಾಪ್ರವಾಹದ ಒಂದು ಎಳೆ ಇದು.

ಪರಮಾತ್ಮನ ಹೆಸರು ಹೇಳಿ ಪರಮಾನ್ನ ಉಂಡ ಜನಕೆ
    ಬೂಟು ಮೆಟ್ಟು ಹೊಲಿದೋರು ನನ್ನ ಜನಗಳು...
ಹೇಳಿದಂತೆ ಕೇಳುತಾರೆ ನನ್ನ ಜನಗಳು
    ಗಾಳಿಯಲ್ಲೆ ಬಾಳುತಾರೆ ನನ್ನ ಜನಗಳು...

ಈ 'ನನ್ನ ಜನಗಳ' ರೋಷ, ಆಕ್ರೋಶ, ಸೇಡು ತುಂಬಿದೆ, ಈ ಹಾಡುಗಳಲ್ಲಿ. 'ಹೊಲೇರು, ಮಾದಿಗ್ರು ಅನ್ನೋ ಬದ್ಲು ಹರಿಜನ ಅಂತ ಕರ್ದು ನಗುವ', ಅವರ ಹೆಸರು ಹೇಳಿ ಉದ್ಧಾರವಾಗುವ ಉದ್ಧಾರಕರನ್ನು 'ಇಕ್ರಲಾ, ವದೀರ್ಲಾ' ಅನ್ನುತ್ತದೆ ಈ ದಲಿತದನಿ. ಇದು ಕಾಲಧರ್ಮಕ್ಕನುಗುಣವಾಗಿ ಹುಟ್ಟಿಬಂದ ನೈಜಸಾಹಿತ್ಯ.

ಅಡುಗೋಲಜ್ಜಿಯ ಕಥೆ, ಅಂಬೇಡ್ಕರ, ಕನ್ನಡವ್ವನಿಗೆ, ಬೀಳು — ಮುಂತಾದ ಹಾಡುಗಳಲ್ಲಿ ಇದೇ ವ್ಯಂಗ್ಯ, ಅನುಕಂಪ ನಾಟಕೀಯ ರೀತಿಯಲ್ಲಿ ವ್ಯಕ್ತವಾಗಿವೆ.

ನಾಡ ನಡುವಿನಿಂದ ಸಿಡಿದ
ನೋವಿನ ಕೂಗೇ
ಆಕಾಶದ ಅಗಲಕ್ಕೂ
ನಿಂತ ಆಲವೆ

ಎಂದು ಸುರುವಾಗುವ 'ಅಂಬೇಡಕರ' ಹಾಡು ಕ್ರಾಂತಿಯ ಇತಿಹಾಸವನ್ನೇ ಕುರಿತು ಬರೆದ ಕೃತಿಯಾಗಿದೆ.

ದಲಿತ ಕನ್ನಡದ ಹಾಡುಗಳಷ್ಟು ಪ್ರಖರವಾಗಿ ಲಲಿತ ಕನ್ನಡದಲ್ಲಿ ಬರೆದುವು (ಉದಾ : ನಾವು, ಮಸಣದ ಚೆಲುವೆಗೆ ಮುಂ.) ಸುಡುವುದಿಲ್ಲವಾದರೂ ಅವುಗಳ ಬೆಂಕಿಯಿಂದಾಗಿ ಅವೂ ಜೀವಂತವಾಗಿವೆ. ಕನ್ನಡ ಕಾವ್ಯದಿಂದ ದೂರ ಸಿಡಿದುಹೋದ ಗೇಯತೆ (ಹಾಡುಗಾರಿಕೆ) ಈ ಹಾಡುಗಳಿಂದಾಗಿ ಮತ್ತೆ ಮರಳಲಿವೆ. ಈ ಸಂಕಲನ ಹೊಸಕಾವ್ಯ ಪ್ರಕಾರಕ್ಕೆ, ಕಾವ್ಯಧರ್ಮಕ್ಕೆ ಮುನ್ನುಡಿಯಾಗಿದೆ.

—ಚಂದ್ರಶೇಖರ ಪಾಟೀಲ

ಹೋರಾಟ : ಬಸವರಾಜ ಸಬರದ. ಪ್ರ : ಯುಗಧ್ವನಿ ಪ್ರಕಾಶನ, ಧಾರವಾಡ ೧೯೭೬. ಬೆಲೆ : ರೂ. ೪–೦೦ ಪುಟ : vii + ೩೮.

'ಹೋರಾಟ', ಬಸವರಾಜ ಸಬರದ ಅವರ ಪ್ರಥಮ ಕವನ ಸಂಕಲನ. ಈ ಕವನ ಸಂಕಲನದಲ್ಲಿ ಇಂದಿನ ಯುವಕರು ಬದುಕಿನೊಡನೆ ಮಾಡಬೇಕಾದ ಹೋರಾಟದ ಸ್ಪಷ್ಟ ಚಿತ್ರಣವಿದೆ. ಕಪಿಮುಷ್ಟಿಯಲ್ಲಿ ಹಿಡಿಯಲು ಬಯಸುವ ಪರಿಸರ, ಅದರ ಕೈ ಯಿಂದ ಪಾರಾಗಿ ನಿಜವಾದ ಬದುಕನ್ನು ಬದುಕಬೇಕೆಂದು ಬಯಸುವ ತರುಣಮನಸ್ಸು ಇವೆರಡರ ಸಂಘರ್ಷದ ಛಾಯೆಯನ್ನು ಇಲ್ಲಿ ಕಾಣಬಹುದು. ಇದು, ಸಬರದರೊಬ್ಬರ ಹೋರಾಟದ ಚಿತ್ರಣವಾಗಿರದೆ, ಇಡೀ ಯುವಪೀಳಿಗೆಯ ನಿಸ್ಸಹಾಯಕಸ್ಥಿತಿಯನ್ನು ಅಂಗೈಯಲ್ಲಿ ಹಿಡಿದು ತೋರಿಸುತ್ತದೆ. ಆದುದರಿಂದ 'ಹೋರಾಟ' ಉತ್ತಮಕೃತಿ ಯೆನಿಸುತ್ತಿದೆ. ಸಬರದರ ವಾರಿಗೆಯ ಕವಿಗಳಾದ ಜಯಂತ ಕಾಯ್ಕಿಣಿ, ಸಿದ್ಧಲಿಂಗ ದೇಸಾಯಿ ಹಾಗೂ ದೇವೇಂದ್ರ ದೇಸಾಯಿ ಇವರುಗಳಿಗಿಂತ ಈ ಕವಿ ಭಿನ್ನನಾಗಿರು ವುದು, ಆತನು ಆರಿಸಿಕೊಂಡ ಬದುಕಿನ ಬಗ್ಗೆ ವಿಚಾರಶೀಲನಾಗಿರುವುದರಿಂದ. ಅಲ್ಲದೆ ಕನ್ನಡಕಾವ್ಯ ತಿರುವಿನಲ್ಲಿದೆಯೆಂಬುಕ್ಕೆ ಈ ಕವನಸಂಕಲನದಲ್ಲಿ ಸಾಕಷ್ಟು ಪುರಾವೆ ಗಳಿವೆ. ಇಲ್ಲಿಯವರೆಗಿನ ಕಾವ್ಯದಲ್ಲಿ ವೈಯಕ್ತಿಕ ಚಿಂತನಶೀಲತೆ ವಿಪರೀತವಾಗಿತ್ತು. ಆದರೆ ಇವತ್ತಿನ ಸಂದರ್ಭದಲ್ಲಿ ಕವಿ ಸುತ್ತಲಿನ ಜೀವನದ ಬಗ್ಗೆ ಆಳವಾಗಿ ಚಿಂತಿಸು

ತ್ತಾನೆ. ಮಲಿನಗೊಂಡ ಈ ಬಾಳಿಗೆ ಹೇಸಿ, ರೋಸಿಹೋಗುತ್ತಾನೆ. ಬದಲಾದ ಪರಿಸರ ಬರಬೇಕಾದರೆ 'ಹೋರಾಟ' ಅನಿವಾರ್ಯವೆಂಬುದು ಈ ಕವಿಯ ಅಭಿಮತ.

ಈ ಕವನ ಸಂಕಲನದಲ್ಲಿಯ ಕವನಗಳನ್ನು ಅಭ್ಯಾಸಕ್ಕೆ ಅನುಕೂಲವಾಗುವಂತೆ ಮೂರು ವಿಭಾಗಗಳನ್ನಾಗಿ ಮಾಡಬಹುದು. ಮೊದಲನೆಯದು : ಇವತ್ತಿನ ಬದುಕು, ಸಮಾಜವ್ಯವಸ್ಥೆ ಕೆಟ್ಟಿದೆ. ಆ ಸಮಾಜವ್ಯವಸ್ಥೆಯ ಅಂಗವಾಗಿ ಹುಟ್ಟಿಬಂದ ಕವಿ, ಅದರಲ್ಲಿಯೇ ಕೊಳೆಯಬಾರದು; ಅದನ್ನು ಮೀರಿ, ಬೇಕಾದರೆ ಅದರ ಕಪಿಮುಷ್ಟಿಯಿಂದ ಪಾರಾಗಿ ಬಂದು; ಹೊಸಬದುಕಿನಗಾಳಿಯಲ್ಲಿದ್ದು ಸ್ವತಂತ್ರವಾಗಿರಬೇಕು. ಉದಾ : ಹೋರಾಟ, ಬೇಡಿಕೆ, ಆಹ್ವಾನ, ಕವನ, ಬದುಕು, ಬಿಡುಗಡೆ, ಬಿನ್ನ, ಛಲ, ಮುಂತಾದವು ಗಳು. ಎರಡನೆಯ ತರದ ಕವನಗಳಲ್ಲಿ ಕವಿಯ ಯೌವನ ಸಹಜವಾದ ಬಯಕೆಗಳು ಕಣ್ಣು-ಬಾಯಿ ಪಡೆದಿವೆ. ಉದಾ : ಮಾವನಿಗೆ, ಕಟ್ಟಚಟ, ಇಬ್ಬದ್ಗ್ಯಾಕಳ, ಸ್ವಂತದ್ದು, ಹೆದರಿಕಾಗತ್ತ, ನೆನಪು. ಮೂರನೆಯ ರೀತಿಯ ಕವನಗಳಲ್ಲಿ ಅಸಹ್ಯ ಜೀವನ ವಿಧಾನದ ಬಗ್ಗೆ ಅಸಮಾಧಾನ, ತೀವ್ರವಾದ ವಿಡಂಬನೆಯೊಂದಿಗೆ ರೂಪಪಡೆದಿದೆ. ಉದಾ : ಸಂಶೋಧನ, ಇಂದಿನ ಬಳಿಕೆ, ಹೆಸರಿನ ಜಲಾವಣೆ, ಇದು ಗುಟ್ಟಲ್ಲ, ಪರಂಪರೆ, ಭ್ರಷ್ಟತೆ ಹಾಗೂ ಮೈತುಂಬಾ ಕುಣಿಯಇ ಮಹಾಕಾಳಿ !

ಈ ಕವಿಯ ಕಾವ್ಯದ ಯಶಸ್ಸಿನ ಗುಟ್ಟು ಇರುವುದು, ಮೊದಲನೆಯ ಹಾಗೂ ಎರಡನೆಯ ರೀತಿಯ ಕವನಗಳಲ್ಲಿ. ಓದುಗನನ್ನು ತಟ್ಟನೇ ಹಿಡಿದುಕೊಳ್ಳುವ, ಚಿಂತ ನೆಗೆಡೆಮಾಡುವ ಗುಣ ಆ ಕವನಗಳಿಗಿದೆ. ಈ ಗುಣ ಸಾಧಿಸುವುದು ತುಂಬ ಕಷ್ಟತರ ವಾದ ಕೆಲಸ. ಭಾವನೆ ಹಾಗೂ ವೈಚಾರಿಕತೆ ಹಿತಮಿತವಾಗಿ ಬೆರೆತು ಬಂದಾಗಲೇ ಕವನ, ಉನ್ನತ ಕಲಾಕೃತಿಯಾಗುತ್ತದೆ. ನವೋದಯ ಕವಿಗಳಲ್ಲಿ ಪೆಂಡಿಗಟ್ಟಲೇ ಬರುವ ಕಲ್ಪನಾವಿಲಾಸದ ಭಾವನೆಗಳಿಂದ ವೈಚಾರಿಕತೆಯು ಮಸಕಾಗಿಬಿಟ್ಟಿತ್ತು. ನವ್ಯ ಕವಿಗಳಲ್ಲಿ ಅತೀ ಬೌದ್ಧಿಕತೆಯು ಭಾವನೆ ಹಾಗೂ ಕಲ್ಪನಾವಿನ್ಯಾಸವನ್ನು ಹಿಂದೊತ್ತಿ, ಓದುಗನನ್ನು ಗೊಂಡಾರಣ್ಯದಲ್ಲಿ ನೂಕಿಬಿಟ್ಟಂತಾಗಿತ್ತು. ಈ ಎರಡರ ನಡುವಿನ, ತೀರಾ ಜರೂರಿಯಾದ 'ತಳಿ' ಕನ್ನಡಕಾವ್ಯಕ್ಕೆ ಅವಶ್ಯವಾಗಿ ಬೇಕಾಗಿತ್ತು. ಇಂದಿನ ಓದುಗ, ಆ 'ಬೇಕಾಗುವಿಕೆ'ಯನ್ನು ಸಬರದರ ಕವನಗಳಲ್ಲಿ ಪಡೆಯುತ್ತಾನೆ. ಈ ಕವಿಗೆ ತನ್ನ ಅರ್ಥ-ಹೀನಬಾಳಿನ ಬಗ್ಗೆ ಅಸಮಾಧಾನ, ಜೊತೆಗೆ ತನ್ನ ಅಸಹಾಯಕತೆಯ ದುರುಪಯೋಗ ತೆಗೆದುಕೊಳ್ಳುತ್ತಿರುವ ಸುತ್ತಲಿನ ಲಫಂಗ ಜನತೆಯ ಬಗ್ಗೆ ಕೋಪವಿದೆ :

ಕೊಳೆತ ಕೆಸರಿನ ಮಧ್ಯದಲ್ಲಿಯೇ ನಿಂತು
ಮೋಜುಮಾಡುವ
ಹುಂಬಮನಸ್ಸು,
ನೆಟ್ಟು ಕಡಿದು

ದುಡಿದ್ದುಣ್ಣಾದ– ಅಪ್ಪ
ಪುಟ್ಟಿ ಹೊತ್ತು
ಸೊರಗಿ ಸಣ್ಣಾದ– ಅವ್ವ
ಇವರೆಂಜಲಿನಲ್ಲಿಯೇ
ಬದುಕುವ ಬಂಢಧೈರ್ಯ.

'ಹೋರಾಟ' ಕವನದಲ್ಲಿ ಕಾಣುತ್ತಿರುವ ಈ ಮಾತುಗಳು ಮುಖ್ಯವಾದುವು. ಇಡೀ ಕವನವೇ ಒಂದು ಬದುಕಿನ ವಿವರಪೂರ್ಣವಾದ ಚಿತ್ರವನ್ನು ಕೊಡುತ್ತದೆ. ತಂದೆ–ತಾಯಿಗಳು ಮಗನ ಅಭ್ಯುದಯಕ್ಕಾಗಿ ಹಗಲಿರುಳು ಪಡುತ್ತಿರುವ ನರಕಯಾತನೆ ಕಂಡರೂ ಹುಡುಗನ ಮನಸ್ಸು ದೇಹಸಹಜವಾದ ಬಯಕೆಗಳನ್ನು ಪೂರೈಸಿಕೊಳ್ಳಲು ಇಚ್ಛಿಸುತ್ತದೆ. ಬಡತನದ ಬೇಗುದಿಯಲ್ಲಿ ಕಾದು, ಬೆಂದಾಗ ಉಳ್ಳವರ ಮನೆಯ ಹರೆಯದ ಹೆಂಗಸರ ಕಾಮಪಿಪಾಸೆಗಾಗಿ ಬಲಿಯಾಗುವ ಕರುಣಾಜನಕಸ್ಥಿತಿ, ದಲಿತೋದ್ಧಾರದ ಹೆಸರು ಮುಂದೆಮಾಡಿ ತಮ್ಮ ಡೊಳ್ಳು ಬೆಳೆಯಿಸಿಕೊಳ್ಳುವ ಸಮಾಜನಾಯಕರ ಕಿರುಕುಳ, ಇವೆಲ್ಲ ವುಗಳನ್ನು ಕಂಡು, ಸ್ವತಃ ಅನುಭವಿಸಿ ಬಂದೇಳುವ, ಜೀವನದ ಬಗ್ಗೆ ಆರೋಗ್ಯಪೂರ್ಣ ವಾದ ದೃಷ್ಟಿಯನ್ನು ಹೊಂದಿದ ಕವಿ,

ಸಿಡಿದೆದ್ದರಗಿ
ಇದ್ದ ರಕ್ತದಲ್ಲಿಯೇ ಸಾವರಿಸಿಕೊಂಡು
ರೊಚ್ಚಿನಿಂದ
ಪುಟಿದೆದ್ದು ಕಿಡಿಕಾರುವ
ಹುಮ್ಮಸ್ಸಿನ ಹೋರಾಟ

ಎನ್ನುತ್ತಾನೆ. ಇನ್ನೂ ಅನೇಕ ಕವನಗಳಲ್ಲಿ ಇದೇ ಮನೋಭಾವ ಮೂಡಿಬಂದಿದೆ. 'ಬೇಡಿಕೆ'ಯೆಂಬ ಕವನದಲ್ಲಿ :

ಪಾಚಿಗಟ್ಟಿ
ದಟ್ಟವಾಗಿ
ಮಲೆತುನಿಂತ
ಪರಿಸರವೇ ಬಿಟ್ಟುಬಿಡು
ನನ್ನನ್ನು
ಸಂವೇದನೆಯು ತುಡಿತಕ್ಕೆ

ಎಂದು ಹೇಳಿದ ಕವಿ, 'ಕವನ'ದಲ್ಲಿ ಈ ರೀತಿ ಹೇಳುತ್ತಾನೆ :

ಜಂಗು ತಿಂದು
ಬರುಡಾದ
ಪರಿಸರವನ್ನೊದ್ದು
ಮತ್ತೆ ಮರಳದಂತೆ
ಅತಿದೂರ ಹೋಗಲು
ಇಚ್ಛೆಯಾದಾಗ
ಕುಳಿತಲ್ಲಿಂದಲೇ ಓಡಿರುತ್ತೇನೆ.

ಒಂದೊಂದು ಬಾರಿ ಬದುಕಿನಲ್ಲಿ ನಿರಾಸೆಯು ನೆರಳು ಕವಿದಂತಾಗಿ, ಹೆದರಿದರೂ ಮತ್ತೆ ಚೇತರಿಸಿಕೊಂಡು ಉತ್ಸಾಹದಿಂದ ಬದುಕುವಂತೆ ಗಟ್ಟಿಮನಸ್ಸು ಮಾಡುತ್ತಾನೆ, ಕವಿ. 'ಎಲ್ಲವೂ ಬರೀ ಶೂನ್ಯ'ವೆಂದು ಅನಿಸಿದಾಗ ಥಟ್ಟನೆ ಎಚ್ಚರಗೊಂಡು

ಎಲ್ಲಿ ಧುಮುಕಿದರಲ್ಲಿ ತಿಕ್ಕಾಟ
ಬಲೆಯಲ್ಲಿ ಬಿದ್ದ ಮೀನು.
ಬೆಕ್ಕಿನ ಬಾಯ್ಗೆ ಸಿಕ್ಕ ಇಲಿ.
ಆದರೂ
ಕೊಸರಿ ಪುಟಿದೆದ್ದು
ಮತ್ತೆ ಉಸಿರಾಡಿಸುವ ಹಟ.

ಇಲ್ಲಿಯ ಬದುಕು, ಕಷ್ಟದಲ್ಲಿದ್ದಾಗ್ಯೂ ಅದರ ಮಧ್ಯದಲ್ಲಿ ಧುಮುಕಿ ಬಾಳಿಯೇ ತೀರುತ್ತೇನೆಂದು ಆತ್ಮವಿಶ್ವಾಸ ಕವಿಗಿದೆ. ಆದ್ದರಿಂದ ಸಬರದ ನಮಗೆ ಅರ್ಥಪೂರ್ಣರಾಗಿ ಕಾಣುತ್ತಾರೆ. ಇದ್ದ ಪರಿಸ್ಥಿತಿಯ ಅರಿವು ಮೊದಲಾಗಿ, ನಂತರ ನಿರ್ಣಯ ತೆಗೆದುಕೊಳ್ಳುವ ರೀತಿ ಉತ್ತಮ. ಈ ರೀತಿಯ ಕವನಗಳಲ್ಲಿಯ ಭಾಷೆ ಒಮ್ಮೊಮ್ಮೆ ಗ್ರಾಂಥಿಕವಾಗಿ, ಮತ್ತೊಮ್ಮೆ ಆಡುಮಾತಾಗಿ, ಮಗುದೊಮ್ಮೆ ಜಾನಪದ ನುಡಿಗಟ್ಟನ್ನು ರೂಢಿಸಿಗೊಂಡು ಬಳಕೆಗೊಂಡಿದೆ. ಗ್ರಾಂಥಿಕ ಭಾಷೆಯ ನಡಿಗೆಯಲ್ಲಿ ಬಂದಾಗ್ಯೂ ಗ್ರಾಮೀಣ ಜೀವನದ ಜೀವಂತಚಿತ್ರಗಳು ಪ್ರತಿಮೆಗಳಾಗಿ, ಪ್ರತೀಕಗಳಾಗಿ ಅರಳಿ, ಕಣ್ಣಿಗೆ ಕಟ್ಟುತ್ತವೆ. ಸಬರದವರ ಕಲಾನೈಪುಣ್ಯದ ಸೆಳವಿಗೆ ಸಿಕ್ಕ ಚಿತ್ರಗಳು ಆತ್ಮೀಯವಾಗಿ ನಿಂತು, ಓದುಗನಿಗೆ ಖುಶಿ ಕೊಡುತ್ತವೆ. ಮಿಂಚಿನಂತೆ ಸೆಳೆದು ಮಾಯವಾಗುವ ರೀತಿ, ಗಮನಾರ್ಹವಾಗಿದೆ. ಉದಾ :

ಎದ್ದು ಕೊಸರಿ
ಜಿಗಿದೊಗೆದು ಮುರಿದು
ಮುಂದಕ್ಕೆ
ಹಾರಬೇಕೆಂದರೆ

ಹುದಲಲ್ಲಿ ಸಿಕ್ಕ
ಹೋರಿಯಂತೆ
ಗೋಣು ದಗ್ಗಿಸುತ್ತೇನೆ;
ಬುರುಂಗು ಒಸರುತ್ತೇನೆ.

'ಭಲ' ಕವನದಲ್ಲಿಯ ಚಿತ್ರ ನಮ್ಮೆಲ್ಲರ ನಿತ್ಯಬದುಕಿನ ಅನುಭವಕ್ಕೆ ಬರುವಂತಹದು :

ನಿಗಿನಿಗಿ
ಉರಿಯುತ್ತಿದ್ದ ಕೆಂಡ
ಅದರ ಹೊಳಪಿಗೆ
ಹಿರಿಹಿರಿ ಹಿಗ್ಗಿ
ಓಡಿಹೋಗಿ ಹಿಡಿದುಕೊಂಡ
ಕಂದನ ಸ್ಥಿತಿ.

ಇನ್ನು ಎರಡನೆಯ ರೀತಿಯ ಕವನಗಳಲ್ಲಿ ರಮ್ಯತೆ ಹುಲುಸಾಗಿ ಒಡಮೂಡಿ, ನೇರವಾಗಿ ಹೃದಯಕ್ಕೆ ಆಹ್ಲಾದವನ್ನುಂಟುಮಾಡುತ್ತದೆ. ಹಳ್ಳಿಗಾಡಿನ ಜೀವನವಿಧಾನ ಪರಿಚಯ ವಿದ್ದವರಿಗೆ ಈ ಕವನಗಳಲ್ಲಿಯ ಚಿತ್ರಗಳು ಚಿರಪರಿಚಿತವಾಗಿಬಿಡುತ್ತವೆ. ಹಾದರಮಾ ಡಿಯೂ ಪತಿವ್ರತೆಯರೆಂದು ಹೇಳಿಕೊಳ್ಳುವ ಸಿರಿವಂತ ಹರೆಯದ ಹುಡುಗಿಯರು, ಮೈ ಯಲ್ಲಿ ಎಣ್ಣೆಯಿದ್ದಾಗ ಸಾಕಷ್ಟು ಮೆರೆದಾಡಿ ಮುದುಕನಾದರೂ ಹರೆಯದ ಹುಡುಗಿ ಯನ್ನು ಮಾಡಿಕೊಂಡು ಗೋಳಾಡುವ ಆಸಾಮಿಗಳು, ಸಮಾಜಸುಧಾರಕರೆಂದು ಹೇಳುತ್ತ 'ಗಟ್ಟಿಮಾಲು' ಬಯಸುವ ಪಂಚರು, ಸೂಳೆಯ ಸಂಗಮಾಡಿ ಆರೋಗ್ಯ ಕೆಡಿಸಿಕೊಂಡ ಸಾಹುಕಾರ— ಹೀಗೆ ಬದುಕಿನ ವಿಜೃಂಭಣೆಯಿದೆ. ಇಲ್ಲಿ ಭಾಷೆಯೂ ಜಾನಪದ ಗತ್ತಿ ನಿಂದ ಲಯಬದ್ಧವಾಗಿ ನಡೆಯುತ್ತ, ಸಮೃದ್ಧವಾದ ಭಾವವನ್ನು ಸ್ಫುರಿಸುತ್ತದೆ. ನವೋದಯಕವಿಗಳೂ ಇಂಥ ಕವನಗಳನ್ನು ಬರೆಯಲಾರರು. ಬೇಂದ್ರೆಯವರ 'ಹುಬ್ಬಳ್ಳಿಮಾವ' ಹಾಗೂ ಸಬರದವರ 'ಮಾವ' ಹೋಲಿಸಿ ನೋಡಿದಾಗ, ಸಬರದರಲ್ಲಿ ವೈಚಾರಿಕತೆ ಮಿಗಿಲಾಗಿದೆ ಎನಿಸುತ್ತದೆ. ಬೆಳವಲಸೀಮೆಯ ಅನೇಕ ವಸ್ತುಗಳು ಕಾವ್ಯದ ಸರಕುಗಳಾಗಿ ಬಂದಿವೆ. ಕಣವಿ, ಇಮ್ರಾಪೂರ ಹಾಗೂ ಸಬರದವರ ಕವನ ಗಳಿಂದ ಬೆಳವಲಸೀಮೆಯು ಹೊಡಮರಳಿನಿಂತಿದೆ. ವರ್ಡ್ಸ್‌ವರ್ಥ ಹೇಳುವ Poet should use the language of the common people ಎಂಬುದನ್ನಿಲ್ಲಿ ಕಾಣಬಹುದು. ಉದಾ :

ಕಬ್ಬಿನಾಂಗ ಬೆಳದು
ಮೈತುಂಬಾ ಹಾಲೊಡದು

ಮಿರಿ-ಮಿರಿ ಮಿಂಚೊ ನಿನಗ
ಇವತ್ತ್ಯಾಕ ಬಂಡಾರಬಿದ್ದ ಗೋದಿಹಾಂಗ
ಬಾಣತಿ ಬಣ್ಣ ಬಂದೈತೊ ಮಾವಾ ?

ಎನ್ನುವಲ್ಲಿಯೂ

ಕೊಕ್ಕರ ಮೀಸಿ
ತೀಡಿಕೋಂತ
ಹೊಳ್ಳಿ ನೋಡಿ ಹುಬ್ಬು ಹಾರಿಸಿಗೋಂತ
ನಾಲ ಬಡಿಸಿದ ಗೇಣುದ್ದ
ಗಟ್ಟಿಗೆರವು ಮೆಟಗೊಂಡು
ಗಿರ್-ಗಿರ್ ಅಂತಾ
ಸಪ್ಪಳಾ ಮಾಡಿಕೊಂತಾ
ಬರಾವ ನೀನು
ಇವತ್ತ್ಯಾಕ
ಜೋಗಪ್ಪನ್ಹಾಂಗ ಸಪ್ಪಗಾಗಿಯೋ ಮಾವ

'ನೆನಪು' ಎಂಬ ಕವನದಲ್ಲಿ :

ರಪಾ-ರಪಾ-ಮಳಿ ಹೊಡದು
ಘಮ್ಮ್ಯಂತಾ ಮಣ್ಣಿನ ವಾಸನಿ
ಮೂಗಿಗೆ ಬಡದಾಗ ನಿನ್ನ ನೆನಪಾಗತ್ತ

ಹುಣವಿ ಚಂದಪ್ಪ ಬಂದು
ಬೆಳದಿಂಗಳಾ ಹರಡಿದಾಗ
ನೀನು ನಕ್ಕ್ಯಾಂಗ್ಹಾಗತ್ತ

ಚೆಕ್ಕಡಿಗಟ್ಲೆ ಕೊಡ ತುಂಬಿ
ನೀರು ಹಾಕಿಸಿ ನಿನ್ನ ಕರಕೊಂಡು
ಹಂತಿ ತಿರುಗು ಹಾಂಗಾಗತ್ತ
ಆದ್ರ
ಹಸಿ ಕೆಸರಿನಾಗ ಎಲ್ಲೆರ ಏಕದಮ್ಮ
ಜಾರಿಗೀರಿ ಬಿದ್ದೇನೋ ಅಂತಾ
ಹೆದರಿಕಾಗತ್ತ

ವಿಡಂಬನಾತ್ಮಕವಾದ ಕವನಗಳಲ್ಲಿ ಕವಿಯ ವಾಚಾಳಿತನ ಹೆಚ್ಚಾಗಿ ಮೆಚ್ಚುಗೆಯನ್ನು ಪಡೆಯುವುದಿಲ್ಲ. ವಿಡಂಬನೆಯಿಂದ ಸಮಾಜ ಸುಧಾರಿಸುತ್ತದೆಯೆಂಬುದು ತಪ್ಪು. ಕವಿಯು ತನ್ನ ಕೋಪವನ್ನೂ ಸಹ ಕಲಾತ್ಮಕವಾಗಿ ಹಿಡಿದಿಟ್ಟರೆ ಸಾಕು. ಇಲ್ಲದಿದ್ದರೆ ಬೈಗಳುಕೂಡ ಕಾವ್ಯವಾಗಬಹುದಿತ್ತು. ಕವಿಗೆ ಮೂಲಭೂತವಾಗಿ ಬೇಕಾದುದು ಸಮಾಜ ಜೀವನದ ಆಳವಾದ ಸಮಗ್ರನೋಟ, ಚಿಂತನ ಮನೋಧರ್ಮ. ಬರೀ ಕೋಪದಿಂದ ಏನೂ ಸಾಧಿಸಲು ಸಾಧ್ಯವಿಲ್ಲ. ಉಳಿದ ಕವನಗಳಲ್ಲಿ 'ಬಂಧ' ಸಡಿಲಾಗಿದೆಯೆನಿಸುತ್ತದೆ. ಸಬರದ ಈ ಕಡೆಗೆ ಲಕ್ಷ್ಯವಹಿಸಿದರೆ ಆರೋಗ್ಯ.

ಒಟ್ಟಾರೆ 'ಹೋರಾಟ' ಮೆಚ್ಚಬೇಕಾದ ಕೃತಿ. ಮೊದಲನೆಯ ಕವನ ಸಂಕಲನದಲ್ಲಿ ಕಂಡುಬರುವ 'ಕಸಕು'ತನವಿದೆಯಾದರೂ ಕವಿಗೆ ಬೆಳೆಯುವ ತಾಕತ್ತಿದೆ. ಜೀವಂತ ಅನುಭವದ ಜೊತೆಗೆ ಜೀವಂತಭಾಷೆಯ ಸಂಪರ್ಕವಿದೆ. ಭಾಷೆಯ ಮೇಲೆ ಹಿಡಿತ ಸಾಧಿಸಿದರೆ ಉತ್ತಮಕವಿಯಾಗುವ ಸಾಧ್ಯತೆಯಿದೆ. ವಿಪುಲವಾದ ಅನುಭವದ ಸರಕನ್ನು ಚೆಲ್ಲಾಪಿಲ್ಲಿಯಾಗಿ ಹರಡುವುದನ್ನು ಬಿಟ್ಟು, ತಾಳ್ಮೆಯಿಂದ ಕೈಗೆಟುಕಿದುದನ್ನು ಕವನವಾಗಿಸುವ ತಾಲೀಮು ಬೇಕಾಗಿದೆ. ಇವರು ಅದನ್ನು ಪೂರೈಸುವರೆಂಬ ವಿಶ್ವಾಸವನ್ನು ಈ ಕವನ ಸಂಕಲನ ತೋರಿಸಿಕೊಡುತ್ತದೆ.

—ದೇವೇಂದ್ರ ದೇಸಾಯಿ

■ ■

ಸಂಪಾದಕೀಯ

ದ್ರಾವಿಡಭಾಷಾ ಸಮ್ಮೇಳನದ ಅಧ್ಯಕ್ಷತೆ

ಆಂಧ್ರಪ್ರದೇಶದ ವಾಲ್ಟೇರ್‌ದಲ್ಲಿ ಜರುಗಿದ ಅಖಿಲಭಾರತ ಆರನೆಯ ದ್ರಾವಿಡ ಭಾಷಾ ಸಮ್ಮೇಳನದ ಅಧ್ಯಕ್ಷಪೀಠವನ್ನು ಸುಪ್ರಸಿದ್ಧ ಭಾಷಾವಿಜ್ಞಾನಿಗಳೂ, ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿಗಳೂ ಆದ ಡಾ. ಆರ್. ಸಿ. ಹಿರೇಮಠ ಅವರು ಅಲಂಕರಿಸಿದ್ದರು. ಡಾ. ಆರ್. ಸಿ. ಹಿರೇಮಠ, ವಿದ್ವತ್ತಿಗೆ ಇನ್ನೊಂದು ಹೆಸರು. ಕನ್ನಡ ಅಧ್ಯಯನಪೀಠದ ಸಂಸ್ಥಾಪಕಪ್ರಾಧ್ಯಾಪಕರಾಗಿದ್ದ ಡಾ. ಹಿರೇಮಠರು, ಕರ್ನಾಟಕ ವಿಶ್ವವಿದ್ಯಾಲಯದ ಜೊತೆಗೆ ಸಮಗ್ರ ಕರ್ನಾಟಕದ ಒಂದು ಅಂಗವಾಗಿ ಬೆಳೆದಿದ್ದಾರೆ. ಅಖಿಲಭಾರತ ಆರನೆಯ ದ್ರಾವಿಡಭಾಷಾ ಸಮ್ಮೇಳನದ ಅಧ್ಯಕ್ಷತೆ ಡಾ. ಹಿರೇಮಠ ಅವರ ಘನತೆಗೆ ಸಂದ ಯೋಗ್ಯ ಪುರಸ್ಕಾರ. 'ಕರ್ನಾಟಕ ಭಾರತಿ' ಈ ಪ್ರಸಂಗದಲ್ಲಿ ಡಾ. ಹಿರೇಮಠ ಅವರಿಗೆ ಅಭಿನಂದನೆಗಳನ್ನು ಅರ್ಪಿಸುತ್ತದೆ.

ಪೆನ್ ಸಂಸ್ಥೆಯ ಅಧ್ಯಕ್ಷತೆ

ನಮ್ಮ ದೇಶದ ಉನ್ನತ ಸಾಹಿತ್ಯಸಂಸ್ಥೆಯಾದ 'ಪೆನ್ ಸಂಸ್ಥೆ'ಯ ಅಧ್ಯಕ್ಷತೆ ತುಂಬ ಗೌರವಯುತವಾದುದು. ಶ್ರೀ ರಾಜಗೋಪಾಲಾಚಾರ್ಯ, ಶ್ರೀ ರಾಧಾಕೃಷ್ಣನ್‌ರಂಥ ಮೇಧಾವಿಗಳು ಏರಿದ ಈ ಅಗ್ರಪಟ್ಟವನ್ನು ಕನ್ನಡಿಗರಾದ ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರು ಏರಿದುದು ನಮಗೆಲ್ಲ ಹೆಮ್ಮೆಯ ವಿಷಯ. 'ಸಣ್ಣಕತೆ'ಯ ಪಿತಾಮಹರೆನಿಸಿದ ಅವರಿಂದ ಕನ್ನಡ ಸಾಹಿತ್ಯಕ್ಕೆ ಸಂದ ಸೇವೆ ಅಪೂರ್ವ. ಶ್ರೀ ಮಾಸ್ತಿ ಅವರಿಗೆ ಈ ಪ್ರಸಂಗದಲ್ಲಿ ಭಾರತಿ ಅಭಿನಂದನೆಗಳನ್ನು ಅರ್ಪಿಸುತ್ತದೆ.

ರಾಜ್ಯಸಾಹಿತ್ಯ ಅಕಾಡೆಮಿ ಪುರಸ್ಕಾರ

ಕರ್ನಾಟಕ ರಾಜ್ಯಸಾಹಿತ್ಯ ಅಕಾಡೆಮಿ ಪ್ರತಿವರ್ಷ ಸರ್ವಶ್ರೇಷ್ಠ ಸಾಹಿತಿಗಳನ್ನು, ಕಲಾವಿದರನ್ನು ತಾಮ್ರಫಲಕ ನೀಡಿ ಗೌರವಿಸುತ್ತಿದೆ. ಈ ವರ್ಷ ಇಂಥ ಗೌರವಕ್ಕೆ ಪಾತ್ರರಾದವರು, ಡಾ. ಶ್ರೀರಂಗ, ಡಾ. ರಂ. ಶ್ರೀ. ಮುಗಳಿ, ಎಂ. ಕೆ. ಇಂದಿರಾ, ಭಾರತೀಸುತ, ಜಿ. ವೆಂಕಟಯ್ಯ, ಜಿ. ಎಸ್. ಕೌಶಿಕ.

ಸಾಹಿತ್ಯ, ಕಲೆ ಮುಂತಾದ ಕ್ಷೇತ್ರಗಳಲ್ಲಿ ಖ್ಯಾತನಾಮರಾದ ಇವರಿಗೆ ಇನ್ನೂ ಉತ್ತರೋತ್ತರ ಪ್ರಶಸ್ತಿಗಳು ಪ್ರಾಪ್ತವಾಗಲಿಯೆಂದು ಹಾರೈಸುತ್ತ, ಭಾರತಿ ಅಭಿನಂದನೆಗಳನ್ನು ಅರ್ಪಿಸುತ್ತದೆ.

ಸಾದರ ಸ್ವೀಕಾರ

೧. **ಚಿತ್ತಲೆ ಪದ್ಯಗಳು :**

ಹೊ. ಮ. ಪಂಡಿತಾರಾಧ್ಯ. ಪ್ರ : ಯುವಕರ ಸಂಘ, ರಾಮನಗರ, ಹಗರಿಬೊಮ್ಮನಹಳ್ಳಿ, ೧೯೭೫. ಬೆಲೆ : ರೂ. ೪–೦೦. ಪುಟ : ೫೯

೨. **ಇವರೆಲ್ಲ ನನ್ನ ಜನ :**

ಕಾವ್ಯಜೀವಿ. ಪ್ರ : ಸಿ. ಎಂ. ಎಸ್. ಆರ್ಯ, ೨ನೆಯ ಅಡ್ಡಬೀದಿ, ಆಸ್ಪತ್ರೆ ರಸ್ತೆ, ಶಿವಮೊಗ್ಗ, ೧೯೭೬. ಬೆಲೆ : ರೂ. ೪–೦೦. ಪುಟ : ೩೬ + ೪ + iv

೩. **ವೀರಶೈವ ನಿಯತಕಾಲಿಕೆಗಳು :**

ಎಸ್. ಎಸ್. ಭೂಸರಡ್ಡಿ. ಪ್ರ : ವೀರಶೈವ ಪ್ರಗತಿಶೀಲ ಯುವಕ ಸಂಘ, ಗದಗ–ಬೆಟಗೇರಿ, ೧೯೭೫. ಬೆಲೆ : ರೂ. ೧–೦೦. ಪುಟ : ೨೪ + ೧೦೨

೪. **ಪ್ರಗತಿಪಂಥ ಸಾಹಿತ್ಯದರ್ಶನ :**

ಸಂ : ಪಿ. ವ್ಹಿ. ವಜ್ರಮಟ್ಟಿ, ಎಂ. ಎಂ. ಬ್ಯಾಲಾಳ. ಪ್ರ : ಮಿತ್ರಭಾರತಿ ಪ್ರಕಾಶನ, ವಿಜಾಪುರ, ೧೯೭೬. ಬೆಲೆ : ರೂ. ೩–೦೦. ಪುಟ : ೬೭

೫. **ಚರ್ಪಟಪಂಜರಿಕಾಸ್ತೋತ್ರ ಮತ್ತು ದ್ವಾದಶಪಂಜರಿಕಾಸ್ತೋತ್ರ :**

ಅನು : ಎಂ. ಎಂ. ಪಾಟೀಲ. ಪ್ರ : ಎಂ. ಎಂ. ಪಾಟೀಲ, ಕುರ್ತಕೋಟಿ, ೧೯೭೪. ಬೆಲೆ : ರೂ. ೦–೬೦ ಪುಟ : ೧೮

ಪತ್ರಿಕೆಗಳು

ಕನ್ನಡ ನುಡಿ
ಸಾಹಿತ್ಯಪರಿಷತ್ಪತ್ರಿಕೆ
ಜೀವನವಿಕಾಸ
ಪಂಚಾಚಾರಪ್ರಕಾಶ
ಪರಂಜ್ಯೋತಿ
ಕೃಷಿವಿಜ್ಞಾನ
ರಾಷ್ಟ್ರೋತ್ಥಾನ ವಾರ್ತಾ
ಮತ್ಸ್ಯಲೋಕ
ಅಭಿರುಚಿ
ಹೇಮಕೂಟ
ಶೃಂಗಾರ
ತರಳಬಾಳು

ಈ ಸಂಚಿಕೆಯ ಲೇಖಕರು

೧ ಶ್ರೀ ಸಿದ್ಧಲಿಂಗ ಪಟ್ಟಣಶೆಟ್ಟಿ :
ಹಿಂದಿ ಅಧ್ಯಾಪಕರು, ಕರ್ನಾಟಕ ಕಾಲೇಜು, ಧಾರವಾಡ

೨ ಶ್ರೀ ಪಿ. ಶ್ರೀಕೃಷ್ಣ ಭಟ್ :
ಕನ್ನಡ ಅಧ್ಯಾಪಕರು, ಸರಕಾರಿ ಕಾಲೇಜು, ಕಾಸರಗೋಡು

೩ ಶ್ರೀ ಎನ್. ಪ್ರಭುಸ್ವಾಮಿಮಠ :
ಕನ್ನಡ ಅಧ್ಯಾಪಕರು, ಲಾಲಬಹಾದ್ದೂರ ಕಾಲೇಜು, ಸಾಗರ

೪ ಡಾ. ಎಂ. ಎಂ. ಕಲಬುರ್ಗಿ :
ರೀಡರ್, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೫ ಶ್ರೀ ವೇಣುಗೋಪಾಲ ಕಾಸರಗೋಡ :
ಕನ್ನಡ ಅಧ್ಯಾಪಕರು, ಸರಕಾರೀ ಕಾಲೇಜು, ಕಾಸರಗೋಡು

೬ ಶ್ರೀ ವಿ. ಮೂ. ಜಗದೀಶ್ :
ಕಾವ್ಯಶ್ರೀ ಪ್ರಕಾಶನ, ಹಾಸ್ಪಿಟಲ್ ರೋಡ, ವಿನೆಯ ಕ್ರಾಸ್, ಶಿವಮೊಗ್ಗ

೭ ಶ್ರೀ ಬಿ. ಆರ್. ಹಿರೇಮಠ :
ಸಂಶೋಧನ ಸಹಾಯಕರು, ಕನ್ನಡ ಅಧ್ಯಯನಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೮ ಶ್ರೀ ಎಚ್. ಜಿ. ಲೋಕೂರ :
ಕನ್ನಡ ಅಧ್ಯಾಪಕರು, ಲಿಂಗರಾಜ ಕಾಲೇಜು, ಬೆಳಗಾಂವ

೯ ಶ್ರೀ ಎಸ್. ವ್ಹಿ. ಅಯ್ಯನಗೌಡರ :
ಸಂಶೋಧನ ಸಹಾಯಕರು, ಕನ್ನಡ ಅಧ್ಯಯನಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೧೦ ಡಾ. ಎಂ. ಎಸ್. ಲಠ್ಠೆ :
ಕನ್ನಡ ಪ್ರಾಧ್ಯಾಪಕರು, ಸ್ನಾತಕೋತ್ತರ ಕೇಂದ್ರ, ಗುಲ್ಬರ್ಗಾ.

೧೧ ಶ್ರೀ ಗವಿಸಿದ್ಧ ಎನ್. ಬಳ್ಳಾರಿ :
ಜವಾಹರ ರೋಡ, ಕೊಪ್ಪಳ, ರಾಯಚೂರ ಜಿಲ್ಲೆ

೧೨ ಶ್ರೀ ಎ. ಮುರಿಗೆಪ್ಪ :
ಸಂಶೋಧನ ವಿದ್ಯಾರ್ಥಿ, ಕನ್ನಡ ಅಧ್ಯಯನಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೧೩ ಡಾ. ಎಸ್. ಎಸ್. ಬ್ಯಾತನಾಳ :
ಕನ್ನಡ ಅಧ್ಯಾಪಕರು, ಪಾರ್ಲೆ ಕಾಲೇಜು, ಮುಂಬಯಿ.

೧೪ ಶ್ರೀ ಧರಣೇಂದ್ರ ಕುರಕುರಿ :
ಹಿರಿಯ ಶಿಕ್ಷಣಾಧಿಕಾರಿಗಳು, ಭಾರತೀಯ ಕುಟುಂಬ ಯೋಜನಾ ಸಂಘ, ಶಿಕ್ಷಣ ವಿಭಾಗ, ರವುಫ ನಗರ, ರಾಣೆಬೆನ್ನೂರ

೧೫ ಚೆ. ರಾಮಸ್ವಾಮಿ :
ಸಂಶೋಧನ ವಿದ್ಯಾರ್ಥಿ, ಅಣ್ಣಾಮಲೈ ವಿಶ್ವವಿದ್ಯಾಲಯ, ಅಣ್ಣಾಮಲೈ (ತಮಿಳುನಾಡು)

೧೬ ಲೀಲಾವತಿ ತೋರಣಗಟ್ಟಿ :
C/o. ಬಿ. ಎಸ್. ತೋರಣಗಟ್ಟಿ, ಸೆಂಟ್ರಲ್ ವೇರಹೌಸ್ ಕಾರ್ಪೊರೇಶನ್ ಆಫೀಸು ಬೋಧನ, ಕರೀಂನಗರ ಜಿಲ್ಲೆ (ಆಂಧ್ರಪ್ರದೇಶ)

೧೭ ಶ್ರೀ ಬಿ. ಬಿ. ಮಹೀಶವಾಡಿ :
ಪ್ರಾಧ್ಯಾಪಕರು, ಕನ್ನಡ ಅಧ್ಯಯನಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೧೮ ಡಾ. ಎಸ್. ಶೆಟ್ಟರ್ :
ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೧೯ ಡಾ. ಎಸ್. ರಾಜಶೇಖರ :
ಇತಿಹಾಸ ಅಧ್ಯಾಪಕರು, ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ವಿಭಾಗ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೨೦ ಶ್ರೀ ಎಸ್. ಶಿವಣ್ಣ :
ಸಂಶೋಧನ ಸಹಾಯಕರು, ಜ್ಞಾನಭಾರತಿ, ಬೆಂಗಳೂರು

೨೧ ಡಾ. ಗುರುಲಿಂಗ ಕಾಪಸೆ :
ಕನ್ನಡ ಅಧ್ಯಾಪಕರು, ಕರ್ನಾಟಕ ಕಾಲೇಜು, ಧಾರವಾಡ

೨೨ ಶ್ರೀ ಚಂದ್ರಶೇಖರ ಪಾಟೀಲ :
ಇಂಗ್ಲೀಷ ಅಧ್ಯಾಪಕರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೨೩ ಶ್ರೀ ದೇವೇಂದ್ರ ದೇಸಾಯಿ :
C/o. ಪಿ. ಎಚ್. ದೊಡ್ಡಮನಿ, ಅಖಿಲಭಾರತ ಆಕಾಶವಾಣಿ ಕೇಂದ್ರ, ಧಾರವಾಡ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಪ್ರಸಾರಾಂಗ ವಿಸ್ತರಣ ಹಾಗೂ ಪ್ರಕಟನ ವಿಭಾಗ

ಇತ್ತೀಚಿನ ಪ್ರಕಟನೆಗಳು

ಸಂಶೋಧನ ಗ್ರಂಥಮಾಲೆ

ಶ್ರವಣ ಬೆಳ್ಗೊಳ —ಬಿ. ವ್ಹಿ. ಶಿರೂರ ರೂ. ೩೮=೦೦

ವಿಶೇಷೋಪನ್ಯಾಸ ಗ್ರಂಥಮಾಲೆ

ಮಹಾಕಾವ್ಯ ಸ್ವರೂಪ —ಜಿ. ಎಸ್. ಶಿವರುದ್ರಪ್ಪ ರೂ. ೬=೦೦

ವೀರಶೈವಧರ್ಮ ವಿವೇಚನೆ —ನಾಗಭೂಷಣಶಾಸ್ತ್ರಿ ರೂ. ೪=೫೦

ಕನ್ನಡ ಜಾನಪದಸಾಹಿತ್ಯ —ಬೆಟಗೇರಿ ಕೃಷ್ಣಶರ್ಮಾ ರೂ. ೬=೦೦

ಅನುಭವ, ಅನುಭಾವ, ಅನುಭೂತಿ —ಆರ್. ಆರ್. ದಿವಾಕರ ರೂ. ೭=೦೦

ಕನ್ನಡ ಕಾವ್ಯಮಾಲೆ

ಅನಂತನಾಥ ಪುರಾಣಂ —ಸಂ : ಬಿ. ಬಿ. ಮಹೀಶವಾಡಿ ರೂ. ೧೫=೦೦

ಸಮ್ಯಕ್ತ್ವಕೌಮುದಿ —ಸಂ : ಬಿ. ಬಿ. ಮಹೀಶವಾಡಿ ರೂ. ೧೬=೦೦

ಪ್ರಸನ್ನ ಶಂಕರಲಿಂಗ ರಗಳೆಗಳು —ಸಂ : ಎಂ. ಎಸ್. ಸುಂಕಾಪುರ ರೂ. ೨೦=೦೦

ಉಪನ್ಯಾಸ ಗ್ರಂಥಮಾಲೆ

ಜನಪದ ಸಾಹಿತ್ಯದಲ್ಲಿ ಮಾತೃವಾತ್ಸಲ್ಯ —ಲೀಲಾವತಿ ತೋರಣಗಟ್ಟಿ

ಜನಪದದಲ್ಲಿ ಮಕ್ಕಳ ಸಾಹಿತ್ಯ —ಸಂಗಮೇಶ ಎಂ. ಬಿರಾದಾರ

ಪ್ರೇಮಚಂದರ ಸಣ್ಣಕತೆಗಳು —ಬಿ. ಎಫ್. ಹಸರಾಣಿ

ಹೈದರಾಬಾದ ಕರ್ನಾಟಕ ಹಾಗೂ ತಾರಾನಾಥರು —ಎನ್. ಎ. ಪಾಟೀಲ

ಭಾರತೀಯ ಸ್ತ್ರೀಯ ಬದಲಾಗುತ್ತಿರುವ ಸ್ಥಾನಮಾನಗಳು —ಆರ್. ಡಿ. ಮೊಖಾಶಿ

ಕನ್ನಡ ಕಾವ್ಯಗಳಲ್ಲಿ ನಾಟಕೀಯತೆ —ಎಸ್. ಬಿ. ತೋಟದ

ಹಂಪೆ —ವಸುಂಧರಾ ಫಿಲಿಯೋಜಾ

ಅನುಭವ ಮಂಟಪದ ಶಿವಶರಣೆಯರು —ಶಶಿಕಲಾ ಮೋಳ್ದಿ

ಕಬ್ಬು —ರಾಮದಾಸ ಕಾಮತ್

ಜನಪದ ಸಾಹಿತ್ಯ ಮಾಲೆ

ಕನ್ನಡ ಗಾದೆಮಾತುಗಳು —ಎಸ್. ಎಂ. ನಾಯಕ ರೂ. ೧೨=೦೦

ಇತರ ಪ್ರಕಟನೆಗಳು

ಕನ್ನಡದಲ್ಲಿ ಕಾನೂನು ಸಾಹಿತ್ಯ —ರಾ. ಯ. ಧಾರವಾಡಕರ ರೂ. ೯=೦೦

ಒಂದು ವರ್ಷದ ಅವಧಿಯಲ್ಲಿ (ಎಪ್ರಿಲ ೧ ರಿಂದ ಮಾರ್ಚ ೩೧ ರ ವರೆಗೆ) ಒಟ್ಟಿಗೆ ರೂ. ೨೦,೦೦೦/- ಅಥವಾ ಅದಕ್ಕೂ ಹೆಚ್ಚಿನ ಬೆಲೆಯ ಪುಸ್ತಕಗಳನ್ನು ಕೊಳ್ಳುವವರಿಗೆ ಶೇ. ೩೩⅓ ದಂತೆ ಕಮೀಶನ್ ಕೊಡಲಾಗುವದು.

*

ವಿಶ್ವವಿದ್ಯಾಲಯದ ರಜತಮಹೋತ್ಸವದ ನೆನಪಿಗಾಗಿ

ವಿಶೇಷ ರಿಯಾಯಿತಿ

- ೧೦೦ ರೂ. ಹಾಗು ಅದಕ್ಕೂ ಮೇಲ್ಪಟ್ಟು ಪುಸ್ತಕಗಳ (ಪಠ್ಯಪುಸ್ತಕ ಹೊರತು ಪಡಿಸಿ) ಖರೀದಿಗೆ ಶೇ. ೨೫ + ಶೇ. ೧೫
- ೫,೦೦೦ ರೂ. ಹಾಗೂ ಅದಕ್ಕೂ ಮೇಲ್ಪಟ್ಟು ಖರೀದಿಗೆ ಶೇ. ೩೩⅓ + ಶೇ. ೧೫

*

ವಿಜ್ಞಾನ ಭಾರತಿ

(ಷಾಣ್ಮಾಸಿಕ ಪತ್ರಿಕೆ)

ವಾರ್ಷಿಕ ಚಂದಾ : ರೂ. ೪ (ಅಂಚೆವೆಚ್ಚ ಸಹಿತ)

ಬಿಡಿ ಪ್ರತಿ : ರೂ. ೨-೫೦ (ಅಂಚೆವೆಚ್ಚ ರೂ. ೧-೨೫ ಪ್ರತ್ಯೇಕ)

(ವಿದ್ಯಾರ್ಥಿಗಳಿಗೆ ರಿಯಾಯಂತಿ ಚಂದಾದರ ರೂ. ೨-೦೦ ಮಾತ್ರ)

ಕರ್ನಾಟಕ ಭಾರತಿ

(ಆಜೀವ ಸದಸ್ಯತ್ವ)

ಯಾವುದೇ ವ್ಯಕ್ತಿ ಅಥವಾ ಸಂಘ-ಸಂಸ್ಥೆಗಳು ೧೦೦ ರೂ. ಕಳಿಸಿ ವಿಶ್ವವಿದ್ಯಾಲಯ ಪ್ರಕಟಿಸುತ್ತಿರುವ 'ಕರ್ನಾಟಕ ಭಾರತಿ' ತ್ರೈಮಾಸಿಕ ಪತ್ರಿಕೆಯ ಆಜೀವ ಸದಸ್ಯತ್ವ ಪಡೆಯಬಹುದು. ಪತ್ರಿಕೆ ಪ್ರಕಟವಾದಂತೆಲ್ಲ ಅವರಿಗೆ ಪ್ರತಿಗಳನ್ನು ಕಳಿಸುವ ವ್ಯವಸ್ಥೆ ಮಾಡಲಾಗುವುದು.

(ಹಣವನ್ನು ಡಿಮಾಂಡ ಡ್ರಾಫ್ಟ್ ಅಥವಾ ಪೋಸ್ಟಲ್ ಆರ್ಡರ ಮೂಲಕ ಫಾಯನಾನ್ಸ್ ಆಫೀಸರ್, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರ ವಿಳಾಸಕ್ಕೆ ಕಳುಹಿಸಬೇಕು.)

ವಿವರಗಳಿಗೆ ಬರೆಯಿರಿ :

ನಿರ್ದೇಶಕರು,
ಪ್ರಸಾರಾಂಗ ವಿಸ್ತರಣ ಹಾಗೂ ಪ್ರಕಟನ ವಿಭಾಗ,
ಕರ್ನಾಟಕ ವಿಶ್ವವಿದ್ಯಾಲಯ,
ಧಾರವಾಡ-೩